START

START

MICRO FILMED
BY

KARNATAKA STATE
ARCHIVES

1991

ARS 15 APP 90

ಜೀವನ ಶಿಕ್ಷಣ - ಕನ್ನಡ

ಪ್ರಾಥಮಿಕ ಶಿಕ್ಷಣ

ಫೆಬ್ರುವರಿ 1943 ರಿಂದ

ಮುಂದುವರಿಸಲಾಗಿದೆ.

ARS 15 APP 90

ಜೀವನ ಶಿಕ್ಷಣ - ಕನ್ನಡ

ಪ್ರಾಥಮಿಕ ಶಿಕ್ಷಣ

ಫೆಬ್ರುವರಿ 1943 ರಿಂದ

ಮುಂದುವರಿಸಲಾಗಿದೆ.

Reg. No. B. 3691

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. - ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕವಿತಾತನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦-೫-೦

ಕವಿತಾ ಕುಸುಮ ಮಂಜರಿ ಭಾಗ ೨ .... ೦-೫-೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫-೬-೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ-ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ-ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು-ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಆಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ಫೆಬ್ರುವರಿ ೧೯೪೩ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವು ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ಟ್ರೇನಿಂಗ ಕಾಲೇಜಗಳಲ್ಲಿಯ ಚಟುವಟಿಕೆಗಳು	೧
೨.	ಗ್ರಾಮ ವಿಚಾರಣೆಯ ಪ್ರಶ್ನಿಮಾಲಿಕೆ	೪
೩.	ಸಾಹಿತ್ಯ ಸೇವಕರಾದ ಕುರಡಿ ನಾರಾಯಣರಾಯರು ..	೧೩
೪.	ಫಲಾಹಾರ	೧೬
೫.	ಪ್ರಾಥಮಿಕ ಶಾಲಾಪ್ರಮಾಣ ಪತ್ರ ಪರೀಕ್ಷೆ—೧೯೪೩ ..	೧೮
೬.	ಪ್ರಕಟನೆ	೨೫
೭.	ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಯ ಕಾರ್ಯಕ್ರಮಗಳು ..	೨೬
೮.	ಪತ್ರಗಳ ಮುಖ್ಯಾಂಶಗಳು	೨೯
೯.	ಗ್ರಾಮಸಂಘಟನೆ (ಪ್ರಬುದ್ಧರಿಗಾಗಿ)	೩೧

ಪ್ರಕಟಣೆ ಸಂಖ್ಯೆಗೆ ಸಾಲು ಪುಟಗಳು.

ಸಾಹಿತ್ಯ ಪರಿಷತ್ತು ಧಾರವಾಡ ರೂಪಾಯಿಗಳು ನಾಲ್ಕು ಮಾತ್ರ.

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men Dharwar, at his Office.

ಪುರೋಗಾಮಿ ಶಿಕ್ಷಕ

★

(ಲೇಖಕರು: ಶ್ರೀ. ಎಸ್. ಬಿ. ಗಜೇಂದ್ರಗಡ, ಬಿ.ಎ., ಬಿ.ಟಿ., ವಿಜಾಪುರ)

ಸ್ಥಾಥವಿಕ ಶಿಕ್ಷಕರ ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಇರುವ
ದೈನಂದಿನ ಅಭ್ಯಾಸದಲ್ಲಿ— ಕಲಿಸುವ ಕಾರ್ಯದಲ್ಲಿ ಅತ್ಯಂತ ಉಪ-
ಯುಕ್ತವಾಗುವಂತೆ, ವಿದ್ಯಾಖಾತೆಯ ಅಭ್ಯಾಸಪತ್ರಿಕೆ-
ಯನ್ನು ಸಂಪೂರ್ಣವಾಗಿ ಅನುಸರಿಸಿ ಬರೆಯಲ್ಪಟ್ಟಿದೆ.

ಪುಟಗಳು ೩೩೬ ★ ಬೆಲೆ ೨-೪-೦

ಇದು ಮೂರು ಮುಖ್ಯ ಭಾಗಗಳನ್ನೊಳಗೊಂಡಿದೆ.

(೧) ಶೈಕ್ಷಣಿಕ ಮನಃಶಾಸ್ತ್ರವನ್ನು ೧೫೫ ಪುಟಗಳಲ್ಲಿ ವಿವೇಚಿಸಿದೆ. (೨) ಶಿಕ್ಷಣಶಾಸ್ತ್ರದ ಮೂಲತತ್ವಗಳನ್ನೂ ಪ್ರತ್ಯಕ್ಷವಾಗಿ ಕಲಿಸುವ ಶಾಸ್ತ್ರೀಯ ಪದ್ಧತಿಯನ್ನೂ ವಿವರಿಸಿದೆ. (೩) ಆಧುನಿಕ ಶಿಕ್ಷಣ ಕ್ರಮದ ಮಹತ್ವದ ಅಂಗಗಳಾದ ಶಾರೀರಿಕ ಶಿಕ್ಷಣ, ಶಿಸ್ತು, ಸಂಘಟನೆ ಮೊದಲಾದ ವಿಷಯಗಳನ್ನು ತಿಳಿಸಿದೆ.

ಶಿಕ್ಷಣದ ಸರ್ವಾಂಗಗಳನ್ನೂ ಸುಲಲಿತವಾದ ಭಾಷೆಯಲ್ಲಿ ಒತ್ತಟ್ಟಿಗೇ ಸುಂದರವಾಗಿ ನುಂಡಿಸಿದ ಶಾಸ್ತ್ರೀಯ ಗ್ರಂಥವು

ಕನ್ನಡದಲ್ಲಿ ಇದೊಂದೇ!

★

ಕನ್ನಡ-ಇಂಗ್ಲಿಷ್ ಶಾಲೆ-ಕಾಲೇಜುಗಳ ಎಲ್ಲಾ ಪಠ್ಯಪುಸ್ತಕಗಳೂ ಇತರ ಪುಸ್ತಕ,
ಸ್ಕೂಲ್ ಸ್ಟೇಶನರಿ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ.

ಸ್ಟೂಡಂಟ್ಸ್ ಓನ್ ಬುಕ್ ಡಿಪೋ, ಧಾರವಾಡ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೧	ಫೆಬ್ರುವರಿ ೧೯೪೩	ವರ್ಷ ೧೫. ಸಂ. ೧೧

ಟ್ರೇನಿಂಗ್ ಕಾಲೇಜಗಳಲ್ಲಿಯ ಚಟುವಟಿಕೆಗಳು

೧. ಗಂಡುಮಕ್ಕಳ ಟ್ರೇನಿಂಗ್ ಕಾಲೇಜ, ಧಾರವಾಡ

ವಿದ್ಯಾರ್ಥಿ–ಶಿಕ್ಷಕರ ವಾದವಿವಾದ ಮಂಡಲದ ಬಿನ್ನಹದ ಮೇರೆಗೆ ೩೦–೧–೧೯೪೩ನೆಯ ದಿವಸ ಧಾರವಾಡ ಮ್ಯುನಸಿಪಲ್ ಸ್ಕೂಲ್ ಬೋರ್ಡ ಅಡ್ಮಿನಿಸ್ಟ್ರೇಟಿವ್ ಆಫೀಸರರಾದ ಶ್ರೀಮಾನ್ ಹಾರನಹಳ್ಳಿ ಅನಂತರಾಯರು ಟ್ರೇ. ಕಾ. ದಲ್ಲಿ ಬಂದು, ಮಾಡಿದ ಭಾಷಣದ ಮುಖ್ಯಾಂಶವು ಕೆಳಗಿನಂತಿದೆ:—

ಮಾನವನಿಗೆ ಸರಿಯಾದ ಶಾರೀರಿಕ ಶಕ್ತಿಯು ಅಗತ್ಯವಿದ್ದಂತೆ ಮೇಲಾದ ಬೌದ್ಧಿಕ ಶಕ್ತಿಯ ಅಗತ್ಯವೂ ತುಂಬ ಇರುವದು. ಭಾರತೀಯ ಗತಸಾಮ್ರಾಟರು ಈ ಎರಡೂ ತರದ ಶಕ್ತಿಗಳನ್ನು ಸಾಕಷ್ಟು ಗಮನಿಸಿದ್ದರೆಂದು ಇತಿಹಾಸದಿಂದ ತಿಳಿಯುತ್ತದೆ. ಇದರಂತೆ ಇಜಿಪ್ತ, ಅಸೀರಿಯಾ, ಗ್ರೀಕ, ರೋಮನ್ ಮೊದಲಾದ ವೈಭವಶಾಲಿ ಸಾಮ್ರಾಜ್ಯಗಳು ಈ ಎರಡೂ ತರದ ಶಕ್ತಿಗಳನ್ನು ಸರಿಯಾಗಿ ಬೆಳಸಿದ್ದವೆಂದು ಕೇಳಿರುವೆವು. ಆರ್ಯರ ಕಾಲದಲ್ಲಿ ವಿದ್ಯಾರ್ಥಿಗಳು ಗುರುಕುಲದಲ್ಲಿ ವಾಸಮಾಡಬೇಕಾಗುತ್ತಿತ್ತು. ಅಂಥವರಲ್ಲಿ ಸಾವಿರಕ್ಕೊಬ್ಬರು ಮಾತ್ರ ಪಂಡಿತರಾಗುತ್ತಿದ್ದರು.

ಈಗ ನಮ್ಮ ಸಮಾಜವು ಅಂತಹ ಶಿಕ್ಷಣವನ್ನು ಬಯಸುವದಿಲ್ಲ. ಒಬ್ಬಿಬ್ಬರು ಬಹಳ ಜಾಣರಾಗಿ ಹಲವರು ದಡ್ಡರೂ ನಿರಕ್ಷರಿಗಳೂ ಆಗಿರುವದಕ್ಕಿಂತ ಎಲ್ಲರೂ

ತಕ್ಕಮಟ್ಟಿಗೆ ಕಲಿತವರಾಗಿರುವದು ಒಳಿತು. ಒಬ್ಬ ಶಿಕ್ಷಕನು ಪ್ರತಿವರ್ಷ ೩೦ ರಂತೆ ತನ್ನ ನೌಕರಿಯ ೩೦ ವರ್ಷಗಳಲ್ಲಿ ಬಹಳವಾದರೆ ಒಂದು ಸಾವಿರ ವಿದ್ಯಾರ್ಥಿಗಳಿಗೆ ಕಲಿಸಬಲ್ಲನು. ನಮ್ಮ ದೇಶದ ಸದ್ಯದ ಅಗತ್ಯವು ಇಷ್ಟರಿಂದಲೇ ಪೂರೈಸದು. ಒತ್ತಾಯದ ಶಿಕ್ಷಣವನ್ನು ಆರಂಭಿಸಿ ಪ್ರಜೆಗಳು ಹೆಚ್ಚು ಪ್ರಮಾಣ ದಿಂದ ಸಾಕ್ಷರರಾಗುವದು ಇಷ್ಟ. ಅವರಲ್ಲಿಯ ಪರಾವಲಂಬನವು ವೃತ್ತಪತ್ರ, ಪುಸ್ತಕ, ರೇಡಿಯೋ (ಬಾನುಲಿ) ಮೊದಲಾದವುಗಳ ಉಪಯೋಗ ಹಾಗು ಪ್ರಸಾರಗಳಿಂದ ತಾನೇ ಕಡಿಮೆಯಾಗುವದು. ಸ್ವಾರ್ಥತ್ಯಾಗದಿಂದ ಶಿಕ್ಷಣ ಪ್ರಸಾರ ಕಾರ್ಯವನ್ನು ಪ್ರಾಥಮಿಕ ಶಿಕ್ಷಕರಂತೆ ಉಳಿದವರು ಮಾಡಲಾರರು.

ಶಿಕ್ಷಕವೃತ್ತಿಯು ಬಲುಮೆಯಿಂದ ನಡೆಯುವಂತಹದಲ್ಲ. ಅಧಿಕಾರಿಗಳ ಆಜ್ಞೆಯೆಂದಾಗಲಿ, ಹೊಟ್ಟೆಯ ಪಾಡಿಗಾಗಿ ಆಗಲಿ, ದುಡಿಯುವದಕ್ಕಿಂತ ಕರ್ತವ್ಯವೆಂದು ಮನಃಪೂರ್ವಕವಾಗಿ ಮಾಡುವದು ಶ್ರೇಷ್ಠತರವಾದುದು. ತನ್ನ ಮನಸ್ಸಿನ ಒಲುಮೆಗಾಗಿ ಕರ್ತವ್ಯ ಮಾಡುವವನಿಗೆ ಯಾರ ಭಯವೂ ಇಲ್ಲ. ಅವನಿಗೆ ತನ್ನ ಕೆಲಸದಲ್ಲಿ ತಕ್ಕ ಸಮಾಧಾನವು ದೊರೆಯುವದಲ್ಲದೆ ಕೀರ್ತಿಯೂ ಬರುವದು. ಇಂತಹ ಮನೋಭಾವವು ಎಲ್ಲರಿಗೂ ಸಾಧ್ಯವಿದೆಯೆಂದು ಹೇಳಲಿಕ್ಕಾಗುವದಿಲ್ಲ. ಮನಸ್ಸು ದೇಹವನ್ನೂ ದೇಹವು ಆಹಾರವಿಹಾರಗಳನ್ನೂ ಆಹಾರವಿಹಾರಗಳು ಅವರವರ ಗಳಿಕೆಗಳನ್ನೂ ಅವಲಂಬಿಸಿರುವವು. ಹೊಸ ಶಿಕ್ಷಕರಲ್ಲಿ ಕೆಲವರಿಗೆ ಆರಂಭದಲ್ಲಿ ಕಾಯಿದೆಯಂತೆ ನಡೆಯುವದು ಹೇಡಿತನವೆಂದು ತೋರಬಹುದು; ಆದರೆ ನೀತಿಯ ಭಯ, ಅರಿವು, ಅನುಭವಗಳು ಹೆಚ್ಚಾದಂತೆ ಕರ್ತವ್ಯಕರ್ಮವೆಂದು ದುಡಿಯುವ ರೂಢಿಯು ತಾನೇ ಬರುವದು. ಇದಾವ ವಿಚಾರವೂ ಪ್ರಾರಂಭದಲ್ಲಿ ಇರದಿದ್ದರೂ ಹೊಟ್ಟೆಯಸಲುವಾಗಿಯಾದರೂ ದುಡಿಯಬೇಕಷ್ಟೇ! ದುಡಿತಕ್ಕೆ ತಕ್ಕ ಫಲವು ಸಿಕ್ಕೇಸಿಗುವದು. ಶಿಕ್ಷಕವೃತ್ತಿಯು ಹೊಟ್ಟೆಹೊರಕೊಳ್ಳುವ ಹೋರೆಯಂದು ಎಣಿಸದೆ ಶಿಕ್ಷಕರು ಆಜನ್ಮ ವಿದ್ಯಾರ್ಥಿಗಳಾಗಿದ್ದರೆ ಅವರಿಗೆ ಒಂದುಬಗೆಯ ಸಮಾಧಾನವು ದೊರೆತು, ಆದರ್ಶಪುರುಷರೂ ಕೀರ್ತಿಶಾಲಿಗಳೂ ಆಗುವರೆಂಬುದರಲ್ಲಿ ಸಂಶಯವಿಲ್ಲ.

ಅಧ್ಯಕ್ಷರಾದ ಶ್ರೀಮಾನ್ ಜೈಚವಾಳ ಶ್ರೀನಿವಾಸರಾಯರು ಹೀಗೆ ತಿಳಿಯಪಡಿಸಿದರು:— "ನಮ್ಮೆಲ್ಲರಿಗೂ ಮಾನ್ಯರಾದ ಶ್ರೀಮಾನ್ ಹಾರನಹಳ್ಳಿ ಅನಂತರಾಯರು ಕೀರ್ತಿವಂತರಾದ ಅಧ್ಯಾಪಕರು. ಈ ಶಿಕ್ಷಣಾಲಯದಲ್ಲಿ ಕೆಲವು ಕಾಲ ಶಿಕ್ಷಣಶಾಸ್ತ್ರವನ್ನು ಕಲಿಸಿದ್ದಾರೆ. ಒತ್ತಾಯದ ಶಿಕ್ಷಣವು ಕನ್ನಡ ನಾಡಿನಲ್ಲಿ ಮೊಟ್ಟಮೊದಲು ಆರಂಭವಾದುದು ಈ ಧಾರವಾಡದಲ್ಲಿಯೇ! ಇದನ್ನು ಬಳಕೆಯಲ್ಲಿ ತಂದುದರ ಅನುಭವವು ಇವರಿಗೆ ಹೆಚ್ಚಾಗಿ ಇದೆ. ಇವರು ಶಾಂತ

ಸ್ವಭಾವದ ಅಧಿಕಾರಿಗಳಾಗಿರುವರು; ಕೆಲವು ನಾಟಕಗಳನ್ನು ಬರೆದು ಸಾಹಿತ್ಯದಲ್ಲಿಯೂ ಚೆನ್ನಾಗಿ ನುರಿತಿದ್ದಾರೆ. ಇನ್ನು ಬೆಳಗಾವಿ ಜಿಲ್ಲೆಯ ಡೆ. ಎ. ಇ. ಸ್ಥಾನದಲ್ಲಿ ಕಾರ್ಯಮಾಡುವವರಿದ್ದಾರೆ. ಇವರ ಉಪದೇಶವು ಎಲ್ಲೆಡೆಯಲ್ಲಿಯೂ ಫಲಿಸಲಿ. ಹೀಗೆ ನಾನು ಆಶಿಸುತ್ತೇನೆ."

S. R. ROHIDEKAR

೨ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ ಧಾರವಾಡ ವರ್ಧಂತ್ಯುತ್ಸವ

ಪ್ರತಿ ವರ್ಷದಂತೆ ಈ ಸಲವಾದರೂ ಫೆಬ್ರುವರಿ ಮೊದಲನೆಯ ದಿನ ಹಾಗು ಅದರ ಹಿಂದಿನ ಎರಡು ದಿನಗಳಲ್ಲಿ ಈ ಶಿಕ್ಷಣಾಲಯದ ಳಲನೆಯು ಹುಟ್ಟುಹಬ್ಬವನ್ನು ಇದೇ ಸಂಸ್ಥೆಯಲ್ಲಿ ಬಹುಕಾಲ ದುಡಿದು ಈಗ ನಿವೃತ್ತರಾಗಿರುವ ಶ್ರೀಮಾನ್ ಅಮ್ಮಿನಭಾವಿ ತಮ್ಮಣ್ಣರಾಯರ ಹಿರಿಯತನದಲ್ಲಿ ಒಳ್ಳೇ ಏಚೃಂಭಣೆಯಿಂದ ನಡೆಯಿಸಲಾಯಿತು. ಎಂದಿನಂತೆ ಉಪಹಾರ, ಡ್ರಿಲ್, ಪಂದ್ಯಾಟಗಳು ಮತ್ತು ಮನೋರಂಜನೆಯ ಕಾರ್ಯಕ್ರಮಗಳು ನಡೆದವು. ವಿದ್ಯಾರ್ಥಿನಿಯರ ಹಾಗು ವಿದ್ಯಾರ್ಥಿ-ಶಿಕ್ಷಕಿಯರ ಈ ಕಾರ್ಯಗಳಲ್ಲಿ ಈ ಸಲ ಪ್ರಾಕ್ಟೀಸಿಂಗ್ ಸ್ಕೂಲಿನ ಶಿಕ್ಷಕಿಯರೂ, ಕಾಲೇಜದ ಅಧ್ಯಾಪಕ-ಅಧ್ಯಾಪಿಕೆಯರೂ ಭಾಗವಹಿಸಿದ್ದರು. ಅದರಿಂದ ಈ ವರುಷದ ಉತ್ಸವಕ್ಕೆ ತುಂಬ ಕಳೆ ಬಂದಿತ್ತು. ಇದು ಈ ಸಲದ ವೈಶಿಷ್ಟ್ಯವೆಂದೂ ಹೇಳಬಹುದು.

ಮಾನ್ಯರಾದ ಶ್ರೀಮಾನ್ ಶೆಲೋಮ್ ಎಲಾಯಿಚಾ ಅವರು ಆಟಗಳ ಸ್ಪರ್ಧೆಗಳಲ್ಲಿ ಜಾಣ್ಮೆಯನ್ನು ತೋರಿಸಿದವರಿಗಾಗಿ ಇಟ್ಟ ಎರಡು ಬೆಳ್ಳಿಯ ಬಟ್ಟಲುಗಳನ್ನು ಈ ವರುಷ ಸೀನಿಯರ ವರ್ಗದವರಿಗೆ ಮತ್ತು ಪ್ರಾಕ್ಟೀ. ಸ್ಕೂ. ನ ೬ನೆಯ ಇಯತ್ತೆಯವರಿಗೆ ಕೊಡಲಾಯಿತು. ೨ನೆಯ ವರ್ಷದ ವಿದ್ಯಾರ್ಥಿನಿಯರ ಕ್ರೀಡಾಕೌಶಲ್ಯಕ್ಕೆ ಮೆಚ್ಚಿ ಶ್ರೀಮತಿ ಮೈನಾಬಾಯಿ ಜೋಶಿ ಅವರು ಊದಿನ ಕಡ್ಡಿಗಳನ್ನು ಹಚ್ಚುವ ಬೆಳ್ಳಿಯ ಪಾತ್ರೆಯನ್ನು ಪಾರಿತೋಷಕವೆಂದು ಅವರಿಗೆ ಕೊಟ್ಟರು. ಅತಿಥಿಗಳಾದ ಶ್ರೀಮತಿ ತಂಬದ ಥಾಯಕ್ಕನವರು ಬಾಸ್ಕೆಟ್ ಡ್ರಿಲ್ ಮಾಡಿದ ವಿದ್ಯಾರ್ಥಿನಿಯರಿಗೆ ಹಾಗು ಅಭಿನಯ, ನೃತ್ಯ ಇವುಗಳಲ್ಲಿ

ಮೇಲ್ಮೈಯನ್ನು ಪಡೆದ ವಿದ್ಯಾರ್ಥಿನಿಯರಿಗೆ ಶ್ರೀಮತಿ ಶಿಂತ್ರೆ ಗಂಗಾಬಾಯಿಯವರು ಕೆಲವು ಪಾರಿತೋಷಕಗಳನ್ನು ಕೊಟ್ಟರು. ಕಾಲೇಜದ ಅಧ್ಯಾಪಕರು ಧನರೂಪದಿಂದ ಹಲಕೆಲವು ಇನಾಮುಗಳನ್ನು ಕೊಟ್ಟರು. ಪ್ರ್ಯಾಕ್ಟಿಸಿಂಗ್ ಸ್ಕೂಲ್ ಶಿಕ್ಷಕಿಯರ ಹಾಗು ಕಾಲೇಜದ ಅಧ್ಯಾಪಕ-ಅಧ್ಯಾಪಿಕೆಯರ ಸ್ಪರ್ಧೆಗಳಲ್ಲಿ ಮೇಲ್ಮೈಯನ್ನು ಪಡೆದವರಿಗೆ ಮೆ. ಲೇ. ಸು. ರವರು ಪಾರಿತೋಷಕಗಳನ್ನು ಕೊಟ್ಟರು. ಇವೆಲ್ಲ ಮೆಜ್ಜುಗೆಗಳನ್ನು ಮೆ. ಲೇ. ಸು. ರವರ ಹಸ್ತದಿಂದ ಕೊಡಿಸಲಾಯಿತು. ಅಧ್ಯಕ್ಷರೂ ತಮ್ಮ ಕೆಲವು ಪುಸ್ತಕಗಳನ್ನು ಮೆಚ್ಚುಕೊಟ್ಟು, ಸಂಸ್ಥೆಯ ಊರ್ಜಿತಸ್ಥಿತಿಯನ್ನು ಕುರಿತು ಮೆ. ಲೇ. ಸು. ರವರನ್ನು ಶಿಕ್ಷಕ-ಶಿಕ್ಷಕಿಯರನ್ನೂ ಅಭಿನಂದಿಸಿ, ಸಂಸ್ಥೆಯು ಇನ್ನೂ ಹೆಚ್ಚಿನ ಉತ್ಕರ್ಷವನ್ನು ಹೊಂದಲೆಂದು ಹಾರೈಸಿದರು. ಆ ಮೇಲೆ ಎಲ್ಲರಿಗೂ ಬತ್ತಾಸವನ್ನು ಹಂಚಲಾಯಿತು.

ಧಾರವಾಡ
ತಾ. ೧೨–೨–೧೯೪೩

B. M. Shintri
(First Assistant) T. C. W. Dharwar

ಗ್ರಾಮವಿಚಾರಣೆಯ ಪ್ರಶ್ನಾವಳಿ

ಶ್ರೀ. ಎಸ್. ಜಿ. ಬೈಜವಾಳ, ಎಮ್. ಏ. ಅವರಿಂದ

'ಪ್ರಾಥಮಿಕ ಶಿಕ್ಷಣದ' ಕಳೆದ ಸಂಚಿಕೆಯಲ್ಲಿ ಗ್ರಾಮವಿಚಾರಣೆಯನ್ನು ಯಾವ ರೀತಿಯಾಗಿ ಮಾಡಬೇಕು? ಅದರ ಆವಶ್ಯಕತೆ ಎಷ್ಟಿದೆ? ಗ್ರಾಮವಿಚಾರಣೆಯ ಮಹತ್ತ್ವವೇನು? ಎಂಬ ವಿಷಯಗಳನ್ನು ಕುರಿತು ಸಂಕ್ಷೇಪದಲ್ಲಿ ಚರ್ಚಿಸಲಾಗಿದ್ದಿತು. ಆ ಗ್ರಾಮವಿಚಾರಣೆಯನ್ನು ಮಾಡುವಾಗ ಇಲ್ಲಿ ಕೊಟ್ಟಿರುವ ಪ್ರಶ್ನೆಗಳನ್ನು ಕೇಳಿ ಸಂಗತಿಗಳನ್ನು ಕಲೆಹಾಕಬೇಕು. ಇಲ್ಲಿ ಕೊಟ್ಟಿರುವ ಪ್ರಶ್ನೆಗಳು ಕೇವಲ ಮಾದರಿಗಾಗಿ ಕೊಡಲ್ಪಟ್ಟಿವೆ. ಹಳ್ಳಿಯ ಸುಧಾರಣೆಯ ವಿಷಯಗಳು ಮತ್ತೆ ಯಾವುವಾದರೂ ಇದ್ದರೆ ಅವುಗಳನ್ನು ಈ ಪ್ರಶ್ನಾವಳಿಗೆ ಜೋಡಿಸಿಕೊಂಡು ಸಂಗತಿಗಳನ್ನು ಕಲೆಹಾಕಬೇಕು. ಬಳಿಕ ಹಳ್ಳಿಯ ಸುಧಾರಣೆಯ ಕಾರ್ಯವನ್ನು ಕೈಕೊಂಡರೆ ಕಾರ್ಯವು ಬೇಗ ಸಫಲವಾಗುವುದು. ಅಲ್ಲದೆ ಶಿಕ್ಷಕರೂ ವಿದ್ಯಾರ್ಥಿಗಳೂ ದೇಶದ ಉನ್ನತಿಗೆ ನೆರವಾದಂತೆ ಆಗುವುದು.

೧. ಹಳ್ಳಿಯ ನಿವಾಸಿಗಳು

೧. ಒಟ್ಟು ಜನಸಂಖ್ಯೆ ಎಷ್ಟು? ಗಂಡಸರು ಎಷ್ಟು? ಹೆಂಗುಸರು ಎಷ್ಟು? ಮಕ್ಕಳು ಎಷ್ಟು? ಹೆಣ್ಣುಮಕ್ಕಳು ಎಷ್ಟು? (ಹದಿನಾಲ್ಕು ವರ್ಷದ ಕೆಳಗಿನವರು), ಗಂಡುಮಕ್ಕಳು ಎಷ್ಟು? (ಹದಿನಾಲ್ಕು ವರ್ಷದ ಕೆಳಗಿನವರು), ಹೆಣ್ಣುಮಕ್ಕಳು ಎಷ್ಟು? (ಹತ್ತು ವರ್ಷದ ಕೆಳಗಿನವರು), ಗಂಡುಮಕ್ಕಳು ಎಷ್ಟು? (ಹತ್ತು ವರ್ಷದ ಕೆಳಗಿನವರು.)

೨. ಹಳ್ಳಿಯಲ್ಲಿ ಯಾವ ಯಾವ ಸಂಪ್ರದಾಯಗಳು ಇವೆ? ಹಿಂದೂಗಳು ಎಷ್ಟು? ಮುಸಲ್ಮಾನರು ಎಷ್ಟು? ಕ್ರಿಶ್ಚಿಯನ್ನರು ಎಷ್ಟು? ಸಿಕ್ಖರು ಎಷ್ಟು? ಹರಿಜನರು ಎಷ್ಟು? ಉಳಿದ ಸಂಪ್ರದಾಯದವರು ಎಷ್ಟು?

೩. ಹಳ್ಳಿಯಲ್ಲಿ ಯಾವ ಯಾವ ಜಾತಿಗಳ ಜನರು ಇರುವರು? ಒಂದೊಂದು ಜಾತಿಯಲ್ಲಿ ಎಷ್ಟು ಜನರಿರುವರು? ಯಾವ ಯಾವ ಭಾಷೆಗಳನ್ನು ಜನರು ಮಾತನಾಡುವರು?

೨. ಪ್ರಾಕೃತಿಕ ಸ್ವರೂಪ

೧. ಹಳ್ಳಿಯಲ್ಲಿ ಎಷ್ಟು ಮನೆಗಳು ಇವೆ? ಅವು ಯಾವುದರಿಂದ ಕಟ್ಟಿವೆ? 'ಪಕ್ಕಾ' ಮನೆಗಳು ಎಷ್ಟು? ಪ್ರತಿ ಹನ್ನೆರಡು ಮನೆಗಳನ್ನು ತೆಗೆದುಕೊಂಡು ಒಂದೊಂದು ಮನೆಗೆ ಎಷ್ಟೆಷ್ಟು ಕೋಣೆಗಳು ಇವೆಯೆಂಬುದನ್ನು ಹೇಳಿರಿ. ಸರಾಸರಿ ಒಂದು ಮನೆಗೆ ಕಿಡಿಕಿಗಳೂ ಎಷ್ಟಿವೆಯೆಂಬುದನ್ನು ಹೇಳಿರಿ. ಸರಾಸರಿ ಪ್ರತಿಯೊಂದು ಮನೆಯಲ್ಲಿ ಎಷ್ಟು ಜನರು ವಾಸಿಸುವರು? ಸರಾಸರಿ ಪ್ರತಿಯೊಂದು ಮನೆಯಲ್ಲಿ ದನಕರುಗಳು ಎಷ್ಟು?

೨. ಎಷ್ಟು ಮನೆಗಳ ಎದುರಿನಲ್ಲಿ ಅಥವಾ ಹಿಂಬದಿಯಲ್ಲಿ ತೋಟಗಳಿವೆ?

೩. ಹಳ್ಳಿಯ ಸಾಮಾನ್ಯ ಪ್ರಾಕೃತಿಕ ಪರಿಸ್ಥಿತಿ ಹೇಗಿರುವುದು? ಬೀದಿಗಳು ಚೆನಾಗಿವೆಯೆ? ಬೀದಿಗಳು ಇಕ್ಕಟ್ಟಾಗಿವೆಯೆ?

೩. ಸಾಮಾಜಿಕ ಜೀವನ

೧. ಹಳ್ಳಿಯಲ್ಲಿ ಸಾಲದ ಶೂಲಕ್ಕೆ ಗುರಿಯಾದವರು ಎಷ್ಟು? ಇಡೀ ಹಳ್ಳಿಯ ಸಾಲವೆಷ್ಟು? ಎರಡು ಮೂರು ಪರಿವಾರಗಳನ್ನು ಪ್ರಶ್ನಿಸಿ ತಿಳಿದುಕೊಳ್ಳಿರಿ. ಅವರು ಎಷ್ಟು ಸಾಲದಲ್ಲಿ ಮುಳುಗಿರುವರು ಎಂಬದನ್ನು ತಿಳಿದುಕೊಂಡು ಅವರ ಉತ್ಪನ್ನಕ್ಕೂ ಸಾಲಕ್ಕೂ ಹೋಲಿಸಿ ನೋಡಿರಿ. ಸಾಲಕ್ಕೆ ಕಾರಣಗಳೇನು?

೨. ಹಳ್ಳಿಯಲ್ಲಿ ಪರಸ್ಪರ ಸಹಕಾರಿ ಸಂಘಗಳು ಇವೆಯೆ? ಪರಸ್ಪರ ಸಹಕಾರಿ ಬ್ಯಾಂಕು ಇದೆಯೆ?

೩. ವ್ಯಾಜ್ಯಮಾಡುವ ಪ್ರವೃತ್ತಿ ಜನರಲ್ಲಿ ಹೆಚ್ಚಾಗಿದೆಯೆ? ಹಿಂದಿನ ವರ್ಷದಲ್ಲಿ ಎಷ್ಟು ಕೋರ್ಟಿನ ದಾವೆಗಳು ಇದ್ದುವು? ವ್ಯಾಜ್ಯದ ಸಾಮಾನ್ಯ ಕಾರಣಗಳು ಯಾವುವು? ಪಂಚಾಯತಿಯ ಉಪಯೋಗವಾಗುವುದೇ ಇಲ್ಲವೆ?

೪. ಹರಿಜನರ ವಿಷಯವಾಗಿ ಜನರ ಮನೋವೃತ್ತಿ ಹೇಗಿದೆ? ಅವರಿಗೆ ಸಾಲೆಗಳಲ್ಲಿ ಪ್ರವೇಶವುಂಟೆ? ಸಾಲೆಯಲ್ಲಿ ಅವರಿಗೆ ಯಾವುದಾದರೂ ವಿಶೇಷ ತೊಂದರೆಯಾಗುವುದೆ? ಅವರಿಗೆ ನೀರಿನ ವಿಷಯವಾಗಿ ವಿಶೇಷ ತೊಂದರೆಯಾಗುವುದೆ? ಇನ್ನೇನಾದರೂ ತೊಂದರೆಗಳು ಅವರಿಗೆ ಆಗುವುವೆ? ಉಳಿದ ಜಾತಿಗಳ ಕೂಡ ಸಾಮಾಜಿಕ ಸಂಬಧವುಂಟೆ?

೫. ಹಳ್ಳಿಯಲ್ಲಿ ಯಾವ ಮನೋರಂಜಕ ಕಾರ್ಯಕ್ರಮಗಳಿವೆ? ಪ್ರತಿನಿತ್ಯವೂ ಆಡುವ ಆಟಗಳು ಇವೆಯೆ? ಅವನ್ನು ತಪ್ಪದೆ ಆಡುವರೇ? ಪುಸ್ತಕಾಲಯವು ಇದೆಯೆ? ಬಾಯ್ ಸ್ಕೌಟು ಗಳೂ ಗರ್ಲಗಾಯಿಡುಗಳೂ ಇರುವರೆ? ನಾಟಕಗಳು ಎಂದಾದರೂ ಅಭಿನಯಿಸಲ್ಪಡುವುವೆ? ಉತ್ಸವ–ಸಮಾರಂಭಗಳಲ್ಲಿ ಏನೇನು ಮಾಡಲಾಗುವುದು? ಹಳ್ಳಿಯ ಕಲಿತ ಜನರು ಹೆಚ್ಚು ಓದುವರೇ?

೬. ಹೆಂಗುಸರ ಮತ್ತು ಹುಡುಗೆಯರ ಬಗ್ಗೆ ವರ್ತನವು ಯಾವ ಬಗೆಯದಿದೆ? ಬುರಖಾ ಪದ್ಧತಿಯು ಹಿಂದೂ ಹೆಂಗುಸರಲ್ಲಿ ಇರುವುದೆ? ಇದ್ದರೆ, ಅದಕ್ಕೆ ಕಾರಣವೇನು? ಹೆಂಗುಸರು ತಮ್ಮ ಬಿಡುವಿನ ವೇಳೆಯಲ್ಲಿ ಏನು ಮಾಡುವರು? ಅವರಲ್ಲಿ ಯಾರಾದರೂ ಓದಲು ಕಲಿಯುವರೇ?

೭. ಯುವಕರ ಮದಿವೆಯು ಎಷ್ಟನೆಯ ವರ್ಷಕ್ಕೆ ಆಗುವುದು? ಹೆಣ್ಣುಮಕ್ಕಳ ಮದಿವೆಯು ಎಷ್ಟನೆಯ ವರ್ಷಕ್ಕೆ ಆಗುವುದು? (ಅನೇಕ ಉದಾಹರಣೆಗಳನ್ನು ತೆಗೆದುಕೊಂಡು ಸರಾಸರಿ ಸಂಖ್ಯೆಯನ್ನು ಹೇಳಿರಿ). ಶಾರದಾ ಕಾನೂನಿಗೆ ಅನುಸಾರವಾಗಿ ಯಾರಿಗಾದರೂ ಶಿಕ್ಷೆಯಾಗಿರುವುದೆ?

೪. ಆರ್ಥಿಕ ಸಮಸ್ಯೆ

೧. ಹಳ್ಳಿಯ ಜನರು ಯಾವ ಯಾವ ಉದ್ಯೋಗಗಳನ್ನು ಮಾಡುವರು? ಭಿನ್ನ ಭಿನ್ನ ಉದ್ಯೋಗಗಳ ಪಟ್ಟಿಯನ್ನು ತಯಾರಿಸಿರಿ. ಕೆಲವು ಜನರಾದರೂ ಒಂದರಕಿಂತ ಹೆಚ್ಚು ಉದ್ಯೋಗಗಳನ್ನು ಮಾಡುವರೆ? ಇದ್ದರೆ ಯಾವವು? ಹಳ್ಳಿಯ ಹೋರೆಗಳು ಯಾವವು? ಎಷ್ಟು ಜನರು ಒಕ್ಕಲತನ ಮಾಡುವರು? ಎಷ್ಟು ಜನರು ತಮ್ಮನೇ ಹೊಲಗಳಲ್ಲಿ ಕೆಲಸ ಮಾಡುವರು? ಲಾವಣಿಯಿಂದ ಎಷ್ಟು ಜನರು ಒಕ್ಕಲುತನ ಮಾಡುವರು? ಹಗಲು ಕೂಲಿಯ ಕೆಲಸವನ್ನು ಎಷ್ಟು ಜನರು ಮಾಡುವರು? ತೋಟ ಪಟ್ಟಿಯ ಸರಾಸರಿ ಕ್ಷೇತ್ರ ಆಕಾರವೆಷ್ಟು? ಎಷ್ಟು ಜನರು ತೋಟ ಪಟ್ಟಿಯ ಕೆಲಸವನ್ನು ಮಾಡುವರು? ಗಂಡಾಳು ಹೆಣ್ಣಾಳು ಮತ್ತು ಹುಡುಗರು ಇವರ ಸರಾಸರಿ ಕೂಲಿಯೆಷ್ಟು? ಭೂಮಿಯ ಸಾಗುವಳಿಯನ್ನು ಸಾಮೂಹಿಕ ರೀತಿಯಿಂದ ಮಾಡಲು ಏನಾದರೂ ಪ್ರಯತ್ನ ಮಾಡಲಾಗುತ್ತಿದೆಯೆ? ಹಳ್ಳಿಯ ಸುತ್ತಲು ಯಾವ ಬಗೆಯ ಭೂಮಿಯಿಬೆ? ಯಾವ ಯಾವ ಬೆಳೆಗಳು ಬರುತ್ತವೆ?

ಹಳ್ಳಿಯ ಸುತ್ತಲಿರುವ ಹೊಲಗಳ ಪಟ್ಟಿ (ಜಾಬು) ಗಳನ್ನು ತೋರಿಸುವ ನಕ್ಷೆಯನ್ನು ತೆಗೆಯಿರಿ. ಪ್ರತಿಯೊಂದು ಪಟ್ಟಿಯ ಕೆಳಗೆ ಅದರ ಕ್ಷೇತ್ರಫಲವನ್ನು ಬರೆಯಿರಿ; ಮತ್ತು ಪ್ರತಿಯೊಂದು ಪಟ್ಟಿಯ ಹೆಸರನ್ನು ಸಂಗ್ರಹಿಸಿರಿ.

೨. ಜೂಜಿನಲ್ಲಿ ಹೆಚ್ಚು ಹಣವನ್ನು ವೆಚ್ಚ ಮಾಡಲಾಗುತ್ತದೆಯೆ? ಸಾರಾಯಿ ಅಥವಾ ಅಫೂ ಸೇವನಕ್ಕಾಗಿ ಹೆಚ್ಚು ಖರ್ಚು ಮಾಡಲ್ಪಡುವುದೊ? ಮದಿವೆ, ಮುಂಜೆ, ಆಭರಣಗಳಿಗೆ ಮಿತಿಮೀರಿ ವೆಚ್ಚವಾಗುತ್ತಿದೆಯೆ? (ಮೂರು ನಾಲ್ಕು ಪರಿವಾರಗಳಿಂದ ನಿಶ್ಚಿತ ವೆಚ್ಚದ ರಕಮನ್ನು ತಿಳಿದುಕೊಳ್ಳಿರಿ.)

೩. ಹೊರಗಿನಿಂದ ಹಳ್ಳಿಯಲ್ಲಿ ಬರುವ ಸರಕುಗಳಾವುವು? ಹಳ್ಳಿಗರು ಪರಊರುಗಳಲ್ಲಿ ಮಾರುವ ಸರಕುಗಳಾವುವು? ಅವರ ಸಂತೆಯ ಊರುಗಳು ಯಾವುವು? ಸಂತೆಗೆ ಅಥವಾ ತಮ್ಮ ಸರಕುಗಳಿಗೆ ಪೇಟೆಗಳನ್ನು ದೊರಕಿಸಲು ಕಷ್ಟವಾಗುವುದೆ?

೪. ಹಳ್ಳಿಯಲ್ಲಿ ಭಿಕ್ಷುಕರು ಬಹಳವಾಗಿದ್ದಾರೆಯೆ? ಭಿಕ್ಷುಕರಿಗೆ ತಿಂಗಳಿಗೆ ಎಷ್ಟು ಪ್ರಾಪ್ತಿಯಾಗಬಹುದು?

೫. ಶಿಕ್ಷಣ

೧. ಸಾಲೆಯಲ್ಲಿ ಎಷ್ಟು ಬಾಲಕರು ಇರುವರು? ಬಾಲಕರು ಎಷ್ಟು? ಬಾಲಕಿಯರು ಎಷ್ಟು? ಪ್ರತಿಯೊಂದು ವರ್ಗದ ವಿದ್ಯಾರ್ಥಿಗಳ ಸಂಖ್ಯೆ? ಸಾಲೆಗೆ ಆರ್ಥಿಕ ಸಹಾಯ ಹೇಗೆ ದೊರೆಯುವುದು? ವಿದ್ಯಾರ್ಥಿಗಳು ಬೇರೆ ಯಾವ ಸಾಲೆಗಳಿಗೆ ಹೋಗುತ್ತಿರುವ ವಾಡಿಕೆಯುಂಟು? ಸಾಲೆಯಲ್ಲಿ ಯಾವ ಯಾವ ವಿಷಯಗಳನ್ನು ಕಲಿಸಲಾಗುತ್ತಿದೆ? ಹಳ್ಳಿಯಲ್ಲಿಯ ಎಷ್ಟು ಬಾಲಕರು ಸಾಲೆಗೆ ಹೋಗುತ್ತಿರುವದಿಲ್ಲ? ಅವರು ಏಕೆ ಹೋಗುವುದಿಲ್ಲ?

೨. ಹಳ್ಳಿಯಲ್ಲಿ ರಾತ್ರಿಯ ಸಾಲೆಗಳು ಇವೆಯೆ? ಇದ್ದರೆ, ಅದಕ್ಕೆ ಎಷ್ಟು ಜನರು ಹೋಗುವರು? ಹೆಣ್ಣುಮಕ್ಕಳಿಗಾಗಿ ರಾತ್ರಿ ಸಾಲೆಗಳು ಇವೆಯೆ? ಎಷ್ಟು ಜನ ಹಳ್ಳಿಗರು ಓದಬಲ್ಲರು? ಹಳ್ಳಿಯಲ್ಲಿ ಯಾರಾದರೂ ವರ್ತಮಾನಪತ್ರ ತರಿಸುವರೆ? ಯಾವ ಯಾವ ವರ್ತಮಾನಪತ್ರಗಳು ತರಿಸಲ್ಪಡುವುವು?

೩. ಹಳ್ಳಿಗರು ಹೆಚ್ಚಾಗಿ ಪ್ರವಾಸವನ್ನು ಕೈಕೊಳ್ಳುವರೆ? ರೇಲ್ವೆಗಾಡಿಯಲ್ಲಿ ಪ್ರವಾಸ ಮಾಡದವರು ಯಾರಾದರೂ ಉಂಟೆ? ಹತ್ತಿರದ ಪಟ್ಟಣವನ್ನು ನೋಡದವರು ಯಾರಾದರೂ ಇದ್ದಾರೆಯೆ?

೪. ಹಳ್ಳಿಯ ಹುಡುಗರಲ್ಲಿ ಯಾರಾದರೂ ಮಾಧ್ಯಮಿಕ ಮತ್ತು ಕಾಲೇಜದ ಶಿಕ್ಷಣವನ್ನು ಪಡೆದು ಹಳ್ಳಿಗೆ ಬಂದಿರುವರೇ? ಇದ್ದರೆ, ಅವರು ಹಳ್ಳಿಯಲ್ಲಿ ಏನು ಮಾಡುವರು? ಅವರು ಹಳ್ಳಿಯ ಪ್ರಗತಿಗೆ ಏನಾದರೂ ಸಹಾಯವಾಡುವರೇ? ಹಳ್ಳಿಯನ್ನು ಬಿಡುವುದರಲ್ಲಿ ಅವರ ಉದ್ದೇಶವೇನಿತ್ತು? ತಮ್ಮ ಉದ್ದೇಶವನ್ನು ಅವರು ಈಡೇರಿಸಿಕೊಂಡರೇ? ಯಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣದ ಬಗ್ಗೆ ಹಳ್ಳಿಗರ ಅಭಿಪ್ರಾಯವೇನಿರುವುದು? ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಳ್ಳಿಗರು ಹಣ ಖರ್ಚುಮಾಡಲು ಸಿದ್ಧರಿರುವರೇ? ಇದ್ದರೆ ಏಕೆ? ಇಲ್ಲದಿದ್ದರೆ ಏಕೆ?

೬. ಆರೋಗ್ಯ

೧. ಹಳ್ಳಿಯಲ್ಲಿ ಆಸ್ಪತ್ರೆ ಇರುವುದೆ ? ಡಾಕ್ಟರರೂ ಆಸ್ಪತ್ರೆ-ಗಳೂ ಹಳ್ಳಿಯಿಂದ ಎಷ್ಟು ದೂರದಲ್ಲಿ ಉಂಟು ?

೨. ಕಳೆದ ವರ್ಷದಲ್ಲಿ ಒಂದು ವರ್ಷದಕಿಂತ ಕಡಮೆ ವಯಸ್ಸಿನ ಎಷ್ಟು ಮಕ್ಕಳು ಸತ್ತರು? ಇದೇ ಅವಧಿಯಲ್ಲಿ ಎಷ್ಟು ತಾಯಂದಿರು ಸತ್ತರು ? ಜನನವಾದ ನಂತರ ತಾಯಂದಿರು ಮತ್ತು ಶಿಶುಗಳನ್ನು ಯಾವ ರೀತಿಯಿಂದ ನೋಡಿಕೊಳ್ಳಲಾಗುವುದು ? ಈ ದಿಶೆಯಲ್ಲಿ ಯಾರಿಂದಾದರೂ ಸಹಾಯ ಮತ್ತು ಸಲಹೆ ಕೊಡುವ ಕಾರ್ಯವು ಮಾಡಲ್ಪಟ್ಟಿರುವುದೇ ?

೩. ಕಳೆದ ವರ್ಷದಲ್ಲಿ ಹಳ್ಳಿಯಲ್ಲಿ ಎಷ್ಟು ಪಿಡುಗುಗಳು ಬಂದುವು ? ಪ್ಲೇಗು, ಮೈಲಿ, ಮಾರಿಕಾ ಬೇನೆಗಳ ಹಾವಳಿಯಾಗಿ-ದ್ದಿತೆ ? ಜನರು ಪ್ಲೇಗು ಮತ್ತು ಮೈಲಿಯ ಸಲುವಾಗಿ ಸ್ವಸಂತೋಷ ದಿಂದ ಮೈಲಿ ತೆಗೆಯಿಸಿಕೊಂಡರೆ? ಎಷ್ಟು ಜನ ಬಾಲಕರು (ಹತ್ತು ವರ್ಷದ ಕೆಳಗಿನವರು) ಮೈಲಿ ತೆಗೆಯಿಸಿಕೊಂಡರು ? ಎಷ್ಟು ಜನ ಪ್ರೌಢರು ಕಳೆದ ವರ್ಷದಲ್ಲಿ ತೀರಿಕೊಂಡರು ?

೪. ಹಳ್ಳಿಗೆ ನೀರಿನ ಪೂರೈಕೆಯು ಹೇಗೆ ಇರುವುದು? ಜನರು ಎಲ್ಲಿ ಸ್ನಾನಮಾಡುವರು ? ತಮ್ಮ ಬಟ್ಟೆಗಳನ್ನು ಎಲ್ಲಿ ಒಗೆದುಕೊಳ್ಳುವರು ? ತಮ್ಮ ಕುಡಿಯುವ ನೀರನ್ನು ಯಾರಾದರೂ ಕುದಿಸಿ ಕುಡಿಯುವರೇ ?

೫. ಹಳ್ಳಿಯಲ್ಲಿ ಪಾಯಖಾನೆಗಳೇನಾದರೂ ಇರುವುವೇ ? ಅವು ಪ್ರತಿದಿನ ಉಪಯೋಗಿಸಲ್ಪಡುವುವೇ ? ಹಳ್ಳಿಯ ಸ್ವಚ್ಛತೆಯು ಯಾವ ರೀತಿಯಿಂದ ಕಾಪಾಡಲ್ಪಡುವುದು ? ಹೊಲಸು-ಕಸ ಹಾಕಲು ತಿಪ್ಪೆ ಗುಂಡಿಗಳವೆಯೇ ? ರಸ್ತೆಗಳ (ಬೀದಿಗಳ) ಸ್ಥಿತಿಯು ಹೇಗಿರುವುದು ?

೬. ಹಳ್ಳಿಯಲ್ಲಿ ವೈದ್ಯರು ಇರುವರೇ ? ಡಾಕ್ಟರರಿಗಿಂತ ವೈದ್ಯರ ಕಡೆಗೆ ಜನರು ಹೆಚ್ಚಾಗಿ ಹೋಗುವರೇ ?

೭. ಎಷ್ಟು ಹುಡುಗರ ದೃಷ್ಟಿ ಮಂದವಿದೆ ? ಅದರ ನಿವಾರಣೆಗೆ ಕೈಕೊಳ್ಳಲಾಗುತ್ತಿರುವ ಉಪಾಯಗಳೇನು ? ದೃಷ್ಟಿಮಾಂದ್ಯಕ್ಕೆ ಕಾರಣಗಳು ಯಾವವು ?

೭. ನೀತಿ ಮತ್ತು ಧರ್ಮ

೧. ಹಳ್ಳಿಯಲ್ಲಿ ಎಷ್ಟು ಜನರಿಗೆ ಸಾರಾಯಿ ಕುಡಿಯುವ ಚಟವಿರುವುದು? ಎಷ್ಟು ಜನರು ಅಫೂ ಸೇವಿಸುವರು? ಪೂಜೆಯ ಸ್ಥಾನಗಳು ಯಾವುವು?—ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್ ಮತ್ತು ಇತರರ ಪೂಜಾಸ್ಥಾನಗಳು ಎಷ್ಟು? ಎಷ್ಟುಬಗೆಯ ಉತ್ಸವ-ಸಮಾರಂಭಗಳು ಜರುಗುವುವು? ಪ್ರತಿಯೊಂದು ಉತ್ಸವದ ಬಗ್ಗೆಯೂ ಚಿಕ್ಕ ವರ್ಣನೆಯನ್ನು ಬರೆಯಿರಿ.

೨. ಹಳ್ಳಿಯಲ್ಲಿ ಹಿಂದೂಧರ್ಮದ ಮುಖಂಡರು ಯಾರು ಯಾರು? ಅವರಿಗೆ ಯಾರಿಂದ, ಯಾವ ಬಗೆಯಾಗಿ ಸಹಾಯವು ದೊರಕುವದು? ಅವರು ಏನು ಮಾಡುವರು? ಮುಸಲ್ಮಾನ ಮುಖಂಡರು ಯಾರಾರು ಇರುವರು? ಅವರಿಗೆ ಯಾವ ಬಗೆಯಾಗಿ ಸಹಾಯವು ದೊರಕುವುದು? ಅವರು ಏನು ಮಾಡುವರು? ಕ್ರಿಶ್ಚಿಯನ್ ಮುಖಂಡರು ಯಾರು ಯಾರು ಇರುವರು? ಅವರಿಗೆ ಯಾವ ಬಗೆಯಾಗಿ ಸಹಾಯವು ದೊರಕುವುದು? ಅವರು ಏನು ಮಾಡುವರು? ಉಳಿದ ಧರ್ಮಗಳ ಮುಖಂಡರು ಯಾರಾರು ಇರುವರು? ಅವರಿಗೆ ಯಾವ ಬಗೆಯಾದ ಸಹಾಯವು ದೊರಕುವುದು? ಅವರು ಏನೇನು ಮಾಡುವರು?

೩. ಹಿಂದೂ, ಮುಸಲ್ಮಾನ, ಕ್ರಿಶ್ಚಿಯನ್, ಸಿಖ್, ಮತ್ತು ಇತರ ಧರ್ಮಗಳ ಬಾಲಕರಿಗೆ ಯಾವ ಬಗೆಯ ಧಾರ್ಮಿಕ ಶಿಕ್ಷಣವು ಕೊಡಲ್ಪಡುವುದು? ಭಾನುವಾರದ ಸಾಲೆ ಯಾವುದಾದರೂ ಉಂಟೆ? ಎಷ್ಟು ಜನರು ಆ ಸಾಲೆಗೆ ಹೋಗುವರು? ಕ್ರಿಶ್ಚಿಯನ್ನರು ಹೋಗುವರೊ? ಕ್ರಿಶ್ಚಿಯನೇತರರು ಹೋಗುವರೊ?

೪. ಹಳ್ಳಿಗಳಲ್ಲಿರುವ ಎಲ್ಲ ಜನರ ಅಂಧಶ್ರದ್ಧೆಗಳನ್ನು ಕುರಿತು ಸಾಧ್ಯವಿದ್ದಷ್ಟು ಸಂಗತಿ (ಮಾಹಿತಿ) ಗಳನ್ನು ದೊರಕಿಸಿರಿ. ಕ್ರಿಶ್ಚಿಯನ್ನರು ಈ ಅಂಧಶ್ರದ್ಧೆಯ ಆಚಾರಗಳಲ್ಲಿ ನಂಬಿಕೆಯುಳ್ಳವರಾಗಿರುವರೇ? ಕ್ರಿಶ್ಚಿಯನ್ನರು ಕ್ರೈಸ್ತಮತದಂತೆ ವಿವಾಹವನ್ನು ಮಾಡಿಕೊಳ್ಳುವರೊ?

೮. ಇತಿಹಾಸ

೧. ಹಳ್ಳಿಯ ಬಗ್ಗೆ ಸಾಧ್ಯವಿದ್ದಷ್ಟು ಹೆಚ್ಚಾಗಿ ಇತಿಹಾಸದ ಸಂಗತಿಗಳನ್ನು ಕಲೆಹಾಕಿರಿ. ಹಳ್ಳಿಯ ಸಮೀಪದಲ್ಲಿ ಯುದ್ಧ-

ಚಟುವಟಿಕೆಗಳು ಮತ್ತು ಪ್ರಾಜೆಕ್ಟ್‌ಗಳು 39

ಗಳೇನಾದರೂ ಆದುವೆ? ಹಳ್ಳಿಯಲ್ಲಿ ಅಥವಾ ಹಳ್ಳಿಯ ಬಳಿಯಲ್ಲಿ ಎಲ್ಲಾದರೂ ಕೋಟೆಯಿದೆಯೇ? ಈ ಕೋಟೆಗಳು ಮೊದಲು ಯಾರ ಸ್ವಾಧೀನದಲ್ಲಿದ್ದುವು?

೨. ಹಳ್ಳಿಯು ಮೊದಲಿನಿಂದಲೂ ಈಗಿದ್ದ ಸ್ಥಳದಲ್ಲಿಯೆ ಇದ್ದಿತೊ?

೩. ಹಳ್ಳಿಯ ಇತಿಹಾಸವನ್ನು ಹೇಳುವ ಹಳೆಯ ಹಾಡುಗಳನ್ನೂ ಲೋಕಗೀತಗಳನ್ನೂ ಲಾವಣಿಗಳನ್ನೂ ಸಂಗ್ರಹಿಸಿರಿ.

೯. ಭೂಗೋಲ

೧. ಹಳ್ಳಿಯು ಬಾಹ್ಯ ಜಗತ್ತಿನಕೂಡ ಸಂಬಂಧವನ್ನಿಡಲು ಯಾವ ಸಾಧನಗಳು ಇವೆ?

೨. ಹಳ್ಳಿಯ ಹವಾಮಾನದ ಅಭ್ಯಾಸ ಮಾಡಿರಿ. ಮಳೆಯು ಎಷ್ಟು ಬೀಳುವುದರೆಂಬುದರ ಟಿಪ್ಪಣಿಯನ್ನಿಡಿರಿ. ಬೀಸುವ ಗಾಳಿಗಳ ಟಿಪ್ಪಣಿಯನ್ನಿಡಿರಿ. ದಿನಾಲು ಉಷ್ಣತೆ ಎಷ್ಟಿದೆಯೆಂಬುದರ ಟಿಪ್ಪಣಿಯನ್ನಿಡಿರಿ. ವರ್ಷದೊಳಗೆ ಯಾವ ಯಾವ ಕಾಲದಲ್ಲಿ ಬಹುತರವಾಗಿ ಮಳೆಬರುವುದು?

೩. ನೀರು ಮುಖ್ಯವಾಗಿ ಯಾತರಿಂದ ಪೂರೈಸಲ್ಪಡುವುದು? ನೀರಿನ ಪೂರೈಕೆಯ ಮುಖ್ಯ ಸಾಧನವಾವುದು? ಉಗಮವಾವುದು? ಹಳ್ಳಿಯಲ್ಲಿ ಬಾವಿಗಳು ಎಷ್ಟಿವೆ? ಬೇಸಿಗೆಯಲ್ಲಿ ಈ ಬಾವಿಗಳ ಸ್ಥಿತಿಯು ಹೇಗಿರುವುದು? ಅವುಗಳಲ್ಲಿ ನೀರು ಸಾಕಷ್ಟಿದ್ದು ಸ್ಥಿತಿಯು ಚೆನ್ನಾಗಿರುವುದೇ?

೪. ಹಳ್ಳಿಯ ಬಳಿಯಲ್ಲಿ ಬೆಟ್ಟಗಳು ಇವೆಯೇ? ಇದ್ದರೆ, ಅವುಗಳನ್ನು ನಿಮ್ಮ ನಕಾಶೆಯಲ್ಲಿ ತೋರಿಸಿರಿ. ಹಳ್ಳಿಯ ಸುತ್ತಲು ಯಾವ ತರದ ಮಣ್ಣು ಇರುವುದು? ಹಳ್ಳ, ನದಿಗಳ ದಡವು ಸಾಗುವಳಿಯಾಗದೆ ಪಡಬಿದ್ದಿದೆಯೆ? ಬೆಟ್ಟದ ಇಳಕಲು ಪ್ರದೇಶವು ಸಹ ಪಡ ಬಿದ್ದಿದೆಯೆ?

೫. ಹಳ್ಳಿಯಲ್ಲಿ ಯಾವ ಯಾವ ತರದ ಗಿಡಗಳು ಇವೆ ಮತ್ತು ಹಳ್ಳಿಯ ಸುತ್ತುಮುತ್ತಲು ಯಾವ ಯಾವ ಜಾತಿಯ ಗಿಡಗಳು ಬೆಳೆಯುತ್ತವೆ? ಹಳ್ಳಿಯ ಹತ್ತಿರದಲ್ಲಿ ಬೆಳೆಯುವ ಬೇರೆ ಬೇರೆ ಜಾತಿಯ ಸಸಿಗಳ ಪಟ್ಟಿಯನ್ನು ತಯಾರಿಸಿರಿ.

೧೦ ಪ್ರಾಣಿಗಳು

೧. ಹಳ್ಳಿಯಲ್ಲಿ ದೊರೆಯುವ ಎಲ್ಲ ಪ್ರಾಣಿಗಳ ಪಟ್ಟಿಯನ್ನು ಮಾಡಿರಿ. ಅವುಗಳ ಚಟಗಳ—(ಅಭ್ಯಾಸಗಳ) ಸಂಕ್ಷಿಪ್ತ ವರ್ಣನೆಯನ್ನು ಬರೆಯಿರಿ.

೨. ಹಳ್ಳಿಯಲ್ಲಿ ದೊರೆಯುವ ಎಲ್ಲ ಹಕ್ಕಿಗಳ ಪಟ್ಟಿಯನ್ನು ಸಿದ್ಧಗೊಳಿಸಿರಿ.

೧೧ ಹಳ್ಳಿಯ ಆಡಳಿತೆ

೧. ಹಳ್ಳಿಯಲ್ಲಿ **ಪಂಚಾಯತವು** ಇದೆಯೆ? ಅದು ಮಾಡುವ ಕಾರ್ಯವೇನು? ಅದರ ಸದಸ್ಯರು ಹೇಗೆ ಆರಿಸಲ್ಪಡುವರು ಮತ್ತು ಅವರ ಕೆಲಸಗಳೇನು?

೨. ಹಳ್ಳಿಯಲ್ಲಿ ಯಾವ ಅಧಿಕಾರಿಗಳು ಇದ್ದಾರೆ? ಅವರು ಹೇಗೆ ನಿಯಮಿಸಲ್ಪಡುವರು? ಅವರ ನಿಯಮಿಸುವಿಕೆಯು ಪರಂಪರಾಗತವಾಗಿರುವುದೆ?

೩. ಕರವನ್ನೆತ್ತುವದು ಹೇಗೆ ನಡೆಯುವುದು? ಯಾವ ಯಾವ ಕರಗಳು ಇವೆ? ಎಷ್ಟೆಷ್ಟು ಇವೆ? ಬೆಳೆಯ ಎಷ್ಟನೆಯ ಅಂಶವು ಕರದ ರೂಪದಲ್ಲಿ ಕೊಡಲ್ಪಡುವುದು?

೪. ಹಳ್ಳಿಗರು ರಾಜಕಾರಣದಲ್ಲಿ ಅಭಿರುಚಿಯನ್ನು ತೋರಿಸುವರೇ? ಅವರು ಯಾವ ಪಕ್ಷ— ಪಂಗಡಕ್ಕೆ ಸೇರಿರುವರು? ರಾಷ್ಟ್ರೀಯ ಜಾಗ್ರತಿಯ ಹಾಗೂ ರಾಜಕಾರಣದ ಪರಿಣಾಮವು ಹಳ್ಳಿಗರ ಮೇಲೆ ಎಷ್ಟಾದರೂ ಆಗಿದೆಯೆ?

---

* 'ರಾಯಬರ್ನ್' ಅವರ 'ಪ್ರಾಗತಿಕ ಶಾಲೆ' ಯ ಆಧಾರದಿಂದ.

ಸಾಹಿತ್ಯ ಸೇವಕರಾದ ಕುರಡಿ ನಾರಾಯಣರಾಯರು

(ಕಳೆದ ಸಂಚಿಕೆಯಿಂದ ಮುಂದುವರಿದುದು)

" ಹರಿಯೆ ನಿನ್ನೊಳು ಭಕ್ತಿಮುಕ್ತಿಗೆ |
ಸರಳದಾರಿಯದೆಂಬುದರಿಯದೆ |
ತಿರುತಿರುಗಿ ಮಾಯಾ ಪ್ರಪಂಚದಿ ಸುತ್ತಿಬೇಸತ್ತಿ ||
ಪರಮ ಭಕ್ತಿಯೊಳೀಗ ನಿನ್ನಯ
ಚರಣ ತಲದಲಿ ಬಿದ್ದು ಬೇಡುವೆ
ಪರಿಹರಿಸೊ ನರಜನ್ಮವನು.....
ಕೊಂಡೀ ಸುಮಾಂಜಲಿಯ ||

ಇದು ನಾರಾಯಣರಾಯರ ಗ್ರಂಥ ಲೇಖನಗಳಿಗೆ ಮುದ್ರಿಕೆ. ಅವರ ಬರೆಹದ ಭಾವ, ಭಾಷೆ, ಬಂಧ ಇವುಗಳ ಮಾದರಿಯಿದು. ಅವರ ಕಾವ್ಯ ಕಾಸಾರದ ಇನಿದನಿಯಿಂದ ಝೇಂಕರಿಸುವ ಷಟ್ಪದಗಳಿಂದೊಡಗೂಡಿದ ಕಮಲದಂತಿದೆ, ಈ ಚಿಕ್ಕ ಕವಿತೆ.

ಇವರು ಹಲವು ಗದ್ಯ ಗ್ರಂಥಗಳನ್ನೂ ಕೆಲವು ಖಂಡ ಕಾವ್ಯಗಳನ್ನೂ ಬರೆದಿದ್ದಾರೆ. ಅಕ್ಷರಾಭ್ಯಾಸವನ್ನು ಆರಂಭಿಸುವ ಚಿಕ್ಕ ಬಾಲಕರನ್ನು ಮೊದಲುಗೊಂಡು ಎಮ್. ಎ. ತರಗತಿಯವರೆಗಿನ ಅಭ್ಯಾಸಿಗಳೆಲ್ಲರಿಗೂ ಪಾಠ ಪುಸ್ತಕವೆಂದು ಓದಲು ತಕ್ಕುವಾದ ಪುಸ್ತಕಗಳನ್ನು ಇವರು ಬರೆದು ಪ್ರಕಟಿಸಿದ್ದಾರೆ. ಇವರ ಸುಬೋಧ ವಾಚನ ಮಾಲೆಯ (ಶ್ರೀ. ಹಂಚಿನಾಳ ಇವರ ನೆರವಿನಿಂದ ಬರೆದುದು) ಶಿಶುಸುಬೋಧಿನಿ, ೧-೨-ನೆಯ ಕ್ರಮಿಕ ಪುಸ್ತಕಗಳು ಇವು ಇತ್ತೀಚಿನ ಕೃತಿಗಳು. ಪ್ರಾಥಮಿಕ ಶಾಲೆಗಳ ೫-೬-೭ ನೆಯ ಇಯತ್ತೆಗಳ ವಿದ್ಯಾರ್ಥಿಗಳ ಮತ್ತು ಮಾಧ್ಯಮಿಕ ಶಾಲೆಗಳ ಎಲ್ಲ ತರಗತಿಗಳ ವಿದ್ಯಾರ್ಥಿಗಳ ಹಾಗು ಟ್ರೇನಿಂಗ್ ಕಾಲೇಜಗಳ ವಿದ್ಯಾರ್ಥಿ-ಶಿಕ್ಷಕರ ಸಲುವಾಗಿ ರಚಿಸಿದ ಕವಿತಾ ಕುಸುಮ ಮಂಜರಿ ಭಾಗ ೧-೨; ವಾಚನ ವಾಠ ಮಾಲೆ, ಕವಿತಾ ಪಾಠಮಾಲೆ (ಶ್ರೀ. ಪಂಡಿತ ಪೂಜಾರ ಅವರ ಸಹಕಾರದಿಂದ) ಸಾವಿತ್ರೀ ಸತ್ಯವಾನ, ಪದ್ಮಿನಿ, ದಾಕ್ಷಾಯಣಿ, ಮಹಾರಾಣಿ

ಲಕ್ಷ್ಮೀಬಾಯಿ, ನಾನಾಸಾಹೇಬ ಪೇಶವೆ ಮುಂತಾದ ಗ್ರಂಥಗಳು ಕನ್ನಡಿಗರಿಗೆ ಅಪರಿಚಿತವಾದುವಲ್ಲ. ಈ ಪುಸ್ತಕಗಳು ಮ್ಯಾಟ್ರಿಕ್ಯುಲೇಶನ್, ಇಂಟರ ವಿಜಿಯೇಟ, ಬಿ. ಏ., ಎಮ್. ಎ. ತರಗತಿಗಳಿಗೆ ಆಗಾಗ ಪಾಠ ಪುಸ್ತಕಗಳಂತೆ ನಿಯಮಿತವಾಗಿವೆ; 'ಕವೀಂದ್ರ ರವೀಂದ್ರರು ಕಣ್ಮಾರೆಯಾದರು' ಎಂಬ ಮೊನ್ನೆ ಮೊನ್ನೆ ಬರೆದು ಪ್ರಕಟಿಸಿದ ಪುಸ್ತಕವು ಚಿಕ್ಕದು. 'ಆಸ್ಥೆಯ ಓದೇ ಇದರ ಬೆಲೆ' ಎಂದು ಮುದ್ರಿಸಿ ಆಸ್ಥೆಯ ಓದುಗರಿಗೆ ಇದನ್ನು ಪುಕ್ಕಟೆಯಾಗಿ ಹಂಚಿದ್ದಾರೆ. ಈ ಪುಸ್ತಕವನ್ನು ಮದ್ರಾಸ ಸರಕಾರದ ಟಿಕ್ಸ್ಬುಕ್ಸ್ ಸಿಲೆಕ್ಶನ್ ಕಮೀಟಿಯವರು ೧೯೪೨-೪೩; ೧೯೪೩-೪೪ ಈ ವರ್ಷಗಳ ಟಿಕ್ಸ್ಬ ಬುಕ್ಕುಗಳಲ್ಲಿ ಸೇರಿಸಿಕೊಂಡಿದ್ದಾರೆ. ಶ್ರೀರಾಮಕೃಷ್ಣ ಪರಮಹಂಸರ ಸತ್ಕಥಾಕುಸುಮಮಂಜರಿಯ ನಾಲ್ಕು ಭಾಗಗಳು ಇವರ ಚಿಕ್ಕ ಕಥೆಗಳ ಮಾದರಿಯಾಗಿವೆ. ಶ್ರೀಹರ್ಷನ ನಾಟಕಗಳು ಎಂಬ ಗ್ರಂಥವು ಇವರ ವಿಮರ್ಶಾ ಚಾತುರ್ಯವನ್ನೂ ಸಂಸ್ಕೃತ ಭಾಷಾಜ್ಞಾನವನ್ನೂ ಕನ್ನಡಿಗರ ಮುಂದಿಟ್ಟಿದೆ.

ಶ್ರೀ. ಕುರಡಿಯವರ ಬರೆಹದ ವಿಷಯದಲ್ಲಿ ನಾನು ಇನ್ನೊಂದು ಮಾತನ್ನು ಇಲ್ಲಿ ಹೇಳದಿರಲಾರೆನು. ಅದು ಯಾವುದೆಂದರೆ—ಇವರ ಬರೆಹದ ಶೈಲಿಯು ತುಂಬ ಸರಳವಾದುದು. ಸುಲಭವಾದುದು. ಹೀಗಿದ್ದರೂ ಭಾವದ ಬಿಗುವಿಗಾಗಲಿ, ಭಾಷೆಯ ಶುದ್ಧತೆಗಾಗಲಿ, ಎಂದೂ ಕುಂದುಕೊರತೆ ಬಂದಿಲ್ಲ. ಇವರು ಉತ್ತರಕನ್ನಡದವರೆಂದು ಹಿಂದೆಯೆ ಹೇಳಿದೆ; ಆದರೆ ಇವರ ಭಾಷೆಯು ಮಾತ್ರ ಯಾವ ಕನ್ನಡ ವಿಭಾಗದ್ದೂ ಅಲ್ಲ. ಧಾರವಾಡದ ಕನ್ನಡವಲ್ಲ, ಮೈಸೂರಿನದಲ್ಲ, ಮಂಗಳೂರಿನದೂ ಅಲ್ಲ; ಇಡಿಯ ಕನ್ನಡ ನಾಡಿನದು. ಇವರ ಪುಸ್ತಕಗಳು ಉತ್ತರ ಕರ್ನಾಟಕದಲ್ಲಿ ಪ್ರಿಯವಾಗಿದ್ದಷ್ಟೇ ಮಂಗಳೂರಿನ ಕಡೆಗೂ ಪ್ರಚಾರಹೊಂದಿವೆ. ಅಚ್ಚಕನ್ನಡದ ತವರೂರೆಂದು ಹೇಳಿಕೊಳ್ಳುವ ಮೈಸೂರಿನಲ್ಲಿ ಇನ್ನೂ ಹೆಚ್ಚು ಜನಪ್ರಿಯವಾಗಿವೆ. ಇವು ಮುಂಬಯಿ, ಮದ್ರಾಸ, ಮೈಸೂರು ಈ ಮೂರು ಸರಕಾರಗಳಲ್ಲಿಯೂ ವಿಶ್ವವಿದ್ಯಾಲಯಗಳಲ್ಲಿಯೂ ಮಾನ್ಯವಾಗಿ ಪಾಠಪುಸ್ತಕಗಳಂತೆ ಉಪಯೋಗಿಸಲ್ಪಡುವವೆಂಬ ಒಂದೇ ಮಾತಿನಿಂದ ಇವರ ಪುಸ್ತಕಗಳ ಮಹತ್ವವು ತಿಳಿದುಬರುವದು.

ಸಾಹಿತ್ಯ ಪರಿಷತ್ ಪತ್ರಿಕೆಯ ಸಂಪಾದಕ ಮಂಡಲಿಯವರು, ವಿದ್ವಾಂಸ ಚೆನ್ನಕೇಶವ ಅಯ್ಯಂಗಾರ್ಯರು, ಆಧುನಿಕ ಕಾವ್ಯಸಹೃದಯರಲ್ಲಿ ಗಣ್ಯರೂ ರಾಜತಂತ್ರಪ್ರವೀಣರೂ ಆದ ಶ್ರೀ. ಬಿ. ಎಂ. ಶ್ರೀಕಂಠಯ್ಯನವರು ಮೊದಲಾದ ಕನ್ನಡನಾಡು ನುಡಿಗಳ ಮುಂದಾಳುಗಳು ಇವರ ಗ್ರಂಥಗಳಲ್ಲಿಯ ಸ್ವಧರ್ಮಶ್ರದ್ಧೆ, ಸ್ವದೇಶಭಕ್ತಿ, ಸ್ವಭಾಷಾಪ್ರೇಮ, ಭಾಷಾಶುದ್ಧಿಯ ಬಗೆಗಳನ್ನು ಕೊಂಡಾಡಿದ್ದಾರೆ. ಗ್ರಂಥಗಳ ಉತ್ಕೃಷ್ಟತೆಗೆ ಇನ್ನೊಂದು ಬಲವಾದ ಸಾಕ್ಷಿಯನ್ನು ಹೇಳು

ವೆನು. ಪದ್ಮಿನಿ, ಮಹಾರಾಣಿ ಲಕ್ಷ್ಮಿಬಾಯಿ ಎಂಬ ಪುಸ್ತಕಗಳನ್ನು ಆಂಧ್ರ ಭಾಷೆಗೆ ಪರಿವರ್ತಿಸಲು ರತ್ನಗಿರಿ ಎಂಬ ಪತ್ರಿಕೆಯ ಸಂಪಾದಕರಾದ **ಶ್ರೀ. ಕೆ. ಮುನಿರಡ್ಡಿ** ಯವರು ೧೯೨೭ ನೆಯ ಇಸ್ವಿಯಲ್ಲಿ ಅಪ್ಪಣೆಯನ್ನು ಪಡೆದುಕೊಂಡು ಮೊದಲು ಅವನ್ನು ತಮ್ಮ ಪತ್ರಿಕೆಯಲ್ಲಿ ಕ್ರಮಶಃ ಪ್ರಕಟಿಸಿದ್ದಾರೆ.

ನಮ್ಮ ಶಿಕ್ಷಕ ಬಂಧುಗಳು ಇಂಥ ತೇಜಸ್ವಿಯಾದ ರತ್ನಗಳು ತಮ್ಮಲ್ಲಿವೆ ಎಂಬ ಮಾತಿಗಾಗಿ ಅಭಿಮಾನಪಡುವದು ಸ್ವಾಭಾವಿಕವಾದುದಲ್ಲವೆ !

ಶ್ರೀ. ನಾರಾಯಣರಾಯರು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಜೀವಸದಸ್ಯರೂ ಉತ್ತರಕರ್ನಾಟಕದಲ್ಲಿ ನಡೆಯುವ ಸಾಹಿತ್ಯ ದೇವಿಯ ಪೂಜೆಗಳಿಗೆಲ್ಲ ತಪ್ಪದೆ ಹೋಗಿಬರುವ ಪೂಜಾರಿಗಳಲ್ಲಿ ಒಬ್ಬರೂ ಆಗಿರುವರು. ನಾಗ್ಭೂಷಣ ಪತ್ರಿಕೆಯ ಸಂಪಾದಕ ಮಂಡಲಿಯಲ್ಲಿ ಮೂರು ವರ್ಷಗಳವರೆಗೆ ಇದ್ದುಕೊಂಡು, ಹಲವು ಕಾಲ ಹೊರಗೆ ಉಳಿದುಕೊಂಡು, ತಮ್ಮ ಸೇವೆಯನ್ನು ಸಲ್ಲಿಸಿರುವರು. ಬೆಂಗಳೂರಿನ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರೂ ಕೆಲವುಕಾಲ ಕಾರ್ಯ ಸಮಿತಿಯ ಸದಸ್ಯರೂ ಪ್ರಾಂತಸಮಿತಿಯ ಕಾರ್ಯದರ್ಶಿಗಳೂ ಆಗಿ, ಆ ಮಹಾ ಸಂಸ್ಥೆಯ ಸೇವೆಯನ್ನು ತಮಗೆ ಸಾಧ್ಯವಿದ್ದ ಮಟ್ಟಿಗೆ ಮಾಡಿದ್ದಾರೆ. ಹಿಂದಿನ ಶಾಲಾಪತ್ರಿಕ ಇಂದಿನ ಪ್ರಾಥಮಿಕ ಶಿಕ್ಷಣ ಮಾಸಪತ್ರಿಕೆಗೂ ಇವರಿಗೂ ಇರುವ ದೀರ್ಘಕಾಲದ ಸಂಬಂಧವನ್ನು ನಮ್ಮ ಶಿಕ್ಷಕ ಬಂಧುಗಳು ಅರಿತೇ ಇರುವದರಿಂದ ಅದನ್ನು ಇಲ್ಲಿ ಎತ್ತಿ ಬರೆಯುವ ಕಾರಣವಿಲ್ಲ.

" ಶಾಲಾಪತ್ರಿಕ ನಾಗ್ಭೂಷಣಗಳೇ ನನ್ನ ಮುಖ್ಯ ಆಶ್ರಯ ಸ್ಥಾನಗಳು.
ಇವೇ ನನಗೆ ನಾಲ್ಕು ಶಬ್ದಗಳನ್ನು ಬರೆಯಲು ಕಲಿಸಿದ ಗುರುಕುಲಗಳು "

ಎಂದು ಹೇಳುವ ನಾರಾಯಣರಾಯರ ಸೌಜನ್ಯದ ಮಾತುಗಳೇ ಈ ನನ್ನ ಹೇಳಿಕೆಗೆ ತಕ್ಕ ಆಧಾರಗಳು.

ನಾರಾಯಣರಾಯರು ತಮಗೆ ಶಿಕ್ಷಣ ಹಾಗು ಸಾಹಿತ್ಯಸೇವಾ ವಿಭಾಗಗಳು ಕೊಟ್ಟ ಧನವನ್ನೆಲ್ಲ ತಮಗಾಗಿಯೇ ಇಟ್ಟುಕೊಳ್ಳದೆ ಕೆಲವೊಂದು ರೀತಿಯಲ್ಲಿ ತಕ್ಕಷ್ಟು ದಾನವನ್ನೂ ಮಾಡಿದ್ದಾರೆ. ಬಡವರಾದ ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ತಮ್ಮಿಂದಾದಷ್ಟು ಕೊಟ್ಟಿದ್ದುಂಟು, ಕೊಡುತ್ತಿರುವದೂ ನಡೆದೇ ಇದೆ. ಪ್ರಾಥಮಿಕ ಶಿಕ್ಷಕರು ಹೆಚ್ಚು ಸುಜ್ಞಾನಿಗಳಾಗಬೇಕೆಂಬ ಹಂಬಲದಿಂದ ಪಂಡಿತ ಪರೀಕ್ಷೆಗಾಗಿ ಮೈಸೂರಿಗೆ ಹೋಗುವ ಶಿಕ್ಷಕರಿಗೆ ಪ್ರತಿತಿಂಗಳವೂ ೧೦ ರೂ. ಗಳಂತೆ ೩ ವರ್ಷಗಳವರೆಗೆ ಸಹಾಯದ್ರವ್ಯ ಕೊಡುವ ಇವರ ದಾನದ ಯೋಜನೆಯು ೧೯೨೦ ನೆಯ ಇಸ್ವಿಯ ಎಪ್ರಿಲ್ ತಿಂಗಳ ಶಾಲಾಪತ್ರಿಕದಲ್ಲಿ ಪ್ರಕಟವಾಗಿದೆ. ಇದು ಇವರ ವಿದ್ಯಾಲಾಲಸೆಯ ಮತ್ತು ಔದಾರ್ಯದ ಕುರುಹು ಅಲ್ಲದೆ ಮತ್ತೇನು ?

ನುಡಿದಂತೆ ನಡೆಯಬಲ್ಲ ನಾರಾಯಣರಾಯರು ಶೈಕ್ಷಣಿಕ ಮತ್ತು ಸಾಹಿತ್ಯಕ ಕ್ಷೇತ್ರಗಳಲ್ಲಿ ಇಷ್ಟೊಂದು ಕಾಲ ಸೇವೆಯನ್ನು ಸಲ್ಲಿಸಿದ್ದರೂ ವಿದ್ಯಾರ್ಥಿಗಳಾಗಲಿ ಕನ್ನಡದ ಹಿರಿಯರಾಗಲಿ ಇನ್ನೂ ತೃಪ್ತಿಹೊಂದಿಲ್ಲ. ಇವರ ಸೇವೆಯು ಮುಂದಿನ ಅನಿರ್ಭಂಧ ಕಾಲದಲ್ಲಿ ಇನ್ನೂ ಹೆಚ್ಚಾಗಿಯೇ ನಡೆಯಬೇಕೆಂದು ಅವರೆಲ್ಲರೂ ಬಯಸುತ್ತಿದ್ದಾರೆ. ಇವರಲ್ಲಿ ಇಷ್ಟೊಂದು ಕಾರ್ಯಕಾರಿಯಾಗಿ ರೂಪುಗೊಂಡ ಬಗೆ ಬಗೆಯ ಸಾಮರ್ಥ್ಯಗಳು, ಹೀಗೆ ಒಬ್ಬ ಸಾಮಾನ್ಯ ಪ್ರಾಥಮಿಕ ಶಿಕ್ಷಕರಲ್ಲಿ ಮೂಡಿ, ಬೆಳೆದು, ಬಾಳಿ, ಬೆಳಗಿ, ಬರಬೇಕಾದರೆ, ಪ್ರಯತ್ನ ಹಾಗು ಪರಿಸ್ಥಿತಿಗಳಷ್ಟೇ ಕಾರಣಗಳಾಗಿರದೆ, ಹೆಚ್ಚಿನ ಆಂತರಿಕ ಸಹಾಯವೊಂದಿರಬೇಕೆನ್ನಿಸುವದು. ಪುಣ್ಯ ಶಾಲಿಗಳಾದವರಿಗೆ ದೇವರು ಹುಟ್ಟಿಸುವಾಗಲೆ ಕೆಲಕೆಲವು ವಿಶಿಷ್ಟ ಸಾಮರ್ಥ್ಯ ಗಳನ್ನು ಕೊಟ್ಟೇ ಕಳಿಸಿರುವನೆಂದು ಹೇಳುವದುಂಟು.

ನಾಭಿಷೇಕೋ ನ ಸಂಸ್ಕಾರಃ ಸಿಂಹಸ್ಯ ಕ್ರಿಯತೇವನೇ |
ವಿಕ್ರಮಾರ್ಜಿತ ವಿತ್ತಸ್ಯ ಸ್ವಯಮೇವ ಮೃಗೇಂದ್ರತಾ |

ಎಂಬ ನುಡಿಯು ಸಾರ್ಥಕವಾದುದಲ್ಲವೇ ?

ಶ್ರೀ. ಕುರಡಿ ಅವರಂತಹ ಶ್ರೇಷ್ಠ ಸಾಹಿತಿಗಳ ನಿರಂತರ ಸೇವೆಯಿಂದ ಕನ್ನಡ ಕಸ್ತೂರಿಯ ಕಂಪು ಎಲ್ಲೆಡೆಯಲ್ಲಿಯೂ ಇಡುಗಲಿ!

H. G. KATTI

ಫಲಹಾರ

(ಶ್ರೀ. ಎಚ್. ಬಿ. ಉಮಡಿ, ಎಮ್. ಎ. ಅವ---,

ನಮ್ಮ ದೇಶದ ಸ್ಥಿತಿಗತಿಗಳಿಗೆ ಅನುಗುಣವಾಗಿ ನೋಡಿದರೆ ಫಲಾಹಾರವೆ ಉತ್ತಮವೆನ್ನಿಸಬಹುದಾಗಿದೆ. ಹಾಲು ಜೇನುತುಪ್ಪಗಳು ಸಮೃದ್ಧವಾಗಿರುವ ನಾಡು ಸುಸಂಪನ್ನ ದೇಶವೆಂದು ಹೇಳಲ್ಪಡುವದುಂಟು. ಹಾಲು ಹಣ್ಣುಗಳು ಸಮೃದ್ಧವಾಗಿದ್ದ ದೇಶವೂ ಕೂಡ ಅಷ್ಟೇ ಸುಸಂಪನ್ನವೆನ್ನುವದಕ್ಕೆ ಅಡ್ಡಿಯೇನೂ ತೋರುವದಿಲ್ಲ. ಯಾಕೆಂದರೆ ಹಣ್ಣುಗಳು ಸಮತೋಲ ಆಹಾರಕ್ಕೆ ಅವಶ್ಯವಾಗಿ ಬೇಕು. ಸಮತೋಲ ಆಹಾರವು ಆರೋಗ್ಯಕ್ಕೂ ಶರೀರ ಸಂಪತ್ತಿನ ಬೆಳೆವಣಿಗೆಗೂ

ಆವಶ್ಯಕವು. ಯಾವದೊಂದು ದೇಶದ ಶಕ್ತಿ ಸಂಪನ್ನತೆಗೆ ಆರೋಗ್ಯ, ಶರೀರ ಸಂಪತ್ತು, ಇವು ಬೇಕೇ ಬೇಕು.

ನಮ್ಮ ದೇಶದ ಪ್ರಾಕೃತಿಕ ಪರಿಸ್ಥಿತಿಯು ನಾನಾಬಗೆಯ ಹಣ್ಣು ಹಂಪಲ-ಗಳನ್ನು ಸಮೃದ್ಧಿಯಾಗಿ ಬೆಳೆಯಲು ತುಂಬ ಅನುಕೂಲವಾಗಿದೆ; ಆದರೆ ಆ ದೃಷ್ಟಿ-ಯಿಂದ ವಿಚಾರಮಾಡಿ ಕಾರ್ಯಮಾಡುವವರು ಬೇಕು. ನಮ್ಮ ದೇಶದಲ್ಲಿ ಅರೆ-ಹೊಟ್ಟೆ ಉಂಡು ಬದುಕುವ ಲಕ್ಷಾವಧಿ ಪ್ರಜೆಗಳಿಗಾಗಿ ಈ ಯೋಜನೆಯಿಂದ ಅಗ್ಗವೂ ಪೋಷಕವೂ ಆದ ಆಹಾರವನ್ನು ಸುಲಭವಾಗಿ ದೊರಕಿಸಿ ಕೊಡಲು ಅನುವಾಗಬಹುದು; ಸದ್ಯದ ಆಹಾರ ಸಾಮಗ್ರಿಗಳ ಕೊರತೆಯ ಕಾಲದಲ್ಲಿ-ಯಂತೂ ಇದರಿಂದ ತುಂಬ ಸಹಾಯವಾಗುವದು.

ಎಲ್ಲ ಸಾಮಗ್ರಿಗಳು ತಕ್ಕ ಪ್ರಮಾಣದಲ್ಲಿಯೂ ನಮ್ಮ ಶರೀರಕ್ಕೆ ಸುಲಭ-ವಾಗಿ ಉಪಯೋಗವಾಗುವ ಸ್ಥಿತಿಯಲ್ಲಿಯೂ ಇರುವ ಆಹಾರವೆಂದರೆ ಹಾಲು; ಅದರ ತರುವಾಯವೇ ಹಣ್ಣುಗಳ ಸ್ಥಾನವು ಬರುವದು. ಆರೋಗ್ಯಕ್ಕೂ ಶರೀರ ಪೋಷಣೆಗೂ ಸಮತೋಲ ಆಹಾರವು ಬೇಕು. ಫಲಗಳಲ್ಲಿಯೇ ಇಂಥ ಸಮ-ತೋಲನವನ್ನು ಕಾಣಬಹುದು. ಯಾಕಂದರೆ ಫಲಗಳು ಸೃಷ್ಟಿಯಲ್ಲಿ ಸ್ವಾಭಾವಿಕ-ವಾಗಿ ಬೆಳೆಯುವವು. ಅವುಗಳಲ್ಲಿಯ ಆಹಾರ ಸಾಮಗ್ರಿಗಳು ತಕ್ಕ ಪ್ರಮಾಣದಲ್ಲಿ ಉಪಲಬ್ಧವಾಗಿರುವಂತೆ ಪ್ರಕೃತಿಯ ಯೋಜನೆಯಿರುವದು ಫಲಗಳಿಂದ ಶರೀರ ಪೋಷಣೆಗೆ ಅತ್ಯಾವಶ್ಯಕವಾದ ಶರ್ಕರೆಯು ದೊರೆಯುವದು. ಈ ಫಲಶರ್ಕ-ರೆಯು ಜೀನುತುಪ್ಪದಲ್ಲಿ ಹೆಚ್ಚಾಗಿದ್ದು ಅದರ ತರುವಾಯ ಹಣ್ಣುಗಳಲ್ಲಿಯೇ ಇದು ಹೆಚ್ಚಾಗಿ ದೊರೆಯುವದು. ಈ ಫಲ ಶರ್ಕರೆಯು ಎಲ್ಲ ಬಗೆಯ ಸಕ್ಕರೆ ಗಿಂತಲೂ ಹೆಚ್ಚು ಸಿಹಿಯಾದದ್ದೂ ಮಧುರವಾದದ್ದೂ ಇದ್ದು ತುಂಬ ಸ್ವಾಭಾವಿಕ ವಾದ ಆಹಾರವಾಗಿರುವದು; ಮತ್ತು ಶರೀರ ಪೋಷಣೆಗೂ ಶಕ್ತ್ಯುತ್ಪಾದನಕ್ಕೂ ತಕ್ಷಣ ಉಪಯೋಗವಾಗುವ ಸ್ಥಿತಿಯಲ್ಲಿರುವದು. ಚಿಕ್ಕಮಕ್ಕಳಿಗಂತೂ ಇದರಷ್ಟು ಪ್ರಯೋಜನಕಾರಿಯಾದ ಆಹಾರವು ಬೇರೊಂದಿಲ್ಲ. ಮಿಕ್ಕ ಪ್ರಕಾರದ ಆಹಾರದಲ್ಲಿಯೂ ಪಿಷ್ಟದಲ್ಲಿಯೂ ಇರುವ ಸಕ್ಕರೆಯು ಮಾನವ ಶರೀರಕ್ಕೆ ಆ ಮೂಲ ಸ್ಥಿತಿಯಲ್ಲಿ ಉಪಯೋಗಕ್ಕೆ ಬೀಳುವದಿಲ್ಲ. ಶರೀರದೊಳಗಿನ ಪಾಚಕಾ-ವಯವಗಳು ಇಂಥ ಸಕ್ಕರೆಯನ್ನು ವಿಭಜಿಸಿ ತಮಗೆ ಬೇಕಾದ ಸಕ್ಕರೆಯನ್ನು ಪುನಃ ಹುಟ್ಟಿಸಿಕೊಳ್ಳಬೇಕಾಗುವದು. ಇದರಿಂದ ಆ ಅವಯವಗಳು ಹೆಚ್ಚಿನ ಕೆಲಸ ಮಾಡಬೇಕಾಗುವದರಿಂದ ಶರೀರ ಪೋಷಣೆಯ ಮತ್ತು ಶಕ್ತ್ಯುತ್ಪಾದನೆಯ ಕಾರ್ಯವು ಕುಂಠಿತವಾಗುವದು.

(ಮುಂದುವರಿದುದು)

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ೧೯೪೩

ಈ ಮೂಲಕ ತಿಳಿಸುವುದೇನಂದರೆ ಗಂಡುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯು ೧೯೪೩ನೆಯ ಇಸ್ವಿಯ ಏಪ್ರಿಲ ತಿಂಗಳ ೭ನೆಯ ತಾರೀಖು ಬುಧವಾರ ಮತ್ತು ಮುಂದಿನ ದಿನಗಳಲ್ಲಿ ದಕ್ಷಿಣಭಾಗದೊಳಗಿನ ಈ ಕೆಳಗೆ ಕಾಣಿಸಿದ ಕೇಂದ್ರಗಳಲ್ಲಿ ನಡೆಯುವುದು.

ಜಿಲ್ಲೆ	ಕೇಂದ್ರ
೧. **ಧಾರವಾಡ :**	೧. ಧಾರವಾಡ, ೨. ಗದಗ, ೩. ಹುಬ್ಬಳ್ಳಿ ಮುಖ್ಯ ಕೇಂದ್ರ (ಉರ್ದು ಉಮೇದವಾರರಿಗೆ ಮಾತ್ರ) ೪. ಹುಬ್ಬಳ್ಳಿ ಉಪಕೇಂದ್ರ (ಕನ್ನಡ ಮತ್ತು ಮರಾಠಿ ಉಮೇದುವಾರರಿಗೆ) ೫. ಹಾವೇರಿ.
೨. **ಬೆಳಗಾಂವಿ :**	೬. ಬೆಳಗಾಂವಿ, ೭. ಚಿಕ್ಕೋಡಿ, ೮. ಬೈಲಹೊಂಗಲ, ೯. ಗೋಕಾಕ (ಉಪಕೇಂದ್ರ), ೧೦. ಅಥಣಿ (ಉಪಕೇಂದ್ರ).
೩. **ವಿಜಾಪುರ :**	೧೧. ವಿಜಾಪುರ, ೧೨. ಬಾಗಲಕೋಟೆ, ೧೩. ಮುದ್ದೇಬಿಹಾಳ (ಉಪಕೇಂದ್ರ).
೪. **ಕಾರವಾರ :**	೧೪. ಕಾರವಾರ, ೧೫. ಕುಮಟಾ, ೧೬. ಸಿರಸಿ, (ಉಪಕೇಂದ್ರ).
೫. **ಕೊಲ್ಹಾಪುರ ಸಂಸ್ಥಾನ :**	೧೭. ಕೊಲ್ಹಾಪುರ.

ಟಿಪ್ಪಣಿ:— ೧. ಧಾರವಾಡ ಜಿಲ್ಲೆಯ ಗದಗು, ರೋಣ, ನವಿಲುಗುಂದ, (ಆರೇಕುರಹಟ್ಟಿ ಕಾಲವಾಡ ಮತ್ತು ಶಿರಲಾಪುರದ ಗಂಡುಮಕ್ಕಳ ಸಾಲೆಗಳನ್ನು ಬಿಟ್ಟು) ಮತ್ತು ಲಕ್ಷ್ಮೇಶ್ವರ ಹಾಗೂ ಶಿರಹಟ್ಟಿ ತಾಲೂಕುಗಳ ಕನ್ನಡ ಉಮೇದುವಾರರು (ಅಗ್ರಿಕಲ್ಚರಲ್ ಬಾಯಸ್ ಬಿಟ್ಟು) ಗದಗಿನ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೨. ಧಾರವಾಡ ಜಿಲ್ಲೆಯ ಕರಜಗಿ, ಕೋಡ, ರಾಣೇಬೆನ್ನೂರ ಮತ್ತು ಹಾನಗಲ್ಲ ತಾಲೂಕುಗಳ ಕನ್ನಡ ಉಮೇದುವಾರರು (ಅಗ್ರಿಕಲ್ಚರಲ್ ಬಾಯಸ್ ಬಿಟ್ಟು) ಹಾವೇರಿ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೩. ಹುಬ್ಬಳ್ಳಿ ಪಟ್ಟಣದ ಮತ್ತು ಹುಬ್ಬಳ್ಳಿ ತಾಲೂಕಿನ ಕನ್ನಡ ಮತ್ತು ಮರಾಠಿ ಉಮೇದುವಾರರು (ಅಗ್ರಿಕಲ್ಚರಲ್ ಬಾಯಸ್ ಬಿಟ್ಟು) ಮತ್ತು ಕಲಘಟಗಿ, ನವಿಲುಗುಂದ ಮತ್ತು ಶಿಗ್ಗಾಂವಿ ತಾಲೂಕುಗಳ ಕೆಳಗೆ ಕಾಣಿಸಿದ

ಸಾಲೆಗಳ ಉಮೇದುವಾರರು ಹುಬ್ಬಳ್ಳಿಯ ಉಪಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

ತಾಲೂಕಿನ ಹೆಸರು (ಹುಬ್ಬಳ್ಳಿಯ ಹೊರತಾಗಿ)	ಹುಬ್ಬಳ್ಳಿ ಉಪಕೇಂದ್ರಕ್ಕೆ ಜೋಡಿಸಿದ ಶಾಲೆಗಳ ಹೆಸರು.
೧. ಕಲಘಟಗಿ ತಾಲೂಕು :	೧. ಕಲಘಟಗಿ, ೨. ಮಿಶ್ರಿಕೋಟಿ ಕನ್ನಡ ಗಂಡುಮಕ್ಕಳ ಸಾಲೆ.
೨. ನವಲಗುಂದ ತಾಲೂಕು :	೧. ಅರೇಕುರಹಟ್ಟಿ, ೨. ತಿರಲಾಪುರ, ೩. ಕಾಲವಾಡ ಕ. ಗ. ಮ. ಸಾಲೆ.
೩. ಶಿಗ್ಗಾವಿ ತಾಲೂಕು :	೧. ತಡಸ, ೨. ಧುಂಡಸಿ, ೩. ಮಟ್ಟಿಗಟ್ಟಿ, ೪. ಇಂಗಳಗಿ, ೫. ಹಿರೇಹರಕುಣಿ, ೬. ತಲ್ಲಘಟ್ಟಿ, ೭. ಅತ್ತಿಗೇರಿ, ೮. ಕಳಸ ಕನ್ನಡ ಗಂಡುಮಕ್ಕಳ ಸಾಲೆ.

೪. ಧಾರವಾಡ ಜಿಲ್ಲೆಯೊಳಗಿನ ಎಲ್ಲ ಉರ್ದು ಉಮೇದುವಾರರು ಹುಬ್ಬಳ್ಳಿ ಉರ್ದು ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೫. ಧಾರವಾಡ ಜಿಲ್ಲೆಯೊಳಗಿನ ಉಳಿದ ಎಲ್ಲ ಉಮೇದುವಾರರು (ಅಗ್ರಿಕಲ್ಚರಲ್ ಬಾಯಸ್ ಉಮೇದುವಾರರು ಸಹ) ಧಾರವಾಡ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೬. ಅಥಣಿ ತಾಲೂಕಿನ ಕನ್ನಡ ಮತ್ತು ಮರಾಠಿ ಉಮೇದುವಾರರು (ಅಗ್ರಿಕಲ್ಚರಲ್ ಬಾಯಸ್‌ದವರನ್ನು ಬಿಟ್ಟು) ಅಥಣಿ ಉಪಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೭. ಚಿಕ್ಕೋಡಿ ತಾಲೂಕಿನ ಉಳಿದ ಎಲ್ಲ— ಕನ್ನಡ, ಮರಾಠಿ, ಮತ್ತು ಉರ್ದು (ಅಗ್ರಿಕಲ್ಚರಲ್ ಬಾಯಸ್‌ದವರನ್ನು ಬಿಟ್ಟು) ಉಮೇದುವಾರರು ಮತ್ತು ಅಥಣಿ ತಾಲೂಕಿನ ಉರ್ದು ಉಮೇದುವಾರರು ಚಿಕ್ಕೋಡಿ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೮. ಗೋಕಾಕ ತಾಲೂಕಿನ ಕನ್ನಡ ಉಮೇದುವಾರರು (ಅಗ್ರಿಕಲ್ಚರಲ್ ಬಾಯಸ್‌ದವರನ್ನು ಬಿಟ್ಟು) ಗೋಕಾಕ ಉಪಕೇಂದ್ರದಲ್ಲಿ ಪರೀಕ್ಷೆಗೆ ಕುಳಿತು ಕೊಳ್ಳತಕ್ಕದ್ದು.

೯. ಬೈಲಹೊಂಗಲ ಮತ್ತು ಪರಸಗಡ ತಾಲೂಕಿನ ಕನ್ನಡ ಮತ್ತು ಉರ್ದು ಉಮೇದವಾರರು (ಅಗ್ರಿಕಲ್ಚರಲ್ ಬಾಯಸ್‌ದವರನ್ನು ಬಿಟ್ಟು) ಬೈಲಹೊಂಗಲ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೧೦. ಉಳಿದ ಎಲ್ಲ ಉಮೇದುವಾರರು (ಅಗ್ರಿಕಲ್ಚರಲ್ ಬಾಯಸ್, ಮರಾಠಿ ಮತ್ತು ಉರ್ದು ಉಮೇದುವಾರರು ಸಹ) ಮತ್ತು ಗೋಕಾಕ ತಾಲೂಕಿನ ಮರಾಠಿ ಮತ್ತು ಉರ್ದು ಉಮೇದುವಾರರು ಬೆಳಗಾವಿ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೧೧. ಬಾಗಲಕೋಟ, ಬಾದಾಮಿ, ಹುನಗುಂದ (ಸಂಗಮ, ಧನ್ನೂರು, ಮೊರೋಳಗಳ ಕನ್ನಡ ಗಂಡುಮಕ್ಕಳ ಶಾಲೆಗಳನ್ನು ಬಿಟ್ಟು) ತಾಲೂಕುಗಳ ಮತ್ತು ಜಮಖಂಡಿ, ರಾಮದುರ್ಗ ಮತ್ತು ಮುಧೋಳ ಸಂಸ್ಥಾನಗಳ ಮತ್ತು ಕೆಳಗೆ ಕಾಣಿಸಿದ ಬಾಗೇವಾಡಿ ತಾಲೂಕಿನ ಶಾಲೆಗಳ ಕನ್ನಡ ಮತ್ತು ಉರ್ದು ಉಮೇದುವಾರರು ಬಾಗಲಕೋಟೆ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೧. ವಂದಗಲ್ಲ, ೨. ನಿಡಗುಂದಿ, ೩. ಮುತ್ತಿಗಿ,
೪. ಕೋಲ್ಹಾರ, ೫. ಗೊಳಸಂಗಿ, ೬. ಚಿಮ್ಮಲಗಿ.

೧೨. ಮುದ್ದೇಬಿಹಾಳ ತಾಲೂಕಿನ ಮತ್ತು ಕೆಳಗೆ ಕಾಣಿಸಿದ ತಾಲೂಕುಗಳೊಳಗಿನ ಶಾಲೆಗಳ ಕನ್ನಡ ಉಮೇದುವಾರರು ಮದ್ದೇಬಿಹಾಳ ಉಪಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೧. **ಬಾಗೇವಾಡಿ ತಾಲೂಕು:** ೧. ಹೂವಿನ ಹಿಪ್ಪರಿಗಿ, ೨. ಸಲವಾಡಗಿ, ೩. ವಡವಡಗಿ, ಕ. ಗ. ಮು. ಶಾಲೆ.

೨. **ಹುನಗುಂದ ತಾಲೂಕು:** ೧. ಸಂಗಮ, ೨. ಧನ್ನೂರು, ೩. ಮೊರೋಳ, ಕನ್ನಡ ಗಂಡುಮಕ್ಕಳ ಶಾಲೆ.

ಟೀಪು:— ಮುದ್ದೇಬಿಹಾಳ ಉಪಕೇಂದ್ರದಲ್ಲಿ ಉರ್ದು ಉಮೇದುವಾರರಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಪರವಾನಿಗೆ ಕೊಡಲ್ಪಟ್ಟಿರುವುದಿಲ್ಲವಾದ್ದರಿಂದ ಬಾಗಲುಕೋಟೆಯಲ್ಲಿ ಪರೀಕ್ಷೆಗೆ ಕುಳಿತುಕೊಳ್ಳುವ ಉರ್ದು ಉಮೇದುವಾರರ ಸ್ಥಿತಿಯು ಯಾವ ಬದಲಾವಣೆಯನ್ನೂ ಹೊಂದಿಲ್ಲ.

೧೩. ಉಳಿದ ಎಲ್ಲ (ಮರಾಠಿ, ಉರ್ದು ಮತ್ತು ಅಗ್ರಿಕಲ್ಚರಲ್ ಬಾಯಸ್ ಸಹ) ಉಮೇದುವಾರರು ಬಿಜಾಪುರ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೧೪. ಕುಮಟಾ, ಹೊನ್ನಾವರ ತಾಲೂಕುಗಳ ಮತ್ತು ಭಟಕಳ ಪೇಶಾದ ಕನ್ನಡ ಮತ್ತು ಉರ್ದು ಉಮೇದುವಾರರು (ಅಗ್ರಿಕಲ್ಚರಲ್ ಬಾಯಸ್ ಬಿಟ್ಟು) ಕುಮಟಾ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೧೫. ಶಿರಸಿ, ಸಿದ್ದಾಪುರ, ಯಲ್ಲಾಪುರ, ಹಳ್ಯಾಳ ತಾಲೂಕುಗಳ ಮತ್ತು ಮುಂಡಗೋಡ ಪೇಠಾದ ಕನ್ನಡ ಉಮೇದುವಾರರು ಶಿರಸಿ ಉಪಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

ಟೀಪು :— ಶಿರ್ಸಿ ಉಪಕೇಂದ್ರದಲ್ಲಿ ಉರ್ದು ಉಮೇದುವಾರರಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅಪ್ಪಣೆ ಕೊಡಲ್ಪಟ್ಟಿಲ್ಲವಾದ್ದರಿಂದ ಕುಮಟಾ ಕೇಂದ್ರದಲ್ಲಿ ಕುಳಿತುಕೊಳ್ಳುವ ಉರ್ದು ಉಮೇದುವಾರರ ಸ್ಥಿತಿಯು ಯಾವರೀತಿಯಾಗಿಯೂ ಬದಲಾಗಿಲ್ಲ.

೧೬. ಉಳಿದ ಎಲ್ಲ (ಆಗ್ರಿಕಲ್ಚರಲ್ ಬಾಯಿಸ್ ಮತ್ತು ಉರ್ದು ಸಹ) ಉಮೇದುವಾರರು ಕಾರವಾರ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು.

೧೭. ಕಾರವಾರ ಜಿಲ್ಲೆಯ ಹಳ್ಯಾಳ ತಾಲೂಕಿನ ಮತ್ತು ಸಾಂಗಲಿ ಸಂಸ್ಥಾನದ ಕುಚಿ ತಾಲೂಕಿನ ಉಮೇದುವಾರರು ಅನುಕ್ರಮವಾಗಿ ಧಾರವಾಡ ಕೇಂದ್ರದಲ್ಲಿಯೂ ಸಾತಾರಾ ಕೇಂದ್ರದಲ್ಲಿಯೂ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಗುಂಡಾಳ ತಾಲೂಕಿ (ಔಂಧ ಸಂಸ್ಥಾನ) ನೊಳಗಿನ ಉಮೇದುವಾರರು ವಿಜಾಪುರ ಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಬಹುದು.

೨. ಸದರೀ ಪರೀಕ್ಷೆಯು ಮುಂಬಯಿ ಸರಕಾರೀ ಗ್ಯಾಝೆಟ್ಟಿನ ೨೦-೯-೧೯೨೮, ೧-೮-೧೯೨೯, ೩-೪-೧೯೩೦, ೬-೮-೧೯೩೧ ಮತ್ತು ೨೩-೬-೧೯೩೮ ನೆಯ ತಾರೀಖಿನ ಸಂಚಿಕೆಗಳ ಮೊದಲನೆಯ ಭಾಗದೊಳಗಿನ ೧೯೬೮, ೧೬೬೩, ೬೨೭, ೧೭೮೪ ಮತ್ತು ೧೪೩೨-೩೩ ನೆಯ ಪುಟಗಳಲ್ಲಿ ಅನುಕ್ರಮವಾಗಿ ಪ್ರಕಟಿಸಲ್ಪಟ್ಟ ೧೯-೯-೧೯೨೮, ೨೯-೭-೧೯೨೯, ೧೪-೩-೧೯೩೦, ೩-೮-೧೯೩೧ ಮತ್ತು ೨೧-೬-೧೯೩೮ ನೆಯ ದಿನಗಳ ೨೨೮೮ ನೆಯ ನಂಬರಿನ ವಿದ್ಯಾಖಾತೆಯ ಸರಕಾರೀ ಪ್ರಕಟನೆಯಲ್ಲಿ ಹೇಳಿರುವ ನಿಯಮುಗಳಿಗೆ ಅನುಸಾರವಾಗಿ ತೆಗೆದುಕೊಳ್ಳಲ್ಪಡುವುದು.

೩. ಪ್ರತಿಯೊಂದು ಕೇಂದ್ರದಲ್ಲಿ ಪರೀಕ್ಷೆಯನ್ನು ನಡೆಯಿಸುವ ಸಮಿತಿಯೊಂದರಿಂದ ಪರೀಕ್ಷೆಯು ನಡೆಯಿಸಲ್ಪಡುವುದು. ಮೇಲೆ ಮೊದಲನೆಯ ಪ್ಯಾರಾದಲ್ಲಿ ಹೇಳಿದಂತೆ ಈಗಿರುವ ಐದು ಮುಖ್ಯ ಕೇಂದ್ರಗಳ ಆಡಳಿತಕ್ಕೆ ಒಳಪಟ್ಟು ಕೆಳಗೆ ಕಾಣಿಸಿದ ಐದು ಉಪಕೇಂದ್ರಗಳು ತೆರೆಯಲ್ಪಟ್ಟಿವೆ:—

ಉಪಕೇಂದ್ರದ ಹೆಸರು	ಉಪಕೇಂದ್ರದಿಂದ ಜೋಡಿಸಲ್ಪಟ್ಟ ಮುಖ್ಯ ಕೇಂದ್ರದ ಹೆಸರು
೧. ಹುಬ್ಬಳ್ಳಿ	ಧಾರವಾಡ
೨. ಅಥಣಿ	ಬೆಳ್ಗೋಡಿ

೩. ಗೋಕಾಕ	ಬೆಳಗಾವಿ
೪. ಮುದ್ದೇಬಿಹಾಳ	ಬಾಗಲಕೋಟೆ
೫. ಶಿರಸಿ	ಕುಮಟಾ

೪. ಉಪಕೇಂದ್ರಗಳಲ್ಲಿ ನಡೆಯತಕ್ಕ ಪರೀಕ್ಷೆಯು ಆಯಾ ಮುಖ್ಯ ಕೇಂದ್ರಗಳ ಅಧ್ಯಕ್ಷರಿಂದ ನಡೆಯಿಸಲ್ಪಡುವುದು. ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದುವಾರರು ತಾವು ಕುಳಿತುಕೊಳ್ಳುವ ಉಪಕೇಂದ್ರದ ಹೆಸರನ್ನು ತಮ್ಮ ಅರ್ಜಿಯಲ್ಲಿ ಕಾಣಿಸಿ ಕೊಡತಕ್ಕ ಪರೀಕ್ಷಾ-ಫೀಯೊಡನೆ ಅರ್ಜಿಗಳನ್ನು ಮೇಲೆ ಮೂರನೆಯ ಪ್ಯಾರಾದಲ್ಲಿ ಕಾಣಿಸಿದಂತೆ ಆಯಾ ಮುಖ್ಯ ಕೇಂದ್ರದ ಅಧ್ಯಕ್ಷರಿಗೆ ಕಳಿಸತಕ್ಕದ್ದು.

೫. ಮುಖ್ಯ ಕೇಂದ್ರಗಳ ಮತ್ತು ಉಪಕೇಂದ್ರಗಳ ಪರೀಕ್ಷಾಸಮಿತಿಗಳ ಅಧ್ಯಕ್ಷರು ಕೆಳಗೆ ಕಾಣಿಸಿದ ಪ್ರಕಾರ ಇರುವರು:—

ಮುಖ್ಯ ಅಥವಾ ಉಪಕೇಂದ್ರಗಳು	ಅಧ್ಯಕ್ಷರ ಹೆಸರುಗಳು
೧. ಧಾರವಾಡ ಮುಖ್ಯ ಕೇಂದ್ರ	ಮೆ. ಪ್ರಿನ್ಸಿಪಾಲ್, ಟ್ರೇ.ಕಾ. ಫಾರಮೆನ್ ಧಾರವಾಡ
೨. ಹುಬ್ಬಳ್ಳಿ ಉಪಕೇಂದ್ರ– (ಧಾರವಾಡ ಮುಖ್ಯ ಕೇಂದ್ರದ ಆಡಳಿತಕ್ಕೆ ಒಳಪಟ್ಟುದು)	,, ,,
೩. ಗದಗ ಮುಖ್ಯ ಕೇಂದ್ರ	ಮೆ. ಡಿ. ಎ. ಇನಸ್ಪೆಕ್ಟರ ಧಾರವಾಡ
೪. ಹಾವೇರಿ ಮುಖ್ಯ ಕೇಂದ್ರ	ಮೆ. ಅ. ಎ. ಇನಸ್ಪೆಕ್ಟರ ದಕ್ಷಿಣ ಭಾಗ, ಧಾರವಾಡ
೫. ಹುಬ್ಬಳ್ಳಿ ಮುಖ್ಯ ಕೇಂದ್ರ (ಉರ್ದು ಉಮೇದುವಾರರಿಗೆ ಮಾತ್ರ)	ಮೆ. ಹೆ. ಮಾ. ಆಂಗ್ಲೋ ಉರ್ದು ಹೈ. ಹುಬ್ಬಳ್ಳಿ.
೬. ಬೆಳಗಾವಿ ಮುಖ್ಯ ಕೇಂದ್ರ	ಮೆ. ಹೆ. ಮಾ. ಸರದಾರ ಹೈಸ್ಕೂಲ ಬೆಳಗಾವಿ
೭. ಗೋಕಾಕ ಉಪಕೇಂದ್ರ (ಬೆಳಗಾವಿ ಮುಖ್ಯ ಕೇಂದ್ರದ ಆಡಳಿತಕ್ಕೆ ಒಳಪಟ್ಟುದು)	,, ,,
೮. ಚಿಕ್ಕೋಡಿ ಮುಖ್ಯ ಕೇಂದ್ರ	ಮೆ. ಡಿ. ಎ. ಇ. ಬೆಳಗಾವಿ
೯. ಅಥಣಿ ಉಪಕೇಂದ್ರ (ಚಿಕ್ಕೋಡಿ ಮುಖ್ಯ ಕೇಂದ್ರದ ಆಡಳಿತಕ್ಕೆ ಒಳಪಟ್ಟುದು)	,, ,,

೧೦. ಬೈಲಹೊಂಗಲ ಮುಖ್ಯ ಕೇಂದ್ರ	ಮೆ. ಡಿ. ಎ. ಇನಸ್ಪೆಕ್ಟರ, ಉ. ಸ್ಕೂಲ, ದಕ್ಷಿಣ ಭಾಗ ಧಾರವಾಡ
೧೧. ವಿಜಾಪುರ ಮುಖ್ಯ ಕೇಂದ್ರ	ಮೆ ಹೆ. ಮಾ. ಗವರ್ನ ಮೆಂಟ ಹಾಯಸ್ಕೂಲ ವಿಜಾಪುರ
೧೨. ಬಾಗಲಕೋಟೆ ಮುಖ್ಯ ಕೇಂದ್ರ	ಮೆ. ಡಿ. ಎ. ಇ. ವಿಜಾಪುರ
೧೩. ಮುದ್ದೇಬಿಹಾಳ ಉಪಕೇಂದ್ರ (ಬಾಗಲಕೋಟೆ ಮುಖ್ಯ ಕೇಂದ್ರದ ಅಡಳಿತಕ್ಕೆ ಒಳಪಟ್ಟುದು)	,, ,,
೧೪. ಕಾರವಾರ ಮುಖ್ಯ ಕೇಂದ್ರ	ಮೆ. ಹೆ, ಮಾ. ಗವರ್ನ ಮೆಂಟ ಹಾಯಸ್ಕೂಲ ಕಾರವಾರ
೧೫. ಕುಮಟಾ ಮುಖ್ಯ ಕೇಂದ್ರ	ಮೆ. ಡಿ. ಎ. ಇನ್‌ಸ್ಪೆಕ್ಟರ, ಕ್ಯಾನರಾ, ಕಾರವಾರ
೧೬. ಶಿರಸಿ–ಉಪಕೇಂದ್ರ (ಕುಮಟಾ ಮುಖ್ಯ ಕೇಂದ್ರದ ಅಡಳಿತಕ್ಕೆ ಒಳಪಟ್ಟುದು)	,, ,,
೧೭. ಕೊಲ್ಲಾಪುರ ಕೇಂದ್ರ	ಮೆ. ಶಿಕ್ಷಣಾಧಿಕಾರಿ, ಕೊಲ್ಲಾಪುರ ಸಂಸ್ಥಾನ ಕೊಲ್ಲಾಪುರ

೬. ಈ ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದುವಾರರು ಮುದ್ರಿತವಾದ ಫಾರ್ಮಿನಲ್ಲಿ ಅರ್ಜಿಗಳನ್ನು ತುಂಬಿ ತಾವು ಕೂಡ್ರಬಯಸುವ ಪರೀಕ್ಷಾ ಸಮಿತಿಯ ಅಧ್ಯಕ್ಷರ ಕಡೆಗೆ ಫೀಯೊಡನೆ ೧೯೪೩ ಮಾರ್ಚ ೧ ನೆಯ ತಾರೀಖಿನ ದಿನ ಅಥವಾ ಇದಕ್ಕೂಮೊದಲು ಮುಟ್ಟುವಂತೆ ಕಳಿಸತಕ್ಕದ್ದು. ಆ ಮೇಲೆ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವದು. ಳನೆಯ ಪ್ಯಾರಾದಲ್ಲಿ ಕಾಣಿಸಿದಂತೆ ಯಾವುದಾದರೂ ಉಪಕೇಂದ್ರದಲ್ಲಿ ಕುಳಿತುಕೊಳ್ಳಲು ಬಯಸುವ ಉಮೇದುವಾರರು ತಮ್ಮ ಉಪಕೇಂದ್ರವು ಯಾವ ಮುಖ್ಯ ಕೇಂದ್ರದ ಅಡಳಿತಕ್ಕೆ ಒಳಪಟ್ಟಿರುವುದೋ ಅದರ ಅಧ್ಯಕ್ಷರ ಕಡೆಗೆ ಅರ್ಜಿಗಳನ್ನು ಫೀ ಸಹಿತವಾಗಿ ಕಳಿಸತಕ್ಕದ್ದು. ಬ್ರಿಟಿಶ ಜಿಲ್ಲೆಗಳಲ್ಲಿಯ ಕೇಂದ್ರಗಳಲ್ಲಿ ಪರೀಕ್ಷೆಗೆ ಕೂಡ್ರಬಯಸುವ ಸಂಸ್ಥಾನದ ಉಮೇದುವಾರರು ತಮ್ಮ ಸಂಸ್ಥಾನದ ವಿದ್ಯಾಧಿಕಾರಿಗಳ

ಮುಖಾಂತರವಾಗಿ ಅರ್ಜಿಗಳನ್ನು ಕಳಿಸತಕ್ಕದ್ದು. ಪ್ರತಿಯೊಂದು ಅರ್ಜಿಯು ಉಮೇದುವಾರನ ಪೂರ್ಣ ಹೆಸರನ್ನೂ ಸಾಲೆ (ಇದ್ದರೆ) ಯ ಹೆಸರನ್ನೂ ಒಳಗೊಂಡಿರಲಿಕ್ಕೇ ಬೇಕು; ಮತ್ತು ಪರೀಕ್ಷಾ ಫೀ ಮೂರು ರೂಪಾಯಿಗಳನ್ನೂ ಕಳಿಸತಕ್ಕದ್ದು. ಹಿಂದುಳಿದ ವರ್ಗದವರು (ಅಬೋರಿಜನಲ್ ಮತ್ತು ಹಿಲ್ ಟ್ರೈಬ್ಸ್ ಸಹಿತವಾಗಿ) ಪರೀಕ್ಷಾ ಫೀಗಾಗಿ ಒಂದೇ ರೂಪಾಯಿಯನ್ನು ಕಳಿಸತಕ್ಕದ್ದು.

೭. ಸಂಪೂರ್ಣ ಮಾಹಿತಿಯನ್ನು ತುಂಬದಿರುವ ಇಲ್ಲವೆ ಸಂಗಡ ಫೀಯನ್ನು ಕಳಿಸದಿರುವ ಅರ್ಜಿಗಳೂ ಕೇವಲ ಫೀ ಕಳಿಸಿ ಅರ್ಜಿ ಕಳಿಸದ ಉಮೇದವಾರರ ವಿನಂತಿಗಳೂ ಮಾನ್ಯಮಾಡಲ್ಪಡಲಾರವು. ಅರ್ಜಿ ಫಾರ್ಮುಗಳನ್ನು ಆಯಾ ಕೇಂದ್ರಗಳ ಪರೀಕ್ಷಾಸಮಿತಿಯ ಅಧ್ಯಕ್ಷರಿಂದ ಪುಕ್ಕಟೆಯಾಗಿ ಪಡೆಯಬಹುದು.

೮. ಉಮೇದವಾರರು ೧೯೪೩ ಎಪ್ರಿಲ್ ೧ನೆಯ ತಾರೀಖಿಗೆ ೨೫ ವರ್ಷಕ್ಕೆ ಮಿಕ್ಕಿದವರು ಇರಕೂಡದು; ಅಲ್ಲದೆ ತಾವು ಕೂಡ್ರ ಬಯಸುವ ಕೇಂದ್ರದ ಜಿಲ್ಲೆಯಲ್ಲಿ ಕನಿಷ್ಟ ಆರು ತಿಂಗಳ ವಾಸಮಾಡಿದವರು ಇರತಕ್ಕದ್ದು. ಜಿಲ್ಲೆಯಲ್ಲಿ ಆರುತಿಂಗಳ ವಾಸಮಾಡಿದ್ದರ ಬಗ್ಗೆ ಸರಕಾರದಿಂದ ಮುಂಜೂರಾದ ಸಾಲೆಯ ಹೆಡ್‌ಮಾಸ್ತರರಿಂದಲೂ ಸಾಲೆಗೆ ಹೋಗದಲೇ ಇದ್ದ ಉಮೇದುವಾರರು ಸರಕಾರದಿಂದ ಮುಂಜೂರಾದ ಸಾಲೆಯ ಮಾಸ್ತರನ ಇಲ್ಲವೆ ಪಾಟೀಲನ ದರ್ಜಿಗಿಂತಲೂ ಕಡಮೆ ಇಲ್ಲದಿರುವ ಯೋಗ್ಯ ಪ್ರತಿಷ್ಠಿತ ಮತ್ತು ಗೊತ್ತಿದ್ದ ವ್ಯಕ್ತಿಯ ಕಡೆಯಿಂದಲೂ ಪ್ರಮಾಣ ಪತ್ರವನ್ನು ಪಡೆದು ಕಳಿಸತಕ್ಕದ್ದು.

೯. ಧಾರವಾಡ ಮತ್ತು ಕಾರವಾರ ಜಿಲ್ಲೆಗಳ ಮುಂಜೂರಾದ ದೇಶ ಭಾಷೆಯು ಕನ್ನಡ ಇರುತ್ತದೆ, ಬೆಳಗಾವಿ ಮತ್ತು ವಿಜಾಪುರ ಜಿಲ್ಲೆಗಳದು ಮರಾಠಿ ಮತ್ತು ಕನ್ನಡ ಇರುತ್ತವೆ ಹಾಗೂ ಕೊಲ್ಹಾಪುರದ್ದು ಮರಾಠಿ ಇರುತ್ತದೆ. ಅನುಕೂಲತೆಯ ದೃಷ್ಟಿಯಿಂದ ಧಾರವಾಡ ಜಿಲ್ಲೆಯ ಮರಾಠಿ ಉಮೇದುವಾರರು ಹುಬ್ಬಳ್ಳಿ ಕೇಂದ್ರದಲ್ಲಿ ಮರಾಠಿ ಪ್ರಾ. ಶಾ. ಪ್ರಮಾಣ ಪತ್ರ ಪರೀಕ್ಷೆಗೆ ಕುಳಿತುಕೊಳ್ಳಲು ಪರವಾನಿಗೆಯನ್ನು ಕೊಡಲಾಗಿದೆ. ಕಾರವಾರದ ಮರಾಠಿ ಉಮೇದುವಾರರು ಬೆಳಗಾವಿ ಅಥವಾ ಹುಬ್ಬಳ್ಳಿ ಉಪಕೇಂದ್ರದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಬಹುದು.

೧೦. ಪರೀಕ್ಷೆಯ ವಿಷಯ ಮುಂತಾದವುಗಳ ಬಗ್ಗೆ ಹೆಚ್ಚಿನ ಮಾಹಿತಿಗಳು ಮೇಲೆ ಎರಡನೆಯ ಪ್ಯಾರಾದಲ್ಲಿ ಹೇಳಿದ ಮುಂಬಯಿ ಸರಕಾರದ ಗೆಜೆಟ್ಟಿನ ಪುಟಗಳಲ್ಲಿ ದೊರೆಯುವವು.

೧೧. ಅಗ್ರಿಕಲ್ಚರಲ್ ಬಾಯಸ್ ಕೋರ್ಸನ್ನು ತೆಗೆದುಕೊಂಡ ಉಮೇದುವಾರರ ಪರೀಕ್ಷೆಯೂ ಧಾರವಾಡ, ಬೆಳಗಾವಿ, ವಿಜಾಪುರ ಮತ್ತು ಕಾರವಾರ ಕೇಂದ್ರಗಳಲ್ಲಿಯೇ ಸದರಿ ಪರೀಕ್ಷೆಯ ದಿನವೇ ೯-೬-೧೯೨೮ ನೆಯ ತಾರೀಖಿನ ೧೧೯೯ ನೆಯ ನಂಬರಿನ ಮತ್ತು ೨೧-೬-೧೯೩೮ ನೆಯ ತಾರೀಖಿನ ೨೨೮೮ ನೆಯ ನಂಬರಿನ ವಿದ್ಯಾಖಾತೆಯ ಸರಕಾರೀ ನಿರ್ಣಯಕ್ಕೆ ಅನುಸಾರವಾಗಿ ತಿದ್ದುಪಡೆ ಮಾಡಲ್ಪಟ್ಟ ೬-೭-೧೯೩೫ ನೆಯ ತಾರೀಖಿನ ೧೧೯೯ ನೆಯ ನಂಬರಿನ ವಿದ್ಯಾಖಾತೆಯ ಸರಕಾರೀ ನಿರ್ಣಯದ ಮೇರೆಗೆ ತೆಗೆದುಕೊಳ್ಳಲ್ಪಡುವುದು. ಅಗ್ರಿಕಲ್ಚರಲ್ ಬಾಯಸ್ ಕೋರ್ಸದ ಉಮೇದುವಾರರು ತಾವು ಮೂರು ವರ್ಷದ ವರೆಗೆ ಅಗ್ರಿಕಲ್ಚರಲ್ ಬಾಯಸ್ ಕೋರ್ಸದ ವಿಷಯಗಳನ್ನು ಅಭ್ಯಾಸಮಾಡಿದ ಬಗ್ಗೆ ಸರ್ಟಿಫಿಕೇಟನ್ನೂ ತಮ್ಮ ತಮ್ಮ ಅರ್ಜಿಯ ಕೂಡ ಕಳಿಸತಕ್ಕದ್ದು.

ದಕ್ಷಿಣಭಾಗದ ಎಜ್ಯುಕೇಶನಲ್
ಇನ್‌ಸ್ಪೆಕ್ಟರ ಕಚೇರಿ
ತಾ. ೮-೨-೧೯೪೨

(ಸಹಿ) V. V. Kamat,
ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದ. ಭಾ.

ಪ್ರಕಟನೆ

ಪ್ರಕೃತದ ಮಹಾಯುದ್ಧದ ಮೂಲಕ ಗಂಡು ಮತ್ತು ಹೆಣ್ಣು ಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದುವಾರರು ಉತ್ತರಗಳನ್ನು ಸೀಸಪೆನ್ಸಿಲಿನಿಂದಲೇ ಬರೆಯತಕ್ಕದ್ದೆಂದೂ ಮಸಿಯಿಂದ ಯಾರೂ ಉತ್ತರ ಬರೆಯಕೂಡದೆಂದೂ ಮೆ|| ಡಾಯರೆಕ್ಟರ ಆಫ್ ಪಬ್ಲಿಕ್ ಇನ ಸ್ಟ್ರಕ್ಶನ್ನರವರು ನಿರ್ಣಯಿಸಿದ್ದಾರೆ. ೧೯೪೩ ನೆಯ ಇಸ್ವಿಯ ಪರೀಕ್ಷೆಯಿಂದಲೇ ಈ ವ್ಯವಸ್ಥೆಯು ಪ್ರಚಾರದಲ್ಲಿ ಬರುವದು.

ವಿ. ಸೂ.— ಹೆಣ್ಣು ಮಕ್ಕಳ ಮತ್ತು ಗಂಡು ಮಕ್ಕಳ ಪ್ರಾ. ಶಾ. ಪ್ರ. ಪತ್ರ ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದುವಾರರು ಉತ್ತರ ಬರೆಯಲಿಕ್ಕೆ ಬೇಕಾಗುವ ಸೀಸಪೆನ್ಸಿಲುಗಳನ್ನು ತಾವೇ ತರತಕ್ಕದ್ದು.

ಧಾರವಾಡ
೧೭-೨-೧೯೪೩

(ಸಹಿ) **ಜೆ. ಆರ್. ಭಂಡಿವಾಡ,**
ಎ. ಇ. ದ. ಭಾ. ಅವರ ಪರವಾಗಿ

೧೯೪೩ ನೆಯ ಇಸ್ವಿಯ ಕನ್ನಡ ಮತ್ತು ಮರಾಠಿ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಕಾರ್ಯಕ್ರಮ ವಿವರಣೆ.

ವಾರ ಮತ್ತು ತಾರೀಖು	ವೇಳೆ: ಇಂದ	ವೇಳೆ: ವರೆಗೆ	ವಿಷಯಗಳು	ಗುಣಗಳು	ಶರಾ.
ಬುಧವಾರ ೭–೪–೧೯೪೩	೧೨	೧	ಪರೀಕ್ಷೆಗೆ ಕುಳಿತುಕೊಳ್ಳುವ ಉಮೇದುವಾರರ ಹಾಜರಿ ತೆಗೆದುಕೊಳ್ಳುವದು.		
ಸದರ	೧	೩	ಎರಡನೆಯ ಸದರು— ನಿಬಂಧ ಅಥವಾ ರಿಪೋರ್ಟು ಪತ್ರಬರೆಹ ಮುಂತಾದವು.	೧೦೦	
ಸದರ	೪	೫	ಐದನೆಯ ಸದರು—ಆರೋಗ್ಯವಿಜ್ಞಾನ ಅಥವಾ ಶಾರೀರ ಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಮತ್ತು ಏಳನೆಯ ಪುಸ್ತಕದಲ್ಲಿದ್ದಂತೆ ಶಾಸ್ತ್ರೀಯ ವಿಷಯದ ಮೂಲ ತತ್ತ್ವಗಳು.	೧೦೦	
ಗುರುವಾರ ೮–೪–೧೯೪೩	೧೨	೩	ಮೂರನೆಯ ಸದರು— (ಅ) ಅಂಕಗಣಿತ	೧೦೦	
ಸದರ	೪	೫	ನಾಲ್ಕನೆಯ ಸದರು— (ಅ) ಮತ್ತು (ಬ) ಇತಿಹಾಸ ಮತ್ತು ಭೂಗೋಲ.	(ಅ) ೫೦ (ಬ) ೫೦	
ಶುಕ್ರವಾರ ೯–೪–೧೯೪೩	೯	೧೨	ಮೂರನೆಯ ಸದರು— (ಬ) ಮತ್ತು (ಕ) ಭೂಮಿತಿ ಮತ್ತು ಜಮಾಖರ್ಚು.	(ಬ) ೫೦ (ಕ) ೫೦	
ಸದರ	೪	೫	ಮೊದಲನೆಯ ಸದರು— (ಅ) ಮತ್ತು (ಬ) ಪ್ರಾದೇಶಿಕ ಭಾಷಾ ವಿಷಯಗಳು.	ಅ (೨೫) (ಬ) ೨೫	

ವಿ. ಸೂ.— ಪರೀಕ್ಷೆಯ ಮೊದಲನೆಯ ದಿನ ಉಮೇದುವಾರರು ಪರೀಕ್ಷೆಯ ವೇಳೆಗಿಂತಲೂ ೧ ತಾಸು ಮುಂಚಿತವಾಗಿ ಪರೀಕ್ಷೆಯ ಸ್ಥಳದಲ್ಲಿ ತಪ್ಪದೆ ಹಾಜರ ಇರಬೇಕು.

ಪ್ರಾಥಮಿಕ ಉರ್ದು ಶಿಕ್ಷಕರ ಪ್ರಥಮ ಭಾಷಾ ಪ್ರಮಾಣ ಪತ್ರ

ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆ

ವಾರ ಮತ್ತು ತಾರೀಖು	ವೇಳೆ		ವಿಷಯಗಳು	ಗುಣಗಳು	ಶರಾ
	ಇಂದ	ವರೆಗೆ			
ಬುಧವಾರ	೧೨	೧	ಪರೀಕ್ಷೆಗೆ ಕೂಡ್ರುವ ಉಮೇದುವಾರರ ಹಾಜರಿ ತೆಗೆದುಕೊಳ್ಳುವದು.		
೭–೪–೧೯೪೩	೧	೩	ಎರಡನೆಯ ಪದರು:—ನಿಬಂಧ ಅಥವಾ ರಿಪೋರ್ಟು ಪತ್ರಬರೆಹ ಮುಂತಾದವು. ಕನ್ನಡ-ಉರ್ದು ಅಥವಾ ಮರಾಠಿ ಉರ್ದು ಉಮೇದುವಾರರಿಗೆ ಕನ್ನಡದಲ್ಲಿ ಅಥವಾ ಮರಾಠಿಯಲ್ಲಿ ಉರ್ದು ಕನ್ನಡ ಅಥವಾ ಉರ್ದು-ಮರಾಠಿ ಉಮೇದುವಾರರಿಗೆ ಉರ್ದುವಿನಲ್ಲಿ	೧೦೦	
ಪದರ	೪	೬	ಐದನೆಯ ಪದರು :— ಆರೋಗ್ಯವಿಜ್ಞಾನ ಅಥವಾ ಶರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ ಮತ್ತು ಶಾಸ್ತ್ರೀಯ ವಿಷಯದ ಆರಂಭದ ವಿಚಾರಗಳು.	೧೦೦	
ಗುರುವಾರ	೧೨	೩	ನೂರನೆಯ ಪದರು:— (ಅ) ಅಂಕಗಣಿತ	(ಅ) ೧೦೦	
೮–೪–೧೯೪೩					
ಪದರ	೪	೬	ನಾಲ್ಕನೆಯ ಪದರು:— (ಅ) ಮತ್ತು (ಬ) ಇತಿಹಾಸ ಮತ್ತು ಭೂಗೋಲ	(ಅ) ೫೦ (ಬ) ೫೦	
ಶುಕ್ರವಾರ	೯	೧೨	ಮೂರನೆಯ ,, (ಬ) ಮತ್ತು (ಕ) ಭೂಮಿತಿ ಮತ್ತು ಹಿಂದೀ ಜಮಾಖರ್ಚು	(ಬ) ೫೦ (ಕ) ೫೦	
೯–೪–೧೯೪೩					
ಪದರ	೪	೬	ಮೊದಲನೆಯ ಪದರು:— (ಅ) ಮತ್ತು (ಬ) ಪ್ರಾಂತಿಕ ಭಾಷೆ, ಕನ್ನಡ, ಮರಾಠಿ ಅಥವಾ ಉರ್ದು	(ಅ) ೭೫ (ಬ) ೨೫	
ಶನಿವಾರ	೧೨	೨	ಆರನೆಯ ಪದರು:— (ಅ) ಪ್ರಾಂತಿಕ ಭಾಷೆ ಉರ್ದು ಅಥವಾ ಕನ್ನಡ	(ಅ) ೫೦	
೧೦–೪–೧೯೪೩					
ಪದರ	೩	೫	ಆರನೆಯ ಪದರು:— (ಬ) ಪತ್ರಬರೆಹ ಅಥವಾ ರಿಪೋರ್ಟು ಪತ್ರಬರೆಹ ಮು. (*ಕನ್ನಡ ಉರ್ದು ಅಥವಾ ಮರಾಠಿ ಉರ್ದು ಉಮೇದುವಾರರಿಗೆ ಉರ್ದು ವಿನಲ್ಲಿ ಉರ್ದು-ಕನ್ನಡ ಅಥವಾ ಉರ್ದು ಮರಾಠಿ ಉಮೇದುವಾರರಿಗೆ ಕನ್ನಡದಲ್ಲಿ ಅಥವಾ ಮರಾಠಿಯಲ್ಲಿ)	(ಬ) ೫೦	

ವಿ. ಸೂ.— ಮೊದಲನೆಯ ದಿನ ಉಮೇದುವಾರರು ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತ ೧ ತಾಸು ಮೊದಲು ಪರೀಕ್ಷೆಯ ಸ್ಥಳದಲ್ಲಿ ತಪ್ಪದೆ ಹಾಜರ ಇರಬೇಕು.

೧೯೪೩ನೆಯ ಇಸವಿಯಲ್ಲಿ ನಡೆಯುವ ಅಗ್ರಿಕಲ್ಚರಲ್ ಬಾಯಸ್ ಕೋರ್ಸನ್ನು ಅರಿಸಿಕೊಂಡ ಗಂಡುಮಕ್ಕಳ
ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆಯು.

ವಾರ ಮತ್ತು ತಾರೀಖು	ವೇಳೆ		ವಿಷಯಗಳು	ಗುಣಗಳು	ಶರಾ
	ಇಂದ	ವರೆಗೆ			
ಬುಧವಾರ					
೭-೪-೧೯೪೩	೧೨	೧	ಪರೀಕ್ಷೆಗೆ ಕುಳಿತ ಉಮೇದುವಾರರ ಹಾಜರಿ ತೆಗೆದುಕೊಳ್ಳುವುದು.		
ಸದರ	೧	೩	ಎರಡನೆಯ ಸದರು–ನಿಬಂಧ ಅಥವಾ ರಿಪೋರ್ಟ್, ಪತ್ರಬರೆಹ ಮುಂ.	೧೦೦	
ಸದರ	೪	೬	ಐದನೆಯ ಸದರು (ಅ) ಶಾಸ್ತ್ರೀಯ ವಿಷಯದ ಆರಂಭದ ವಿಚಾರಗಳು ಮತ್ತು (ಬ) ಆರೋಗ್ಯಶಾಸ್ತ್ರ.	(ಅ) ೨೫ (ಬ) ೨೫	
ಗುರುವಾರ					
೮-೪-೧೯೪೩	೧೨	೩	ಮೂರನೆಯ ಸದರು– (ಅ) ಅಂಕಗಣಿತ (ಬ) ಮಹತ್ವಮಾಪನ (ಕ) ಹಿಂದೀ ಜಮಾಖರ್ಚು.	(ಅ) ೫೦ (ಬ) ೨೫ (ಕ) ೨೫	
ಸದರ	೪	೬	ನಾಲ್ಕನೆಯ ಸದರು– (ಅ) ರಾಜ್ಯಕಾರ್ಯಭಾರ (ಬ) ಸಹಕಾರ (ಕ) ಭೂಗೋಲ.	(ಅ) ೨೫ (ಬ) ೨೫ (ಕ) ೫೦	
ಶುಕ್ರವಾರ					
೯-೪-೧೯೪೩	೯	೧೨	ಆರನೆಯ ಸದರು – (ಅ) ಒಕ್ಕಲುತನ ಮತ್ತು (ಬ) ಪ್ರಕೃತಿವಿಜ್ಞಾನ	(ಅ) ೩೫ (ಬ) ೩೦	
ಸದರ	೪	೬	ಮೊದಲನೆಯ ಸದರು– (ಅ) ಮತ್ತು (ಬ) ಪ್ರಾಂತಿಕ ಭಾಷೆ.	(ಅ) ೭೫ (ಬ) ೨೫	
ಶನಿವಾರ					
೧೦-೪-೧೯೪೩	*	*	ಏಳನೆಯ ಸದರಿನಲ್ಲಿ ಪ್ರಾಯೋಗಿಕ ಪರೀಕ್ಷೆ.	೫೦	
ಸದರ	*	*	ಆರನೆಯ ಸದರಿನಲ್ಲಿ ಪ್ರಾಯೋಗಿಕ ಪರೀಕ್ಷೆ.	೩೫	

* ವೇಳೆಯನ್ನು ಸ್ಥಾನಿಕ ಕವಿಟಿಯ ಪ್ರೆಸಿಡೆಂಟರು ತಮ್ಮ ಜಿಲ್ಲೆಯ ಅಗ್ರಿಕಲ್ಚರಲ್ ಇನ್ಸ್ಪೆಕ್ಟರರೊಡನೆ ವಿಚಾರವಿನಿಮಯಮಾಡಿಕೊಂಡು ನಿರ್ಣಯಿಸಿ ತಿಳಿಸುವರು. ಮೊದಲನೆಯ ದಿನ ಉಮೇದುವಾರರು ಪ್ರತ್ಯಕ್ಷ ಪರೀಕ್ಷೆಯು ಪ್ರಾರಂಭವಾಗುವದಕ್ಕಿಂತ ೧ ತಾಸು ಮೊದಲು ಪರೀಕ್ಷೆಯ ಸ್ಥಳದಲ್ಲಿ ಹಾಜರ ಇರಲೇಬೇಕು.

ಪತ್ರಗಳ ಮುಖ್ಯಾಂಶಗಳು

ಶಿಕ್ಷಣಾಭಿಮಾನಿಗಳು ಮಾಡಿದ ಸಹಾಯ

ಗುಲ್ಬರ್ಗಾ:— (ಬೆಳಗಾವಿ ಜಿಲ್ಲೆ) ಶಾಲೆಯಲ್ಲಿ ೧೯-೧-೧೯೪೩ ದಿವಸ ಶ್ರೀ. ಮೋ. ಹ. ಖರೆ ಎಲ್. ಸಿ. ಇ. ಅವರ ಷಷ್ಟ್ಯಬ್ದಿಪೂರ್ತಿನಿಮಿತ್ತ ಸಭೆ ಸೇರಿತ್ತು. ಅವರು ಕೊಟ್ಟ ೧೦ ರೂ ಗಳ ಮಿಠಾಯಿಗಳನ್ನು ನೆರೆದವರಿಗೆ ಹಂಚಲಾಯಿತು. —ಶ್ರೀ ಬಾ ದೇ ಜೋಶಿ ಹೆ. ಮಾ.

ಕೆರೂರು:— (ವಿಜಾಪುರ ಜಿಲ್ಲೆ) ಶಾಲೆಯಲ್ಲಿ ೩-೧-೧೯೪೩ನೆಯ ದಿವಸ ನೇರಿದ ಸಮ್ಮೇಲನದಲ್ಲಿ ಆದ ನಾಟಕ ಹಾಗು ಶಾರೀರಿಕ ಶಿಕ್ಷಣಗಳಲ್ಲಿ ಚಟುವಟಿಕೆಗಳನ್ನು ತೋರಿಸಿದ ವಿದ್ಯಾರ್ಥಿಗಳಿಗೆ ಹಿರಿಯರು ೩ ರೂ., ೫ ಪದಕಗಳು, ಹಲವು ಪುಸ್ತಕ-ಪಾಟಿ ಪೇನಸಿಲುಗಳ ಮೆಚ್ಚುಗೆಯನ್ನು ಕೊಟ್ಟರು. —ಹೆ. ಮಾ. ಕೆರೂರ.

ಹೆಣ್ಣು ಮಕ್ಕಳ ಉನ್ನತಿಗಾಗಿ ಪ್ರಯತ್ನಗಳು

ನವಾಡಿ:— (ಧಾರವಾಡ ಜಿಲ್ಲೆ) ಶಾಲೆಯ ಕುಮಾರಿ ಸಂಘದವರು ಗದಗ ಮುಳಗುಂದಗಳ ಪ್ರವಾಸಮಾಡಿ ಶಾರೀರಿಕ ಬೌದ್ಧಿಕ ಸ್ಪರ್ಧೆಗಳಿಗಾಗಿ ೫ ರೂ. ಹಾಗು ಒಂದು ಬೆಳ್ಳಿಯ ಪದಕವನ್ನು ಕೊಟ್ಟರು. ಶ್ರೀ ಮಾನವಿ ಜೆನ್ನಮ್ಮ, ಶ್ರೀ. ತಲ್ಲೂರ ಶಿವಗಂಗಾದೇವಿ, ಶ್ರೀ. ಚವಡಿ ಸಂಗನಬಸವ್ವನವರು, ಶ್ರೀ. ವ್ಹಿ. ಸಿ. ಬಸರೀಗಿಡದ ಮೊದಲಾದವರು ಇವರನ್ನು ಸತ್ಕರಿಸಿ ೭೬ ರೂ. ಹಾಗು ಪದಕಗಳನ್ನು ಮೆಚ್ಚುಗೆ ಎಂದು ಕೊಟ್ಟರು. —ಶ್ರೀ. ರೇಣುಕಾದೇವಿ ಜೋಶಿ

ವಾಚನಾಲಯಗಳ ಬೆಳೆವಣಿಗೆ

ಅಲೂರ-ಹಾಸಗಲ್ಲು:— (ಧಾರವಾಡ ಜಿಲ್ಲೆ) ಶಾಲೆಯಲ್ಲಿ ವಾಚನಾಲಯವನ್ನು ಸ್ಥಾಪಿಸುವ ಸಲುವಾಗಿ ಕುಮಾರೇಶ ರಾಯಿಸ್ ಮಿಲ್ಲಿನವರು ೨೫ ರೂ. ಗಳನ್ನು ಕೊಟ್ಟರು. —ಶ್ರೀ. ಮ. ಗು. ಹಿರೇಮಠ ಹೆ. ಮಾ.

ಬೆಂಡಿಗೇರಿ:— (ಬೆಳಗಾವಿ ಜಿಲ್ಲೆ) ಊರಲ್ಲಿ ೭-೧-೧೯೪೩ನೆಯ ದಿವಸ ಅ. ಡೆ. ಅವರಾದ ದೇಸಾಯಿ ಪ್ರಲ್ಹಾದರಾಯರು ಪ್ರೋತ್ಸಾಹಿಸಿ ವಾಚನಾಲಯದ ಸಮಾರಂಭವನ್ನು ಪೂರ್ಣಮಾಡಿಸಿದರು. —ಸೆಕ್ರೆಟರಿ ಅವರು

ಶಿರಸಿ:— ದಕ್ಷಿಣ ಭಾಗದ ಎ. ಇ. ಅವರಾದ ಡಾ| ವ್ಹಿ. ವ್ಹಿ. ಕಾಮತ ಅವರು ೧೭-೧-೧೯೪೩ನೆಯ ದಿವಸ ಇಲ್ಲಿಯ ಶಾಲಾವಾಚನಾಲಯ ಸಮಾರಂಭಕ್ಕೆ ಅಧ್ಯಕ್ಷರಾಗಿದ್ದರು. ನಗರಸಭೆಯವರು ಮಂದಿರವನ್ನು ಪುಕ್ಕಟೆಯಾಗಿ ಕೊಟ್ಟಿರುವರು. ಈಗ ೧೫೮೮ ಪುಸ್ತಕಗಳಿವೆ. ಶ್ರೀ. ಗಣಪತಿ ಹೆಗಡೆ ೨೫ ರೂ. ಶ್ರೀ. ಡಾ. ಭಟ್ಟ ೧೦ ರೂ. ಇನ್ನೊಬ್ಬ ಮಹನೀಯರು ೫೦ ರೂ. (ಗುಪ್ತ)

ದಾನವಾಗಿ ಕೊಟ್ಟರು. ಶ್ರೀ ಹೇಮರಡ್ಡಿ ಅವರು ೧೦ ರೂ. ಬೆಲೆಯ ಪುಸ್ತಕ ಗಳನ್ನೂ ಶ್ರೀ. ಸುಬ್ರಾಯ ವೈದ್ಯರು ಕುಡಿಯುವ ನೀರು ಇಡುವ ಪಾತ್ರೆಯನ್ನೂ ಕೊಟ್ಟರು. ಡಾ. ಬನಹಟ್ಟಿಯವರು ೫ ರೂ. ಕೊಡುವೆವೆಂದು ಆಶ್ವಾಸನವಿತ್ತರು.

ಶ್ರೀ. ಡಿ. ಪ್ಹಿ. ಸೋಂದೆ ಡಿ. ಸ್ಕೂ. ಬೊ. ಮೆಂಬರ ಉತ್ತರ ಕನ್ನಡ

ಸಭೆ-ಸಮ್ಮೇಲನಗಳು

ಭಟಕಳ— (ಕಾರವಾರ ಜಿಲ್ಲೆ) ಕ. ಗ. ಮ. ಶಾಲೆಯಲ್ಲಿ ೫–೧೨–೪೨ನೆಯ ದಿವಸ ಆದ ಶಾರೀರಿಕ ಶಿಕ್ಷಣ ಚಟುವಟಿಕೆಗಳನ್ನು ಕಂಡು ಅ. ಡೆ. ಅವರಾದ ಶ್ರೀ. ಪ್ಹಿ. ಬಿ. ದೇಸಾಯಿ ಅವರು ಸಮಾಧಾನ ವ್ಯಕ್ತಮಾಡಿದರು. ೧೪–೧–೧೯೪೩ನೆಯ ದಿವಸ ದಕ್ಷಿಣಭಾಗದ ಎ. ಇ. ಸಾಹೇಬರ ಅಧ್ಯಕ್ಷತೆಯಲ್ಲಿ ಉರ್ದು ಶಿಕ್ಷಕರ ಸಮ್ಮೇಲನವು ಯಶಸ್ವಿಯಾಗಿ ಸಾಗಿತು.

—ಶ್ರೀ. ಕೆ. ಎಮ್. ಯಾಜಿ. ಕಾರವಾರ.

ಕುಮಟಾ— (ಕಾರವಾರ ಜಿಲ್ಲೆ) ಊರಲ್ಲಿ ೧೭–೧೨–೪೨ ರಿಂದ ೨೧ ದಿವಸ ಗಳವರೆಗೆ ಮೆ. ದೇಸಾಯಿ ಅವರಿಂದ ೪೪ ಶಿಕ್ಷಕರಿಗೂ ೭ ಶಿಕ್ಷಕಿಯರಿಗೂ ಶಾರೀರಿಕ ಶಿಕ್ಷಣ ಕೊಡಲ್ಪಟ್ಟಿತು.

ಸರ್ವರನ್ನು ಒಂದು ಮಾಡಿ ಕುಣಿಸಿ, ನಲಿಸಿ ತಣಿಸುತ |
ಸಾವಧಾನದಿಂದ ಕೊಟ್ಟರವರು ದೇಹ ಶಿಕ್ಷಣ ||

—ಶ್ರೀ. ನಾರಾಯಣ ತೊರ್ಕೆ, ಬಂಕೀಕೊಡ್ಲ,

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ

ಗ್ರಾಮಸಂಘಟನೆ

ಇತ್ತೀಚೆಗೆ ಮಹಾಯುದ್ಧದ ಭೀಕರ ಸ್ವರೂಪವು ಹಳ್ಳಿಗಳ ಮೂಲೆ ಮೂಲೆಗಳಲ್ಲಿಯೂ ಪ್ರಕಟವಾಗಹತ್ತಿದೆ. ಬಟ್ಟೆ-ಬರೆಗಳು, ಕಾಳು-ಕಡಿಗಳು ದಿನದ ಜೀವನಕ್ಕೆ ಅವಶ್ಯಕವಾದ ದೀಪದ ಕಡ್ಡಿಗಳಂಥ ಜೀನಸುಗಳೂ ಇಲ್ಲ; ಎಲ್ಲಕ್ಕೂ ಹೆಚ್ಚಿನದು— ರೂಪಾಯಿ ಕೊಟ್ಟರೆ ಚಿಲ್ಲರೆ ನಾಣ್ಯಗಳಿಲ್ಲ; ಯಾವುದೂ ಇಲ್ಲ; ಕೊನೆಗೆ ಸುಖವೇ ಇಲ್ಲದಂತಾಗಿದೆ.

ಕೆಲಕಾಲದ ಮೊದಲು ನಮ್ಮ ಹಳ್ಳಿಗಳು ಹಾಳಾಗಿ ನಗರಗಳು ಬೆಳೆದು ಬಂದವು. ಆಟನೋಟಗಳು ಬಿಡಗುಬಿನ್ನಾಣಗಳು ಇವುಗಳಿಂದೊಡಗೂಡಿದ ನಗರಗಳ ವಿಲಾಸಮಯ ಜೀವನವು ಮೇಲ್ತರಗತಿಯ ಮತ್ತು ಮಧ್ಯಮ ವರ್ಗದ ಜನರನ್ನು ಹಳ್ಳಿಗಳಿಂದ ಆಕರ್ಷಿಸಿತು; ಹೆಚ್ಚಿನ ಕೂಲಿಕುಂಬಳಿಗಳ ಆಶೆಯು ಬಡಜನರನ್ನು ಶಹರಗಳಿಗೆ ಸೆಳೆಯಿತು. ಆದರೆ ಈಗಿನ ತುಟ್ಟಾಗ್ರತೆಯು ಕಷ್ಟಕಾಲದಲ್ಲಿ ಜನರು ಹಳ್ಳಿಗಳ ಕಡೆಗೆ ತಮ್ಮ ದೃಷ್ಟಿಯನ್ನು ತಿರುಗಿಸಿದ್ದಾರೆ. ನಾಡಿನ ಮುಂದಾಳುಗಳು ಆರಂಭಿಸಿದ ಗ್ರಾಮೋದ್ಧಾರದ ಕಾರ್ಯದತ್ತ ಶಹರನಿವಾಸಿಗಳ ಮನಸ್ಸು ತಾನಾಗಿ ತಿರುಗಿದೆ. ಒಂದು ದೃಷ್ಟಿಯಿಂದ ಇದು ಶುಭಚಿಹ್ನೆಯೆನ್ನಬೇಕು.

'ಪ್ರತಿಹಳ್ಳಿಯೂ ತನ್ನಷ್ಟಕ್ಕೆ ತಾನೇ ಸ್ವತಂತ್ರವಾಗಬೇಕು. ಇಂಥ ಹಲವು ಸ್ವತಂತ್ರ ಹಳ್ಳಿಗಳು ಪರಸ್ಪರ ಸಹಕಾರ ಸಂಘಟನೆಗಳಿಂದ ತಮ್ಮ ಬಾಳುವೆಯನ್ನು ಸರಿಪಡಿಸಿಕೊಳ್ಳಬೇಕು.' ಎಂಬ ತಾತ್ವಿಕ ವಿಚಾರವು ಇಂದು ಪ್ರತ್ಯಕ್ಷ ಕಾರ್ಯಕಾರಿಯಾಗುವ ಸಂದರ್ಭವೊದಗಿದೆ.

ದೊಡ್ಡದೊಡ್ಡ ಕಾರಖಾನೆಗಳು ಇಲ್ಲದಿರುವ ಕಾಲವು ನಮ್ಮ ಹಿರಿಯರ ಅನುಭವದಲ್ಲಿದೆ. ಮೋಟಾರು ರೈಲುದಾರಿಗಳಂಥ ವಾಹನಸೌಕರ್ಯಗಳನ್ನು ನಮ್ಮ ತಾತ ಮುತ್ತಾತಂದಿರು ಕಂಡಿರಲಿಲ್ಲ. ನಾಣ್ಯಗಳ ಚಲನವು ಇಲ್ಲದಿರುವ ಕಾಲವನ್ನು ನಾವು ಕೇಳಿದ್ದೇವೆ. ಹೊಸಯುಗದ ಇವೆಲ್ಲ ಸೌಕರ್ಯಗಳನ್ನು ಕಂಡು ಅನುಭವಿಸಿರುವ ನಾವು ಪ್ರಕೃತದ ಕಷ್ಟಕಾಲದಲ್ಲಿ ಇಷ್ಟು ಕಾಲ ಹಿಂದೆಹೋಗಿ ಆ ಹಳೆಯ ಜೀವನವನ್ನು ಮತ್ತೆ ಕೈಕೊಳ್ಳಬೇಕಾದ ಸಂದರ್ಭವುಂಟಾಗಿದೆ.

ಆ ಹಳೆಯ ಕಾಲದಲ್ಲಿ ಹಳ್ಳಿಗಳಲ್ಲಿರುವ ಬೇರೆ ಬೇರೆ ಕಸಬುದಾರರು ಒಬ್ಬರಿಗೊಬ್ಬರು ನೆರವಾಗಿ ತಮ್ಮ ಜೀವನದ ತೊಂದರೆಗಳನ್ನು ನೀಗಿಕೊಳ್ಳುತ್ತಿದ್ದರು. 'ಆಯುಗಾರ ಪದ್ಧತಿ' ಯು ಹಲವು ಹಳ್ಳಿಗಳಲ್ಲಿ ಈಗಲೂ ಇರುವದು. ಕೆಲಸಿಗ, ಅಗಸ, ಬಡಿಗ, ಕಮ್ಮಾರ, ಕುಂಬಾರ, ಸಮಗಾರ, ಜೋಯಿಸರು, ಅಯ್ಯನವರು ಇವರೆಲ್ಲರೂ ಒಕ್ಕಲಿಗರಿಂದ ಕಾಳುಕಡಿಗಳ ಆಯುವನ್ನು ಪಡೆದು ತಮ್ಮ ಕಸಬುಗಳಿಂದ ಒಕ್ಕಲಿಗರಿಗೆ ನೆರವಾಗುತ್ತಿದ್ದುದು ನಮ್ಮಲ್ಲಿ ರೂಢವಾಗಿರುವದು. ಗಾಣಿಗ, ನೇಕಾರರಂಥ ಕಸಬುದಾರರುಕೂಡ ರೈತರಿಂದ ಕಾಳುಕಡಿಗಳನ್ನು ಪಡೆಯುತ್ತಿದ್ದರು. ಆ ಜನರಿಗೆ ಹಣದ ಮಧ್ಯಸ್ಥಿಕೆಯು ಅಷ್ಟೊಂದು ಮಹತ್ವದ್ದೆನಿಸುತ್ತಿರಲಿಲ್ಲ.

ಹಳ್ಳಿಗಳ ಎಲ್ಲ ಕೆಲಸಗಳು ಪರಸ್ಪರ ಸಹಕಾರದಿಂದಲೇ ನಡೆಯುತ್ತಿದ್ದುವು. ಮಳೆಗಾಲದ ಮೊದಲು ಮನೆಹೊಚ್ಚುವದು, ಮೇವು ಕಟ್ಟಿಗೆಗಳನ್ನು ಸಂಗ್ರಹಿಸುವದು, ಬಿತ್ತುವದು, ಕಳೆ ತೆಗೆಯುವದು, ಕೊಯ್ಯುವದು, ಕಣಮಾಡುವದು ಇಂಥ ಕೆಲಸಗಳುಕೂಡ ಪರಸ್ಪರ ನೆರವಿನಿಂದಲೋ ಕಾಳಿನ ರೂಪದ ಕೂಲಿಯಿಂದಲೋ ನಡೆಯುತ್ತಿದ್ದುದನ್ನು ನಾವು ಕಂಡಿದ್ದೇವೆ. ಹಣದ ಇಲ್ಲವೆ ಚಿಲ್ಲರೆಯ ಕೊರತೆಯು ನಮ್ಮನ್ನು ಈ ಹಿಂದಿನ ಪರಿಸ್ಥಿತಿಗೆ ಕರೆದೊಯ್ದು ಬಿಡುವದೆಂದರೆ ಅಂಜುವ ಕಾರಣವೇನು? ಇದೇ ಮೇರೆಗೆ ಜೋಳವನ್ನು ಬೆಳೆದವನು ಬತ್ತವನ್ನು ಬೆಳೆದವನೊಡನೆ ವಿನಿಮಯಮಾಡಿ ತಮತಮಗೆ ಬೇಕಾದುದನ್ನು ಪಡೆಯಬಹುದಲ್ಲವೇ?

ಈ ಎಲ್ಲ ಬಗೆಯ ಕಾರ್ಯಗಳು ಸುಸಂಗತವಾಗಿ ಸಾಗ ಬೇಕಾದರೆ ತಕ್ಕ ಸಂಘಟನೆಯು ಆವಶ್ಯಕವಲ್ಲವೇ?

ವಿನಂತಿ

★

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. ಈ ಮಾಸಪತ್ರಿಕೆಯು ಪ್ರತಿತಿಂಗಳ ಕೊನೆಯವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು, ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳಿಸಬಹುದು.

೪. ತಾವು ಪ್ರಕಟನೆಗಾಗಿ ಕಳುಹಿಸಿರುವ ಲೇಖನಗಳನ್ನು ತಿರುಗಿ ಪಡೆಯಲು ಅಪೇಕ್ಷಿಸುವವರೂ ಅದರ ಪರಿಣಾಮವನ್ನು ಕೂಡಲೆ ತಿಳಿದುಕೊಳ್ಳಲಿಚ್ಛಿಸುವವರೂ ಅದಕ್ಕಾಗಿ ತಗಲುವ ಅಂಚೆಯ ಚೀಟಿಗಳನ್ನು ತಮ್ಮ ಲೇಖನದ ಸಂಗಡ ಕಳುಹಿಸಿಕೊಡಬೇಕು.

ಜಾಹಿರಾತಿನ ದರಗಳು

	೧೨ ತಿಂಗಳ	೬ ತಿಂಗಳ	೩ ತಿಂಗಳ
೧ ಪುಟ	೨೪ ರೂ.	೧೫ ರೂ.	೮ ರೂ.
½ ,,	೧೫ ,,	೮ ,,	೫ ,,
¼ ,,	೧೦ ,,	೫ ,,	೩ ,,

ತಿದ್ದುಪಡಿ

೧೬ನೆಯ ಪುಟದಲ್ಲಿ ಫಲಹಾರ, ಎಂದು ಇದ್ದುದನ್ನು, 'ಫಲಾಹಾರ' ಎಂದು ತಿದ್ದುಕೊಂಡು ಓದಬೇಕು.

Reg. No. B. 3691

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕವಿತಾಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ **ಅನೇಕ** ಸ್ಕೂಲ್‌ಬೋರ್ಡುಗಳ ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲು ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳೆಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದ ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಕ್ಕೆ ದೊರಯುವವು

ಮಾರ್ಚ್ ೧೯೪೩ Reg. No B. 3691

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಿಕೆಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ವಿಷಯಾನುಕ್ರಮಣಿಕೆ

ಪ್ರ. ನಂ.	ವಿಷಯ.	ಪುಟ.
೧.	ಟ್ರೇನಿಂಗ್ ಕಾಲೇಜದ ಚಟುವಟಿಕೆಗಳು	೧
೨.	ದುಃಖವಾರ್ತೆ	೩
೩.	ಫಲಾಹಾರ	೪
೪.	ಪ್ರಬುದ್ಧರ ಶಿಕ್ಷಣ	೯
೫.	ಮಿಡಲ್‌ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆ—೧೯೪೩	೧೧
೬.	ಕನ್ನಡ ಬುಕ್ ಕಮೀಟಿಯವರಿಂದ ಮಂಜೂರಾದ ಪುಸ್ತಕಗಳು	೧೪
೭.	ಪತ್ರಗಳ ಮುಖ್ಯಾಂಶಗಳು	೧೭
೮.	ಪುಸ್ತಕ ಪರಿಚಯ	೩೦
೯.	ಹಳ್ಳಿಯ ಹೋರೆಗಳು (ಪ್ರಬುದ್ಧರಿಗಾಗಿ)	೩೧

ಬಿಡಿ ಸಂಚಿಕೆಗೆ ನಾಲ್ಕು ಅಣೆಗಳು.
ವಾರ್ಷಿಕ ಚಂದಾ ಹೆಣ ನರಡು ರೂಪಾಯಿಗಳು ಮಾತ್ರ.

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men Dharwar, at his Office.

ಪುರೋಗಾಮಿ ಶಿಕ್ಷಕ

★

(ಲೇಖಕರು : **ಶ್ರೀ. ಎಸ್. ಬಿ. ಗಜೇಂದ್ರಗಡ,** ಬಿ.ಎ., ಬಿ.ಟಿ., ವಿಜಾಪುರ)

ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಇರುವ ದೈನಂದಿನ ಅಭ್ಯಾಸದಲ್ಲಿ— ಕಲಿಸುವ ಕಾರ್ಯದಲ್ಲಿ ಅತ್ಯಂತ ಉಪಯುಕ್ತವಾಗುವಂತೆ, ವಿದ್ಯಾಖಾತೆಯ ಅಭ್ಯಾಸಪತ್ರಿಕೆಯನ್ನು ಸಂಪೂರ್ಣವಾಗಿ ಅನುಸರಿಸಿ ಬರೆಯಲ್ಪಟ್ಟಿದೆ.

ಪುಟಗಳು ೩೩೬ ★ **ಬೆಲೆ ೨-೪-೦**

ಇದು ಮೂರು ಮುಖ್ಯ ಭಾಗಗಳನ್ನೊಳಗೊಂಡಿದೆ.

(೧) ಶೈಕ್ಷಣಿಕ ಮನಃಶಾಸ್ತ್ರವನ್ನು ೧೨೫ ಪುಟಗಳಲ್ಲಿ ವಿವೇಚಿಸಿದೆ (೨) ಶಿಕ್ಷಣಶಾಸ್ತ್ರದ ಮೂಲತತ್ವಗಳನ್ನೂ ಪ್ರತ್ಯಕ್ಷವಾಗಿ ಕಲಿಸುವ ಶಾಸ್ತ್ರೀಯ ಪದ್ಧತಿಯನ್ನೂ ವಿವರಿಸಿದೆ. (೩) ಆಧುನಿಕ ಶಿಕ್ಷಣ ಕ್ರಮದ ಮಹತ್ವದ ಅಂಗಗಳಾದ ಶಾರೀರಿಕ ಶಿಕ್ಷಣ, ಶಿಸ್ತು, ಸಂಘಟನೆ ಮೊದಲಾದ ವಿಷಯಗಳನ್ನು ತಿಳಿಸಿದೆ.

ಶಿಕ್ಷಣದ ಸರ್ವಾಂಗಗಳನ್ನೂ ಸುಲಲಿತವಾದ ಭಾಷೆಯಲ್ಲಿ ಒತ್ತಟ್ಟಿಗೇ ಸುಂದರವಾಗಿ ಮಂಡಿಸಿದ ಶಾಸ್ತ್ರೀಯ ಗ್ರಂಥವು

ಕನ್ನಡದಲ್ಲಿ ಇದೊಂದೇ!

★

ಕನ್ನಡ-ಇಂಗ್ಲಿಷ್ ಶಾಲೆ-ಕಾಲೇಜುಗಳ ಎಲ್ಲಾ ಪಠ್ಯಪುಸ್ತಕಗಳೂ ಇತರ ಪುಸ್ತಕ, ಸ್ಕೂಲ್ ಸ್ಟೇಶನರಿ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ.

ಸ್ಟೂಡಂಟ್ಸ್ ಓನ್ ಬುಕ್ ಡಿಪೋ, ಧಾರವಾಡ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೧	ಮಾರ್ಚ್ ೧೯೪೩	ವರ್ಷ ೧೫. ಸಂ. ೧೨

ಟ್ರೇನಿಂಗ್ ಕಾಲೇಜದ ಚಟುವಟಿಕೆಗಳು

೧. ಸ್ಕೌಟ್ ಸಮಾರಂಭ

ಎಂದಿನಂತೆ ಈ ವರ್ಷವೂ ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದ ವಿದ್ಯಾರ್ಥಿ-ಶಿಕ್ಷಕರು ನಮ್ಮ ಭಾಗದ ಸ್ಕೌಟ ವ್ಯವಸ್ಥಾಪಕರಾದ ಶ್ರೀ. **ಹಲಸಗಿ**ಯವರ ನೇತೃತ್ವದಲ್ಲಿ ಸ್ಕೌಟ್ ಶಿಕ್ಷಣವನ್ನು ಹೊಂದಿದರು. ಅವರಿಗೆ ಸ್ಕೌಟ್ ದೀಕ್ಷೆಯನ್ನು ಕೊಡುವ ಸಮಾರಂಭವು ತಾ. ೧–೩–೧೯೪೩ ನೆಯ ದಿನ ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಡಾ. ಕಾಮುತ ಸಾಹೇಬರ ಆಧ್ಯಕ್ಷತೆಯಲ್ಲಿ ನೆರವೇರಿತು. ಈ ದೀಕ್ಷಾವಿಧಿಯ ಸಮಾರಂಭದಲ್ಲಿ ಗಂಡುಮಕ್ಕಳ ಟ್ರೇನಿಂಗ್ ಕಾಲೇಜ, ಕ. ಎ. ಬೋರ್ಡಿನ ಪ್ರಾ. ಶಿಕ್ಷಕರ ಕಾಲೇಜ ಮತ್ತು ವರ್ಧಾ ಮೂಲ ಶಿಕ್ಷಣ ಕೇಂದ್ರ ಈ ಮೂರು ಸಂಸ್ಥೆಗಳ ಮುನ್ನೂರಕ್ಕಿಂತ ಹೆಚ್ಚು ಜನ ಶಿಕ್ಷಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಆಟ ನೋಟಗಳು ಸ್ಕೌಟ್ ಚಟುವಟಿಕೆಗಳು ಮೊದಲಾದವು ಎಂದಿನಂತೆ ನಡೆದ ತರುವಾಯ ಅಧ್ಯಕ್ಷರಾದ ಡಾ. ಕಾಮುತರವರು ಶಿಕ್ಷಕ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಆಡಿದ ಉಪದೇಶದ ಮಾತುಗಳನ್ನು ಇಲ್ಲಿ ಸಂಕ್ಷೇಪಿಸಿ ಕೊಡ ಲಾಗಿದೆ. ಇಂಗ್ಲಂಡದಂಥ ಮುಂದುವರಿದ ನಾಡಿಗೆ ಹೋಗಿ ಅಲ್ಲಿಯ ಸ್ಕೌಟ್ ಚಟುವಟಿಕೆಗಳನ್ನು ಕಣ್ಣಾರೆ ಕಂಡುಬಂದ ಡಾ. ಕಾಮುತರವರು ಇಂದಿನ ಸಭೆಗೆ ಅಧ್ಯಕ್ಷರಾದುದು ಅಪೂರ್ವ ಸುಯೋಗವೆಂದು ಶ್ರೀ. ಹಲಸಗಿಯವರು ತಮ್ಮ ಪ್ರಸ್ತಾವನೆಯಲ್ಲಿ ಹೇಳಿದರು.

"ನೀವೆಲ್ಲರು ಇದುವರೆಗೆ ಅನೇಕ ಚಟುವಟಿಕೆಗಳನ್ನು ತೋರಿಸಿ ದಣಿದಿದ್ದೀರಿ. ಅದಕ್ಕಾಗಿ ಬಹಳ ಹೇಳದೆ, ಒಂದೆರಡೇ ಮಾತುಗಳನ್ನು ಹೇಳುವೆನು. ಈಗ ನೀವು ಶಿಕ್ಷಣಾಲಯಗಳಲ್ಲಿ ಎರಡುವರ್ಷಗಳವರೆಗೆ ಸರ್ವಾಂಗಸುಂದರವಾದ ಶಿಕ್ಷಣವನ್ನು ಪಡೆಯುತ್ತಲಿದ್ದೀರಿ. ಚಿಕ್ಕಮಕ್ಕಳ ಮನರಂಜನೆಯ ಬಗೆಬಗೆಯ ಉಪಾಯಗಳನ್ನು ಕಂಡುಹಿಡಿದಿದ್ದೀರಿ. ಅವರ ಶಿಕ್ಷಣವು ಪೂರ್ಣವಾಗಬೇಕಾದರೆ ಬಗೆಬಗೆಯ ಆಟಗಳನ್ನು ಆಡಿಸಲೇ ಬೇಕಲ್ಲವೆ? ಈಗ ನೀವೆಲ್ಲರೂ ಮಹತ್ವದ ವಚನವನ್ನು ಕೊಟ್ಟಿರಿ. ಕೊಡುವದು ಸುಲಭ; ಪಾಲಿಸುವದು ತುಂಬ ಕಠಿಣ. ನೀವು ಮಾನದ ಮೇಲೆ ಆಣೆ ಇಟ್ಟುಕೊಂಡಿದ್ದೀರಿ. ಎಲ್ಲರ ಮಾನವೂ ಬೆಲೆಯುಳ್ಳದ್ದೇ ಎಂಬುದನ್ನು ತಿಳಿದು, ಎಂಥ ಪ್ರಸಂಗದಲ್ಲಿಯೂ ಮರೆಯದೆ ನಿಮ್ಮ ವಚನವನ್ನು ಪಾಲಿಸುವಿರೆಂದು ನಾನು ನಂಬುತ್ತೇನೆ.

ಬೌದ್ಧಿಕ ಶಿಕ್ಷಣವು ಸರಿಯಾಗಿ ಸಾಗಬೇಕಾದರೆ ದೇಹದಲ್ಲಿ ಒಳ್ಳೆಯ ಮನಸ್ಸು ಬೇಕು. ಈ ಒಳ್ಳೆಯ ಮನಸ್ಸು ಆರೋಗ್ಯದಿಂದ ಇರುವವರಲ್ಲಿ ಮಾತ್ರ ಇರುವದು. ವಿದ್ಯಾರ್ಥಿಗಳ ಅಂಗಸಾಧನೆಯ ಬಗೆಗೆ ಸಾಕಷ್ಟು ಗಮನಿಸಿದರೆ ನಿಜವಾದ ಕಲ್ಯಾಣವಾಗುವದು. ವಿನೋದದೊಂದಿಗೆ ಅಂಗಸಾಧನೆ ಮಾಡಿಸಲು ಸ್ಕೌಟದಂತಹ ಉತ್ತಮ ರೀತಿಯು ಮತ್ತಾವುದಿದೆ? ಈ ತರದ ಸ್ಕೌಟ ಶಿಕ್ಷಣವನ್ನು ಹೊಂದಲೇಬೇಕೆಂದು ನಿಮಗೆ ಒತ್ತಾಯವಿಲ್ಲ. ಇದನ್ನು ನೀವು ನಿಮ್ಮ ಶಾಲೆಗಳಲ್ಲಿ ಕೈಕೊಳ್ಳುವದಾದರು ಅಧಿಕಾರಿಗಳ ಸಂತೋಷಕ್ಕಾಗಿ, ಇಲ್ಲವೆ ಸಂಬಳ ಹೆಚ್ಚಿಸಿಕೊಳ್ಳುವದಕ್ಕಾಗಿ ಅಲ್ಲ; ಕೇವಲ ಕರ್ತವ್ಯ ಪಾಲನಕ್ಕಾಗಿ, ಎಂಬದು ನಿಮ್ಮ ಲಕ್ಷ್ಯದಲ್ಲಿರಲಿ.

ಈಗ ಇಲ್ಲಿ ಕಲಿತುದನ್ನು ಮರೆಯದೆ ನೆನಪಿನಲ್ಲಟ್ಟುಕೊಳ್ಳಿರಿ. ನಮ್ಮೆಲ್ಲರಿಗೂ ಸೌಖ್ಯ ಬೇಕಾಗಿದೆ. ಸಾಕಷ್ಟು ಸೌಖ್ಯವು ಸಿಗಬೇಕಾದರೆ ಬಹುಕಾಲ ಬಾಳಬೇಕು. ಸರಿಯಾಗಿ ಬಾಳಲು ಬೌದ್ಧಿಕ ಶಿಕ್ಷಣದೊಂದಿಗೆ ಶಾರೀರಿಕ ಬಲವೂ ಬೇಕು. ಆದುದರಿಂದ ಎಲ್ಲರೂ ಅಂಥ ಬಲವುಳ್ಳವರಾಗೋಣ.

ಈ ಸುಸಂಧಿಯನ್ನು ಒದಗಿಸಿಕೊಟ್ಟುದಕ್ಕಾಗಿ ನಾನು ತಮ್ಮೆಲ್ಲರಿಗೆ ತುಂಬ ಆಭಾರಿಯಾಗಿದ್ದೇನೆ."

ದುಃಖವಾರ್ತೆ

ದೇಶಪಾಂಡೆ ಹನುಮಂತರಾಯರು ವೈಕುಂಠವಾಸಿಗಳಾದರು

ನಮ್ಮ ವಿದ್ಯಾಖಾತೆಯಲ್ಲಿ ಬೇರೆ ಬೇರೆ ಸ್ಥಾನಮಾನಗಳಲ್ಲಿದ್ದು ಯಶಸ್ವಿಯಾಗಿ ಕಾರ್ಯಮಾಡಿ ಸೇವಾನಿವೃತ್ತರಾಗಿದ್ದ ದೇಶಪಾಂಡೆ ಹನುಮಂತರಾಯರು ಮೊನ್ನೆ ೧೪ನೆಯ ತಾರೀಖಿನ ದಿನ ಅಕಸ್ಮಾತ್ ವೈಕುಂಠವಾಸಿಗಳಾದರೆಂದು ಬರೆಯಲು ತುಂಬ ವಿಷಾದವಾಗುವದು. ಟ್ರೇನಿಂಗ್ ಕಾಲೇಜದಲ್ಲಿ ಶಿಕ್ಷಕರಾಗಿಯೂ ವ್ಹಾಯಿಸ್ ಪ್ರಿನ್ಸಿಪಾಲರಾಗಿಯೂ ತರುವಾಯ ಟ್ರೇನಿಂಗ್ ಸ್ಕೂಲಿನ ಮುಖ್ಯಾಧ್ಯಾಪಕರಾಗಿಯೂ ಕಾರವಾರ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿಯೂ ಕೆಲಸಮಾಡಿ ನಮ್ಮ ಶಿಕ್ಷಕವರ್ಗಕ್ಕೆ ಪರಿಚಿತರೂ ಅತ್ಯಂತ ಪ್ರಿಯರೂ ಆಗಿದ್ದ ಈ ಮಹನೀಯರು ತಮ್ಮ ಮಿಕ್ಕ ಕಾರ್ಯಕ್ಷೇತ್ರಗಳಲ್ಲಿಯೂ ತುಂಬ ಯಶಸ್ಸು ಪಡೆದಿದ್ದರು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಜೀವ ಸದಸ್ಯರಾಗಿದ್ದುದಲ್ಲದೆ ಸೇವಾನಿವೃತ್ತರಾದಬಳಿಕ ಕಾರ್ಯಕಾರೀ ಮಂಡಲದಲ್ಲಿ ಸೇರಿ ಅದರ ಪ್ರತ್ಯಕ್ಷ ಸೇವೆಗೆ ನಡಕಟ್ಟಿ ನಿಂತಿದ್ದರು. ಸಂಸಾರಸುಖ– ಶಿಕ್ಷಣಪದ್ಧತಿ– ಹಿಂದುಸ್ತಾನದ ಪ್ರಾಚೀನ ಇತಿಹಾಸ– ಲೋಕಪ್ರಿಯ ರೊದ್ದರಾಯರ ಜೀವನಚರಿತ್ರೆ ಮುಂತಾದ ಉದ್ಗ್ರಂಥಗಳನ್ನು ಬರೆದು ಕನ್ನಡ ಸಾಹಿತ್ಯದೇವಿಯ ಪೂಜೆಗೆ ನಾಲ್ಕು ಒಳ್ಳೆಯ ಕುಸುಮಗುಚ್ಛಗಳನ್ನು ಅರ್ಪಿಸಿದ್ದರು. ಇಂಥ ಕಾರ್ಯಸ್ಫೂರ್ತಿಯುಳ್ಳ ವಿದ್ವಾಂಸರ ವಿಯೋಗದಿಂದ ಕನ್ನಡನಾಡಿಗೆ ತುಂಬಿ ಬರಲಾರದ ಹಾನಿಯಾದಂತಾಯಿತು. ಇವರಿಗೆ ಮೊನ್ನೆ ಮೊನ್ನೆ ೬೦ ವರುಷಗಳಾಗಿದ್ದವು. ಹಿರಿಯರಾದ ಗೋವಿಂದರಾಯರು ಇನ್ನು ಜೀವಿಸಿರುವಾಗಲೆ ಇವರ ವಿಯೋಗವುಂಟಾದದ್ದು ಅತಿಶಯ ದುಃಖದಾಯಕವೆನಿಸದಿರದು. ಕಾಲನ ಜೆಲ್ಲಾಟದ ನೆಲೆಯನ್ನು ಬಲ್ಲವರಾರು? ಎಂಬ ಮಾತೊಂದನ್ನು ಮುಂದೆಮಾಡಿ ಉಕ್ಕಿಬರುವ ದುಃಖವನ್ನು ಹತ್ತಿಕ್ಕಿಕೊಂಡಹೊರತು ಗತ್ಯಂತರವಿಲ್ಲ.

ಜನಪ್ರಿಯ ದೇಶಪಾಂಡೆರಾಯರ ನಿಧನವಾರ್ತೆಯನ್ನು ಕೇಳಿ ದುಃಖಿತರಾದ ಟ್ರೇನಿಂಗ್ ಕಾಲೇಜ ಪ್ರ್ಯಾಕ್ಟಿಸಿಂಗ್ ಸ್ಕೂಲುಗಳ ಶಿಕ್ಷಕವರ್ಗವೂ ವಿದ್ಯಾರ್ಥಿವೃಂದವೂ ಸಭೆಸೇರಿ ಈ ಕೆಳಗಿನ ನಿರ್ಣಯವನ್ನು ಸರ್ವಾನುಮತದಿಂದ ಸ್ವೀಕರಿಸಿ ಅವರ ಚಿರಂಜೀವಿಗಳಿಗೆ ಕಳುಹಿಸಿಕೊಟ್ಟರು.

"ಹತ್ತು ಹನ್ನೆರಡು ವರ್ಷಗಳ ವರೆಗ ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿ ಅತ್ಯಂತ ದಕ್ಷತೆಯಿಂದ ಕೆಲಸ ಮಾಡಿದವರೂ ಎಲ್ಲ

ಶಿಕ್ಷಕ ವೃಂದಕ್ಕೂ ಜನತೆಗೂ ಪ್ರಿಯರಾದವರೂ ಕನ್ನಡ ಸಾಹಿತ್ಯ ಸೇವೆಯನ್ನು ಮಾಡಿ ಕರ್ನಾಟಕದ ಏಕೀಕರಣದ ಕಾರ್ಯದಲ್ಲಿ ಮನಸ್ಸು ಹಾಕಿ ದುಡಿದವರೂ ಶಿಕ್ಷಣ ಪ್ರೇಮಿಗಳೂ ಆದ ಶ್ರೀ. ಹನುಮಂತರಾವ ಗೋವಿಂದರಾವ ದೇಶಪಾಂಡೆ ಇವರು ನಿನ್ನೆ ತಾ. ೧೪-೩-೧೯೪೩ ನೆಯ ದಿವಸ ಅಕಸ್ಮಿತವಾಗಿ ನಿಧನಹೊಂದಿದ್ದರಿಂದ ಟ್ರೇನಿಂಗ್ ಕಾಲೇಜಿನ ಮತ್ತು ಪ್ರಾಕ್ಟೀಸಿಂಗ್ ಸ್ಕೂಲಿನ ಅಧ್ಯಾಪಕ ವರ್ಗಕ್ಕೂ ಕಾಲೇಜಿನ ಮತ್ತು ಪ್ರಾಕ್ಟೀಸಿಂಗ್ ಸ್ಕೂಲಿನ ವಿದ್ಯಾರ್ಥಿವೃಂದಕ್ಕೂ ಅತ್ಯಂತ ಖೇದವಾಗಿದೆ. ನಾವೆಲ್ಲರು ಅವರ ಆಪ್ತೇಷ್ಟರ ದುಃಖದಲ್ಲಿ ಸಮಭಾಗಿಗಳಾಗಿರುತ್ತೇವೆ. ದೇವರು ಮೃತರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ.''

ಫಲಾಹಾರ

ಶ್ರೀ. ಎಚ್. ಬಿ. ಉಮಡಿ, ಎಮ್. ಎ. ಅವರಿಂದ

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಫಲಗಳಲ್ಲಿರುವ ಶರ್ಕರೆಯು ನಮ್ಮ ಪಾಚಕಾವಯವಗಳು ನಿರಾಯಾಸವಾಗಿ ಸ್ವೀಕರಿಸಲು ಸಾಧ್ಯವಾದ ಸ್ಥಿತಿಯಲ್ಲಿರುವದರಿಂದ ಅವು ಉತ್ತಮವಾದ ಆಹಾರ ವೆನಿಸುವವು. ಸಾದಾ ಸಕ್ಕರೆಯನ್ನು ಸಿದ್ಧಪಡಿಸುವಾಗ ನಾವು ಕೃತ್ರಿಮವಾಗಿ ಮಾಡುವ ಶುದ್ಧೀಕರಣ ಕಾರ್ಯದಲ್ಲಿ ಅದರೊಳಗಿರುವ ಶರೀರಕ್ಕೆ ಉಪಯೋಗವಾಗುವ ಹಲವು ಸಾಮಗ್ರಿಗಳನ್ನು ತೆಗೆದು ಚೆಲ್ಲುವದರಿಂದಲೂ ಆ ಸಮಯದಲ್ಲಿ ಮತ್ತೆ ಕೆಲವು ಸಾಮಗ್ರಿಗಳು ರಾಸಾಯನಿಕ ಕ್ರಿಯೆಗಳಿಂದ ರೂಪಾಂತರ ಹೊಂದುವದರಿಂದಲೂ ಆ ಸಕ್ಕರೆಯು ಪಚನಕ್ಕೆ ಜಡವಾಗುವದಲ್ಲದೆ ಅದರಲ್ಲಿ ಹಲವು ತರದ ಆಹಾರ ಸಾಮಗ್ರಿಗಳ ಕೊರತೆಯುಂಟಾಗಿರುವದು; ಆದರೆ ಫಲಗಳಲ್ಲಿ ನಮ್ಮ ಶರೀರಕ್ಕೆ ಬೇಕಾಗುವ ಸಾಮಗ್ರಿಗಳು ಪರಿಪಕ್ವ ಸ್ಥಿತಿಯಲ್ಲಿಯೂ ಪರಿಪೂರ್ಣ ಸ್ಥಿತಿಯಲ್ಲಿಯೂ ಇರುವದರಿಂದ ಅವು ಅತ್ಯುತ್ತಮ ಆಹಾರವೆನ್ನಿಸಿಕೊಳ್ಳುವವು.

ದೀಸದ್ರಾಕ್ಷಿ, ಉತ್ತುತ್ತಿ ಮುಂತಾದ ಒಣಗಿದ ಹಣ್ಣುಗಳು, ಹುಳಿಸೆಯ ಹಣ್ಣು, ಕೆವಳಿಹಣ್ಣು ಮುಂತಾದವುಗಳಲ್ಲಿ ಫಲಶರ್ಕರೆಯು ಹೆಚ್ಚು ಪ್ರಮಾಣದಲ್ಲಿರುವದು. ಇವುಗಳಲ್ಲಿ ಒಟ್ಟು ತೂಕದ ಎರಡು ಮೂರನೆಯ ಅಂಶದಷ್ಟು ಕಾರ್ಬೊಹೈಡ್ರೇಟುಗಳು ಇರುವವೆಂದು ಶಾಸ್ತ್ರಜ್ಞರು ಹೇಳುವರು. ಜರದಾಳ,

ಕೇರಹಣ್ಣು, ಅಂಜೂರಿ, ಸೀತಾಫಲ, ನಿಂಬೆ, ಕಂಚಿ, ದಾಳಿಂಬ, ಬೇಲ, ನೇರಿಲ, ಸೇಬುಹಣ್ಣು ಮುಂತಾದ ಹಣ್ಣುಗಳಲ್ಲಿಯೂ ಉತ್ತಮ ಆಹಾರಸಾಮಗ್ರಿಗಳು ಹೆಚ್ಚು ಪ್ರಮಾಣದಲ್ಲಿರುವವು. ಹಲಸಿನಹಣ್ಣು, ನೆಲ್ಲೀಕಾಯಿ, ಅನಾನಸ, ಪಪ್ಪಯಿ, ಇವುಗಳಲ್ಲಿಯೂ ಫಲಶರ್ಕರೆಯು ಸಮೃದ್ಧವಾಗಿರುವದರಿಂದ ಅವು ಉತ್ತಮ ಆಹಾರವೆನಿಸಿಕೊಂಡಿವೆ. ಈ ಹಣ್ಣುಗಳನ್ನು ಉಪಯೋಗಿಸುವಾಗ **ಸಂಗಡ ಸಕ್ಕರೆಯನ್ನು ಎಂದೂ ಉಪಯೋಗಿಸಲಾಗದು.** ಸಕ್ಕರೆ ಬಿಲ್ಲಗಳ ತುಟಾಗ್ರತೆಯ ಈ ಕಾಲದಲ್ಲಿ ಈ ಹಣ್ಣುಗಳನ್ನು ಅವುಗಳ ಬದಲು ಉಪಯೋಗಿಸಿಕೊಳ್ಳಬಹುದು.

ಮನುಷ್ಯನ ಆರೋಗ್ಯಕ್ಕೆ ಅತ್ಯಾವಶ್ಯಕವಾಗಿರುವ ವ್ಹಿಟಾಮಿನಗಳೂ ಲವಣಗಳೂ ಈ ಹಣ್ಣುಗಳಲ್ಲಿ ಮಿಕ್ಕ ಆಹಾರದ ಜೀನಸುಗಳಿಗಿಂತಲೂ ಹೆಚ್ಚು ಪ್ರಮಾಣದಲ್ಲಿರುವವು. ಉತ್ತುತ್ತಿ, ಹುಳಿಸೆಯಹಣ್ಣು ಇವುಗಳಲ್ಲಿ ಮಾನವ ಶರೀರಕ್ಕೆ ಅತ್ಯಾವಶ್ಯಕವಾದ ಲೋಹದ ಪ್ರಮಾಣವು ಪ್ರಾಣಿಗಳ ಪಿತ್ತಾಶಯದಲ್ಲಿ ಇರುವಷ್ಟಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಇರುವದು. ಒಣಗಿದ ದ್ರಾಕ್ಷೆಯಲ್ಲಿ ಈ ಲೋಹದ ಪ್ರಮಾಣವು ಎರಡು ಮೂರು ಪಟ್ಟಿನಷ್ಟು ಇರುತ್ತಿದ್ದರೆ ಕವಳಿಹಣ್ಣುಗಳಲ್ಲಿ ಆರುಪಟ್ಟು ಇರುವದು. ಲಿಂಬೆಯಹಣ್ಣಿನಲ್ಲಿಯೂ ಉತ್ತುತ್ತಿ ಮೊದಲಾದ ಒಣಗಿದ ಹಣ್ಣುಗಳಲ್ಲಿಯೂ ಲೋಹವು ಹೆಚ್ಚು ಪ್ರಮಾಣದಲ್ಲಿರುವದು. ಕವಳಿಹಣ್ಣು ಬೇಲದಹಣ್ಣು ಇವುಗಳಲ್ಲಿ ಇರುವ ಕ್ಯಾಲ್ಸಿಯಮ್ಮಿನ ಪ್ರಮಾಣವು ಆಕಳ ಹಾಲಿನಲ್ಲಿ ಇರುವಷ್ಟಕ್ಕಿಂತಲೂ ಹೆಚ್ಚು ಇರುವದು.

ಮಾನವ ಶರೀರಕ್ಕೆ ಅವಶ್ಯಕವಾಗಿ ಬೇಕಾಗಿರುವ ಲೋಹ ಲವಣಗಳಷ್ಟೇ ಅಲ್ಲದೆ ನಮ್ಮ ಆರೋಗ್ಯಕ್ಕೆ ಅತ್ಯಾವಶ್ಯಕವಾಗಿರುವ 'ವ್ಹಿಟಾಮಿನ್' ಎಂಬ ದ್ರವ್ಯವೂ ಕೂಡ ಹಣ್ಣುಗಳಲ್ಲಿಯೇ ಹೆಚ್ಚಾಗಿರುವದು 'ಸಿ' ವ್ಹಿಟಾಮಿನ್ನ ವಂತೂ ಫಲಗಳ ಹೊರತು ಬೇರೆ ಆಹಾರದ ಜೀನಸುಗಳಲ್ಲಿ ಹೆಚ್ಚಾಗಿ ಸಿಗುವದೇ ಇಲ್ಲ. ಮಾವಿನಹಣ್ಣು ಪಪ್ಪಯಿಹಣ್ಣುಗಳಂಥ ಹಳದೀ ಬಣ್ಣದ ಹಣ್ಣುಗಳಲ್ಲಿ 'ಎ' ವ್ಹಿಟಾಮಿನ್ನವು ಹೆಚ್ಚು ಪ್ರಮಾಣದಲ್ಲಿರುವದು. ಉತ್ತುತ್ತಿ ಹಲಸಿನ ಹಣ್ಣು, ಟೊಮಾಟೊ, ಕಿತ್ತಳೆಹಣ್ಣು ಇವುಗಳಲ್ಲಿ ಇದು ಹೆಚ್ಚು ಪ್ರಮಾಣದಲ್ಲಿ ದೊರೆಯುವದು. ಒಣಗಿದ ಹಣ್ಣುಗಳು, ಬದಾಮು, ಸಫರಜಂದ ಮುಂತಾದವುಗಳಲ್ಲಿ 'ಬಿ' ವ್ಹಿಟಾಮಿನ್ನವೂ ನೆಲ್ಲಿಕಾಯಿ ಪೇರಲ ಹಣ್ಣುಗಳಲ್ಲಿ 'ಸಿ' ವ್ಹಿಟಾಮಿನ್ನವೂ ಹೆಚ್ಚಾಗಿ ದೊರೆಯುವವು. ನೆಲ್ಲಿಯಕಾಯಿಯಲ್ಲಿ ಪೇರಲಹಣ್ಣಿನ ಎರಡುಪಟ್ಟು ವ್ಹಿಟಾಮಿನ್ನವಿರುವದು. ಮಸುಂಬಿ, ಕಂಚಿ, ಅನಾನಸ, ಪಪ್ಪಯಿ ಗಳಲ್ಲಿಯೂ ಈ ವ್ಹಿಟಾಮಿನ್ನವು ಹೆಚ್ಚು ಪ್ರಮಾಣದಲ್ಲಿರುವದು.

ಬೇನೆಯವರ ಪಥ್ಯದ ಆಹಾರದಂತೆಯೂ ಔಷಧರೂಪವಾಗಿಯೂ ಫಲಾಹಾರದ ಉಪಯೋಗವಾಗುವದು. ಬೇರೆ ಬೇರೆ ಫಲಗಳನ್ನು ಔಷಧದಂತೆ ಉಪಯೋಗಿಸುವ ಕ್ರಮವು ನಮ್ಮ ದೇಶದಲ್ಲಿ ಪುರಾತನಕಾಲದಿಂದಲೂ ನಡೆದುಬಂದಿದೆ. ಚಿಕ್ಕಮಕ್ಕಳಿಗೂ ಬಸುರಿಯರಿಗೂ ಫಲಾಹಾರದ ಮಹತ್ವವು ಅಷ್ಟಿಷ್ಟೆಂದು ಹೇಳುವಂತಿಲ್ಲ. ಫಲಾಹಾರವು ನಮ್ಮ ಕರುಳುಗಳಲ್ಲಿ ಪಚನಕ್ರಿಯೆಗೆ ಸಹಾಯಕವಾಗುವಂಥ ಬ್ಯಾಕ್ಟೇರಿಯಾ ಎಂಬ ಸೂಕ್ಷ್ಮಜಂತುಗಳ ಬೆಳೆವಣಿಗೆ ಅವಶ್ಯಕವೂ ಅನುಕೂಲವೂ ಆದ ಪದಾರ್ಥಗಳನ್ನು ಹುಟ್ಟಿಸುವದು; ಮತ್ತು ನಮ್ಮ ಆರೋಗ್ಯಕ್ಕೆ ಬಾಧಕವಾಗಿರುವ ವಿಷಕಾರಕ ಬ್ಯಾಕ್ಟೇರಿಯಗಳು ಹುಟ್ಟುವದಕ್ಕೆ ಪ್ರತಿಕೂಲ ಸ್ಥಿತಿಯನ್ನುಂಟುಮಾಡುವದು. ಫಲಾಹಾರವು ಅಲ್ಕಲಿ ಪ್ರಧಾನವಾದ ಆಹಾರವಾಗಿರುವದರಿಂದ ನಮ್ಮ ಶರೀರದಲ್ಲಿ ಅಸಿಡ್ ಮತ್ತು ಅಲ್ಕಲಿಗಳ ಪ್ರಮಾಣವು ಸಮರ್ಪಕವಾಗಿರುವದಕ್ಕೆ ಅನುಕೂಲತೆ ಮಾಡಿಕೊಡುವದು. ನಿಂಬೆ, ಕಂಚಿ ಮುಂತಾದ ಹುಳಿ ಹಣ್ಣುಗಳಂತೂ ಈ ಕಾರ್ಯಕ್ಕೆ ಅತ್ಯಾವಶ್ಯಕವೆನ್ನಿಸುವವು. ಇವು ನಮ್ಮ ಶರೀರದೊಳಗಿನ ಅಲ್ಕಲಿಯ ಅಂಶವನ್ನು ಕರಗಿಸಿ ಅದನ್ನು ನಿರೋಗಿಯಾಗಿಡುವವು. ಬೇಳೆ, ಮಾಂಸ ಮುಂತಾದ ಅಲ್ಕಲಿ ಪ್ರಧಾನವಾಗಿರುವ ಆಹಾರವನ್ನು ಸಮತೋಲನ ಆಹಾರವಾಗಿ ಮಾರ್ಪಡಿಸುವದಕ್ಕೆ ಹಣ್ಣುಗಳೂ ಕಾಯಿಪಲ್ಲೆಗಳೂ ಅವಶ್ಯವಾಗಿ ಬೇಕೇಬೇಕು. ನಮ್ಮ ಪಾಚಕಾವಯವಗಳಲ್ಲಿರುವ ಆಮ್ಲದ ಅಂಶವನ್ನು ಸಮತೋಲನವಾಗಿಟ್ಟು ಅವುಗಳ ಉತ್ತೇಜಕತೆಯನ್ನು ಕಡಿಮೆಮಾಡಿ ಅವಯವಗಳನ್ನು ಶಾಂತವಾಗಿಡಲಿಕ್ಕೆ ಹಣ್ಣುಗಳು ತುಂಬ ಸಹಾಯಕವಾಗುವವು. ಮೂತ್ರ ಉರಿಯುವದು ಮೊದಲಾದ ಸಂದರ್ಭಗಳಲ್ಲಿ ಫಲಾಹಾರವು ಅತ್ಯಂತ ಉಪಕಾರಿಯೆನಿಸುವದು. ಒಂದು ಕಪ್ಪು ನೀರಿನಲ್ಲಿ ಅರ್ಧ ಲಿಂಬೆಯ ಹಣ್ಣಿನ ರಸವನ್ನು ಬೆರಿಸಿ ಮುಂಜಾನೆ ಒಮ್ಮೆ, ರಾತ್ರಿ ಮಲಗುವಾಗ ಮತ್ತೊಮ್ಮೆ, ತೆಗೆದುಕೊಂಡರೆ ಪಚನಕ್ರಿಯೆಗೆ ತುಂಬ ಸಹಾಯವಾಗುವದಲ್ಲದೆ ಶರೀರದೊಳಗಿನ ಅಲ್ಕಲಿಯ ಪ್ರಮಾಣವು ಸರಿಯಾಗುವದು. ಲಿಂಬೆಯ ರಸದ ಸಂಗಡ ಸಕ್ಕರೆಯನ್ನು ಮಾತ್ರ ಎಂದೂ ಬೆರಿಸಬಾರದು. ಹಾಗೆ ಸಕ್ಕರೆಯನ್ನು ಕೂಡಿಸಿದರೆ ಉಪಾಯವಾಗುವದರ ಬದಲು ಅಪಾಯಕರವಾಗುವ ಸಂಭವವೇ ಹೆಚ್ಚು. ಸಕ್ಕರೆಯು ಫಲಗಳಲ್ಲಿರುವ ವ್ಹಿಟಾಮಿನ್ನವನ್ನು ಕೊಂದುಬಿಟ್ಟು ಅದರ ಪರಿಣಾಮವನ್ನು ಕಳೆದುಬಿಡುವದು. ಹಣ್ಣುಗಳಲ್ಲಿ ಪಾಚಕ ಮತ್ತು ರೇಚಕ ಗುಣವಿರುವ ದ್ರವ್ಯಗಳು ಇರುವದರಿಂದ ಅವು ಮಲಾವರೋಧವನ್ನು ಕಳೆಯುವವು. ಪ್ರತಿದಿನ ಒಂದೆರಡು ಒಳ್ಳೆಯ ಬಾಳೆಯ ಹಣ್ಣುಗಳನ್ನು ತಿನ್ನುತ್ತಹೋದರೆ ಮಲಬದ್ಧತೆಯು

ರೋಗವು ತಾನಾಗಿ ನಿವಾರಣೆಯಾಗುವದು. ಮಲಬದ್ಧತೆಯು ಹಲವು ಬೇನೆಗಳ ಮೂಲವೆಂಬುದನ್ನು ಎಲ್ಲರೂ ಬಲ್ಲರು. ಉತ್ತತ್ತಿ ಕಜ್ಜೂರಗಳೂ ಮಲಬದ್ಧತೆಯನ್ನು ಕಳೆಯುವವು. ಬೇಸಗೆಯ ಮಧ್ಯಾಹ್ನದಲ್ಲಿ ಬಿಸಿಲಿನಿಂದ ಬಸವಳಿದು, ಕಳೆಗುಂದಿ ಕೆಲಸಮಾಡಲಾರದಂತಾಗುವ ಸಂದರ್ಭದಲ್ಲಿ ಹಣ್ಣಿನ ರಸವನ್ನು ತೆಗೆದುಕೊಂಡರೆ ಕಾರ್ಯೋತ್ಸಾಹವ್ರಂಟಾಗುವದು. ಬಸುರಿಯರಿಗೂ ಕೂಸುಗಳಿಗೆ ಹಾಲುಕುಡಿಸುವ ತಾಯಂದಿರಿಗೂ ಫಲಾಹಾರವೂ ಹಣ್ಣಿನ ರಸವನ್ನು ಸೇವಿಸುವದೂ ತುಂಬ ಪ್ರಯೋಜನಕಾರಿಯಾಗುವದು. ಹಣ್ಣುಗಳಲ್ಲಿ ವ್ಹಿಟಾಮಿನ್ನವು ಹೆಚ್ಚಾಗಿರುವದರಿಂದ ಫಲಾಹಾರದಿಂದ ನಮ್ಮ ಶರೀರದಲ್ಲಿ ಸಹಜವಾಗಿರುವ ಬೇನೆಗಳನ್ನು ಪ್ರತಿಬಂಧಿಸುವ ಶಕ್ತಿಯು ಹೆಚ್ಚುವದು. ನಮ್ಮ ಶರೀರದಲ್ಲಿ ಆರೋಗ್ಯರಕ್ಷಣೆಗೆ ಅವಶ್ಯವಾಗಿರುವ ಬೇರೆ ಬೇರೆ ಧಾತುಗಳ ಕೊರತೆಯುಂಟಾಗಲು ಬೇರೆ ಬೇರೆ ಬೇನೆಗಳು ಬರುವವೆಂಬ ವಿಚಾರವೊಂದಿದೆ. ಇಂಥ ಬೇನೆಗಳು ನಮ್ಮ ದೇಶದಲ್ಲಿ ಸರ್ವಸಾಮಾನ್ಯವಾಗಿರುವವೆಂದು ಹೇಳುವದೂ ಉಂಟು. ಈ ಬೇನೆಗಳ ಪ್ರತಿಬಂಧಕ್ಕೆ ಫಲಾಹಾರವು ಅತ್ಯಂತ ಸಹಾಯಕವಾಗಿರುವದು. ಹಣ್ಣುಗಳಲ್ಲಿರುವ ಲೋಹಗಳಿಂದ ನಮ್ಮ ಹಲ್ಲುಗಳು ಗಟ್ಟಿಯಾಗಿ ಮೈಯೊಳಗಿನ ಎಲುವುಗಳು ಬಲಗೊಳ್ಳುವವು. ರಕ್ತವು ಶುದ್ಧವಾಗುವದು.

ಹಣ್ಣುಗಳನ್ನು ಪುಟ್ಟಪೂರಾ ತಿನ್ನಬೇಕು. ಹಲಕೆಲವು ಹಣ್ಣುಗಳನ್ನು ತಿನ್ನುವಾಗ ತೋಟೆ ತಿಳಲುಗಳನ್ನು ತೆಗೆದು ಜೆಲ್ಲುವ ಪದ್ಧತಿಯು ಸರಿಯಾದದ್ದಲ್ಲ. ಮತ್ತು ಹಣ್ಣುಗಳನ್ನೂ ಗಿಡದಿಂದ ಹರಿದ ಕೂಡಲೆ ತಿನ್ನುವದು ಒಳಿತು. ಹೆಚ್ಚು ದಿವಸಗಳ ವರೆಗೆ ಇಟ್ಟು ಹಳಸಿದ ಇಲ್ಲವೆ ಕಳಿತ ಹಣ್ಣುಗಳನ್ನು ತಿನ್ನುವದು ಹಿತಕರವಲ್ಲ. ಆರೋಗ್ಯದ ದೃಷ್ಟಿಯಿಂದಲೂ ಆರೋಗ್ಯದಾಯಕವಾದ ಸಾಮುಗ್ರಿಗಳ ಸಮತೋಲನದ ದೃಷ್ಟಿಯಿಂದಲೂ ಹಣ್ಣನ್ನು ತೋಟೆಸುಲಿದು ಬಿಸುಡದೆ ಪುಟ್ಟಪೂರಾ ತಿನ್ನುವದು ಒಳಿತು. ನೂರರಲ್ಲಿ ೪–೮ ರ ವರೆಗಿನ ಆಹಾರಸಾಮುಗ್ರಿಗಳು ಹಣ್ಣುಗಳ ತೋಟೆಯಲ್ಲಿಯೇ ಇರುವವು. ಹಣ್ಣುಗಳಲ್ಲಿರುವ ವಿಟಾಮಿನ್ನವೂ ಲೋಹಗಳೂ ಹೆಚ್ಚಾಗಿ ತೋಟೆಯಲ್ಲಿಯೂ ತೋಟೆಯ ಒಳಭಾಗಕ್ಕೆ ಹೊಂದಿದ ಪರೆಯಲ್ಲಿಯೂ ಇರುವವು. ಆದ್ದರಿಂದ ತೋಟೆಯನ್ನು ಸುಲಿದು ಜಲ್ಲಿದ ಕೂಡಲೆ ಈ ಮಹತ್ತ್ವದ ಸಾಮುಗ್ರಿಗಳನ್ನು ತೆಗೆದು ಜೆಲ್ಲಿದಂತಾಗುವದು. ಉದಾಹರಣಾರ್ಥವಾಗಿ ಟೊಮೊಟೊ ಹಣ್ಣಿನ ತೋಟೆಯಲ್ಲಿ ಒಳಗಿನ ತಿಳಲಿನಲ್ಲಿರುವ ೨೦ ಮಡಿಯಷ್ಟು ಅದರ ರಸದಲ್ಲಿರುವ ಸಾವಿರಪಟ್ಟು 'ಎ' ವ್ಹಿಟಾಮಿನ್ ಇರುವದು. ಕೆಲಕೆಲವು ಹಣ್ಣುಗಳನ್ನು ಸುಲಿಯುವಾಗ ಅದರ ರಸವು ಸೋರಿಹೋಗುವದು. ಆ ರಸದೊಡನೆ ದ್ರವರೂಪದಲ್ಲಿರುವ ಎ. ಬಿ. ವ್ಹಿಟಾಮಿನ್ನಗಳೂ ಹೊರಟು

ಹೋಗುವವು. ಹಣ್ಣನ್ನು ಚಾಕುವಿನಿಂದ ಹೆಚ್ಚುವಾಗ ಹುಟ್ಟುವ ಒಂದು ಬಗೆಯ ರಾಸಾಯನಿಕ ದ್ರವ್ಯದಿಂದ ಸಿ. ವಿಟಾಮಿನ್ನವು ಹಾಳಾಗಿ ಹೋಗುವದು. ಆದ್ದರಿಂದ ಹಣ್ಣುಗಳನ್ನು ಕಡಿದು ನುರಿಸಿ ತಿನ್ನುವದೇ ಒಳಿತು. ಹಣ್ಣುಗಳನ್ನು ಕಡಿದು ನುರಿಸಿ ತಿನ್ನುವದರಿಂದ ಅದರ ಆಹಾರಸಾಮಗ್ರಿಗಳನ್ನೂ ಸರಿಯಾಗಿ ಉಪಯೋಗಿಸಿಕೊಂಡಂತಾಗುವದಲ್ಲದೆ ಹಲ್ಲುಗಳಿಗೂ ಬಾಯೊಳಗಿನ ಸ್ನಾಯುಗಳಿಗೂ ತಕ್ಕಷ್ಟು ವ್ಯಾಯಾಮವು ದೊರೆದು ಅವು ಬಲಪಡುವವು; ಮತ್ತು ಬಾಯೊಳಗಿನ ಜೊಲ್ಲು ಕೂಡಿ ಆ ಆಹಾರವು ರುಚಿಕರವೂ ಆಗಿ ಬೇಗನೆ ಪಚನವಾಗುವದು. ಪ್ರತಿಸಾರೆ ಊಟವಾದ ಕೂಡಲೆ ನುರಿಸಿ ತಿನ್ನುವಂಥ ಒಂದೆರಡು ಹಣ್ಣುಗಳನ್ನು ತಿನ್ನುವದರಿಂದ ಬಾಯಿಯೂ ಹಲ್ಲುಗಳೂ ಸ್ವಚ್ಛವಾಗುವವು. ಉತ್ತುತ್ತಿ, ಒಣಗಿದ ದ್ರಾಕ್ಷಿ, ಬದಾಮು, ಅಂಜೂರಿ, ಜರದಾಳ ಮುಂತಾದ ಹಣ್ಣುಗಳನ್ನು ತಿನ್ನುವದು ಹೆಚ್ಚು ಒಳಿತು.

ಹಣ್ಣುಗಳು ಗಿಡದ ಮೇಲೆಯೇ ಪಕ್ವವಾಗುವದಕ್ಕೆ ಬಿಟ್ಟು ಆ ಮೇಲೆ ಅವನ್ನು ಉಪಯೋಗಿಸುವದು ಒಳಿತು. ಯಾಕಂದರೆ ಗಿಡದಮೇಲೆ ಪಕ್ವವಾಗುವಾಗ ಅವುಗಳಲ್ಲಿ ಆಹಾರಸಾಮಗ್ರಿಗಳೂ ಫಲಶರ್ಕರೆಯೂ ಪರಿಪಕ್ವಸ್ಥಿತಿಗೆ ಬಂದು ನಮ್ಮ ಶರೀರಕ್ಕೆ ಉಪಯೋಗವಾಗುವ ರೂಪಕ್ಕೆ ಬರುವವು. ಹಣ್ಣುಗಳ ತೋಟೆಯಲ್ಲಿರುವ ಹಲಕೆಲವು ಸಾಮಗ್ರಿಗಳು ಅವು ಪಕ್ವವಾದಾಗ ಒಳಭಾಗಕ್ಕೆ ಹೋಗುವವು. ಆದ್ದರಿಂದ ಗಿಡದಮೇಲೆಯೇ ಪಕ್ವವಾದ ಹಣ್ಣುಗಳು ಬೇಗನೆ ಪಚನವಾಗುವವು. ಕೃತ್ರಿಮ ರೀತಿಯಿಂದ (ಅಡಿಗೆ ಹಾಕಿ) ಹಣ್ಣು ಮಾಡಿದ ಫಲಗಳಲ್ಲಿ ಈ ದ್ರವ್ಯಗಳು ತೋಟೆಯಲ್ಲಿಯೇ ಉಳಿದುಬಿಡುವವು. ಬಾಳೆಯ ಹಣ್ಣಿನ ತೋಟೆಯ ಒಳಭಾಗದಲ್ಲಿರುವ ತಂತುಗಳಲ್ಲಿ ಈ ದ್ರವ್ಯಗಳು ಹೆಚ್ಚಾಗಿರುವವು. ಆದ್ದರಿಂದ ಸಂಪೂರ್ಣ ತೋಟೆಯನ್ನು ತಿನ್ನುವದಾಗದಿದ್ದರೂ ಈ ಒಳಗಿನ ತಂತುಗಳನ್ನಾದರೂ ತಿನ್ನಬೇಕು. ಪಪ್ಪಯಿ ಹಣ್ಣಿನ ತೋಟೆಯಲ್ಲಿ ಪೆಪ್ಸಿನ್ ಎಂಬ ದ್ರವ್ಯವಿದ್ದು ಅದು ಪಿಷ್ಟಮಯ ಪದಾರ್ಥಗಳನ್ನು ಪಚನಮಾಡುವದಕ್ಕೆ ಅವಶ್ಯವಾಗಿ ಬೇಕಾಗುವದು. ಬೇಲದ ಹಣ್ಣು ಮುಂತಾದ ಬಿರುಸುತೋಟೆಯ ಹಣ್ಣುಗಳನ್ನು ಸುಲಿಯುವಾಗಲೂ ಒಳಗಿನ ಅವಶ್ಯಕ ಪದಾರ್ಥಗಳು ಹೊರಟು ಹೋಗದಂತೆ ನೋಡಿಕೊಳ್ಳಬೇಕು.

ಸ್ವಾಭಾವಿಕವಾಗಿ ಬೆಳೆಯುವ ಕಾಡು ಹಣ್ಣುಗಳಲ್ಲಿ ಕೃತ್ರಿಮವಾಗಿ ಬೆಳೆಯಿಸಿದ ಹಣ್ಣುಗಳಿಗಿಂತಲೂ ಹೆಚ್ಚು ಪ್ರಮಾಣದಿಂದ ಆಹಾರಸಾಮಗ್ರಿಯು ದೊರೆಯುವದು. ಉದಾ: ಕೆಂಪು ಬಣ್ಣದ, ಸಣ್ಣ ಆಕಾರದ, ಹೆಚ್ಚು ಬೀಜಗಳಿರುವ ಸೇರಲಹಣ್ಣಿನಲ್ಲಿ ದೊಡ್ಡ ಆಕಾರದ, ಬೀಜವಿಲ್ಲದ, ಬಿಳಿಯ ಸೇರಲ ಹಣ್ಣಿಗಿಂ

ತಲೂ ಆಹಾರ ಸಾಮಗ್ರಿಗಳು ಹೆಚ್ಚು ಪ್ರಮಾಣದಲ್ಲಿರುವವು. 'ಸಿ' ವ್ಹಿಟಾ ಮಿನ್ನವು ದಪ್ಪ ತೋಟೆಯ ಕಿತ್ತಳೆಹಣ್ಣಿನಲ್ಲಿ, ಒಳಗೆ ಪೊಳ್ಳಾಗಿ ಕೈತುಂಬುವ ದೊಡ್ಡ ಕಿತ್ತಳೆ ಹಣ್ಣಿನಲ್ಲಿರುವಷ್ಟಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿರುವದು. ಗುಡ್ಡಗಾಡುಗಳಲ್ಲಿ ಬೆಳೆಯುವ ಕವಳಿಹಣ್ಣು ಬೋರೆಹಣ್ಣು ಮುಂ. ಗಳಲ್ಲಿ ಆಹಾರಸಾಮಗ್ರಿಗಳು ಹೆಚ್ಚಾಗಿರುವವು. ಕೆಂಪು ಹಳದಿ ಮುಂತಾದ ದಟ್ಟಾದ ಬಣ್ಣವುಳ್ಳ ಹಣ್ಣುಗಳಲ್ಲಿ ತಿಳಿಬಣ್ಣದ ಹಣ್ಣುಗಳಿಗಿಂತಲೂ ಹೆಚ್ಚು ಪೋಷಕದ್ರವ್ಯ ಗಳಿರುವವು. ಸ್ವಾಭಾವಿಕವಾಗಿ ಬೆಳೆಯುವ ಸಣ್ಣ ಜಾತಿಯ ಹಣ್ಣುಗಳಲ್ಲಿ ಕಲಮು ಮಾಡುವದು ಮುಂತಾದ ಕೃತ್ರಿಮ ರೀತಿಯಿಂದ ಬೆಳೆದ ದೊಡ್ಡ ಹಣ್ಣುಗಳಲ್ಲಿರು ವಷ್ಟಕ್ಕಿಂತಲೂ ಪೋಷಕ ಪದಾರ್ಥಗಳು ಹೆಚ್ಚಾಗಿರುವವು. ದೇವರ ಸೃಷ್ಟಿಯಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಪದಾರ್ಥಗಳನ್ನು ಮನುಷ್ಯನು ತನ್ನ ಜಾಣ್ಮೆಯಿಂದ ತಿದ್ದಿ ಬೆಳೆಯಿಸುವದಕ್ಕೆ ಹೋದರೆ ಹೊರಗಿನ ಆಕಾರರೂಪಗಳಲ್ಲಿ ಸುಧಾರಣೆಯಾ ದಂತೆ ಕಂಡುಬಂದರೂ ಒಳಗಿನ ಗುಣದಲ್ಲಿ ಕೊರತೆಯಾದದ್ದು ಕಂಡುಬರುವದು.

'ಹೆಚ್ಚು ಆಹಾರಸಾಮಗ್ರಿಗಳನ್ನು ಬೆಳೆಯಿರಿ' ಎಂದು ಹೇಳುವ ಇಂದಿನ ಸಂದರ್ಭದಲ್ಲಿ ನಾವು ಹಣ್ಣುಗಳನ್ನು ಹೆಚ್ಚಾಗಿ ಬೆಳೆಯಲಿಕ್ಕೆ ಯತ್ನಿಸುವದೂ, ತಮ್ಮ ಆಹಾರದಲ್ಲಿ ಫಲಗಳನ್ನು ಹೆಚ್ಚಾಗಿಯೂ ಯೋಗ್ಯ ಕ್ರಮದಲ್ಲಿಯೂ ಉಪಯೋಗಿಸಿಕೊಳ್ಳುವದೂ ತುಂಬ ಹಿತಕರವಾಗಿದೆ.

ಪ್ರಬುದ್ಧರ ಶಿಕ್ಷಣ

ನಮ್ಮ ಇಲಾಖೆಯಲ್ಲಿ ಸಾಕ್ಷರತಾ ಪ್ರಸಾರದ ಕಾರ್ಯವು ಇತ್ತೀಚೆಗೆ ಪ್ರಾರಂಭವಾಗಿದ್ದು ಕಳೆದ ಮೂರು ವರ್ಷಗಳಲ್ಲಿ ಅದು ಯಾವ ರೀತಿಯಾಗಿ ಪ್ರಗತಿ ಹೊಂದಿತೆಂಬುದನ್ನು ಮುಂದಿನ ವಿವರಣೆಯಿಂದ ಕಂಡುಕೊಳ್ಳ-ಬಹುದು. ಈ ಅವಧಿಯಲ್ಲಿ ಇಲಾಖೆಯ ಆಡಳಿತೆಯನ್ನು ಗವ್ಹರ್ನರರೇ ತಮ್ಮ ಸಲಹೆಗಾರ ಮಂಡಳದ ನೆರವಿನಿಂದ ಸಾಗಿಸಿದರೆಂಬುದು ನಮಗೆ ಗೊತ್ತಿದೆ.

೧೯೩೯-೪೦ ರಲ್ಲಿ ನಮ್ಮ ಇಲಾಖೆಯಲ್ಲಿ ಒಟ್ಟು ೨೩೦೦ ಪ್ರಬುದ್ಧರ ವರ್ಗಗಳಿದ್ದು ಅವುಗಲ್ಲಿ ೫೮ ಸಾವಿರ ಜನರು ಓದುತ್ತಿದ್ದರು. ಅದಕ್ಕೂ ಹಿಂದಿನ ವರ್ಷದಲ್ಲಿ ೪೩೨ ವರ್ಗಗಳಲ್ಲಿ ೧೩೦೦೦ ಪ್ರಬುದ್ಧರು ಓದುತ್ತಿದ್ದರು. ೧೯೪೦-೪೧ ರಲ್ಲಿ ಒಟ್ಟು ೪೫೭೩ ಜನ ಪ್ರಬುದ್ಧರ ಶಿಕ್ಷಣದ ಕೆಲಸಗಾರರು ತಮ್ಮ ಹೆಸರನ್ನು ರಜಿಸ್ಟರ ಮಾಡಿಸಿಕೊಂಡಿರುವರು.

ಪ್ರಬುದ್ಧರು ತಾವು ಕಲಿತ ಓದುಬರೆಹಗಳನ್ನು ಮರೆತುಬಿಟ್ಟು ಪುನಃ ನಿರಕ್ಷರಿಗಳಾಗದಂತೆ ನೋಡಿಕೊಳ್ಳುವದಕ್ಕಾಗಿಯೂ ಅವರಿಗೆ ತಕ್ಕ ಪ್ರೋತ್ಸಾಹನೆಕೊಡುವದಕ್ಕಾಗಿಯೂ ಹಳ್ಳಿಗಳಲ್ಲಿ ವಾಚನಾಲಯಗಳನ್ನು ಸ್ಥಾಪಿಸುವದಕ್ಕಾಗಿಯೂ೧೯೪೯-೪೭ರಲ್ಲಿ ೬೦ಸಾವಿರ ರೂಪಾಯಿಗಳ ಸಹಾಯ ದ್ರವ್ಯವನ್ನು ಮಂಜೂರ ಮಾಡಿತ್ತು. ಗ್ರಾಮಪಂಚಾಯತಿಗಳು, ಸಹಕಾರೀ ಸಂಘಗಳು, ಆರೋಗ್ಯರಕ್ಷಣ ಸಮಿತಿಗಳು ಇಲ್ಲವೆ ಖಾಸಗಿ ಜನರು ಇಲ್ಲವೆ ಯಾವುದೊಂದು ಸಂಘ ಸಂಸ್ಥೆಗಳವರು ಇಂಥ ಹಳ್ಳಿಯ ವಾಚನಾಲಯಗಳನ್ನು ನಡೆಯಿಸಲು ಮುಂದೆ ಬಂದು ರಜಿಸ್ಟ್ರೇಶನಕ್ಕಾಗಿ ಅರ್ಜಿಮಾಡಬಹುದೆಂದು ಗೊತ್ತಾಗಿತ್ತು. ಇಂಥ ವಾಚನಾಲಯಗಳಿಗೆ ೩೦ ರೂಪಾಯಿಗಳನ್ನು ಅಥವಾ ಪುಸ್ತಕಗಳನ್ನು ಕೊಳ್ಳುವದಕ್ಕೆ ಆದ ಒಟ್ಟು ವೆಚ್ಚದ ೫೦ ವನ್ನು ಮೊದಲನೆಯ ಸಲ ಸರಕಾರದವರು ಕೊಟ್ಟರು. ಈ ಸಹಾಯದ್ರವ್ಯದ ಪ್ರಮಾಣವನ್ನು ದೊಡ್ಡ ಹಳ್ಳಿಗಳಲ್ಲಿ ೫೦ ರೂ. ವರೆಗೂ ಹೆಚ್ಚಿಸಬಹುದಾಗಿತ್ತು. ಎಲ್ಲ ಜಾತಿ ಮತಗಳ ಜನರಿಗೆ ಈ ವಾಚನಾಲಯಗಳಲ್ಲಿ ಪ್ರವೇಶವಿರಬೇಕೆಂಬುದೊಂದೇ ನಿರ್ಬಂಧವನ್ನು ಹಾಕಲಾಗಿತ್ತು.

೧೯೪೧ನೆಯ ಆಗಸ್ಟ ತಿಂಗಳಲ್ಲಿ ಪ್ರಬುದ್ಧರ ಶಿಕ್ಷಣದ ವರ್ಗಗಳನ್ನು ನಡೆಯಿಸುವ ಕೆಲಸಗಾರರಿಗೆ ತಕ್ಕ ಮಾರ್ಗವನ್ನು ತೋರಿಸಿಕೊಡುವದಕ್ಕಾಗಿ ನಮ್ಮ ಇಲಾಖೆಯೊಳಗಿನ ಮೂರು ಸರಕಾರೀ ಟ್ರೇನಿಂಗ್ ಕಾಲೇಜುಗಳಲ್ಲಿ ಒಂದೊಂದು ತರಬೇತಿಯ ವರ್ಗವನ್ನು ನಡೆಯಿಸಿದರು.

ಪ್ರಬುದ್ಧರ ಶಿಕ್ಷಣದ ವರ್ಗಗಳನ್ನು ನಡೆಯಿಸಿ ಸಾಕ್ಷರತಾ ಪ್ರಸಾರದ ಕಾರ್ಯವನ್ನು ಕೈಕೊಂಡಂತೆಯೇ ಹಳ್ಳಿಗಳ ಜನಜೀವನದಲ್ಲಿ ತಕ್ಕ ಸುಧಾರಣೆಯನ್ನು ಮಾಡುವ ಉದ್ದೇಶದಿಂದ ಉಪನ್ಯಾಸಗಳು, ಮಾಯಾದೀಪ ಸಿನೇಮಾಗಳಲ್ಲಿ ಚಿತ್ರಗಳನ್ನು ತೋರಿಸಿ ವಿವರಿಸುವದು, ಮುಂತಾದ ಸಾಧನಗಳಿಂದ ಹಳ್ಳಿಯ ನಿವಾಸಿಗಳ ಸೇರಿಕೆಯ ವಿಷಯಗಳಾದ ಒಕ್ಕಲುತನ, ಆರೋಗ್ಯರಕ್ಷಣೆ, ಶಿಶು ಸಂಗೋಪನ ಮುಂತಾದ ವಿಷಯಗಳನ್ನು ವಿವರಿಸುವ ವ್ಯವಸ್ಥೆಯನ್ನು ಮಾಡಿತ್ತು.

ಪ್ರಕಟಣೆಗಳು—'ಮುಂಬಯಿ ಸಮಾಚಾರ' ಎಂಬ ಪತ್ರಿಕೆಯ ಮೂಲಕ ಯುದ್ಧವಾರ್ತೆಗಳನ್ನೂ ಗ್ರಾಮಸುಧಾರಣೆಯ ವಿಷಯಗಳನ್ನೂ ಕಾಲಕಾಲಕ್ಕೆ ಪ್ರಕಟಿಸುವ ಕಾರ್ಯವನ್ನು ಡಾಯರೆಕ್ಟರ್ ಆಫ್ ಇನ್‌ಫರ್ಮೇಶನ್ ಇವರು ಕೈಕೊಂಡಿದ್ದರು. ೧೯೪೧ರಲ್ಲಿ ಒಕ್ಕಲುತನದ ಸುಧಾರಣೆ, ಹಳ್ಳಿಗಳ ಆರೋಗ್ಯ, ಸುಖಜೀವನ ಮುಂತಾದ ಶೈಕ್ಷಣಿಕ ಚಿತ್ರಗಳನ್ನು ಹಳ್ಳಿಹಳ್ಳಿಗೂ ಒಯ್ದು ತೋರಿಸುವ ಪ್ರಚಾರಕಾರ್ಯವೊಂದನ್ನು ಸರಕಾರವು ನಡೆಯಿಸಿತು.

ಮಿಡಲ್‌ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆ ೧೯೪೩

ಕನ್ನಡ ೧ನೆಯ ಕಾಗದ ಮೌನವಾಚನ

ತಾ. ೧೨–೨–೧೯೪೩ ವೇಳೆ : ೨ ರಿಂದ ೨-೪೫ ರ ವರೆಗೆ

ಸೂಚನೆ:— (ಈ ಕಥೆಯನ್ನು ೪೫ ನಿಮಿಷ ಓದಿ ತಿರುಗಿ ಕೊಡಿರಿ.)

ಒಂದು ಊರಲ್ಲಿ ಒಬ್ಬ ಕಳ್ಳನಿದ್ದನು. ಒಂದು ದಿನ ಆ ಕಳ್ಳನು ಕಳವಿಗಾಗಿ ಹೊರಟಿರುವಾಗ ದಾರಿಯಲ್ಲಿ ಅವನಿಗೆ ಒಬ್ಬ ಸಾಧುವು ಭೆಟ್ಟಿಯಾದನು. ಆ ಸಾತು ಈ ಮಾತು ನಡೆದ ಬಳಿಕ ಸಾಧುವು 'ಅಣ್ಣಾ, ಸಾಯುವ ಹೊತ್ತು ಬಂದರೂ ಸುಳ್ಳು ಮಾತಾಡಬೇಡ' ಎಂದನು. ಆಗ ಕಳ್ಳನು 'ಕಳವು ಮಾಡಿ ಜೀವಿಸುವ ನಾನು ಸತ್ಯ ಮಾತಾಡುವ ಬಗೆ ಹೇಗೆ? ಕಳವು ಬಿಟ್ಟರೆ ನನ್ನ ಮತ್ತು ನನ್ನ ಕುಟುಂಬದ ಪಾಡೇನು?' ಎಂದು ಕೇಳಿದನು. ಸಾಧುವು 'ಅಣ್ಣಾ, ದೇವರಿದ್ದಾನೆಂದು ನಂಬು. ಆತನ ಮೇಲೆ ಭಾರಹಾಕಿ ನಡೆ. ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ' ಎಂದು ನುಡಿದು ಮುಂದೆ ನಡೆದನು. ಅಂದಿನಿಂದ ಕಳ್ಳನು ಸುಳ್ಳು ಮಾತಾಡುವದನ್ನು ಬಿಟ್ಟುಬಿಟ್ಟನು.

ಒಂದು ದಿನ ಆ ಕಳ್ಳನು ನಡುರಾತ್ರಿಯ ಕತ್ತಲೆಯಲ್ಲಿ ಅವಸರದಿಂದ ನಡೆದಿದ್ದನು. ಆಗ ಅವನ ಎದುರಿಗೆ ಒಬ್ಬ ಗೃಹಸ್ಥನು ಬಂದುನಿಂತು 'ಎಲ್ಲಿಗೆ ನಡೆದಿರುವೆ' ಎಂದು ಕೇಳಿದನು.

ಕಳ್ಳ:— ನಾನು ಕಳವು ಮಾಡುವದಕ್ಕೆ ಅರಮನೆಗೆ ಹೊರಟಿದ್ದೇನೆ.

ಗೃಹಸ್ಥ:— ಒಳ್ಳೆಯದೇ ಆಯಿತು, ನಾನೂ ಅದಕ್ಕೇ ಹೊರಟಿದ್ದೇನೆ. ದೊರೆದದ್ದನ್ನೆಲ್ಲ ಇಬ್ಬರೂ ಸರಿಯಾಗಿ ಹಂಚಿಕೊಳ್ಳೋಣ.

ಇಬ್ಬರೂ ಒಪ್ಪಿಕೊಂಡು ಅರಮನೆಗೆ ನಡೆದರು. ಜತೆಗಾರನ ಹಂಚಿಕೆಯಿಂದ ಕಳ್ಳನು ಬಹು ಸುಲಭವಾಗಿ ಒಳಗೆಹೋಗಿ ಅವನು ಹೇಳಿದ ಆಭರಣದ ಪೆಟ್ಟಿಗೆಯನ್ನು ತೆರೆದು ಮುತ್ತುರತ್ನಗಳ ಎರಡು ಹಾರಗಳನ್ನು ತಕ್ಕೊಂಡು ಹೊರಗೆ ಬಂದನು. ಅವನು ತನ್ನ ಜತೆಗಾರನ ಕೈಗೆ ಒಂದು ಹಾರವನ್ನು ಕೊಟ್ಟು 'ಆ ಪೆಟ್ಟಿಗೆಯಲ್ಲಿ ಮೂರು ಹಾರಗಳಿದ್ದವು. ಪಾಲು ಹಂಚಿಕೊಳ್ಳುವದಕ್ಕೆ ತೊಂದರೆಯಾಗಬಾರದೆಂದು ಇನ್ನೊಂದನ್ನು ಅಲ್ಲಿಯೇ ಬಿಟ್ಟು ಬಂದಿದ್ದೇನೆ' ಎಂದನು. ಬಳಿಕ ಕಳ್ಳನ ಮನೆಯ ವಿವರಗಳನ್ನೆಲ್ಲ ಕೇಳಿಕೊಂಡು ಆ ಗೃಹಸ್ಥನು ತನ್ನ ಮನೆಗೆ ಹೋದನು.

ಮರುದಿನ ಮುಂಜಾನೆ ಅರಸನು ತನ್ನ ಬೊಕ್ಕಸದವನನ್ನು ಕರೆಯಿಸಿ ಏನೇನು ಕಳವಾಗಿದೆಯೆಂಬದನ್ನು ನೋಡಲು ಆಜ್ಞಾಪಿಸಿದನು. ಅವನು

ಹೋಗಿ ನೋಡಿದಾಗ ಒಂದು ಪೆಟ್ಟಿಗೆ ಮಾತ್ರ ತೆರೆದಿದ್ದು ಅದರಲ್ಲೊಂದು ಹಾರವು ಉಳಿದಿತ್ತು. ಅಧಿಕಾರಿಯು ಅದನ್ನು ತನ್ನ ಕಿಸಿಯೊಳಗೆ ಹಾಕಿ ಕೊಂಡು ಅರಸನ ಮುಂದೆಬಂದು ಕಳ್ಳರು ಮೂರೂ ಹಾರಗಳನ್ನು ಒಯ್ದಿರುವ ರೆಂದು ಹೇಳಿದನು. ಹಿಂದಿನ ರಾತ್ರಿ ವೇಷ ಮರೆಯಿಸಿ ಸಂಚಾರಕ್ಕೆ ಹೊರಟಿದ್ದ ಅರಸನಿಗೆ ಆ ಕಳ್ಳನು ಕೂಡಿದ್ದನು, ಮತ್ತು ಮುಂದಿನ ವಿಚಾರಗಳನ್ನೆಲ್ಲ ಮೊದಲೇ ತಿಳಿದುಕೊಂಡಿದ್ದ ಅರಸನು ಹುಡುಕಿ ನೋಡಿದಾಗ ಬೊಕ್ಕಸದವನ ಕಿಸೆಯಲ್ಲಿ ಮೂರನೆಯ ಹಾರವು ದೊರೆಯಿತು.

ಅರಸನು ಕೂಡಲೆ ಆಳುಗಳನ್ನು ಕಳುಹಿಸಿ ಕಳ್ಳನನ್ನು ಕರೆಯಿಸಿಕೊಂಡು ಅವನನ್ನು ಬೊಕ್ಕಸದ ಅಧಿಕಾರಕ್ಕೆ ನಿಯಮಿಸಿ ಬೊಕ್ಕಸದ ಅಧಿಕಾರಿಯನ್ನು ಸೆರೆಮನೆಗೆ ಕಳುಹಿಸಿದನು.

ಕನ್ನಡ—೧ನೆಯ ಕಾಗದ

ತಾ. ೧೨–೨–೧೯೪೩ ವೇಳೆ—೨ರಿಂದ ೨.೪೫ರ ವರೆಗೆ

೧. ನೀವು ಈಗ ಓದಿದ ಕಥೆಯ ಬಗ್ಗೆ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :—

(ಅ) ಸಾಧುವು ಕಳ್ಳನಿಗೆ ಮಾಡಿದ ಉಪದೇಶದ ಮಾತುಗಳು ಯಾವವು?

(ಬ) ಆಭರಣದ ಪೆಟ್ಟಿಗೆಯಲ್ಲಿ ಎಷ್ಟು ಹಾರಗಳಿದ್ದವು? ಕಳ್ಳನು ಎಷ್ಟು ಹಾರಗಳನ್ನು ಒಯ್ದನು? ಯಾಕೆ?

(ಕ) ಸಾಧುವಿನ ಮಾತು ನಿಜವಾಯಿತೋ? ಹೇಗೆ?

(ಡ) ಬೊಕ್ಕಸದ ಅಧಿಕಾರಿಯ ಪರಿಣಾಮವೇನಾಯಿತು? ಯಾಕೆ?

(ಇ) ಈ ಕಥೆಗೆ ಒಂದು ತಕ್ಕ ಹೆಸರನ್ನು ಕೊಡಿರಿ. ಗು. ೨೦

೨. ಕೆಳಗೆ ಕೊಟ್ಟ ವಿಷಯಗಳಲ್ಲಿ ಒಂದರ ಬಗ್ಗೆ ಸುಮಾರು ಇಪ್ಪತ್ತು ಸಾಲುಗಳನ್ನು ಬರೆಯಿರಿ :—

(ಅ) ನಿಮ್ಮ ಸಾಲೆಯಲ್ಲಿ ನಡೆದ ಒಂದು ಸಮಾರಂಭದ ವರ್ಣನೆ.

(ಆ) ನೀವು ನೋಡಿದ ಒಂದು ದೊಡ್ಡ ಊರಿನ ಸಂತೆಯ ವಿವರಣೆ.

(ಇ) ನೀವು ನೋಡಿದ ಒಂದು ನಾಟಕ, ಸಿನೇಮಾ ಅಥವಾ ಬಯಲಾಟ ಇವುಗಳಲ್ಲಿ ಒಂದರ ಮುಖ್ಯ ಕಥೆ.

(ಈ) ನೀವು ಆಡುವ ಆಟದ ವರ್ಣನೆ. ಗು. ೨೦

ಕನ್ನಡ—೨ನೆಯ ಕಾಗದ

ತಾ. ೧೨–೨–೧೯೪೩ ವೇಳೆ—೪ರಿಂದ ೪-೪೫ರ ವರೆಗೆ

೧. ಪರರ ಮನೆಗೆ ಹೋಗಬೇಡ
ಪರರ ಸುದ್ದಿಯಾಡಬೇಡ
ಪರರ ವಸ್ತು ಬಯಸಬೇಡ ಬೇಡ ಬೇಡಣ್ಣಾ !
ಹರಟೆಯಿಂದ ಕೈಗೆ ಪರಟೆ
ಬರುವದೆಂದು ಹಿರಿಯರೆಮಗೆ
ಅರುಹಿದೊಳ್ಳೆ ಮಾತನೆಂದು ಮರೆಯಬೇಡಣ್ಣಾ ! ‖ ೧ ‖
ಕಡವ ಕೊಟ್ಟು ಕೊಂಬುವಂಥ
ನಡತೆಯುಂಟು ಆದರದಕೆ
ಗಡಿಯನಿಟ್ಟು ಮೀರದಂತೆ ನಡೆಯಬೇಕಣ್ಣಾ !
ನುಡಿಗೆ ನಡೆಗೆ ಮತಿಗೆ ಕೃತಿಗೆ
ಒಡಕು ಬೇಡ ನಮ್ಮ ನಡೆಯ
ನಾಡ ಜನರು ಲೋಕದೊಡೆಯರೊಪ್ಪಬೇಕಣ್ಣಾ ! ‖ ೨ ‖
ಹೆಣ್ಣು ಹೊನ್ನು ಮಣ್ಣು ಮೂರು
ಕಣ್ಣು ಮನವ ಸೆಳೆದು ನಿನ್ನ
ಚಿನ್ನದಂಥ ಬಾಳ್ವೆಯನ್ನು ಮಣ್ಣಗೈಗಣ್ಣಾ !
ಸಣ್ಣದೆಂದು ನಾಗನನ್ನು
ಕಣ್ಣಿಗೊತ್ತಿ ಕೊಳ್ಳಬಹುದೆ ?
ಸಣ್ಣದೆಂದು ಕಳವು ಸುಳ್ಳು ಮೆಚ್ಚ ಬೇಡಣ್ಣಾ ! ‖ ೩ ‖

(ಅ) ಈ ಕವಿತೆಗಳನ್ನು ಲಕ್ಷ್ಯಪೂರ್ವಕವಾಗಿ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:— ಗು. ೧೦

(೧) ಕವಿತೆಯಲ್ಲಿ ನಾವು ಯಾವ ಮಾತನ್ನು ಮರೆಯಬಾರದೆಂದು ಹೇಳಿದೆ ?

(೨) 'ನಡೆಗೆ ನುಡಿಗೆ ಒಡಕು ಬೇಡ' ಹೀಗೆಂದರೇನು ? ವಿವರಿಸಿರಿ.

(೩) ನಮ್ಮ ನಡೆಯನ್ನು ಯಾರು ಯಾರು ಒಪ್ಪಬೇಕು ? ಅದರಿಂದ ಪ್ರಯೋಜನವೇನು ?

(೪) ಈ ಕವಿತೆಗಳಿಗೆ ಒಂದು ಒಳ್ಳೆಯ ಹೆಸರು ಕೊಡಿರಿ.

(ಬ) ಮೂರನೆಯ ನುಡಿಯ ಭಾವನವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ. ಗು. ೪

೨. (ಅ) ಜಾಣ್ಮೆ, ಬಡತನ, ಯೌವನ, ದುರ್ಬುದ್ಧಿ ಇವುಗಳ ವಿರುದ್ಧಾರ್ಥವನ್ನು ಹೇಳುವ ಪದಗಳನ್ನು ಹೇಳಿರಿ. ಗು. ೪

(ಬ) ಕರೆ, ಮರೆ, ಹೊಡೆ ಈ ಶಬ್ದಗಳಿಗೆ ಎರಡೆರಡು ಅರ್ಥವನ್ನು ಹೇಳುವಂತೆ ಆರು ವಾಕ್ಯಗಳನ್ನು ಬರೆಯಿರಿ. ಗು. ೬

೩. ಕೆಳಗಿನ ಮಾತುಗಳನ್ನು ಪೂರ್ಣಮಾಡಿರಿ:— ಗು. ೧೦

(ಅ) ಕೊಡಲಿಯ ಕಾವು .....

(ಆ) ಕುರುಡರಲ್ಲಿ ..... ಶ್ರೇಷ್ಠನು.

(ಇ) ಆಕಳು ಕಪ್ಪಾದರೆ .....

(ಈ) ಅಂಗ್ಯೆಯ ಹುಣ್ಣನ್ನು ನೋಡಲು .....

(ಎ) ಸಿಂಹವು.....ಪ್ರಾಣಿಯು; ನರಿಯು.....ಪ್ರಾಣಿಯು.

೪. (ಅ) ಕೆಳಗಿನ ವಾಕ್ಯಗಳನ್ನು ತಿದ್ದಿ ಬರೆಯಿರಿ:— ಗು. ೪

(೧) ಗಂಗೆಯು ರಾಮನ ಸಂಗಡ ಊರಿಗೆ ಹೋದನು.

(೨) ಮಂಗವು ಮಾವಿನ ಕಾಯಿಗಳನ್ನು ಉದುರಿತು.

(೩) ಬಸವಂತನೂ ಶಿವಕ್ಕನೂ ಮನೆಗೆ ಬಂದಳು.

(೪) ರಾಮನು ನಾಯಿಯನ್ನು ಕಚ್ಚಿತು.

(ಬ) ಈ ಕೆಳಗಿನ ವಾಕ್ಯಗಳನ್ನು ಮುಂದೆ ಹೇಳುವಂತೆ ಬದಲಿಸಿ ಬರೆಯಿರಿ:— ಗು. ೪

(೧) ನಾನು ನಿನ್ನನ್ನು ಹೊಡೆದೆನು. (ಪ್ರಶ್ನಾರ್ಥಕ ವಾಕ್ಯಮಾಡಿರಿ.)

(೨) ರಾಮನಿಗೆ ಒಂದು ಪುಸ್ತಕವು ಬೇಕು. (ನಿಷೇಧಾರ್ಥಕ ವಾಕ್ಯ ಮಾಡಿರಿ.)

(೩) ಗೋವಿಂದನು ಸಾಲೆಗೆ ಹೋಗುವನು. (ಭೂತಕಾಲದ ಕ್ರಿಯಾಪದವನ್ನು ಸೇರಿಸಿರಿ.)

(೪) ಹನುಮಂತನಿಂದ ಪುಸ್ತಕವು ಓದಲ್ಪಟ್ಟಿತು. (ಕರ್ತರಿಪ್ರಯೋಗದ ವಾಕ್ಯ ಮಾಡಿರಿ,)

(ಕ) ಕೆಳಗಿನ ವಾಕ್ಯದ ಕರ್ತೃಕರ್ಮಕ್ರಿಯಾಪದಗಳನ್ನೂ ಪ್ರಯೋಗವನ್ನೂ ಹೇಳಿರಿ:— ಗು. ೪

ಈಸುವದರಲ್ಲಿ ಜಾಣನಾದ ರಾಮನಿಂದ ಕೆರೆಯಲ್ಲಿ ಬಿದ್ದು ಮುಳುಗುತ್ತಿದ್ದ ಕೂಸು ಬದುಕಿಸಲ್ಪಟ್ಟಿತು.

ಅಂಕಗಣಿತ

ದಕ್ಷಿಣಭಾಗ—ತಾ. ೧೧–೨–೧೯೪೩, ವೇಳೆ ೧೧–೩೦ ರಿಂದ ೧೨–೩೦

ಸೂಚನೆ

ಮೇಲ್ವಿಚಾರಕರ ಅಪ್ಪಣೆಯಿಲ್ಲದೆ ಈ ಪುಟವನ್ನು ತಿರುವಬೇಡಿರಿ.
ತೆರವಿದ್ದ ಸ್ಥಳಗಳನ್ನು ತೀವ್ರವೇ ತುಂಬಿರಿ.

ಹೆಸರು (ಅಡ್ಡಹೆಸರನ್ನು ಮೊದಲು ಬರೆಯಿರಿ)..... ನಂಬರು.....
ವಯಸ್ಸು (ಸಂಪೂರ್ಣ ವರ್ಷ) ..... ಮತ್ತು ತಿಂಗಳು .....
ಇವತ್ತಿನ ತಾರೀಖು..... ಶಾಲೆಯ ಹೆಸರು.....
ಧರ್ಮ ಮತ್ತು ಜಾತಿ.....

ಕೆಳಗಿನ ಸೂಚನೆಗಳನ್ನು ಲಕ್ಷ್ಯಪೂರ್ವಕವಾಗಿ ಓದಿರಿ:—

(೧) ಪರೀಕ್ಷೆಗೆ ಗೊತ್ತುಪಡಿಸಿದ ಅವಧಿಯು ಒಂದು ತಾಸು.

(೨) ಪ್ರಶ್ನೆಗಳ ಉತ್ತರಗಳನ್ನು ನಿಮಗೆ ಕೊಟ್ಟ ಪುಸ್ತಕಗಳಲ್ಲಿಯೇ ಬರೆಯಿರಿ.

(೩) ೧ ರಿಂದ ೬ ನೆಯ ಪ್ರಶ್ನೆಗಳ ಉತ್ತರಗಳನ್ನು ಮುಂದೆ ಕೊಟ್ಟ ಗೆರೆಗಳ ಮೇಲೆ ಬರೆಯಿರಿ. ಕಚ್ಚಾ ಕೆಲಸವನ್ನು ಬಲಗಡೆಯ ದಂಡೆಯಲ್ಲಿ ಮಾಡತಕ್ಕದ್ದು.
೭ ಮತ್ತು ೮ ನೆಯ ಪ್ರಶ್ನೆಗಳನ್ನು ಮೂದರಿಯ ರೀತಿಯಿಂದ ಪ್ರಶ್ನೆಗಳ ಬುಡದಲ್ಲಿ ಇರುವ ಸ್ಥಳದಲ್ಲಿ ಬಿಡಿಸತಕ್ಕದ್ದು.

(೪) ಆದಷ್ಟು ತೀವ್ರ ಮತ್ತು ಸರಿಯಾಗಿ ಲೆಕ್ಕಗಳನ್ನು ಬಿಡಿಸಿರಿ. ಒಂದೇ ಲೆಕ್ಕವನ್ನು ಬಿಡಿಸುವದರಲ್ಲಿ ಹೆಚ್ಚು ವೇಳೆಯನ್ನು ಕಳೆಯಬೇಡಿರಿ.

——— ೦ ———

(ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. (೧)
೪೩೦೫
+ ೫೦೫೭
+ ೭೪೪
+ ೩೮
.....

(೨)
೭೦೪೬
– ೪೩೦೫
.....

(೩) ೧೯೫+೧೧೦+೩೪+೧೮+೩=..... (೪) ೩೨೧೪–೨೭೮೯=.....

(೫) ಆರು ಲಕ್ಷ ಎಂಟು ಸಾವಿರದ ಮೂರು ಈ ಸಂಖ್ಯೆಯನ್ನು ಅಂಕೆಗಳಲ್ಲಿ ಬರೆಯಿರಿ. .....,

ಕೆಳಗಿನ ಲೆಕ್ಕಗಳಲ್ಲಿ ತೆರವಿದ್ದ ಸ್ಥಳದಲ್ಲಿ ಯೋಗ್ಯ ಸಂಖ್ಯೆಗಳನ್ನು ಬರೆಯಿರಿ–

(೬)
  ೭೦೪
+ ೩೬೩
+ ....

೧೨೫೫

(೭)
  ....
+ ೫೭೪
+ ೫೨

೭೫೨

(೮)
  ೧೦೨೦
  .....

೬೦೪

ಗು. ೧೬

೨. (೧)
  ೩೪೦೪
× ೧೯

.....

(೨) ೫೪೫೦÷೧೫=.....

ಕೆಳಗಿನ ಲೆಕ್ಕಗಳಲ್ಲಿ ತೆರವಿದ್ದ ಸ್ಥಳಗಳಲ್ಲಿ ಯೋಗ್ಯ ಸಂಖ್ಯೆಗಳನ್ನು ಬರೆಯಿರಿ:—

(೩) .... ಕ್ಕೆ ೧೨ ರಿಂದ ಗುಣಿಸಿದರೆ ೭೫೩೬ ಬರುವದು.

(೪) ೬೦೪ ರಲ್ಲಿ .... ಸಲ ೯ ನ್ನು ಕಳೆದರೆ .... ಬಾಕಿ ಉಳಿಯುವದು.

(೫) ೧೪, ೨೫, ೩೨, ೩೯ ಇದೇ ಕ್ರಮದಿಂದ ೪೧ ರ ವರೆಗೆ ಬರೆಯಿರಿ.

(೬) ೪೩೨ ರ ಅವಿಭಾಜ್ಯ ಅವಯವಗಳು ಯಾವವು? ..... ಗು. ೧೨

೩. (೧)

ರೂ.	ಆ.	ಪೈ.
೧೬	೭	೪
+ ೪	೩	೪
+ ೨	೧	೩
.....		

(೨)

ರೂ.	ಆ.	ಪೈ.
೨೪	೨	೩
– ೧೪	೨	೬
.....		

(೩)

ಯಾ.	ಘೂ.	ಇಂ.
೪	೨	೯
+ ೩	೧	೭
+ ೨	೦	೪
.....		

(೪)

ರೂ.	ಆ.	ಪೈ
೬	೯	೩
		× ೩
.....		

(೫) ೧೯೪೩ನೇ ಇಸವಿ ಏಪ್ರಿಲ್ ೧೯ನೇ ತಾರೀಖು ಯಾವ ವಾರವಾಗುವದು ?.....

(೬) ಶಂಕರ ಮತ್ತು ಶಿವು ಇವರು ೧೦೦ ಯಾರ್ಡು ಉದ್ದವಾದ ಒಂದು ಓಣಿಯಲ್ಲಿ ಇರುತ್ತಿದ್ದರು. ಆ ಓಣಿಯ ಒಂದು ತುದಿಯಿಂದ ೧೫ನೆ ಯಾರ್ಡು ದೂರದಲ್ಲಿ ಶಿವುನ ಮನೆಯಿತ್ತು. ಶಂಕರನ ಮನೆಯು ಆ ಓಣಿಯ ಎರಡನೆಯ ತುದಿಯಿಂದ ೧೫ನೆ ಯಾರ್ಡು ಅಂತರದಲ್ಲಿ ಇತ್ತು. ಆದರೆ ಶಿವುನ ಮನೆಯು ಶಂಕರನ ಮನೆಯಿಂದ ಎಷ್ಟು ದೂರದಲ್ಲಿ ಇರುವದು ? ..... ಗು. ೧೨

೪. (೧) ೪೬೫೫ × ೨೭೪ = ... (೨) ೬೬೨೫ ÷ ೫೫ = ...

(೩) ೨೧ ರೂ. ೪ ಆ. ಗಳನ್ನು ೧೫ ಹುಡುಗರಲ್ಲಿ ಸರಿಯಾಗಿ ಹಂಚಿದರೆ ಪ್ರತಿಯೊಬ್ಬನಿಗೆ ಎಷ್ಟು ಹಣ ಬರುವದು ? .....

(೪) ೭*೩೨ ಈ ಸಂಖ್ಯೆಗೆ ೯ರಿಂದ ಸಂಪೂರ್ಣವಾಗಿ ಭಾಗ ಹೋಗುವದು. ಆದರೆ ಈ ಸಂಖ್ಯೆಯ ಶತಂ ಸ್ಥಾನದಲ್ಲಿ ಯಾವ ಅಂಕೆಯಿರಬೇಕು ? ..... ಗು. ೧೨

೫. (೧) $\frac{೧}{೭} + \frac{೧}{೫}$ = ... (೨) $\frac{೨}{೩} - \frac{೧}{೫}$ = ... (೩) $\frac{೫}{೬} \times \frac{೨}{೩೫}$ = ...

(೪) ೧೫ ÷ $\frac{೫}{೭}$ = ... (೫) $\frac{೨}{೩} + \frac{೧}{೭} + \frac{೪}{೭} + \frac{೧}{೭}$ = ...

(೬) $\frac{೫}{೬} \times \frac{೪}{೫} \div \frac{೫}{೧೪}$ = ... (೭) $\frac{೨೫}{೩೫} = \frac{\text{.....}}{೧೫} = \frac{\text{....}}{೩}$

(೮) ೪$\frac{೨}{೩}$ − ೨$\frac{೧}{೩}$ − ೧$\frac{೧}{೩}$ = ... ಗು. ೧೨

೬. (೧) ೭ ಸೇರು ಮೆಣಸಿನ ಕಾಯಿಗೆ ೧ ರೂ. ೮ ಆ. ೬ ಪೈ. ಆದರೆ ೧೨ ಸೇರು ಮೆಣಸಿನಕಾಯಿಯ ಬೆಲೆ ಎಷ್ಟು ? .....

(೨) ರಂಗನು ತನ್ನ ಹತ್ತಿರಿದ್ದ ಹಣದ ನಾಲ್ಕನೆಯ ಭಾಗವನ್ನು ಖರ್ಚು ಮಾಡಿದನು. ಆ ಮೇಲೆ ೬ ಆಣೆ ೬ ಪೈಗೆ ಒಂದು ಗೊಂಬೆಯನ್ನು ಕೊಂಡನು. ಕಡೆಗೆ ಅವನ ಹತ್ತಿರ ೪ ಆ. ೯ ಪೈ. ಉಳಿದವು. ಆದರೆ ಅವನಲ್ಲಿದ್ದ ಹಣವೆಷ್ಟು ? .....

(೩) ಮೂರು ಸಂಖ್ಯೆಗಳ ಗುಣಾಕಾರವು ೧೨೦ ಆದೆ. ೫ನ್ನೆ ಇದು ಮೊದಲನೆಯ ಸಂಖ್ಯೆ. ೨ನ್ನೆ ಇದು ಎರಡನೆಯ ಸಂಖ್ಯೆ. ಆದರೆ ಮೂರನೆಯ ಸಂಖ್ಯೆಯು ಯಾವದು ? .....

(೪) ೩ ಆ. ೯ ಪೈ.ಗೆ ಒಂದರಂತೆ ೨೪ ಟೊಪ್ಪಿಗೆಗಳ ಬೆಲೆ ಎಷ್ಟು ? ಇದೆ ದರದ ೨೩ ಟೊಪ್ಪಿಗೆಗಳ ಬೆಲೆ ಎಷ್ಟು ? ..... ಗು. ೧೨

೭. ಕೆಳಗಿನ ಸಾಮಾನುಗಳ ಕ್ರಯದ ಪಟ್ಟಿಯನ್ನು ಸಿದ್ಧಗೊಳಿಸಿರಿ:—
ಒಂದು ಸೇರಿಗೆ ೬ ಆಣೆಯಂತೆ ೭½ ಸೇರು ಬೆಣ್ಣೆ.
ಒಂದು ಸೇರಿಗೆ ೭ ದುಡ್ಡಿನಂತೆ ೯ ಸೇರು ಬಟಾಟೆ.
ಒಂದು ಡಝನಿಗೆ ೫ ಆ. ೬ ಪೈಯಂತೆ ೨ ಡಝನ ಕಡ್ಡಿಪೆಟ್ಟಿಗೆ.
ಒಂದು ಡಬ್ಬಿಗೆ ೪ ರೂ. ೧೫ ಆ ಯಂತೆ ಅರ್ಧ ಡಬ್ಬಿ ಚಿಮಣಿ ಎಣ್ಣೆ.
ಗು. ೧೨

೮. ಎರಡು ಬುಟ್ಟಿಗಳಲ್ಲಿ ಪೇರಲ ಹಣ್ಣುಗಳು ಅವೆ. ಮೊದಲನೆಯ ಬುಟ್ಟಿಯಲ್ಲಿದ್ದ ಹಣ್ಣುಗಳ ೧½ ಪಟ್ಟು ಹಣ್ಣುಗಳು ಎರಡನೆಯ ಬುಟ್ಟಿಯಲ್ಲಿರುತ್ತವೆ. ಪ್ರತಿ ನಾಲ್ಕು ಹಣ್ಣಿನ ನರಾಸರಿ ಬೆಲೆ ೫ ಪೈ ಆದರೆ ಎರಡನೆ ಬುಟ್ಟಿಯೊಳಗಿನ ಹಣ್ಣಿನ ಬೆಲೆ ೧೨ ಆಣೆ ೬ ಪೈ ಆಗುತ್ತದೆ. ಆದರೆ ಎರಡೂ ಬುಟ್ಟಿಗಳಲ್ಲಿದ್ದ ಒಟ್ಟು ಪೇರಲ ಹಣ್ಣುಗಳು ಎಷ್ಟು ? ಗು. ೧೨

ಸಾಮಾನ್ಯಜ್ಞಾನ–ಕಾಗದ ೧ (ಇತಿಹಾಸ ಮತ್ತು ರಾಜಕೀಯ ಭೂಗೋಲ)

ತಾ. ೧೧–೨–೧೯೪೩ ವೇಳೆ : ೧–೩೦ ರಿಂದ ೨–೧೫ ರ ವರೆಗೆ.

ಸೂಚನೆ

(೧) ಪ್ರಶ್ನೆಗಳ ಎದುರಿಗೆ ಇಲ್ಲವೆ ನಡುವೆ ಬಿಟ್ಟಿರುವ ಸ್ಥಳಗಳಲ್ಲಿ ಉತ್ತರಗಳನ್ನು ಬರೆಯಿರಿ.
(೨) ಉತ್ತರಗಳನ್ನು ಆದಷ್ಟು ತೀವ್ರ ಬರೆಯಿರಿ.
(೩) ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣ ಗುಣಗಳು.

ಭಾಗ ೧ (ಐತಿಹಾಸಿಕ)

೧. ಕೆಳಗೆ ಕೊಟ್ಟ ಐತಿಹಾಸಿಕ ವ್ಯಕ್ತಿಗಳಲ್ಲಿ ಒಬ್ಬೊಬ್ಬರ ಬಗ್ಗೆ ಒಂದೊಂದು ಅತಿ ಮಹತ್ವದ ಸಂಗತಿಯನ್ನು ಒಂದೊಂದೇ ವಾಕ್ಯದಲ್ಲಿ ಹೇಳಿರಿ:—
(೧) ಕೃಷ್ಣದೇವರಾಯ. (೨) ಸತ್ಯಾಶ್ರಯ ಪುಲಿಕೇಶಿ.
(೩) ಶಿವಾಜಿ. (೪) ಅಶೋಕ. (೫) ಚಾಂದಬೀಬಿ.
ಗು. ೫

೨. ತೆರವಿದ್ದ ಸ್ಥಳಗಳಲ್ಲಿ ತಕ್ಕ ಪದಗಳನ್ನು ಸೇರಿಸಿ ಈ ಕೆಳಗಿನ ವಾಕ್ಯಗಳನ್ನು ಪೂರ್ಣ ಮಾಡಿರಿ :—
(೮) .....ನ ಆಳಿಕೆಯಲ್ಲಿ.....ದಲ್ಲಿ ಮುತ್ತುರತ್ನಗಳನ್ನು ಬಯಲಂಗಡಿಗಳಲ್ಲಿ ಇಟ್ಟು ವ್ಯಾಪಾರ ಮಾಡುತ್ತಿದ್ದರು.

(ಅ) ಗೋಲಗುಮ್ಮಟವನ್ನು.....ನು ಕಟ್ಟಿಸಿದನು.

(ಇ) ಮಯೂರವರ್ಮನು.....ಯಲ್ಲಿ .....ರ ರಾಜ್ಯವನ್ನು ಸ್ಥಾಪಿಸಿದನು.

(ಈ) .....ಬೌದ್ಧಧರ್ಮದ ಮೂಲಭೂತ ತತ್ತ್ವವು.

(ಉ) .....ಹೊಯ್ಸಳರ ರಾಜಧಾನಿಯಾಗಿತ್ತು. ಗು. ೧೦

೩. ಕೆಳಗೆ ಕೊಟ್ಟ ವಾಕ್ಯಗಳಲ್ಲಿ ಕೆಲವು ಸರಿಯಿವೆ; ಕೆಲವು ತಪ್ಪಿವೆ. ಸರಿಯಾದ ವಾಕ್ಯದ ಮುಂದೆ 'ಸರಿ' ಎಂದೂ ತಪ್ಪಿದ್ದರ ಮುಂದೆ 'ತಪ್ಪು' ಎಂದೂ ಬರೆಯಿರಿ:—

(ಅ) ವಿಜಯನಗರದ ಸಾಮ್ರಾಜ್ಯದಲ್ಲಿ ಎಲ್ಲ ಧರ್ಮಮತಗಳಿಗೂ ಸರಿಯಾದ ಉತ್ತೇಜನವು ದೊರೆಯಿತು.....

(ಬ) ಚಾಲುಕ್ಯರು ರಾಜ್ಯವಾಳುತ್ತಿದ್ದಾಗ ಪೋರ್ತುಗೀಸರು ಹಿಂದುಸ್ಥಾನಕ್ಕೆ ಬಂದರು.....

(ಕ) ಮಲಿಕ ಕಾಫೂರನು ಹೊಯ್ಸಳ ಸಾಮ್ರಾಜ್ಯವನ್ನು ಗೆದ್ದು ಕೊಂಡನು....

(ಡ) ಮಹಮ್ಮದಗವಾನನ ಕೊಲೆಯಿಂದ ಬಾಮನೀ ರಾಜ್ಯದ ಅವನತಿಗೆ ಕಾರಣವಾಯಿತು.....

(ಇ) ಹುಯೆನ್‌ತ್ಸಾಂಗನು ವಿಜಯನಗರವನ್ನು ಬಹು ಸರಸವಾಗಿ ವರ್ಣಿಸಿದ್ದಾನೆ..... ಗು. ೫

೪. ಈ ಕೆಳಗಿನ ಐತಿಹಾಸಿಕ ಘಟನೆಗಳನ್ನು ಬಲಕ್ಕೆ ಇರುವ ಕಾಲರೇಷೆಯಲ್ಲಿ ಕ್ರಮದಿಂದ ಗುರುತಿಸಿ ಬರೆಯಿರಿ:— ಗು. ೫

ಇ. ಸ. ೧೯೪೦.

(೧) ನಾನಾಘಡನವೀಸನ ಮರಣ .... =

(೨) ಶಾಲಿವಾಹನ ಶಕಾರಂಭ .... =

(೩) ಎಡ್ವರ್ಡ ಬಾದಷಹರ ಪಟ್ಟಾಭಿಷೇಕ .... =

(೪) ರಕ್ಕಸ ತಂಗಡಗಿಯ ಕಾಳೆಗ .... =

(೫) ರಾಜಾರಾಮನ ಮರಣ .... =

ಕ್ರಿ. ಶ. ಆರಂಭ.

ಭಾಗ ೨ (ಭೌಗೋಲಿಕ)

೧. ಮುಂದೆ ಕೊಟ್ಟ ಬಾಹ್ಯರೇಷೆಯ ನಕಾಶೆಯಲ್ಲಿ ಕೆಳಗೆ ಕೊಟ್ಟವುಗಳನ್ನು ಗುರುತಿಸಿರಿ:— ಗು. ೧೦

(ಅ) ಹತ್ತಿಯು ವಿಪುಲವಾಗಿ ಬೆಳೆಯುವ ಪ್ರದೇಶ (+ + + +) ಇಂಥ ಗುರ್ತುಗಳಿಂದ.

(ಬ) ನೀಲಗಿರಿ ಮತ್ತು ಹಾಲಾ ಸುಲೈಮಾನ ಪರ್ವತಗಳು ಹಾಗು ಗೋದಾವರೀ ಗಂಗಾನದಿಗಳು.

(ಕ) ಎರಡು ಒಳ್ಳೆಯ ಗಿರಿನಿವಾಸಗಳು ಮತ್ತು ಈ ಕೆಳಗಿನ ಪಟ್ಟಣಗಳು:— ಶ್ರೀನಗರ, ಕಾರವಾರ, ಅಲಹಾಬಾದ, ಹೈದರಾಬಾದ (ಡೆಕ್ಕನ) ಮತ್ತು ಹುಬ್ಬಳ್ಳಿ.

(ಅ) ಹಿಂದುಸ್ತಾನದಲ್ಲಿ ಹೆಚ್ಚಾಗಿ ಕಾಲುವೆಗಳನ್ನು ಕಟ್ಟಿರುವ ಎರಡು ನದಿಗಳನ್ನು ಹೇಳಿರಿ :—

(೧) ..... (೨) .....

(ಬ) ಹಿಂದುಸ್ತಾನದಲ್ಲಿ ಕಾಫಿಯನ್ನು ಹೆಚ್ಚಾಗಿ ಬೆಳೆಯುವ ಪ್ರದೇಶ ಮತ್ತು ಬಂಗಾರವು ಹೆಚ್ಚು ಪ್ರಮಾಣದಿಂದ ಸಿಗುವ ಪ್ರದೇಶ ಇವನ್ನು ಹೇಳಿರಿ :—

(೧) ..... (೨) .....

(ಕ) ಸೈನ್ಯದ ಠಾಣೆಯಿರುವ ಮತ್ತು ಬಗೆಬಗೆಯ ತೊಗಲಿನ ಸಾಮಾನುಗಳು ತಯಾರಾಗುವ ಎರಡು ದೊಡ್ಡ ಪಟ್ಟಣಗಳನ್ನು ಹೇಳಿರಿ:—

(೧) ..... (೨) .....

(ಡ) ಜೂಟ ನಾರಿನ ಗಿರಣಿಗಳು ಮತ್ತು ಸಕ್ಕರೆಯ ಖಾನೆ ಇವು ಹೆಚ್ಚಾಗಿ ಇರುವ ಎರಡು ದೊಡ್ಡ ಪಟ್ಟಣಗಳನ್ನು ಹೇಳಿರಿ :—

(೧) ..... (೨) ..... ಗು. ೮

೩. (ಅ) ಕೆಳಗಿನ ವಾಕ್ಯಗಳನ್ನು ಯೋಗ್ಯ ಶಬ್ದಗಳಿಂದ ಪೂರ್ಣಮಾಡಿರಿ :— ಗು. ೭

ಮುಂಬಯಿ ಇಲಾಖೆಯಲ್ಲಿ.....ಎಂಬ ಭಾಷಾನುಗುಣವಾದ ಪ್ರಾಂತಗಳಿವೆ. ಅವುಗಳಲ್ಲಿ.....ಪ್ರಾಂತವು ಎಲ್ಲಕ್ಕೂ ದೊಡ್ಡದು; ಅದರಲ್ಲಿ.....ಎಂಬ ಜಿಲ್ಲೆಗಳಿರುವವು; ಮತ್ತು.....ಪ್ರಾಂತವು ಎಲ್ಲಕ್ಕೂ ಚಿಕ್ಕದು.

(ಬ) ಈ ಕೆಳಗಿನ ಪಟ್ಟಣಗಳ ಬಗ್ಗೆ ಒಂದೊಂದು ಅತಿ ಮಹತ್ವದ ಸಂಗತಿಯನ್ನು ಬರೆಯಿರಿ :—

ಪುಣೆ. ನಾಸಿಕ. ವಿಜಾಪುರ.

ಸಾಮಾನ್ಯ ಜ್ಞಾನ–೨ನೆಯ ಕಾಗದ (ಭೂಗೋಲ ಮತ್ತು ಶಾಸ್ತ್ರೀಯ ವಿಷಯಗಳು)

ವೇಳೆ : ೩ರಿಂದ ೩-೪೫ರ ವರೆಗೆ. ತಾ. ೧೧–೨–೧೯೪೩

ಸೂಚನೆ

೧. ತೆರವು ಬಿಟ್ಟ ಸ್ಥಳಗಳಲ್ಲಿಯೇ ಉತ್ತರ ಬರೆಯಿರಿ.
೨. ಅದಷ್ಟು ತೀವ್ರ ಉತ್ತರ ಬರೆಯಿರಿ.
೩. ನಿಮಗೆ ಯಾವುದೊಂದು ಪ್ರಶ್ನೆಯ ಉತ್ತರವು ಗೊತ್ತಿಲ್ಲದಿದ್ದರೆ ಹೊತ್ತು ಕಳೆಯದೆ ಮುಂದಿನ ಪ್ರಶ್ನೆಗೆ ಸಾಗಿರಿ.
೪. ಒಂದೊಂದು ಪ್ರಶ್ನೆಗೆ ಒಂದೊಂದು ಗುಣವು.

೧. ಮುಂಬಯಿ ಇಲಾಖೆಯ ಯಾವ ಭಾಗಗಳಲ್ಲಿ ಗೋದಿಯು ಹೆಚ್ಚಾಗಿ ಬೆಳೆಯುವದು? .....

೨. ನಿಮ್ಮಲ್ಲಿ ಯಾವ ಯಾವ ತಿಂಗಳುಗಳಲ್ಲಿ ಸೂರ್ಯನು ನೆತ್ತಿಯ ಮೇಲೆ ಬರುವನು? .....

೩. ಬತ್ತದ ಬೆಳೆಗೆ ಯಾವ ಸಂಗತಿಗಳು ಅವಶ್ಯವಾಗಿಬೇಕು? .....

೪. ಗುಜರಾಥದ ಬನಿಯಾ ಜನರು ವ್ಯಾಪಾರದಲ್ಲಿ ಮುಂದುವರಿದಿದ್ದಾರೆ. ಯಾಕೆ? .....

೫. ಮುಂಬಯಿ ಇಲಾಖೆಯಲ್ಲಿ ಹುಟ್ಟಿ ಬಂಗಾಲದ ಉಪಸಾಗರಕ್ಕೆ ಕೂಡುವ ಎರಡು ದೊಡ್ಡ ನದಿಗಳನ್ನು ಹೇಳಿರಿ.
(೧) .....; (೨) .....

೬. ಬಂಗಾಲದ ಉಪಸಾಗರಕ್ಕೆ ಕೂಡುವ ನದಿಗಳು ಹೆಚ್ಚು ಉದ್ದವಾಗಿರುವವು. ಯಾಕೆ? .....

೭. ಜೆಮುಶೇದಪುರದಲ್ಲಿ ಬಹುದೊಡ್ಡ ಕಬ್ಬಿಣದ ಕಾರಖಾನೆಯಿದೆ. ಯಾಕೆ?

೮. ಮುಂಬಯಿಯಿಂದ ದಿಲ್ಲಿಗೆ ಹೋಗುವಾಗ ಹತ್ತುವ ಮುಖ್ಯ ಜಂಕ್ಶನುಗಳನ್ನೂ ರೈಲುದಾರಿಯ ಹೆಸರನ್ನೂ ಹೇಳಿರಿ. .....

೯. ಬೈಲುಸೀಮೆಯಲ್ಲಿ ಸರಾಸರಿ ಮಳೆಯ ಮಾನವು ಕಡಿಮೆಯಿದ್ದರೂ ಕಾಲಕ್ಕೆ ಸರಿಯಾಗಿ ಮಳೆಯಾದರೆ ಹೆಚ್ಚು ಬೆಳೆ ಬರುವದು. ಯಾಕೆ?....

೧೦. ಕಾರವಾರದ ಕಡೆಗೆ ಜನರು ಯಾವ ಎಣ್ಣೆಯನ್ನು ಆಹಾರಕ್ಕೆ ಉಪಯೋಗಿಸುವರು? ಯಾಕೆ? .....

೧೧. ಯಾವ ಇಂಗ್ಲಿಷು ತಿಂಗಳುಗಳನ್ನು ನಾವು ಚಳಿಗಾಲವೆಂದು ಎಣಿಸುತ್ತೇವೆ? .....

೧೨. ಯಾವ ಹಿಂದೂ ಮಾಸಗಳಲ್ಲಿ ನಮ್ಮಲ್ಲಿ ಹೆಚ್ಚು ಮಳೆಯಾಗುವದು?....

೧೩. ಸಹ್ಯಾದ್ರಿಯೊಳಗಿನ ಎಲ್ಲಕ್ಕೂ ಹೆಚ್ಚು ಎತ್ತರವಾದ ಶಿಖರವು ಯಾವದು?

೧೪. ಕಾರವಾರಕ್ಕಿಂತಲೂ ಸೊಲ್ಲಾಪುರವು ಉಷ್ಣವಾಗಿರುವದು ಯಾಕೆ?....

೧೫. ಹುಬ್ಬಳ್ಳಿಯಿಂದ ಮುಂಬಯಿಗೆ ರೈಲುದಾರಿಯಿಂದ ಪ್ರವಾಸಮಾಡುವ ದಕ್ಕೆ ಸುಮಾರು ಎಷ್ಟು ತಾಸು ಹಿಡಿಯುವದು? .....

೧೬. ಮುಂಬಯಿಯಿಂದ ಮದ್ರಾಸವು (೬೯೪ ಮೈ., ೭೯೪ ಮೈ., ೮೯೪ ಮೈ.) ಮೈಲು ದೂರವಿರುವದು. ಸರಿಯಾದ ಸಂಖ್ಯೆಯನ್ನಷ್ಟೇ ಉಳಿಸಿ ಮಿಕ್ಕವುಗಳನ್ನು ಕಾಟುಹಾಕಿರಿ.

೧೭. ಮುಂಬಯಿಯಿಂದ ಬರುವ ಸಾಮಾನುಗಳು ಕಾರವಾರದಲ್ಲಿ ಧಾರವಾಡಕ್ಕಿಂತಲೂ ಅಗ್ಗವಾಗಿ ದೊರೆಯುತ್ತಿದ್ದವು. ಈಗ ಅವು ಹೆಚ್ಚು ತುಟ್ಟಿಯಾಗಿವೆ ಯಾಕೆ? .....

೧೮. ನಮ್ಮ ಕರ್ನಾಟಕಕ್ಕೆ ಸಕ್ಕರೆಯು ಹೆಚ್ಚಾಗಿ ಎಲ್ಲಿಂದ ಬರುವದು? ..

೧೯. ಹಳ್ಳಿಯ ಜನರು ಯಾವ ಗ್ರಹವನ್ನು ನೋಡಿ ಬೆಳಗಿನ ಜಾವದಲ್ಲಿ ವೇಳೆಯನ್ನು ತಿಳಿದು ಕೊಳ್ಳುವರು? .....

೨೦. ಸೂರ್ಯಗ್ರಹಣವು ಯಾವ ತಿಥಿಯ ದಿವಸ ಆಗುವದು? .....

೨೧. ಕಾರವಾರದಲ್ಲಿ ಕುದುರೆಗಳು ಅಪರೂಪ. ಯಾಕೆ? .....

೨೨. ಮದ್ರಾಸ ಕಡೆಯ ಜನರು ಹೆಚ್ಚು ಕಪ್ಪಾಗಿ ಕಾಣುವರು. ಯಾಕೆ? ....

೨೩. ನಿಮ್ಮ ತಾಲೂಕಿನ ಸರಾಸರಿ ಮಳೆಯ ಮಾನವು ಎಷ್ಟು? (ತಾಲೂಕಿನ ಹೆಸರನ್ನೂ ಬರೆಯಿರಿ.) .....

೨೪. ಕತ್ತಲೆಯ ರಾತ್ರಿಯಲ್ಲಿ ನಾವು ದಿಕ್ಕನ್ನು ಹೇಗೆ ತಿಳಿದುಕೊಳ್ಳಬಹುದು?

೨೫. ಹಿಂದುಸ್ತಾನದಲ್ಲಿ ಅತಿದಟ್ಟವಾದ ಜನವಸತಿಯುಳ್ಳ ಪ್ರದೇಶವು ಯಾವದು?

೨೬. ಗುಲಾಬಿಯು ಎಲೆಗಳ ವರ್ಗಕ್ಕೆ ಸೇರುವ ಇನ್ನೆರಡು ಎಲೆಗಳನ್ನು ಹೇಳಿರಿ.

೨೭. ಕತ್ತಲೆಯಲ್ಲಿ ಬೀಟೆಯಾಡುವದಕ್ಕೆ ಬೆಕ್ಕಿಗೆ ಯಾವ ಹೆಚ್ಚಿನ ಅನುಕೂಲತೆಯಿರುವದು? .....

೨೮. ಒಂಟೆಯ ಗೋಣು ಉದ್ದವಾಗಿರುವ ಕಾರಣವೇನು? .....

೨೯. ಮಳೆಗಾಲದ ಆರಂಭದಲ್ಲಿ ಕಪ್ಪೆಗಳು ಹೆಚ್ಚಾಗಿ ಕಾಣಬರುವವು. ಮಿಕ್ಕ ಕಾಲಗಳಲ್ಲಿ ಅವು ಎಲ್ಲಿರುವವು? .....

೩೦. ತತ್ತಿಯನ್ನಿಟ್ಟು ತಾನೇ ಮರಿ ಮಾಡದಿರುವ ಹಕ್ಕಿಯು ಯಾವದು? ....

೩೧. ಎತ್ತಿನ ಕೊಳಗಗಳು ಸೀಳಿರುವದರಿಂದ ಯಾವ ಪ್ರಯೋಜನವಾಗುವದು?

೩೨. ಕಾದಾಡಿಸುವದಕ್ಕೆ ಜನರು ಟಗರು ಅಥವಾ ಹುಂಜುಗಳನ್ನೇ ಯಾಕೆ ಆರಿಸುವರು? .....

೩೩. ನೀರ್ನೋಳಿಯು ನೀರಿನಲ್ಲಿ ಈಸುತ್ತಿದ್ದರೂ ಅದರ ತುಪ್ಪಳವು ಯಾಕೆ ತೋಯುವದಿಲ್ಲ ? .....

೩೪. ನಾವು ತಿನ್ನುವ ಗಜ್ಜರಿಯು ಆ ವನಸ್ಪತಿಯ ಯಾವ ಭಾಗವು ? .....

೩೫. ಮುಳ್ಳುಗಳಿರುವ ಮೂರು ಹಣ್ಣಿನ ಗಿಡಗಳನ್ನು ಹೇಳಿರಿ. .....

೩೬. ಟೊಂಗೆಗಳನ್ನು ಕೊಯ್ದು ನೆಲದಲ್ಲಿ ಊರಿ ಬೆಳೆಯಿಸುವ ಮೂರು ಗಿಡಗಳನ್ನು ಹೇಳಿರಿ. .....

೩೭. ಹತ್ತಿಯ ಗಿಡಕ್ಕೆ ಅರಳಿಯಿಂದ ಯಾವ ಪ್ರಯೋಜನವಾಗುವದು ? ....

೩೮. ಸ್ತ್ರೀ ಕೇಶರ ಪುಂಕೇಶರಗಳೆರಡೂ ಒಂದರಲ್ಲಿಯೇ ಇರುವ ಎರಡು ಹೂಗಳನ್ನು ಹೇಳಿರಿ. .....

೩೯. ನಾಯಿಯ ಯಾವ ಗುಣಕ್ಕಾಗಿ ಜನರು ಅದನ್ನು ಸಾಕುವರು ? .....

೪೦. ಒಕ್ಕಲಿಗರಿಗೆ ಗೆದ್ದಲಿಯಿಂದ ಪ್ರಯೋಜನವಾಗುವದಂತೆ. ಹೇಗೆ ?.....

೪೧. ಕೆಲವು ಗಿಡಗಳಿಗೆ ಅಂದವಾದ ಬಣ್ಣದ ಹೂಗಳಿರುವವು. ಯಾಕೆ ? ....

೪೨. ಶರಾವತೀ ನದಿಯು ಕರ್ನಾಟಕಕ್ಕೆ ಹೆಚ್ಚು ಪರಿಚಿತವಾಗುವಂಥ ಯಾವ ಕೆಲಸವು ಈಚೆಗೆ ನಡೆದಿರುವದು ? .....

೪೩. ನಮ್ಮಲ್ಲಿ ಒಕ್ಕಲುತನದ ಹೋರೆಗಳಿಗೆ ಸಂಬಂಧಿಸುವ ಎರಡು ಹಬ್ಬಗಳ ಹೆಸರು ಹೇಳಿರಿ. .....

೪೪. ಚಳಿಗಾಲದಲ್ಲಿಯೇ ಹೆಚ್ಚಾಗಿ ಬೆಳೆಯುವ ಎರಡು ಹಣ್ಣುಗಳ ಹೆಸರು ಹೇಳಿರಿ. .....

೪೫. ಹದ್ದು, ಗಿಳಿ, ಕಾಗೆ, ಗಿಡಗ, ಈ ನಾಲ್ಕು ಪಕ್ಷಿಗಳಲ್ಲಿ ಮೂರು ಒಂದು ವರ್ಗಕ್ಕೂ ಇನ್ನೊಂದು ಬೇರೆ ವರ್ಗಕ್ಕೂ ಸೇರಿರುವವು. ಇವುಗಳಲ್ಲಿ ಒಂದೇ ವರ್ಗಕ್ಕೆ ಸೇರುವ ಮೂರು ಪಕ್ಷಿಗಳು ಯಾವವು ? .....

೪೬. ಕರ್ನಾಟಕದ ಜನರು ಚಿಮಣಿ ಎಣ್ಣೆಯ ಬದಲು ಯಾವ ಎಣ್ಣೆಗಳನ್ನು ಸುಲಭವಾಗಿ ಉಪಯೋಗಿಸಿಕೊಳ್ಳಬಹುದು ? .....

೪೭. ಮದ್ದುಗುಣಿಕೆ, ಗುಲ್ಮೊಹರ, ಸಂಪಿಗೆ, ಜೇರೆ ಈ ನಾಲ್ಕು ಹೂಗಳಲ್ಲಿ ಮೂರು ಒಂದು ಗುಂಪಿಗೂ ಇನ್ನೊಂದು ಬೇರೆ ಗುಂಪಿಗೂ ಸೇರುವವು. ಆ ಬೇರೆ ಗುಂಪಿಗೆ ಸೇರುವ ಹೂ ಯಾವದು ? .....

೪೮. ಆಕಳು ಕತ್ತೆಯಂತೆ ತನ್ನ ವಿರೋಧಿಯನ್ನು ಕಡಿಯಲಾರದು. ಯಾಕೆ ?

೪೯. ಚಿಗರಿಯು ತೀವ್ರವಾಗಿ ಓಡಬಲ್ಲದು. ಯಾಕೆ ? .....

೫೦. ಸೂಲದ ಹಲ್ಲುಗಳಿರುವ ಮೂರು ಪ್ರಾಣಿಗಳನ್ನು ಹೇಳಿರಿ. .....

ಕನ್ನಡ ಬುಕ್-ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

(೧೯೪೨ ರ ಆಗಸ್ಟ ತಿಂಗಳ ಸಂಚಿಕೆಯಿಂದ ಮುಂದೆಸಾಗಿದ್ದು)

ಟಿಪ್ಪಣಿ:—ಪ್ರಾ. ಪ್ರಾಥಮಿಕ; ಮೂ. ಮಾಧ್ಯಮಿಕ; ಟ್ರೇ. ಟ್ರೇನಿಂಗ್; ಶಿ. ಶಿಕ್ಷಕ; ವಿ. ವಿದ್ಯಾರ್ಥಿ; ವಾ. ವಾಚನಾಲಯ; ಶಾ. ಶಾಲೆ.

ಸಂ.	ಪುಸ್ತಕಗಳ ಹೆಸರು.	ಪ್ರಕಾಶಕರು.	ಬೆಲೆ.	ಏತಕ್ಕಾಗಿ ಮಂಜೂರಾಗಿವೆ?
೩೫	ಹಿತೋಪದೇಶ ೧ನೆ. ಆ. ೧೯೪೧	ಚೆನ್ನಕವಿ ಬಾಜಂಪುರ	೦–೨–೦	ಪ್ರಾ. ಮೂ. ವಿ. ವಾ.
೩೬	ವಿಶ್ವಾಮಿತ್ರನ ಸಾಹಸ ೧ನೆ.ಆ. ೧೯೪೨	ಎನ್. ಎಸ್. ಸಿಂಪಿ ಶಿಕ್ಷಕರು ಇಂಡಿ	೦–೨–೦	ಪ್ರಾ. ವಿ. ವಾ.
೩೭	ನಿಬಂಧ ರಚನಾ ಕೌಶಲ್ಯ ೧ನೆ. ಆ. ೧೯೪೨	ಭಾರತೀಯ ಸಾಹಿತ್ಯ ಪ್ರಕಟನಾಲಯ ಧಾರವಾಡ	೦–೨–೦	ಪ್ರಾ. ಶಿ. ವಾ.
೩೮	ಪ್ರಥಮ ಚಿಕಿತ್ಸೆ ೧ನೆ. ಆ. ೧೯೪೨	ಎಮ್. ಆರ್. ಮಲ್ಯ ಶಿಕ್ಷಕರು ಜೀ. ಏ. ಹಾಯಸ್ಕೂಲ ಬೆಳಗಾವಿ	೦–೩–೦	ಪ್ರಾ.ಮೂ. ಟ್ರೇ.ವಿ.ಶಿ.ವಾ.
೩೯	ಸಮಾಜ ವಿಜ್ಞಾನ ೧ನೆ. ಆ. ೧೯೪೨	ಸದರ (ಮಾರುವದಕ್ಕಿಂತ ಮೊದಲು ಎಷ್ಟನೆಯ ಆವೃತ್ತಿ ಎಂಬುದನ್ನು ಮುದ್ರಿಸಬೇಕು)	೦–೭–೦	ಪ್ರಾ. ಶಾ. ಪಠ್ಯಪುಸ್ತಕ
೪೦	ಸಮಾಜ ವಿಕಾಸಕ್ರಮ ೧ನೆ. ಆ. ೧೯೪೨	ಬಿ. ಜಿ. ಅವಧಾನಿ, ಮಿಂಚಿನಬಳ್ಳಿ ಧಾರವಾಡ	೧–೪–೦	ಪ್ರಾ.ವಿ.ವಾ. ಪ್ರಾ.ಮೂ.ಟ್ರೇ.ಶಿ.ವಾ.

೪೧	ಶಕ್ತಿ ಇನ್ನೆ. ಬ. ೧೯೪೨	ಸದರ	೧–೪–೦ ಪ್ರೌ. ಇ. ಪಾ.
೪೨	ಸುನೀತಾವಿಜ್ಞಾನ ಭೂಮಿಕೆ ಇನ್ನೆ. ಬ. ೧೯೪೨	ಸದರ	ಪ್ರಾ. ಪೂ. ಪ್ರೌ.ಪ. ಪಾ. ಸದರ ೧–೪–೦
೪೩	ಹೊಸಪದ್ಯ ತಿರುಳು ಅರ್ಥಪದ ಪದಾರ್ಥವಿವರ ಇನ್ನೆ. ಬ. ೧೯೪೨	ಉರ್. ಎಸ್. ಸಜ್ಜನ; ತಿಪ್ಪಹರಿ ಜೋಶಿ ಪೆಟ್ಟಿ ವಿಜಾಪುರ	೦–೩–೦ ಪ್ರಾ. ಇ. ಪಾ.
೪೪	ಅಂಕಗಣಿತ ಇನೆಯ ಪುಸ್ತಕಕ್ಕೆ ಇನ್ನೆ. ಬ. ೧೯೪೨ ಸೂಚನೆ– ಉಪ್ಪಿಗೆ, ಪುಸ್ತಕವಷ್ಟೆ, ಬಿಡಿ ಹಾಳೆಗಳನ್ನು ಮಾರಬೇಕು.	ಎ. ಟಿ. ಅಯ್ಯರ್. ಬುಕ್‌ಡಿಪೊ ಬೆಂಗಳೂರ ಸಿಟಿ	೦–೮–೦ ಪ್ರಾ. ಪೂ. ಪ್ರೌ.ಪ. ಪಾ. ಪ್ರೌ. ಪೂ. ಪ್ರೌ.ಪ. ಪಾ.
೪೫	(೧) ಸಿಂಪಲು ಸುಬಟು ಎಲ್ಲಾ (೨) ಸುಲಾಸು ಯುನಸ್ಟ್ ಇನ್ನೆ. ಬ (೩) ಪ್ರನಿಮೆಂಟ್ ಇನ್ನೆ. ಬ (೪) ಪ್ರಜ್ಞೆ ರಾಜ್ಞೋಪಿ	ಎ. ಟಿ. ಅಯ್ಯರ್. ಬುಕ್‌ಡಿಪೊ ಬೆಂಗಳೂರ ಸಿಟಿ	ಪ್ರತಿ ಯೊಂದಕ್ಕೆ ೦–೧–೦ ಪ್ರಾ. ಇ. ಪಾ.
೪೬	ಸಾಲ್ಮನೆರು ಪಠ್ಯಪುಸ್ತಕಗಳು ಎಲ್ಲಾ ಇನ್ನೆ. ಬ. ೧೯೪೨	ಎಸ್. ಎಸ್ಸೂ. ಪಾಟೀಲ; ಕಟ್ಟಿಗಲ್ಲಿ ಬೆಳಗಾವಿ	೦–೪–೬ ಪ್ರಾ. ಇ. ಪಾ.
೪೭	ಬೆಳಕಿನ ಕಿಟ್ಟಿ ಇನ್ನೆ. ಬ. ೧೯೪೨	ಸೋಳಾಂಡ ಸುಲಾಖಿ, ಹುಬ್ಬಳಾಡ ಪೇಟೆ ಧಾರವಾಡ	೦–೧೨–೦ ಪ್ರಾ. ಪೂ. ಪ್ರೌ.ಪ. ಪಾ.
೪೮	ಪೆಟಾ ಇನ್ನೆ. ಬ. ೧೯೪೨	ಸದರ	೦–೧೦–೦ ಸದರ
೪೯	ಪೆಗುರು ಇನ್ನೆ. ಬ. ೧೯೪೨	ಅಖಿಲ ಸಾಂಪತ್ಯಮಾಲೆ, ಧಾರವಾಡ	೦–೧೪–೦ ಸದರ

ನಂ.	ಪುಸ್ತಕಗಳ ಹೆಸರು.	ಪ್ರಕಾಶಕರು	ಬೆಲೆ	ಏತಕ್ಕಾಗಿ ಮುಂಜೂರಾಗಿವೆ?
೫೦	ಉತ್ತರ ನಳಚರಿತ ೧ನೆ. ಆ. ೧೯೪೨	ಸಿ. ಬಿ. ಕೋಡಿಕೊಪ್ಪಮಠ; ವಿಜಾಪುರ	೦–೧೨–೦	ಸದರ
೫೧	ಪ್ರಾಚೀನ ಜಗತ್ತು ಅಥವಾ ಹಿಂದು-ಸ್ತಾನದ ಇತಿಹಾಸದ ಪಾರ್ಶ್ವ ಭೂಮಿ ೧ನೆ. ಆ. ೧೯೪೨	ಕರ್ನಾಟಕ ಬುಕ್ ಡಿಪೋ, ಬೆಳಗಾವಿ	೦–೮–೦	ಪ್ರಾ. ವಿ. ವಾ.
೫೨	ಸೊಗಸಿನ ಓದು ಐದನೆಯ ಪುಸ್ತಕ	ಪ್ರೌಪ್ರಾಯ್ಟರ ಸ್ಟೂಡಂಟ್ಸ ಓನ್ ಬುಕ್ ಡಿಪೋ, ಧಾರವಾಡ	೦–೧೦–೦	ಪ್ರಾ. ಮಾ. ಪಠ್ಯಪುಸ್ತಕ
೫೩	ಸೊಗಸಿನ ಓದು ಆರನೆಯ ಪುಸ್ತಕ ೧ನೆ. ಆ. ೧೯೪೨	ಸದರ (ಸೂ– ಆರನೆಯ ಪಾಠ ತೆಗೆದುಹಾಕಬೇಕು.)	೦–೧೩–೦	ಸದರ
೫೪	ಸೊಗಸಿನ ಓದು ಏಳನೆಯ ಪುಸ್ತಕ ೧ನೆ. ಆ. ೧೯೪೨	ಸದರ (ಸೂ– ಒಬ್ಬ ಸದಸ್ಯರು ಮಾಡಿದ ಸೂಚನೆಯನ್ನೂ ಇದರೊಂದಿಗೆ ಹೊಂದಿಸಬೇಕು.)	೦–೧೪–೦	ಸದರ
೫೫	ಅಕ್ಕಾಜಿ ೧ನೆ. ಆ. ೧೯೪೨	ಮನೋಹರ ಗ್ರಂಥ ಭಾಂಡಾರ, ಧಾರವಾಡ	೦–೧೦–೦	ಪ್ರಾ.ಮಾ. ಟ್ರೇ. ವಿ. ವಾ.
೫೬	ನಾಲ್ಕನೆಯ ತರಗತಿಯ ಕಥೆಗಳು ೧ನೆ. ಆ. ೧೯೪೨	ರಾಮಾಶ್ರಯ ಬುಕ್ ಡಿಪೋ, ಧಾರವಾಡ ಸೂಚನೆ– ಕಮೀಟಿಯವರು ಸೂಚಿಸಿದಂತೆ ವಿಶದಪಡಿಸಬೇಕು.	೦– ೩–೦	ಪ್ರಾ.ಮಾ. ಟ್ರೇ. ವಿ. ವಾ.
೫೭	ಅಂಕಗಣಿತ ೨ನೆಯ ಇಯತ್ತೆಗೆ ೧ನೆ. ಆ. ೧೯೪೨ ಸೂಚನೆ– ಆವೃತ್ತಿ, ಪ್ರಕಟಿಸಿದ ಬೆಲೆ ಇವುಗಳನ್ನು ಮುದ್ರಿಸಿ ಮಾ	ಪಿ. ಟಿ. ಆಯ್. ಬುಕ್ ಡಿಪೋ, ಬೆಂಗಳೂರ	೦– ೮–೦	ಮಾ. ಶಾ. ಪಠ್ಯಪುಸ್ತಕ

ಪತ್ರಗಳ ಮುಖ್ಯಾಂಶಗಳು

ಧನಸಹಾಯ

ಹಡಗಿನಾಳ (ಗೋಕಾಕ ತಾಲೂಕು) ಪೋಲೀಸಪಾಟೀಲರು ಶಾಲಾ ವಿದ್ಯಾರ್ಥಿಗಳ ನಾಟಕವನ್ನು ಕಂಡು ಆನಂದದಿಂದ ೫ ರೂ. ಪಾರಿತೋಷಕವಾಗಿ ಕೊಟ್ಟರು. —ಶ್ರೀ. ಎಸ್. ಯು. ಪಾಟೀಲ

ಕೊಲ್ಹಾರ (ವಿಜಾಪುರ ಜಿಲ್ಹೆ) ಊರ ಹಿರಿಯರು ಜಾಗಟೆ, ಬಾಕು, ಕನ್ನಡಿ ಮೊದಲಾದ ೪೦ ರೂ. ಬೆಲೆಯುಳ್ಳ ವಸ್ತುಗಳನ್ನು ಶಾಲೆಗೆ ಕಾಣಿಕೆಯಾಗಿ ಕೊಟ್ಟರು. — ಹೆ. ನೂ. ಕೊಲ್ಹಾರ

ಮೇಲಧಿಕಾರಿಗಳ ಪ್ರೋತ್ಸಾಹನೆ

ನಾಗಂಠೊಳ (ಕಾರವಾರ ಜಿಲ್ಲೆ) ಆ. ಡೆ. ಅವರಾದ ಶ್ರೀ. ಅಂಕಲೇಕರರು ಊರ ಜನರಿಗೆ, ಶಾಲೆಯ ಕೆಲಸದಲ್ಲಿ ಹೆಚ್ಚಾಗಿ ಸಹಕಾರವನ್ನೀಯಲು ಉಪದೇಶಿಸಿದರು. ಮಾಯಾದೀಪದ ಸಹಾಯದಿಂದ ಚೀನದ ಸಂಗತಿಗಳನ್ನು ತಿಳಿಸಿದರು. —ಶ್ರೀ. ವಿ. ಮು. ಗಾವಕರ

ಕುಡುಪಲಿ (ಹಿರಿಯಕೆರೂರು ತಾಲೂಕು) ಆ. ಡೆ. ಅವರಾದ ಶ್ರೀ. ಬಿದರಿ ಅವರು ಊರ ಹಿರಿಯರಿಗೆ ವಿದ್ಯೆಯ ಮಹತ್ವವನ್ನು ತಿಳಿಸಿದರು.
—ಶ್ರೀ. ಮುರಿಗೆಪ್ಪ ಗೌಡರು

ಹುಲ್ಲೂರು (ರೋಣ ತಾಲೂಕು) ಆ. ಡೆ. ಅವರಾದ ಶ್ರೀ. ಜಗತಿ ಅವರು ಶಿಕ್ಷಣ ಪ್ರಸಾರದ ಸಂಗತಿಗಳನ್ನು ಊರವರಿಗೆ ತಿಳಿಸಿ, ತರುಣ ಸಂಘದವರು ಕೊಡಬಯಸಿದ ಬೆಳ್ಳಿಯ ಪದಕವನ್ನು ಶ್ರೀ. ತರಫದಾರ ಮಾಸ್ತರರಿಗೆ ಕೊಟ್ಟರು. —ಶ್ರೀ. ಚಿ. ದ. ಜೋಶಿ

ರಡ್ಡೇರ ನಾಗನೂರು (ನವಿಲಗುಂದ ತಾಲೂಕು) ಆ. ಡೆ. ಅವರಾದ ಶ್ರೀ. ಕೋರಬು ಅವರ ಹಿರಿಯತನದಲ್ಲಿ ಶಾಲಾ ಬಾಲಕರು, '**ವಸಂತಸೇನೆ**' ನಾಟಕವನ್ನು ಅಭಿನಯಿಸಿದರು. — ಶ್ರೀ. ಎನ್. ಜಿ. ಪಾಟೀಲ

ಶೈಕ್ಷಣಿಕ ಪ್ರವಾಸ

ಖೆವುಲಾಪುರ (ಬೆಳಗಾವಿ ಜಿಲ್ಹೆ) ಇಲ್ಲಿಯ ಶಿಕ್ಷಕರು ೧೫ ವಿದ್ಯಾರ್ಥಿಗಳೊಂದಿಗೆ ಉಗಾರದ ಸಕ್ಕರೆಯ ಕಾರ್ಖಾನೆಯನ್ನು ನೋಡಿ ಬಂದರು.
—ಶ್ರೀ. ಅನ್ನಪ್ಪ ಪಾಟೀಲ

ಶಾರೀರಿಕ ಚಟುವಟಿಕೆಗಳು

ಶಿರಸಿ ೩೧-೧೧-೧೯೩೩ ನೆಯ ದಿವಸ ಇಲ್ಲಿಯ ಶಿ. ಶಿ. ರು ಸ್ಕೌಟ ಸಂಸ್ಥೆಯ ಹುಟ್ಟು ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿದರು.

—ಶ್ರೀ. ಎಮ್. ಸಿ. ಹೇಮಶೆಟ್ಟಿ

ನಾಗಾವಿ (ಗದಗತಾಲೂಕು) ೬-೨-೩೩ ನೆಯ ದಿವಸ ಈ ಊರಲ್ಲಿ ೨೭ ಶಾಲೆಗಳ ಶಿಕ್ಷಕರೂ ವಿದ್ಯಾರ್ಥಿಗಳೂ ಕೂಡಿ ಪಂದ್ಯಾಟಗಳಲ್ಲಿ ಭಾಗ ವಹಿಸಿದರು ಊರ ಹಿರಿಯರು ಅನ್ನದಾನ ಮಾಡಿದರು. —ಹೆ. ಮಾ. ನಾಗಾವಿ

ಹಾವೇರಿ ಅ. ಡೆ. ಅವರಾದ ಶ್ರೀ. ಪಕಾಲೆ ಅವರ ನೇತೃತ್ವದಲ್ಲಿ ಕರಜಗಿ ತಾಲೂಕಿನ ೫೦ ಶಾಲೆಗಳ ವಿದ್ಯಾರ್ಥಿಗಳ ಪಂದ್ಯಾಟವು ನಡೆಯಿತು. ವಿಜಯಿಗಳಾದವರಿಗೆ ಬೆಳ್ಳಿಯ ಬೆಟ್ಟಲ, ಪದಕ, ಕಪ್ಪು ಕೊಡಲಾಯಿತು.

—ಶ್ರೀ. ರಾ. ದೇ. ಕುಲಕರ್ಣಿ

ಸಮ್ಮೇಲನಗಳು

ಕರೂರು (ರಾಣೆಬೆನ್ನೂರು ತಾಲೂಕು) ಕೇಂದ್ರ. ಶಿ. ಶಿ. ಸಮ್ಮೇಲನವು ಅ. ಡೆ. ಅವರಾದ ಶ್ರೀ. ಬೂದಿಹಾಳ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ. ತಿಮಲಾಪುರ ಇವರು ನೂರಾರು ಶಿಕ್ಷಕರ ಊಟದ ವ್ಯವಸ್ಥೆ ಮಾಡಿದ್ದರು.

—ಶ್ರೀ. ಚ. ಸಿ. ನವಾತಿ. ಚಳಗೇರಿ

ಗೋವನಕೊಪ್ಪ (ಬಾದಾಮಿ ತಾಲೂಕು) ೧೪-೨-೩೩ ನೆಯ ದಿವಸ ಪ್ರೋ. ಮಾಳವಾಡ ಅವರ ಹಿರಿಯತನದಲ್ಲಿ ಶಿ. ಶಿ. ರ ಸಮ್ಮೇಲನವು ನಡೆಯಿತು.

—ಹೆ. ಮಾ. ಗೋವನಕೊಪ್ಪ

ಚಡಚಣ (ವಿಜಾಪುರಜಿಲ್ಲೆ) ಡೆ. ಎ. ಇ. ಅವರಾದ ಶ್ರೀ. ಗುಂಜೀಕರರ ಹಿರಿಯತನದಲ್ಲಿ ಶಿ. ಸ. ನಡೆಯಿತು. ಪಂದ್ಯಾಟಗಳಲ್ಲಿ ಜಾಣ್ಮೆಯನ್ನು ತೋರಿಸಿದವರಿಗೆ ೮ ಬೆಳ್ಳಿಯ ಪದಕಗಳ ಮೆಚ್ಚುಗೆಯನ್ನು ಕೊಡಲಾಯಿತು. ಇಲ್ಲಿಯ ಸಂಗಮೇಶ್ವರ ಸಂಸ್ಥೆಯವರು ೧೦ ರೂ. ಗಳನ್ನು ಕೊಟ್ಟರು.

—ಶ್ರೀ. ಜೀವರಾಜ ದೋಶಿ

ಬಾಗೇವಾಡಿ— (ವಿಜಾಪುರ ಜಿಲ್ಲೆ) ತಾಲೂಕಿನೊಳಗಿನ ಪ್ರೌಢ ಶಿಕ್ಷಣ ವರ್ಗದ ಶಿಕ್ಷಕರ ಸಮ್ಮೇಲನವು ಅ. ಡೆ. ಅವರಾದ ಶ್ರೀ. ಪಾಟೀಲ ಅವರ ನೇತೃತ್ವದಲ್ಲಿ ಜರುಗಿತು. —ಶ್ರೀ. ಗು. ಚ. ಬ್ಯಾಕೋಡ

ಹಾವೇರಿ— ೩-೧-೩೩ನೆಯ ದಿವಸ ಅ. ಡೆ. ಅವರಾದ ಶ್ರೀ. ಪಕಾಲೆ ಅವರ ಹಿರಿಯತನದಲ್ಲಿ ಶಿ. ಶಿ. ಸ. ನಡೆಯಿತು. —ಶ್ರೀ. ರಾ. ದೇ. ಕುಲಕರ್ಣಿ

ಗಲಗಲಿ— (ವಿಜಾಪುರ ಜಿಲ್ಲೆ) ೩೦-೧-೪೩ನೆಯ ದಿವಸ ಆ. ಡೆ. ಎ. ಇ. ಅವರಾದ ಶ್ರೀ. ಕಾಳಪ್ಪನವರ ಹಿರಿಯತನದಲ್ಲಿ ಶಿ. ಶಿ. ಸ. ನೆರೆಯಿತು. ಪಾಠ, ಚರ್ಚೆ ಕಾವ್ಯ ಗಾಯನಗಳು ನಡೆದವು. —ಶ್ರೀ. ವಿ. ಬಾ. ಕುಲಕರ್ಣಿ

ಬ್ಯಾಡಗಿ— ೨೫-೧-೪೩ನೆಯ ದಿವಸ ಶಿ. ಶಿ. ಸ. ವು. ದ. ಭಾ. ದ ಆ. ಎ. ಇ. ಅವರಾದ ಶ್ರೀಮತಿ ಜಮಖಂಡಿ ಅವರ ಹಿರಿಯತನದಲ್ಲಿ ಸಾಂಗವಾಯಿತು.

—ಹೆ. ಮಾ ಬ್ಯಾಡಗಿ

ಸತ್ಕಾರಗಳು

ಧಾರವಾಡ— ಮ್ಯು. ಶಿ. ಶಿ. ರು ಶ್ರೀ. ಹಾರನಹಳ್ಳಿ ಅನಂತರಾಯರಿಗೆ ೨೮-೧-೪೩ನೆಯ ದಿವಸ ತಾಂಬೂಲಸಮಾರಂಭ ಮಾಡಿ ಅವರ ಆಸ್ಥೆ, ಶಾಂತತೆ ಗಳನ್ನು ಬಣ್ಣಿಸಿದರು. —ಶ್ರೀ. ನಾ. ಲ. ಧಾರವಾಡ

ಕುಡಚಿ— (ಬೆಳಗಾವಿ ತಾಲೂಕಿ) ಮೆ. ನಾಡಕರ್ಣಿ ಅವರಿಗೆ ಕಾರವಾರಕ್ಕೆ ವರ್ಗವಾದ ನಿಮಿತ್ತ ಈ ಊರ ಶಿಕ್ಷಕರು ತಾಂಬೂಲಸಮಾರಂಭ ವನ್ನು ಮಾಡಿದರು. —ಶ್ರೀ. ಎಸ್. ಜಿ. ಶಿವಪೂಜಿಮಠ

ಸಭೆಗಳು

ಶಿರಸಿ— ೧೭-೧-೪೩ನೆಯ ದಿವಸ ದ. ಭಾ. ದ ಎ. ಇ. ಅವರಾದ ಡಾ. ಕಾಮತ ಅವರು ವಿದ್ಯಾರ್ಥಿಗಳ ಶಾರೀರಿಕ ಚಟುವಟಿಕೆಗಳನ್ನು ಕಂಡು ಸಂತೋಷ ವ್ಯಕ್ತಮಾಡಿದರು. ನಗರಸಭೆಯ ಮುಂದಾಳುಗಳು ಕ್ರೀಡಾಂಗಣದ ಏರ್ಪಾಡುಮಾಡಿಕೊಡಲು ಆಶ್ವಾಸನವಿತ್ತರು. ಸಾಹೇಬರು ಬುದ್ಧಿಮಾಪನ ಎಂಬ ವಿಷಯದಲ್ಲಿ ರಸಭರಿತವಾದ ಭಾಷಣವನ್ನೂ ಪ್ರಯೋಗವನ್ನೂ ಮಾಡಿ ತೋರಿಸಿದರು. ಇದರಿಂದ ನಾಗರಿಕರಲ್ಲಿಯೂ ಕಲಿಸುವವರಲ್ಲಿಯೂ ನವಚೈತನ್ಯವುಂಟಾಯಿತು.

—ಶ್ರೀ. ಡಿ. ವ್ಹಿ. ಸೋಂದೆ. ಡಿ. ಸ್ಕೂ. ಬೋ. ಮೆಂ ಕಾರವಾರ

ಸಂಕೀರ್ಣ ಸಮಾಚಾರಗಳು

ನವಿಲಗುಂದದಲ್ಲಿ ಶ್ರೀ. ದೇಶಪಾಂಡೆ ಹನುಮಂತರಾಯರ ೬೦ನೆಯ ಹುಟ್ಟು ಹಬ್ಬವನ್ನು ಸಡಗರದಿಂದ ನಡೆಯಿಸಲಾಯಿತು. ಕನ್ನಡ ನಾಡು ನುಡಿ. ಗಳಿಗಾಗಿ ಇವರೂ ಇವರ ತಂದೆಯವರೂ ಸಾವಿರಾರು ರೂಪಾಯಿಗಳನ್ನು ದಾನವಾಗಿ ಕೊಟ್ಟಿದ್ದಾರೆ. —ಹೆ. ಮಾ. ನವಿಲಗುಂದ

ಬಾಗಲಕೋಟೆಯ ಬಸವೇಶ್ವರ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ತೋರಿಸಿದ ವಿವಿಧ ಚಟುವಟಿಕೆಗಳನ್ನು ಮೆ. ಡಾ. ಕಾಮತ ಅವರು ಕಂಡು ಪ್ರಶಂಸೆ ಮಾಡಿದರು. —ಶ್ರೀ. ರಂ. ಹ. ಎಂಕಂಚಿ

ಬೆಳಗಲಿ ಶಾಲೆಯ ಮಾತುಗಾರಿಕೆಯ ಕೂಟದಲ್ಲಿ, ವ್ಯಾಯಾಮ,ದ ಚರ್ಚೆಯಾಯಿತು. —ಶ್ರೀ ಕೆ. ಜಿ. ಭದ್ರಶಟ್ಟಿ

ಸದಾಶಿವಗಡದಲ್ಲಿ ನಿವೃತ್ತರಾಗುತ್ತಲಿರುವ ಶ್ರೀ. ತಿ. ಕೊ. ನಾಯಿಕ ರನ್ನು ಬೀಳ್ಕೊಡಲಾಯಿತು. — ಹೆ. ಮೂ. ಸದಾಶಿವಗಡ

ನೇಸರಗಿ ಯಿಂದ ಶ್ರೀ. ಶಿ. ಬ. ಪಾಟೀಲರಿಗೆ ವರ್ಗವಾದಾಗ ಡಾ. ಘಟನಟ್ಟಿ ಅವರ ಅಧ್ಯಕ್ಷತೆಯಲ್ಲಿ ಸಮಾರಂಭವಾಯಿತು.

—ಶ್ರೀ. ವೀ. ಆ. ಜೋಬಾರಿ

ಕೊಡಗಾನೂರು ಶಾಲಾ ವಾಚನಾಲವು ಚೆನ್ನಾಗಿದೆಯೆಂದು ಡಾ. ಗೋಕರ್ಣರ ಅಭಿಪ್ರಾಯವಿದೆ. —ಸೆಕ್ರೆಟರಿ

ಪುಸ್ತಕಪರಿಚಯ

ನಂದಾದೀಪ

ಕವಿ:— ಶ್ರೀ. ಗಣೇಶ ರಾವು ಯಾಜಿ- ಮುಲೆನಾಡು ಮುದ್ರಣಾಲಯದ ಒಡೆಯರು ಚಿಕ್ಕಮಗಳೂರು. ಕ್ರಾ. ಆಕಾರದ ೬೪ ಪುಟಗಳು. ಬೆಲೆ : ೦–೧೨–೦

ಇದೊಂದು ಚಿಕ್ಕ ಕವನಗಳ ಸಂಗ್ರಹ ಪುಸ್ತಕ– ಶ್ರೀ. ಯಾಜಿಯವರು ತಾವು ಕಾಲಕಾಲಕ್ಕೆ ರಚಿಸಿ ಸಂಗ್ರಹಿಸಿದುದು. ಹೊಸಬಗೆಯ ಭಾವಗಳುಳ್ಳ ಕವನಗಳು ಹೊಸ ಬಗೆಯ ಛಂದಸ್ಸಿನಲ್ಲಿ ರಚಿತವಾಗಿ ಹೊಸ ವಿದ್ಯಾರ್ಥಿಗಳ ಪಾಠಕ್ಕೆ ತಕ್ಕವಾಗಿರುವಂತೆಯೇ ಓದಿ ಆನಂದಬಡುವ ರಸಿಕರಿಗೆ ಮನೋ ರಂಜಕವೂ ಆಗಿದೆ.

ಪ್ರಕೃತದ ಮಹಾಯುದ್ಧದ ತುಟ್ಟಾಗ್ರತೆಯ ಕಾಲದಲ್ಲಿ ಪುಸ್ತಕಗಳನ್ನು ಬರೆದು ಪ್ರಕಟಿಸುವದೇ ತುಂಬ ಕಠಿಣಕಾರ್ಯವಾಗಿರುವಾಗ ಕವಿತೆಗಳ ಸಂಗ್ರಹವನ್ನು ಪ್ರಕಟಿಸುವದು ಎಷ್ಟು ಸಾಹಸದ ಕಾರ್ಯವೆಂದು ಹೇಳಬೇಕಾ ಗಿಲ್ಲ. ಕೇವಲ ಕನ್ನಡನುಡಿಯ ಅಭಿಮಾನಿಗಳೇ ಇಂಥ ಕೆಲಸಕ್ಕೆ ಕೈಹಾಕ ಬಹುದಾದ ಕಷ್ಟಕಾಲವಿದು. ಕನ್ನಡದ ಅಭಿಮಾನಿಗಳೆಲ್ಲರೂ ಈ ಚಿಕ್ಕ ಖಂಡ ಕಾವ್ಯವನ್ನು ಆದರಿಸಿ ಕವಿಗಳಾದ ಪ್ರಕಾಶಕರನ್ನು ಪ್ರೋತ್ಸಾಹಿಸಲಿ.

N. V. K.

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ

ಹಳ್ಳಿಯ ಹೋರೆಗಳು

ನಮ್ಮ ದೇಶದಲ್ಲಿ ಒಕ್ಕಲುತನವೇ ಹಳ್ಳಿಗಳ ಮುಖ್ಯ ಉದ್ಯೋಗವಾಗಿರುವದು. ಪೂರ್ವಕಾಲದಿಂದಲೂ ನಡೆದು ಬಂದ ಒಂದು ದಾರಿಯನ್ನು ಅನುಸರಿಸಿ ಆ ಉದ್ಯೋಗವು ನಡೆದಿರುವದು. ಕಾಲಮಾನಕ್ಕೆ ತಕ್ಕಂತೆ ಅದರಲ್ಲಿ ಸುಧಾರಣೆಯಾಗಬೇಕೆಂದು ಸರಕಾರವೂ ಜನರೂ ಯತ್ನಿಸುತ್ತಿದ್ದಾರೆ. ಒಳ್ಳೆಯ ಬೀಜಗಳನ್ನು ಆರಿಸುವದು, ಬೆಳೆಗಳ ರೋಗನಿವಾರಣೆ, ಒಡ್ಡು ಒತ್ತಲಗಳು ಮುಂತಾದ ವಿಷಯಗಳಲ್ಲಿ ಸಹಾಯಸೂಚನೆಗಳನ್ನು ಕೊಡುವದಕ್ಕಾಗಿ ಸರಕಾರದವರು ಒಂದು ಖಾತೆಯನ್ನೇ ಏರ್ಪಡಿಸಿದ್ದಾರೆ. ಈ ಮುಖ್ಯ ಉದ್ಯೋಗಕ್ಕೆ ಪೋಷಕವಾಗಿ ಮತ್ತೆ ಕೆಲವು ಉದ್ಯೋಗಗಳನ್ನು ಕೈಕೊಂಡರೇನೆ ಒಕ್ಕಲಿಗರ ಜೀವನಕ್ಕೆ ಸಾಕಾದಷ್ಟು ಉತ್ಪನ್ನವು ಬಂದು ಅವರ ಹೋರೆಯು ಸುಖರೂಪವಾಗಿ ಸಾಗಬಹುದು.

೧. **ದನಗಳನ್ನು ಸಾಕುವದು**— ದನಗಳಲ್ಲಿ ಹೈನದ ದನಗಳು, ಹೊಲಮನೆಯ ದನಗಳು ಎಂದು ಎರಡು ವಿಭಾಗಗಳುಂಟು. ಹೈನದ ದನಗಳಲ್ಲಿ ಎಮ್ಮೆ ಮುಖ್ಯವಾದರೆ ಹೊಲಮನೆಯ ಕೆಲಸಗಳಿಗೆ ಎತ್ತುಗಳು ಪ್ರಾಮುಖ್ಯವಾಗಿರುವವು. ದನಗಳನ್ನು ಸಾಕುವದರಲ್ಲಿ ಒಳ್ಳೆಯ ಪೀಳಿಗೆಗಳನ್ನು ಬೆಳೆಯಿಸುವದು ಅತಿ ಮಹತ್ವದ ಮಾತು. ಪರದೇಶಗಳಲ್ಲಿ ಇಷ್ಟು ಸೇರಿಗಿಂತ ಕಡಿಮೆಹಿಂಡುವ ದನಗಳ ತಳಿಯೇ ಬೆಳೆಯದಂತೆ ನೋಡಿಕೊಳ್ಳುವರು. ಅವರು ಸಾಕಷ್ಟು ಹಿಂಡದಿರುವ ಇಲ್ಲವೆ ದುರ್ಬಲವಾಗಿರುವ ದನಗಳನ್ನು ಮಾಂಸಕ್ಕಾಗಿ ಉಪಯೋಗಿಸಲು ಕೊಂದುಬಿಡುವರು. ಹೆಡಸಿನ ಮಾನದಿಂದ ಎಮ್ಮೆಯ

ಹಾಲಿಗೂ ಆರೋಗ್ಯದ ದೃಷ್ಟಿಯಿಂದ ಆಕಳ ಹಾಲಿಗೂ ಮಹತ್ತ್ವವಿರುವದು. ಒಳ್ಳೆಯ ಹೋರಿಗಳನ್ನೂ ಕೋಣಗಳನ್ನೂ ಆರಿಸಿ ಅವುಗಳ ಸಂತತಿಯೇ ಹೆಚ್ಚುವಂತೆ ನೋಡಿಕೊಳ್ಳಬೇಕು. ನಮ್ಮ ದೇಶದಲ್ಲಿ ಗೂಳಿಗಳನ್ನು ಬಿಡುವ ರೂಢಿಯುಂಟಷ್ಟೆ? ಆದರೆ ಆ ಗೂಳಿಗಳು ಒಳ್ಳೆಯಜಾತಿಯುವೂ ತಕ್ಕ ಆರೋಗ್ಯವುಳ್ಳವೂ ಆಗಿರುವವೋ ಇಲ್ಲವೋ ಎಂಬುದನ್ನು ನೋಡಿಕೊಳ್ಳುವದು ಅವಶ್ಯವಾಗಿದೆ. ದೇವರ ಇಲ್ಲವೆ ಧರ್ಮದ ಹೆಸರಿನಿಂದ ಬಿಟ್ಟವಮಾತ್ರಕ್ಕೆ ಅವುಗಳ ಸಂತತಿಯು ಹೆಚ್ಚುತ್ತ ಹೋಗುವದು ಹಿತಕರವಾಗಲಿಕ್ಕಿಲ್ಲ. ಒಳ್ಳೆಯ ಜಾತಿಯ ಬೀಜದ ಹೋರಿಗಳನ್ನು ಪೂರೈಸುವ ಕೆಲಸದಲ್ಲಿಯೂ ಒಕ್ಕಲುತನದ ಖಾತೆಯವರು ನೆರವಾಗುವರು. ದನಗಳನ್ನು ಸಾಕುವ ರೈತರು ಇದರ ಉಪಯೋಗವನ್ನು ಮಾಡಿಕೊಂಡರೆ ಒಳಿತಾಗುವದು.

ಹೈನದ ಹಾಗು ಹೂಡುವ ದನಗಳಂತೆಯೇ ಅಡು ಕುರಿಗಳನ್ನೂ ಒಕ್ಕಲಿಗರು ಸಾಕಬಹುದು. ಹುಲ್ಲುಗಾವಲವುಳ್ಳ ಭಾಗಗಳಲ್ಲಿ ಈ ವ್ಯವಸಾಯವನ್ನು ಸ್ವತಂತ್ರವಾಗಿ ನಡೆಯಿಸುವದೂ ಉಂಟು. ಒಳ್ಳೆಯ ಜಾತಿಯ ಉಣ್ಣೆಯನ್ನು ಹೆಚ್ಚು ಪ್ರಮಾಣದಿಂದ ಕೊಡುವ ಕುರಿಗಳ ಪೀಳಿಗೆಯನ್ನು ಬೆಳೆಯಿಸುವದು ಈ ವ್ಯವಸಾಯದಲ್ಲಿ ಆಗಬೇಕಾದ ಮುಖ್ಯ ಸುಧಾರಣೆ. ಮೇಲ್ತರದ ಕುರಿಗಳ ಪೀಳಿಗೆಯನ್ನು ಬೆಳೆಯಿಸುವದಕ್ಕಾಗಿ ಬೇರೆ ಬೇರೆ ಜಾತಿಯ ಕುರಿಗಳ ಬೆರಕೆಯಿಂದ ಒಳ್ಳೆಯ ಸಂತತಿಯನ್ನು ಹುಟ್ಟಿಸುವ ಪ್ರಯೋಗಗಳನ್ನೂ ಸರಕಾರದವರು ನಡೆಯಿಸಿದ್ದಾರೆ. ಕುರುಬರೂ ಒಕ್ಕಲಿಗರೂ ಈ ಪ್ರಯೋಗಾನುಭವಗಳ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳಬೇಕು.

ಗಣಿತ ಶಿಕ್ಷಕ

೧೨ ಪುಟಗಳು **ಬೆಲೆ ೧ ರೂ.** ೫-೬-೬ನೆಯ ಇ. ಗಳಿಗಾಗಿ

೨-೩ ಕ್ಲಾಸುಗಳು ಒಬ್ಬ ಮಾಸ್ತರರ ಕಡೆಗೆ ಇರುವಂಥ ಶಾಲೆಗಳಲ್ಲಿ ಗಣಿತ ಶಿಕ್ಷಕವು ನಿಜವಾಗಿಯೇ ಗಣಿತಶಿಕ್ಷಕನಾಗಿ ಸಹಾಯಕವಾಗಿಲ್ಲವೇ ೧೦ ವರ್ಷ ಅನುಭವ ತಕ್ಕೊಂಡವರಿಗೆ ಇದರ ಬಗ್ಗೆ ಹೆಚ್ಚಿಗೆ ವರ್ಣಿಸುವದು ಬೇಡ. ಇಷ್ಟರಲ್ಲಿಯೇ ಎಲ್ಲರ ಪ್ರೀತಿಗೆ ಪಾತ್ರವಾಗಿ ಅನೇಕಸಾರೆ ಮುದ್ರಣ ಹೊಂದಿದೆ. ಈಗಿನ ತುಟ್ಟಾಗ್ರತೆಯ ಕಾಲದಲ್ಲಿ ವೆಚ್ಚ ಮಾಡಿದ ಹಣದಿಂದ ಬಹಳ ಲಾಭವಾಗಬೇಡವೇ ?

ಕೊರತೆ ಇಲ್ಲ **ಬೆಲೆ ಕಡಿಮೆ** **ವೆಚ್ಚವಿಲ್ಲದೆ ಪೂರೈಕೆ**

ಪುಸ್ತಕಗಳು ಕರ್ನಾಟಕದ ಎಲ್ಲ ಊರುಗಳ ಪುಸ್ತಕವ್ಯಾಪಾರಿಗಳಲ್ಲಿ ದೊರೆಯುತ್ತವೆ. ದೊರೆಯುವದಿಲ್ಲೆಂದು ಅನಿಸಿದರೆ ನಿಮಗೆ ಬೇಕಾಗುವಷ್ಟು ಪ್ರತಿಗಳ ಮೂಲ ಬೆಲೆಯನ್ನು ಮನಿಯಾರ್ಡರದಿಂದ ಕಳಿಸಿ ಪಾವತಿಗಳನ್ನು ಕಾಯ್ದು ಇಡಿರಿ. ಅವನ್ನು ತೆಗೆದುಕೊಂಡು ಯಾವ ವೆಚ್ಚವೂ ಇಲ್ಲದೆ ಪುಸ್ತಕ ಕೊಡುವಂತೆ ನಿಮ್ಮ ಸಮೀಪದ ಪುಸ್ತಕವ್ಯಾಪಾರಿಗಳಲ್ಲಿ ಇಲ್ಲವೆ ದೊಡ್ಡ ಸಾಲೆಗಳಲ್ಲಿ ವ್ಯವಸ್ಥೆ ಮಾಡಲಾಗುವದು. ಶಕ್ಯವಾದರೆ ನಿಮ್ಮ ಊರಿಗೇ ತಂದು ಕೊಡಬಹುದು. ಹೆಚ್ಚಿನ ವಿವರಕ್ಕೆ ಬರೆಯಿರಿ.

ಬ. ದು. ಹಿರೇಮಠ, ಮಾಸ್ತರ ವಿಜಾಪುರ.

ವಿನಂತಿ

★

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. ಈ ಮಾಸಪತ್ರಿಕೆಯು ಪ್ರತಿತಿಂಗಳ ಕೊನೆಯವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು, ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಪುಸ್ತಕ-ಸಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳಿಸಬಹುದು.

೪. ತಾವು ಪ್ರಕಟನೆಗಾಗಿ ಕಳುಹಿಸಿರುವ ಲೇಖನಗಳನ್ನು ತಿರುಗಿ ಪಡೆಯಲು ಅಪೇಕ್ಷಿಸುವವರೂ ಅದರ ಪರಿಣಾಮವನ್ನು ಕೂಡಲೆ ತಿಳಿದುಕೊಳ್ಳಲಿಚ್ಛಿಸುವವರೂ ಅದಕ್ಕಾಗಿ ತಗಲುವ ಅಂಚೆಯ ಚೀಟಿಗಳನ್ನು ತಮ್ಮ ಲೇಖನದ ಸಂಗಡ ಕಳುಹಿಸಿಕೊಡಬೇಕು.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕವಿಶಾಸನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋ ಕವಿಾಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಣ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು

1943 – 44

ಸ್ಥಾಪನೆ : ೧೮೬೫

ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯು



ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಸ್ಪರ್ಧಾ ನಿರ್ಣಯ

1943-44 45

ಶತಮಾನೋತ್ತರ ಬೆಳ್ಳಿ ಹಬ್ಬ

(ಎಪ್ರಿಲ್ ೧೯೬೮ ರಿಂದ)

ವರ್ಷ 1943

ಶ್ರೀ. ಚನ್ನಬಸಪ್ಪನವರು

ಗುಜ್ಜಿ-ಗಿದಿಗಲ್

ನಯ ಸಂಪ್ಪು

ಕನ್ನಡ ಪ್ರಾಥಮಿಕ ಶಿಕ್ಷಣ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ಕರಬೀತಿ ವಿದ್ಯಾಲಯ

ಡೆಪ್ಯೂಟಿ ಚನ್ನಬಸಪ್ಪ ಪೇಟೆ, ರೊದ್ದರಸ್ತೆ, ಧಾರವಾಡ

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕ ನ್ನ ಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ.
೧.	ನಿವೇದನೆ	೧
೨.	ಆಂಟ್ರೇಂಡ ಶಿಕ್ಷಕರ ತರಬೇತಿಯ ವರ್ಗ	೨
೩.	ದಶಕ ಪದ್ಧತಿಯೂ ಶೂನ್ಯದ ಉಪಯೋಗವೂ	೬
೪.	ಆಹಾರ ವಿಮಾಂಸೆ	೧೨
೫.	ಜಾಹೀರ ನೋಟೀಸು	೧೬
೬.	ಪ್ರಕಟನೆ	೧೬
೭.	ಗಂಡುಮಕ್ಕಳ ಟ್ರೇ. ಕಾ. ಸ. ಪ. ಪರಿಣಾಮ ೧೯೪೩	೧೮
೮.	ಹೆಣ್ಣುಮಕ್ಕಳ ಟ್ರೇ. ಕಾ. ಸ. ಪ. ಪರಿಣಾಮ ೧೯೪೩	೩೩
೯.	ಕನ್ನಡ 'ವರ್ಷಪ್ರಾಯಿಜ' ಪರೀಕ್ಷೆ ೧೯೪೪	೩೪
೧೦.	ಪತ್ರಗಳ ಮುಖ್ಯಾಂಶಗಳು	೩೬

ನಾರ್ಮಲ್ ಚಂದಾ ಹಣ ನೇರವು ರೂಪಾಯಿಗಳು ನಾಗ

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men Dharwar, at his Office. 6233-43-1425.

ಪುರೋಗಾಮಿ ಶಿಕ್ಷಕ

(ಲೇಖಕರು : ಶ್ರೀ. ಎಸ್. ಬಿ. ಗಜೇಂದ್ರಗಡ, ಬಿ.ಎ., ಬಿ.ಟಿ., ವಿಜಾಪುರ)

ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಇರುವ ದೈನಂದಿನ ಅಭ್ಯಾಸ ಪಲ್ಲಿ—ಕಲಿಸುವ ಕಾರ್ಯದಲ್ಲಿ ಅತ್ಯಂತ ಉಪಯುಕ್ತವಾಗುವಂತೆ, ವಿದ್ಯಾಖಾತೆಯ ಅಭ್ಯಾಸ ಪತ್ರಿಕೆಯನ್ನು ಸಂಪೂರ್ಣವಾಗಿ ಅನುಸರಿಸಿ ಬರೆಯಲ್ಪಟ್ಟಿದೆ.

ಪುಟಗಳು ೩೩೬ ★ ಬೆಲೆ ೨-೪-೦

ಇದು ಮೂರು ಮುಖ್ಯ ಭಾಗಗಳನ್ನೊಳಗೊಂಡಿದೆ.

(೧) ಶೈಕ್ಷಣಿಕ ಮನಃಶಾಸ್ತ್ರವನ್ನು ೧೨೫ ಪುಟಗಳಲ್ಲಿ ವಿವೇಚಿಸಿದೆ. (೨) ಶಿಕ್ಷಣಶಾಸ್ತ್ರದ ಮೂಲತತ್ವಗಳನ್ನೂ ಪ್ರತ್ಯಕ್ಷವಾಗಿ ಕಲಿಸುವ ಶಾಸ್ತ್ರೀಯ ಪದ್ಧತಿಯನ್ನೂ ವಿವರಿಸಿದೆ. (೩) ಆಧುನಿಕ ಶಿಕ್ಷಣ ಕ್ರಮದ ಮಹತ್ವದ ಅಂಗಗಳಾದ ಶಾರೀರಿಕ ಶಿಕ್ಷಣ, ಶಿಸ್ತು, ಸಂಘಟನೆ ಮೊದಲಾದ ವಿಷಯಗಳನ್ನು ತಿಳಿಸಿದೆ.

ಶಿಕ್ಷಣದ ಸರ್ವಾಂಗಗಳನ್ನೂ ಸುಲಲಿತವಾದ ಭಾಷೆಯಲ್ಲಿ ಒತ್ತಟ್ಟಿಗೇ ಸುಂದರವಾಗಿ ಮಂಡಿಸಿದ ಶಾಸ್ತ್ರೀಯ ಗ್ರಂಥವು

ಕನ್ನಡದಲ್ಲಿ ಇದೊಂದೇ!

★

ಕನ್ನಡ-ಇಂಗ್ಲಿಷ್ ಶಾಲೆ-ಕಾಲೇಜುಗಳ ಎಲ್ಲಾ ಪಠ್ಯಪುಸ್ತಕಗಳೂ ಇತರ ಪುಸ್ತಕ, ಸ್ಕೂಲ್ ಸ್ಟೇಶನರಿ ಸಾಮಾನುಗಳೂ ನಮ್ಮಲ್ಲಿ ಸಿಕ್ಕುತ್ತವೆ.

ಸ್ಟೂಡಂಟ್ಸ್ ಓನ್ ಬುಕ್ ಡಿಪೋ, ಧಾರವಾಡ.

ವಿನಂತಿ

★

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. ಈ ತ್ರೈಮಾಸಪತ್ರಿಕೆಯು ಪ್ರತಿ ಮೂರು ತಿಂಗಳ ಕೊನೆಯ ವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು, ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳಿಸಬಹುದು.

೪. ತಾವು ಪ್ರಕಟನೆಗಾಗಿ ಕಳುಹಿಸಿರುವ ಲೇಖನಗಳನ್ನು ತಿರುಗಿ ಪಡೆಯಲು ಅಪೇಕ್ಷಿಸುವವರೂ ಅದರ ಪರಿಣಾಮವನ್ನು ಕೂಡಲೆ ತಿಳಿದುಕೊಳ್ಳಲಿಚ್ಛಿಸುವವರೂ ಅದಕ್ಕಾಗಿ ತಗಲುವ ಅಂಚೆಯ ಚೀಟಿಗಳನ್ನು ತಮ್ಮ ಲೇಖನದ ಸಂಗಡ ಕಳುಹಿಸಿಕೊಡಬೇಕು.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೨	ಏಪ್ರಿಲ್-ಮೇ-ಜೂನ್ ೧೯೪೩	ವರ್ಷ ೧೬. ಸಂ. ೧-೩

ನಿವೇದನೆ

ಪ್ರಾಥಮಿಕ ಶಿಕ್ಷಣದ ಹೊಸ ವರ್ಷದ ಆರಂಭದಲ್ಲಿ ಹಿಂದಿನ ವರ್ಷದ ಕಾರ್ಯ ಕಲಾಪಗಳ ಸಿಂಹಾವಲೋಕನದೊಂದಿಗೆ ಮುಂದಿನ ಕಾರ್ಯಗಳ ರೂಪರೇಷೆಯನ್ನು ನಿರೂಪಿಸುವುದು ಕ್ರಮಪ್ರಾಪ್ತವಾದ ವಿಷಯವಷ್ಟೆ? ಮಹಾಯುದ್ಧ ಮೂಲಕವಾದ ಅನರ್ಘತೆ ದುರ್ಮಿಲತೆಗಳೇ ಕಾರಣವಾಗಿ ಅನೇಕ ಅಡಚಣೆಗಳು ಬಂದರೂ ಕಳೆದ ವರ್ಷವು ಹೇಗೋ ಸುಸೂತ್ರವಾಗಿ ಕೊನೆಗಂಡಿತು. ಈ ವರ್ಷದಲ್ಲಿಯೂ ಹಿಂದಿನ ವರ್ಷಗಳಂತೆಯೇ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ವಿಷಯಗಳನ್ನೇ ಹೆಚ್ಚಾಗಿ ಪ್ರಕಟಿಸಬೇಕೆಂಬ ಗುರಿಯನ್ನು ಮರೆಯದೆ ಹಿಂದಣ ಹೆದ್ದಾರಿಯಲ್ಲಿಯೇ ಮುಂದುವರಿದೆವೆಂಬುದನ್ನು ನಮ್ಮ ವಾಚಕರು ಬಲ್ಲರು. ಪ್ರಕೃತದ ಮಹಾಯುದ್ಧ ವಿಷಯದ ಹಲಕೆಲವು ಮಾತುಗಳನ್ನು ಕಾಲಕಾಲಕ್ಕೆ ಪ್ರಕಟಿಸಲಾಗಿದೆ. ಸಾಕ್ಷರಿಗಳಾದ ಪ್ರಬುದ್ಧರಿಗಾಗಿ ಪ್ರತಿ ಸಂಚಿಕೆಯಲ್ಲಿಯೂ ಎರಡು ಪುಟಗಳನ್ನು ಕಾದಿಟ್ಟು ಅವರ ವಾಚನಕ್ಕೆ ತಕ್ಕುವಾದ ವಿಷಯಗಳನ್ನು ದೊಡ್ಡ ಅಕ್ಷರಗಳಲ್ಲಿ ಮುದ್ರಿಸಿ ಪ್ರಕಟಿಸಿದೆ.

ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳ ವಾಚನಕ್ಕೆ ತಕ್ಕುವೆನಿಸುವಂಥ ಇಲ್ಲವೆ ಪ್ರಾಥಮಿಕ ಶಿಕ್ಷಕರಿಂದಲೇ ರಚಿತವಾದ ಹಲಕೆಲವು ಕವನಗಳನ್ನು ಆಗಾಗ ಪ್ರಕಟಿಸಬೇಕೆಂಬ ನಮ್ಮ ಅಭಿಲಾಷೆಯು ಇನ್ನೂ ತಕ್ಕಂತೆ ಸಫಲವಾಗಿಲ್ಲ. ನಮ್ಮ ಶಿಕ್ಷಕರಿಂದ ರಚಿತವಾಗಿ ನಮ್ಮ ಕಡೆಗೆ ಬಂದ ಒಳ್ಳೆಯ ಕವನಗಳು ತೀರ ಕಡಿಮೆ; ಅವುಗಳಲ್ಲಿಯೂ ಹಲವು ಪ್ರಕಟನೆಗೆ ತಕ್ಕುವೆನಿಸಲಿಲ್ಲ. ವ್ಯಾಕರಣ ಛಂದಸ್ಸು ಇವುಗಳ ಒರೆಗೆ ನಿಲ್ಲದಿದ್ದರೂ ತಾಳ ತಾನಗಳ ಮಟ್ಟಿಗಾದರೂ ತಕ್ಕಂತಿದ್ದರೆ ನಡೆಯಬಹುದಾಗಿದ್ದಿತು. ಆಧುನಿಕ ಕವಿತೆಗಳಲ್ಲಿ ಹಲವು ತಾಳ ತಾನಗಳ ಬೇಗಡೆಯ ಬೆಡಗಿನೊಂದಿಗೆ ನಾದದ ಅಂತಸ್ಥ ರಚನೆಯಿಂದ ಆಕರ್ಷಿತವಾಗಿರುವವಷ್ಟೇ? ಚಿಕ್ಕ ಬಾಲಕರು ಓದಿ ಆನಂದಪಡಬಹುದಾದ ನಾದಪ್ರಧಾನವಾದ ಕವನಗಳಿಗೂ ಪ್ರಾ. ಶಿ. ದಲ್ಲಿ ತಕ್ಕ ಸ್ಥಾನವಿದೆಯೆಂಬುದನ್ನು ನಮ್ಮ ಶಿಕ್ಷಕ ವರ್ಗವು ಲಕ್ಷ್ಯದಲ್ಲಿಟ್ಟಿರಬೇಕು. ಹಿಂದಿನಂತೆ ಈ ವರ್ಷವೂ ಸಹಾನುಭೂತಿಯಿಂದ ನಾನಾಬಗೆಯ ಲೇಖನಗಳನ್ನು ಒದಗಿಸಿಕೊಟ್ಟ ಲೇಖಕವೃಂದಕ್ಕೆ ನಾವು ತುಂಬ ಋಣಿಯಾಗಿರುವೆವು. ಅವರಿಗೆ ತಕ್ಕಷ್ಟು ಪುರಸ್ಕಾರವನ್ನೂ ಕೊಡಲಾಗಿದೆ. ಇಷ್ಟು ಕಳೆದ ವರ್ಷದ ಮಾತು.

ಈ ವರ್ಷದ ಆರಂಭದ ಸ್ಥಿತಿಯಲ್ಲಿ ಪ್ರಾಥಮಿಕ ಶಿಕ್ಷಣವು ನಿಂತೇ ಹೋಗುವದೆಂಬ ಭಯವುಂಟಾಗಿತ್ತು. ೮೧ ವರ್ಷಗಳ ವಯೋವೃದ್ಧನು ಮಹಾಯುದ್ಧದ ಭೀಷಣ ಭೀಕರತೆಗೆ ತಲ್ಲಣಿಸಿ ಕಣ್ಮರೆಯಾಗುವ ಸಂಭವವೇ ಹೆಚ್ಚೆಂದು ನಮ್ಮೆಲ್ಲರಿಗೂ ಭಾಸವಾಯಿತು. ಮುಂಬಯಿ ಸರಕಾರವೂ ಕೂಡ ಕಾಗದದ ತುಟಾಗ್ರತೆಗೆ ಹೆದರಿ ವಿದ್ಯಾಖಾತೆಯ ಎಲ್ಲ ಪತ್ರಿಕೆಗಳನ್ನು ನಿಲ್ಲಿಸಿಬಿಡಬೇಕೆಂದು ಆಪ್ಪಣೆ ಹೊರಡಿಸಿತು. ಆದರೆ ಪ್ರಾ. ಶಿಕ್ಷಣವು ಇಂದಿನ ವರೆಗೆ ಮಾಡುತ್ತ ಬಂದಿರುವ ಸಾರ್ವಜನಿಕ ಹಿತದ ಕಾರ್ಯವನ್ನು ಪರ್ಯಾಲೋಚಿಸಿ ಅದನ್ನು ತ್ರೈಮಾಸಿಕವಾಗಿಯಾದರೂ ಪ್ರಕಟಿಸದೆ ಬಿಡಬಾರದೆಂದು ನಮ್ಮ ಇಲಾಖೆಯ ವಿದ್ಯಾಖಾತೆಯ ಡಾಯರೆಕ್ಟರ ಸಾಹೇಬರವರು ಪುನಃ ಆಪ್ಪಣೆ ಕೊಡಿಸಿದರು. ನಮ್ಮಂತೆಯೇ ಮರಾಠಿ, ಗುಜರಾಥಿ, ಉರ್ದು ಪ್ರಾ. ಶಿಕ್ಷಣ ಪತ್ರಿಕೆಗಳ ಹಾಡೂ ಆಗಿದೆ. ಈ ಉದಾರ ಧೋರಣೆಗಾಗಿ ನಮ್ಮ ಡಾಯರೆಕ್ಟರ ಸಾಹೇಬರವರ ಉಪಕಾರವನ್ನು ಸ್ಮರಿಸುವದು ನಮ್ಮ ಆದ್ಯಕರ್ತವ್ಯವು. ನಮಗೆ ಇಷ್ಟರಮಟ್ಟಿಗಾದರೂ ಕಾಗದವನ್ನು ದೊರಕಿಸಲು ನೆರವಾದ ಧಾರವಾಡದ ಕಲೆಕ್ಟರ ಸಾಹೇಬರವರ ಪ್ರತಿನಿಧಿ-ಸ್ಥಾನದಲ್ಲಿ ಕೆಲಸಮಾಡುತ್ತಿರುವ ಮೆ. ಕೊಯಿಮತ್ತೂರ ಸಾಹೇಬರವರ ಉಪಕಾರವನ್ನು ಮರೆಯುವಂತಿಲ್ಲ.

ಮಹಾಯುದ್ಧವು ಬೇಗನೆ ಕೊನೆಗಂಡು ಪ್ರಾ. ಶಿಕ್ಷಣವು ಮೊದಲಿನಂತೆ ಮಾಸಿಕವಾಗಿ ಪ್ರಕಟವಾಗಿ ತಮ್ಮೆಲ್ಲರ ಸೇವೆಗೆ ಅಣಿಯಾಗುವಂತೆ ಮಾಡೆಂದು ಭಗವಂತನನ್ನು ಪ್ರಾರ್ಥಿಸಿ ತಮ್ಮೆಲ್ಲರ ಸಹಾಯ ಸಹಾನುಭೂತಿಗಳನ್ನು ಕೋರಿ ಈ ಚಿಕ್ಕ ಲೇಖನವನ್ನು ಮುಗಿಸುವೆವು.

—ಸಂ.

ಅಂಟ್ರೇಂಡ್ ಶಿಕ್ಷಕರ ತರಬೇತಿಯ ವರ್ಗ

ಹಿಂದಿನ ವರ್ಷಗಳಲ್ಲಿ ಟ್ರೇಂಡ್ ಶಿಕ್ಷಕರ ಅಥವಾ ಪ್ರಬುದ್ಧರ ವರ್ಗಗಳನ್ನು ನಡೆಯಿಸುವ ಶಿಕ್ಷಕರಿಗೆ ಮಾರ್ಗದರ್ಶಕವಾದ ವರ್ಗಗಳು ನಡೆಯುತ್ತ ಬಂದಂತೆ, ೪೦ ವರ್ಷಕ್ಕಿಂತಲೂ ಹೆಚ್ಚು ವಯಸ್ಸಾದ ಶಿಕ್ಷಕರಿಗೆ ತಮ್ಮ ದಿನದ ಕಾರ್ಯಕಲಾಪಗಳಲ್ಲಿ ತಕ್ಕ ಸುಧಾರಣೆ ಮಾಡಿಕೊಳ್ಳಲು ಅನುಕೂಲವಾಗುವಂಥ ತರಬೇತಿಯ ವರ್ಗವೊಂದು ಈ ವರ್ಷದ ಬೇಸಗೆಯ ಬಿಡುವಿನ ಆರಂಭದಲ್ಲಿ ಟ್ರೇನಿಂಗ್ ಕಾಲೇಜದಲ್ಲಿ ನಡೆಯಿತು. ೪೦ ವರ್ಷ ವಯಸ್ಸಿನ ಒಳಗಿನ ಶಿಕ್ಷಕರೆಲ್ಲರೂ ಟ್ರೇಂಡ್‌ರಾಗಬೇಕೆಂದು ಸರಕಾರದ ಧೋರಣೆಯಿರುವದರಿಂದ ಆ ವಯಸ್ಸನ್ನು ಮಿಕ್ಕಿದವರಿಗೆ ಶೈಕ್ಷಣಿಕ ಸಂಸ್ಕಾರವನ್ನು ಕಾಣುವ ಸಂಭವವೇ ಉಳಿಯಲಿಲ್ಲ. ಆದ್ದರಿಂದ ಅಂಥವರಿಗೂ ಕೂಡ ಆಧುನಿಕ ಶಿಕ್ಷಣಕ್ರಮಕ್ಕೆ ಸಂಬಂಧಿಸುವ ಹಲಕೆಲವು ಮಾತುಗಳ ಮನವರಿಕೆಯಾಗಲೆಂಬ ಉದ್ದೇಶದಿಂದಲೇ ನಮ್ಮ ವಿದ್ಯಾಧಿಕಾರಿಗಳು ಈ ವರ್ಗವನ್ನು ನಡೆಯಿಸುವ ಕಾರ್ಯಕ್ರಮವನ್ನು ಕೈಕೊಂಡರು. ಈ ವರ್ಷ ಧಾರವಾಡ ಜಿಲ್ಲೆಯೊಳಗಿನ ೭೬ ಜನ ಶಿಕ್ಷಕರು ಈ ವರ್ಗಕ್ಕೆ ಬಂದಿದ್ದರು. ಎಪ್ರಿಲ್ ತಿಂಗಳ ೨೬ನೆಯ ತಾರೀಖಿನಿಂದ ಎರಡು ವಾರಗಳವರೆಗೆ ಈ ವರ್ಗವು ನಡೆಯಿತು.

ಪ್ರಾರಂಭದ ದಿನ ನಡೆದ ಪ್ರಾಸ್ತಾವಿಕ ಸಮಾರಂಭದಲ್ಲಿ ನಮ್ಮ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಡಾ. ಕಾಮತಸಾಹೇಬರು ಅಗ್ರಾಸನವನ್ನು ಅಲಂಕರಿಸಿದ್ದರು. ಆಗ ಅವರು ಮಾಡಿದ ಭಾಷಣದ ಮುಖ್ಯಾಂಶಗಳು ಈ ರೀತಿಯಾಗಿವೆ:—

ಮಾನ್ಯ ಅಧಿಕಾರಿಗಳೆ ಮತ್ತು ಶಿಕ್ಷಕ ಬಂಧುಗಳೆ,

ನೀವೆಲ್ಲರೂ ಇಲ್ಲಿಗೆ ಬಂದಿರುವ ಉದ್ದೇಶವು ನಿಮಗೆ ಗೊತ್ತಿದೆ. ನಿಮಗೆ ನಿಮ್ಮ ದಿನದ ವ್ಯವಸಾಯದಲ್ಲಿ ಆಗಿರುವ ಹಾಗು ಆಗಬಹುದಾದ ತೊಂದರೆಗಳನ್ನು ಮುಚ್ಚಿಟ್ಟುಕೊಳ್ಳದೆ ಅವುಗಳನ್ನು ಇಲ್ಲಿಯ ವ್ಯವಸ್ಥಾಪಕರಿಗೆ ತಿಳುಹಿಸಿದರೆ ಅವರು ತಮ್ಮ ಕೈಲಾದಮಟ್ಟಿಗೆ ಅವನ್ನು ನಿವಾರಿಸಲು ಹವಣಿಸುವರು. ನೀವೆಲ್ಲರೂ ಸೌಖ್ಯದಿಂದ ಇರಬೇಕೆಂಬದೇ ನನ್ನ ಬಯಕೆ.

ಈಗ ಇಲ್ಲಿಗೆ ಬಂದಿರುವ ಶಿಕ್ಷಕರೆಲ್ಲರೂ ೪೦ ಕ್ಕಿಂತ ಹೆಚ್ಚು ವಯಸ್ಸಿನವರು. ಅನ್‌ಟ್ರೀಂಡರಾದರೂ ಅನುಭವಿಕರಿರುವಿರಿ. ನಿಮ್ಮ ಬಗ್ಗೆ ನನಗೆ ತುಂಬ ಆದರವಿದೆ. ಇನ್ನು ಹದಿನೈದು ದಿನಗಳ ವರೆಗೆ ನಡೆಯುವ ಈ ವರ್ಗದಲ್ಲಿ ನಿಮಗೆ ಆಧುನಿಕ ಶಿಕ್ಷಣಶಾಸ್ತ್ರದೊಳಗಿನ ಹಲಕೆಲವು ಮಾತುಗಳ ಪರಿಚಯವಾಗಬಹುದು. ನಿಮ್ಮ ವರ್ಗವನ್ನು ನಡೆಯಿಸಲಿಕ್ಕೆ ಬರುವವರಲ್ಲಿ ಹಲವರು ನಿಮಗಿಂತಲೂ ಚಿಕ್ಕವರಿರಬಹುದು. ಅವರು ಶಾಸ್ತ್ರೀಯ ದೃಷ್ಟಿಯಿಂದ ಹಲವು ಸಂಗತಿಗಳನ್ನು ಹೇಳಬಹುದು. ಅವರಿಗೆ ನಿಮ್ಮಂತೆ ಅನುಭವಗಳ ಬಲವಿರಲಿಕ್ಕಿಲ್ಲ. ಅವರು ಹೇಳುವದನ್ನು ಕೇಳಿಕೊಂಡು ನಿಮ್ಮ ಅನುಭವದ ಒರೆಗಲ್ಲಿಗೆ ಹಚ್ಚಿ ನೋಡಿರಿ. ನಿಮಗೆ ಯೋಗ್ಯ ಕಂಡುದನ್ನು ಸ್ವೀಕರಿಸಿರಿ. ಸರ್ವಸಾಧಾರಣವಾಗಿ ಅವರು ಆರಂಭದಲ್ಲಿ ೩೦ ನಿಮಿಷಗಳ ವರೆಗೆ ತಾವು ಹೇಳತಕ್ಕದ್ದನ್ನು ಹೇಳಿದ ಬಳಿಕ ಉಳಿದ ೧೦ ನಿಮಿಷಗಳಲ್ಲಿ ನಿಮ್ಮೊಡನೆ ಚರ್ಚೆ ನಡೆಯಿಸುವರು. ಆಗ ನೀವು ನಿಮ್ಮ ಸಂಶಯಗಳನ್ನು ನಿವಾರಿಸಿಕೊಳ್ಳಿರಿ.

ಹಳ್ಳಿಯ ಒಕ್ಕಲಿಗನು ಬಿ. ಏಜಿ. ಆಗದಿದ್ದರೂ ಹಲವು ವರ್ಷಗಳ ಅನುಭವದ ಬಲದಿಂದ ತನ್ನ ವ್ಯವಸಾಯವನ್ನು ಸುಗಮವಾಗಿ ಸಾಗಿಸಬಲ್ಲವನಾಗಿರುವನಷ್ಟೇ? ಆತನ ಅನುಭವದ ಜೊತೆಗೆ ಶಾಸ್ತ್ರೀಯ ಜ್ಞಾನವಷ್ಟು ಬೆರೆತಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತು? ಹಾಗೆಯೆ ನಿಮ್ಮ ಅನುಭವಕ್ಕೆ ಹೊಸ ಹೊಸ ಪದ್ಧತಿಗಳ ಜ್ಞಾನದ ನೆರವು ದೊರೆದರೆ ನಿಮ್ಮ ಕಾರ್ಯವು ಸುಕರವಾಗಿ ಸಾಗಬಹುದು. ನಿಮ್ಮಲ್ಲಿ ಟೀಕಾತ್ಮಕ ಬುದ್ಧಿಯಿರಲಿ! ಪರರು ಹೇಳಿದುದನ್ನೆಲ್ಲ ಹೌದೆಂದು ಒಪ್ಪಬೇಡಿರಿ. ನಿಮ್ಮ ಮನಸ್ಸೂ ನಿಮ್ಮ ಅನುಭವಗಳೂ ಒಪ್ಪುವಂತಿದ್ದರೆ ಮಾತ್ರ ಒಪ್ಪಬೇಕು. ಇಲ್ಲಿಯ ವ್ಯಾಖ್ಯಾನಗಳನ್ನಾಗಲಿ ಚರ್ಚೆಯನ್ನಾಗಲಿ ಒಂದು ಕಿವಿಯಿಂದ ಕೇಳಿ ಇನ್ನೊಂದು ಕಿವಿಯಿಂದ ಬಿಡುವದು ಮಾತ್ರ ಎಷ್ಟೂ ಹಿತಕರವಲ್ಲ. ಮಹತ್ವದ ಭಾಗಗಳ ಟಿಪ್ಪಣಿ ಮಾಡಿಕೊಳ್ಳಿರಿ. ಇದರಿಂದ ನಿಮ್ಮ ಮನಸ್ಸು ಈ ವಿಷಯದಲ್ಲಿ ಆಸಕ್ತವಾಗುವದಲ್ಲದೆ ಚರ್ಚೆಮಾಡುವ ಕಾಲದಲ್ಲಿ ಈ ಟಿಪ್ಪಣಿಯ ಉಪಯೋಗವಾಗಬಹುದು.

ನಿಮಗೆ ವಿಷಯಗಳನ್ನು ವಿವರಿಸುವ ಅಧಿಕಾರಿಗಳು ಕೂಡ ಕೇವಲ ಶಾಸ್ತ್ರವನ್ನು ಹೇಳದಿರಲೆಂದು ನಾನು ಆಶಿಸುತ್ತೇನೆ. ಅವರು ಆದಷ್ಟು ಹೆಚ್ಚು ಉದಾಹರಣೆಗಳನ್ನು ಕೊಟ್ಟು ತಮ್ಮ ವಿಚಾರಗಳನ್ನು ವಿವರಿಸಲಿ. ಕಲಿಸುವಿಕೆಯಲ್ಲಿ ಇದೇ ಪದ್ಧತಿಯಿಂದಲೇ ಕಲಿಸಿರಿ ಎಂಬ ಒಂದೇ ಒಂದು ರಾಜಮಾರ್ಗವಿಲ್ಲ. ತಪ್ಪುತಡೆಗಳು ಇಲ್ಲದ ಯಾವ ಪದ್ಧತಿಯೂ ಇಲ್ಲ. ಎಲ್ಲ ವಿದ್ಯಾರ್ಥಿಗಳ ಮನಸ್ಸನ್ನು ಆಕರ್ಷಿಸಿಕೊಂಡು ಬಹಳ ಮಾತಾಡದೆ ಎಲ್ಲರನ್ನೂ ವಿಚಾರದಲ್ಲಿಯೂ ಕೆಲಸದಲ್ಲಿಯೂ ತೊಡಗಿಸಿ ಸಮನಾದ ಸಾಕಷ್ಟು ಉತ್ತರಗಳನ್ನು ಹೊರಡಿಸುವದೇ ಒಳ್ಳೆಯ ಪದ್ಧತಿಯೆಂದು ನಾನು ಹೇಳಬಲ್ಲೆ. ಶಿಕ್ಷಕನು ಕಲಿಸುವಾಗ ಹುಡುಗರು ತಕ್ಕಷ್ಟು ವಿಚಾರಮಾಡಬೇಕು. ಸ್ವಾಭಾವಿಕವಾಗಿಯೇ ಹುಡುಗರಲ್ಲಿ ಕುತೂಹಲಶಕ್ತಿಯು ಹೆಚ್ಚಿರುತ್ತದೆ. "ನೀವು ತಿಳಿಸಬೇಡಿರಿ; ನಾನೇ ಮಾಡುತ್ತೇನೆ." ಹೀಗೆ ಅವರು ಅನ್ನುವದುಂಟು. ಅದು ಕಾರಣ ಚಿಕ್ಕಮುಕ್ಕಳ ಮುಂದೆ ವ್ಯಾಖ್ಯಾನ ಬೇಡ. ವರ್ಗದಲ್ಲಿ ಶಿಕ್ಷಕನ ಬಾಯೊಂದೇ ಇರುವದಿಲ್ಲ. ಶಿಕ್ಷಕರು ಹೆಚ್ಚು ಮಾತಾಡಹತ್ತಿದರೆ ವಿದ್ಯಾರ್ಥಿಗಳಿಗೆ ತಕ್ಕಷ್ಟು ವಿಚಾರ

ಮಾಡಲು ಅವಕಾಶ ಉಳಿಯುವದಿಲ್ಲ. ಆದುದರಿಂದ ಶಿಕ್ಷಕರು ಮಿತಭಾಷಿಗಳಾಗಬೇಕು. ಹುಡುಗರೇ ಹೆಚ್ಚಾಗಿ ಮಾತಾಡಬೇಕು ಕೆಲಸಮಾಡಬೇಕು; ಅವರಿಗೆ ತೊಡಕುತೊಂದರೆಗಳು ಬಂದ ಸಂದರ್ಭದಲ್ಲಿ ಯಷ್ಟೇ ಶಿಕ್ಷಕರು ಸಹಾಯಮಾಡಲಿ. ವರ್ಗದಲ್ಲಿರುವ ವಿದ್ಯಾರ್ಥಿಗಳು ಶಿಕ್ಷಕರ ಹೊಸ ವಿಚಾರಗಳನ್ನು ಮಸನಮಾಡುತ್ತಿರಬೇಕು.

ಉತ್ತಮ ಪಾಠದ ಲಕ್ಷಣಗಳು ಯಾವವು? ಶಿಕ್ಷಕರು ಕಲಿಸುವಾಗ ವಿದ್ಯಾರ್ಥಿಗಳು ಎಷ್ಟರಮಟ್ಟಿಗೆ ಲಕ್ಷ್ಯಗೊಟ್ಟರೆಂಬದನ್ನು ನೋಡುವದು ಮೊದಲನೆಯ ಮಾತು. ಅವರ ವಿಚಾರಶಕ್ತಿಗೆ ಎಷ್ಟರ ಮಟ್ಟಿಗೆ ಆಸ್ಪದ ದೊರೆಯಿತೆಂಬುದನ್ನು ತಿಳಿಯುವದು ಎರಡನೆಯದು. ನೀವು ಈ ದೃಷ್ಟಿಯಿಂದ ಪಾಠಗಳನ್ನು ನಿರೀಕ್ಷಿಸುವಿರೆಂದು ನಾನು ಬಗೆಯುವೆನು. ಶರೀರದ ಬೆಳವಣಿಗೆಗಾಗಿ ಪ್ರತಿಯೊಂದು ಅವಯವಕ್ಕೆ ಕೆಲಸವೂ ವಿಶ್ರಾಂತಿಯೂ ಆಹಾರವೂ ಹೇಗೆ ಬೇಕೋ ಹಾಗೆಯೇ ಮನಸ್ಸಿಗೂ ಬೇಕು. ಜ್ಞಾನವೇ ಇದಕ್ಕೆ ಆಹಾರ!

ಕಲಿಸುವದೆಂದರೆ ವಿಷಯಗಳನ್ನು ತಲೆಯಲ್ಲಿ ತುಂಬುವದಲ್ಲ. ಶರೀರದ ಬೆಳವಣಿಗೆಯಾಗಬೇಕಾದರೆ ಹೊಟ್ಟೆಯಲ್ಲಿ ಅನ್ನವನ್ನು ತುಂಬುತ್ತ ಹೋದರೆ ಸಾಗಬಹುದೊ? ಹುಡುಗರ ಮನಸ್ಸು ಹಸನಾದ ಪಾಟಿಯಂತೆ ಇದ್ದು ನಾವು ಬೇಕಾದುದನ್ನು ಅದರಲ್ಲಿ ಮೂಡಿಸಬಹುದೆಂದು ತಿಳಿಯುವದು ತಪ್ಪು. ಅವರಿಗೂ ಅನೇಕತರದ ಶಕ್ತಿಗಳಿವೆ. ಮನೋವಿಕಾರಗಳಿವೆ, ಅವರ ಮನಸ್ಸಿಗೆ ಸರಿಯಾದ ಕೆಲಸ ಕೊಡುವದೂ, ಆ ಕೆಲಸಗಳಲ್ಲಿ ಅವರನ್ನು ತೊಡಗಿಸುವದೂ ನಿಜವಾದ ಕಲಿಸುವಿಕೆಯ ಲಕ್ಷಣಗಳು. ತಾಯಿಯು ಮಗುವಿನ ಮೇಲೆ ಬೇಕಾದಷ್ಟು ಪ್ರೀತಿ ಮಾಡುತ್ತಿದ್ದರೇನಾಯಿತು, ಅವಳು ತನ್ನ ಮಗುವಿನ ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಬಹುದೋ? ಮಗುವಿಗೆ ಹಸಿವೆಯಾದಾಗ ಹಿತವಾದ ಅನ್ನವನ್ನು ಮಿತವಾಗಿ ಕೊಟ್ಟರೆ ಎಲ್ಲರಿಗೂ ಜಾನಂದವು! ಅದರಂತೆ ಮಕ್ಕಳ ಗ್ರಹಣಶಕ್ತಿಯನ್ನು ಅನುಸರಿಸಿ ಕಲಿಸಬೇಕು. ಅದರಲ್ಲಿಯೂ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಸ್ವತಂತ್ರ ಬುದ್ಧಿಗೆ ಆಸ್ಪದವಿರಬೇಕು."

ಏಪ್ರಿಲ್ ತಿಂಗಳ ೨೬ನೆಯ ತಾರೀಖಿನಿಂದ ಮೇ ತಿಂಗಳ ೮ನೆಯ ತಾರೀಖು ಪೂರ್ಣ ಎರಡು ವಾರಗಳವರೆಗೆ ಈ ವರ್ಗವು ಸುಸಂಗತವಾಗಿ ಸಾಗಿತು. ಈ ವರ್ಗಕ್ಕೆ ಬಂದ ಶಿಕ್ಷಕರಿಗೆ ಅವರ ವೇತನವಲ್ಲದೆ ಧಾರವಾಡಕ್ಕೆ ಹೋಗಿಬರುವ ವೆಚ್ಚವನ್ನೂ ಊಟದ ವೆಚ್ಚವೆಂದು ಪ್ರತಿ ದಿನಕ್ಕೆ ೮ ಆಣೆಗಳನ್ನೂ ಕೊಡಲಾಯಿತು. ಇಳಿದುಕೊಳ್ಳಲು ಗಂಡುಮಕ್ಕಳ ಟ್ರೇನಿಂಗ್ ಕಾಲೇಜದ ವಸತಿಗೃಹದಲ್ಲಿ ಅನುಕೂಲತೆಮಾಡಿಕೊಡಲಾಗಿತ್ತು. ನಮ್ಮ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬರಾದ ಡಾ. ಕಾಮತರವರೂ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರೂ ಧಾರವಾಡ ಜಿಲ್ಲೆಯ ಸ್ಕೂಲ್‌ಬೋರ್ಡಿನ ಎಡ್ಮಿನಿಸ್ಟ್ರೇಟಿವ್ ಆಫೀಸರರೂ ಈ ವರ್ಗದ ಮೇಲ್ವಿಚಾರಣೆ, ಶಿಕ್ಷಕರ ಯೋಗಕ್ಷೇಮ ವ್ಯವಸ್ಥೆಗಳನ್ನು ನೋಡಿಕೊಳ್ಳುತ್ತಿದ್ದರು. ಈ ವರ್ಗದಲ್ಲಿ ಒಟ್ಟಿಗೆ ಸುಮಾರು ೩೫ ಪಾಠಗಳನ್ನು ಕಲಿಸಿತೋರಿಸಿದುದಲ್ಲದೆ ಬೇರೆಬೇರೆ ವಿಷಯಗಳ ಮೇಲೆ ೩೨ ಉಪನ್ಯಾಸಗಳು ಪ್ರವಾಸ ಪ್ರದರ್ಶನ ಮುಂತಾದವುಗಳ ನೆರವಿನಿಂದ ಈ ವರ್ಗಕ್ಕೆ ಬಂದ ಶಿಕ್ಷಕರಿಗೆ ಸಾಧ್ಯವಿದ್ದ ಎಲ್ಲ ಬಗೆಯ ಜ್ಞಾನಮಾಡಿಕೊಡಲು ಯತ್ನಿಸಲಾಯಿತು. ಶಿಕ್ಷಕರೂ ಕೂಡ ತುಂಬ ಉತ್ಸಾಹದಿಂದ ಕೆಲಸಮಾಡಿದರು. ತಾವೂ ಐದಾರು ಪಾಠಗಳನ್ನು ಕಲಿಸಿ ತೋರಿಸಿದರು. ಶಾರೀರಿಕಶಿಕ್ಷಣದ ವಿಷಯದಲ್ಲಿಯೂ ಅವರಿಗೆ ಸಾಕಾದಷ್ಟು ಪ್ರತ್ಯಕ್ಷ ಜ್ಞಾನಮಾಡಿಕೊಡಲಾಯಿತು. ಶಿಕ್ಷಣೋಪಕರಣಗಳನ್ನು ತಯಾರಿಸಿಕೊಳ್ಳಲು ತಕ್ಕಂತೆ ಅನುಕೂಲತೆ ಮಾಡಿಕೊಟ್ಟಿತ್ತು.

ಮೇ ತಿಂಗಳ ಎನೆಯ ತಾರೀಖಿನ ದಿನ ಈ ವರ್ಗದ ಸಮಾಪ್ತಿ ಸಮಾರಂಭವನ್ನು ನಡೆಯಿಸಿದರು. ಅಂದು ಆರಂಭಕ್ಕೆ ವಿದ್ಯಾರ್ಥಿಗಳು ಸ್ವಾಗತಪದ್ಯವನ್ನು ಹಾಡಿದ ತರುವಾಯ ಧಾರವಾಡ ಜಿಲ್ಲೆಯ ಸ್ಕೂಲ್‌ಬೋರ್ಡಿನ ಸದಸ್ಯರೂ ವ್ಹಾಯಿಸ್ ಚೆಅರಮನ್ನರೂ ಆದ ಶ್ರೀ. ಹುಚ್ಚಣ್ಣನವರು ತಮ್ಮ ಅನುಭವ ಆಸ್ಥೆಗಳಿಂದೊಡಗೂಡಿದ ಮಧುರವಚನಗಳಿಂದ ಹೀಗೆಂದರು: "ಅಚ್ಚಗನ್ನಡಿಗರೂ ಪ್ರತ್ಯಕ್ಷ ಶಿಕ್ಷಣದ ಕೆಲಸಮಾಡಿ ಆ ಕೆಲಸದ ಗುಟ್ಟುಮಟ್ಟುಗಳನ್ನೆಲ್ಲ ಅರಿತು ಅನುಭವಶಾಲಿಗಳೂ ಆದ ಡಾ. ಕಾಮತರಂಥವರು ಅಂದು ಉತ್ಸಾಹದಿಂದ ಆರಂಭಮಾಡಿದ ಕಾರ್ಯವನ್ನು ಇಂದು ಅಷ್ಟೇ ಆನಂದೋಲ್ಲಾಸಗಳಿಂದ ಪೂರ್ತಿಗೊಳಿಸಲು ಅಧ್ಯಕ್ಷರಾಗಿದ್ದುದು ನಮ್ಮೆಲ್ಲರ ಸುದೈವವೇ ಸರಿ. ನಮ್ಮ ಬೋರ್ಡಿಗೆ ಹಣದ ತೊಂದರೆ ಎಂದೂ ತಪ್ಪಿದ್ದೇ ಅಲ್ಲ. ಇಂತಿದ್ದರೂ ಎಲ್ಲರ ಉದಾರಧೋರಣೆಯಿಂದ ವಯೋವೃದ್ಧರಾದ ಶಿಕ್ಷಕ ವರ್ಗಕ್ಕೆ ತಕ್ಕಷ್ಟು ಅನುಕೂಲತೆಯುಂಟಾಗಿ ಕೊನೆಗೆ ಅದು ಈ ಬಗೆಯ ಉತ್ಸಾಹದಲ್ಲಿ ಕೊನೆಗಂಡುದರ ಶ್ರೇಯಸ್ಸು ಡಾ. ಕಾಮತರಂಥ ಅಧಿಕಾರಿಗಳಿಗೆ ಸಲ್ಲಲೇಬೇಕು." ಮುಂ.

ಧಾರವಾಡ ಜಿಲ್ಲೆಯ ಡೆಪುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀ. ನಾಡಗೀರ ರವರೂ ಅಸಿ. ಡೆ. ಅವರಾದ ಶ್ರೀ. ತೀರಗಾಂವಕರರೂ ಈ ವರ್ಗದ ಸಂಬಂಧದ ತಮ್ಮ ತಮ್ಮ ಅನುಭವವನ್ನು ಕುರಿತು ನಾಲ್ಕು ಮಾತಾಡಿದಬಳಿಕ ಈ ವರ್ಗಕ್ಕೆ ಬಂದ ಶಿಕ್ಷಕರ ಪರವಾಗಿ ಕೆಲವರು ಮಾತಾಡಿ ಅಧಿಕಾರಿಗಳ ಮತ್ತು ಸ್ಕೂಲ್‌ಬೋರ್ಡಿನ ಆಭಾರವನ್ನಿಸಿದರು. ಶಿಕ್ಷಣೋಪಕರಣಗಳನ್ನು ಚೆನ್ನಾಗಿ ಮಾಡಿಕೊಂಡ ಶಿಕ್ಷಕರಿಗೆ ಮೆಚ್ಚುಕೊಡುವದಾದ ಬಳಿಕ ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿದ್ದ ಡಾ. ಕಾಮತಸಾಹೇಬರು ಈ ಕೆಳಗಿನ ಮಾತುಗಳನ್ನಾಡಿ ಅಂದಿನ ಕಾರ್ಯಕ್ರಮವನ್ನು ಪೂರ್ತಿಗೊಳಿಸಿದರು.

ಮಾನ್ಯ ಅಧಿಕಾರಿಗಳೆ, ಬಂಧುಭಗಿನಿಯರೇ, ಶಿಕ್ಷಕರೇ

ಈ ಶ್ರೇಯಸ್ಸು ಎಲ್ಲವೂ ನನ್ನ ಪಾಲಿನದೆಂದು ನಾನು ಎಂದೂ ಒಪ್ಪಲಾರೆನು. ಈ ವರ್ಗದ ವೆಚ್ಚವನ್ನು ಸಹಿಸುವವರು ಬೋರ್ಡಿನವರು. ನಡೆಯಿಸಿದವರು ತಾವೆಲ್ಲ ಅಧಿಕಾರಿಗಳು. ಒಪ್ಪಿಗೆ ಕೊಟ್ಟವರು ಸರಕಾರದವರು. ಇಂತಹ ಇಳಿವಯಸ್ಸಿನಲ್ಲಿ ಕಷ್ಟಕರವಾದ ಈಗಿನ ಕಾಲದಲ್ಲಿ ದೊಡ್ಡಮನಸ್ಸುಮಾಡಿ ಕಲಿಯಲು ಬಂದವರು ನೀವೆಲ್ಲ ಶಿಕ್ಷಕರು. ಹೀಗೆ ಎಲ್ಲರ ಸಹಕಾರ್ಯವಾದುದರಿಂದ ಈ ವರ್ಗವು ಸಾಂಗವಾಯಿತಲ್ಲದೆ ನನ್ನೊಬ್ಬನಿಂದ ಏನಾಗಬೇಕಾಗಿದೆ? ಒಮ್ಮೆ ಈ ವರ್ಗವನ್ನು ನಡೆಯಿಸಿಯೇ ತೀರಬೇಕೆಂದು ನಾಲ್ಕುತಿಂಗಳ ಗಟ್ಟಲೆ ಪ್ರಯತ್ನಿಸಿದವರಲ್ಲಿ ನಾನೂ ಒಬ್ಬನು; ಇಷ್ಟೇ.

ಇಲ್ಲಿಗೆ ಬಂದು ಇಂಥ ಸುರಕ್ಷಿತ ವಾತಾವರಣದಲ್ಲಿ ಎರಡು ವಾರಗಳನ್ನು ಆನಂದದಿಂದ ಕಳೆದುದರ ಫಲವಾಗಿ ನಿಮ್ಮಲ್ಲಿ ಒಂದು ತರದ ವಿಶ್ವಾಸವು ಹುಟ್ಟಿದೆ ಎಂಬುದು ನಿಮ್ಮ ಮಾತುಗಳಿಂದಲೇ ಕಂಡುಬಂದಿತು. ಆತ್ಮವಿಶ್ವಾಸದಿಂದ ಮಹಾಕಾರ್ಯವಾಗುವದು. ನೀವು ಸ್ವಲ್ಪ ಕಾಲದಲ್ಲಿ ಬಹಳ ಪರಿಶ್ರಮಬಟ್ಟಿರಿ. ವರ್ಗದ ಶಿಸ್ತು, ರೀತಿಗಳನ್ನು ತುಸಮಟ್ಟಿಗಾದರೂ ನೋಡಿದಿರಿ. ಶಿಕ್ಷಕರು ಆಜನ್ಮವಿದ್ಯಾರ್ಥಿಗಳು. ಎಷ್ಟು ಕಲಿತರೂ ಕಡಿಮೆಯೇ. ಇಂದಿನದು ನಾಳೆಗೆ ಹಳೆಯವಾಗುತ್ತದೆ. ಹೊಸ ಹೊಸ ಪ್ರಯೋಗಪದ್ಧತಿಗಳನ್ನು ಬಳಕೆಯಲ್ಲಿ ತರಬೇಕಾಗಿದೆ. ಹಳೆಯ ಪದ್ಧತಿಯಲ್ಲಿ ಶಿಕ್ಷಕರೇ ಹೆಚ್ಚು ಮಾತನಾಡುತ್ತಿದ್ದರು. ವಿದ್ಯಾರ್ಥಿಗಳಿಗೆ ಕೆಲಸ ಕಡಿಮೆಯಾಗಿತ್ತು. ಈಗಿನ ಹೊಸ ಪದ್ಧತಿಯಲ್ಲಿ ಶಿಕ್ಷಕರು ಆದಷ್ಟು ಕಡಿಮೆ ಮಾತನಾಡಬೇಕು. ಹುಡುಗರೇ ಹೆಚ್ಚು ಕೆಲಸಮಾಡಬೇಕು. ಹೊಸ ಶಿಕ್ಷಣಕ್ರಮದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಮತ್ತು ಕಲಿಯತಕ್ಕ ವಿಷಯ ಈ ಮೂರರಲ್ಲಿ ವಿದ್ಯಾರ್ಥಿಗಳಿಗೇ

ಪ್ರಾಧಾನ್ಯವಿದೆ. ಮಿಕ್ಕವೆರಡಕ್ಕೆ ಗೌಣಸ್ಥಾನವುಂಟಾಗಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಅವಶ್ಯ ವಿದ್ದಷ್ಟೇ ಸಹಾಯವನ್ನು ಮಾಡಬೇಕು. ವಿದ್ಯಾರ್ಥಿಗಳು ತಮ್ಮ ತಮ್ಮ ಹೊಣೆಗಾರಿಕೆಯನ್ನರಿತು ಕೆಲಸಮಾಡಹತ್ತಿದರೆ ಅವರಿಗೆ ಸ್ವತಂತ್ರ ವಿಚಾರಮಾಡಲಿಕ್ಕೆ ತಕ್ಕಷ್ಟು ಅವಕಾಶವಿರಬೇಕಾಗುವದು. ಅದುಕಾರಣ ಶಿಕ್ಷಕನು ಮಾತು ಕಡಿಮೆಮಾಡಿ ವಿದ್ಯಾರ್ಥಿಗಳಿಗೆ ಸರಿಯಾಗಿ ಕೆಲಸಕೊಟ್ಟು ಮೇಲ್ವಿಚಾರಣೆ ಮಾಡಲಿ. ಹೊಸಪದ್ಧತಿಯ ಎಲ್ಲ ಪಾಠಗಳಲ್ಲಿಯೂ ಇದೇ ತತ್ವವಿದೆ.

ನೀವು ನಿಮ್ಮ ಹಳ್ಳಿಗೆ ಹೋದಬಳಿಕ ಈಗ ಕಲಿತುದನ್ನು ಮರೆಯದೆ ಆಯಾ ಪಾಠಗಳ ಬಗೆಗೆ ಮೊದಲೇ ವಿಚಾರಮಾಡಿ ಕಲಿಸಿರಿ. ಅದರಿಂದ ಎಲ್ಲರಿಗೂ ಸುಖವಾಗುವದು.

ಈ ನಿಮ್ಮ ವರ್ಗದಲ್ಲಿ ಕಲಿಸಿದವರಿಗೆಲ್ಲ ಧನ್ಯವಾದಗಳನ್ನು ಸಲ್ಲಿಸುವೆನು. ಶ್ರೀಮಾನ್ ಕುಂಬಾರ ಅವರು ಪ್ರತಿನಿತ್ಯವೂ ವಿಶೇಷ ಶ್ರಮವಹಿಸಿದುದಕ್ಕಾಗಿ ಅವರಿಗೆ ವಿಶೇಷವಾಗಿ ಧನ್ಯವಾದಗಳನ್ನು ಸಲ್ಲಿಸುವೆನು.

ಅಧ್ಯಕ್ಷರ ಭಾಷಣವಾದ ನಂತರ ಆಭಾರಮನ್ನಣೆ ರಾಷ್ಟ್ರಗೀತೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ದಶಕ ಪದ್ಧತಿಯೂ ಶೂನ್ಯದ ಉಪಯೋಗವೂ

ಶ್ರೀ. ಎಚ್. ಬಿ. ಉಮಡಿ, ಎಮ್. ಎ.

ನಾವು ನಮ್ಮ ಚಿಕ್ಕ ಬಾಲಕರಿಗೆ ಸಂಖ್ಯಾಲೇಖನವನ್ನು ಕಲಿಸುವಾಗ ಶೂನ್ಯದ ಉಪಯೋಗವನ್ನು ಕಲಿಸುತ್ತೇವಷ್ಟೇ? ಶೂನ್ಯದ ಅರ್ಥವೇನು, ಅದನ್ನು ಎಲ್ಲಿ ಉಪಯೋಗಿಸುವೆವು, ಎಂಬದನ್ನು ನಮ್ಮ ಬಾಲಕರಿಗೆ ಹೇಳುವಾಗ ಎಕ್ಕಂ ದಹಂ ಮುಂತಾದ ಸ್ಥಾನಗಳಲ್ಲಿ ಯಾವುದೊಂದು ಸ್ಥಾನದಲ್ಲಿ ಏನೂ ಇಲ್ಲವೆಂಬದನ್ನು ತೋರಿಸುವದಕ್ಕೆ ಶೂನ್ಯವನ್ನು ಬರೆಯಬೇಕೆಂದು ಇಂದು ನಾವು ಬಹು ಸುಲಭವಾಗಿ ಹೇಳಬಹುದು. ಆದರೆ ದಶಕಪದ್ಧತಿಯೊಳಗಿನ ಈ ಶೂನ್ಯವು ಎಂದು ಪ್ರಚಾರದಲ್ಲಿ ಬಂದಿತು, ಯಾರಿಂದ ಬಂದಿತು, ಅದಿಲ್ಲದಿದ್ದಾಗ ಸಂಖ್ಯಾಲೇಖನವು ಎಷ್ಟು ತೊಂದರೆಯದಾಗಿತ್ತು ಎಂಬ ವಿಚಾರಗಳು ನಮಗೆ ಗೊತ್ತಿಲ್ಲ. ಮಾನವನ ಬುದ್ಧಿಶಕ್ತಿಯು ಇಂದಿನ ವರೆಗೆ ಕಂಡುಹಿಡಿದ ಶಾಸ್ತ್ರೀಯ ಶೋಧಗಳಲ್ಲೆಲ್ಲ ಅತಿ ಮಹತ್ವದ್ದೂ ಗಹನವಾದದ್ದೂ ಆದ ಈ ವಿಷಯಕ್ಕೆ ಸಂಬಂಧಿಸುವ ಕೆಲವು ಮಾತುಗಳನ್ನು ಹೇಳುವದೆ ಈ ಲೇಖನದ ಮುಖ್ಯ ಉದ್ದೇಶವು.

ಶೂನ್ಯದ ಉಪಯೋಗವನ್ನು ಮೊತ್ತಮೊದಲು ಪ್ರಚಾರದಲ್ಲಿ ತಂದ ಶ್ರೇಯಸ್ಸು ನಮ್ಮ ಪೂರ್ವಜರಿಗೇ ಸಲ್ಲುವದು. ಸುಮಾರು ಎರಡು ಸಾವಿರ ವರ್ಷಗಳ ಹಿಂದೆಯೇ ನಮ್ಮವರು ಇದನ್ನು ಗಣಿತದ ಪುಸ್ತಕಗಳಲ್ಲಿ ಉಪಯೋಗಿಸುತ್ತಿದ್ದರು. ಆದರೆ ಇದು ಕ್ರಿಸ್ತಶಕಾರಂಭವಾಗಿ ಆರೇಳು ನೂರು ವರ್ಷಗಳು ಕಳೆಯುವ ವರೆಗೂ ನಮ್ಮ ದೇಶದಲ್ಲಿಯೂ ಕೂಡ ಸಾರ್ವಜನಿಕವಾಗಿ ಉಪಯೋಗಿಸಲ್ಪಡುತ್ತಿರಲಿಲ್ಲ. ಯುರೋಪ ಖಂಡದಲ್ಲಿ ಹನ್ನೆರಡನೆಯ ಶತಮಾನದ ವರೆಗೂ ಇದು ಗೊತ್ತಿರಲಿಲ್ಲ. ಹದಿನೇಳನೆಯ ಶತಮಾನದ ಈಚೆಗೇ ಅಲ್ಲಿ ಅದು ಸರ್ವಸಾಮಾನ್ಯವಾಗಿ ಪ್ರಚಾರದಲ್ಲಿ ಬಂದಿತೆಂದು ಹೇಳುವರು. ಶೂನ್ಯದ ಉಪಯೋಗವನ್ನು

ಅರಬರು ನಮ್ಮವರಿಂದ ಕಲಿತುಕೊಂಡರು. ಅವರು ತಮ್ಮ ಗ್ರಂಥಗಳಲ್ಲಿ ಇದು ಹಿಂದೂ ಪದ್ಧತಿಯೆಂದು ಸ್ಪಷ್ಟವಾಗಿ ಕರೆದಿದ್ದಾರೆ. ಮತ್ತು ಅರಬರಿಂದ ಕಲಿತ ಯುರೋಪಿಯನ್ನರು ತಮ್ಮ ಪುಸ್ತಕಗಳಲ್ಲಿ ಅರಬರ ಪದ್ಧತಿಯೆಂದು ಸುಸ್ಪಷ್ಟವಾಗಿ ಉಲ್ಲೇಖಿಸಿರುವರು. ಎಂದ ಬಳಿಕ ಶೂನ್ಯದ ಉಪಯೋಗವನ್ನು ಮೊತ್ತಮೊದಲು ಕಂಡುಹಿಡಿದು ದಶಕಪದ್ಧತಿಯಲ್ಲಿ ಅದನ್ನು ಸರಾಗವಾಗಿ ಉಪಯೋಗಿಸತೊಡಗಿ ಸಂಖ್ಯಾಲೇಖನಕ್ರಮವನ್ನು ಪ್ರಕೃತದ ಸುಸ್ವರೂಪಕ್ಕೆ ತಂದ ಶ್ರೇಯಸ್ಸು ಸಂಪೂರ್ಣವಾಗಿ ಭಾರತೀಯರಿಗೇ ಸಲ್ಲುವದೆಂಬ ಮಾತು ನಿರ್ವಿವಾದವಲ್ಲವೇ?

ಗಣಿತಶಾಸ್ತ್ರವು ಮಿಕ್ಕ ಎಲ್ಲ ಶಾಸ್ತ್ರಗಳಿಗೆ ಮೂಲಾಧಾರವೆಂಬುದೂ ಆ ಎಲ್ಲ ಶಾಸ್ತ್ರಗಳ ಪ್ರಗತಿಗೆ ಗಣಿತಶಾಸ್ತ್ರದ ಪ್ರಗತಿಯು ಅತ್ಯಾವಶ್ಯಕವೂ ಅತ್ಯಂತ ಸಹಾಯಕಾರಿಯೂ ಎಂಬದೂ ಎಲ್ಲರೂ ಬಲ್ಲ ಮಾತು. ಆದುದರಿಂದ ಮಾನವಕುಲದ ಜ್ಞಾನವಿಕಾಸಕ್ಕೂ ಸುಧಾರಣೆಯ ಸಾಧನಗಳ ಉಪಲಬ್ಧಿಗೂ ಸಂಸ್ಕೃತಿ ವಿಕಾಸಕ್ಕೂ ಗಣಿತಶಾಸ್ತ್ರವೇ ಮುಖ್ಯಾವಲಂಬನವೆಂಬದನ್ನು ಸರ್ವರೂ ಒಪ್ಪಿಕೊಳ್ಳುವರು. ಹೆಚ್ಚಾಗುವದು ಕಡಿಮೆಯಾಗುವದು ಇವು ಸಂಖ್ಯಾಧರ್ಮಗಳು. ಎಣಿಕೆಯ ಕಲ್ಪನೆಯೇ ಇದಕ್ಕೆ ಮೂಲಾಧಾರವು. ಒಂದು ಎರಡು ಇವುಗಳ ನಡುವಿನ ತಾರತಮ್ಯದಲ್ಲಿ ಗಣಿತಶಾಸ್ತ್ರದ ಮೂಲ ಬೀಜಾಂಕುರವು ಗರ್ಭಿತವಾಗಿದೆ. ಇವುಗಳ ಜ್ಞಾನದ ನೆರವಿಲ್ಲದೆ ಯಾವ ಶಾಸ್ತ್ರವೇ ಆಗಲಿ ಕೊನೆಗೆ ಮಾನವಜಾತಿಯ ಬುದ್ಧಿವಿಕಾಸ ಜ್ಞಾನಪ್ರಸಾರ ಸಂಸ್ಕೃತಿ ಪ್ರಗತಿ ಇವೇ ಆಗಲಿ ಜಗತ್ತಿನಲ್ಲಿ ಅಸಂಭವನೀಯವಾಗುತ್ತಿತ್ತು. ಈ ಮೂಲತತ್ತ್ವಗಳ ಬೆಳವಣಿಗೆ ವಿಕಾಸಗಳೇ ಆಧಾರವಾಗಿ ಗಣಿತಶಾಸ್ತ್ರವು ಇಂದಿನ ವಿಸ್ತೃತ ಸ್ವರೂಪಕ್ಕೆ ಬಂದಿದೆ. ೧ರಿಂದ ೯ರ ವರೆಗಿನ ಒಂಬತ್ತು ಗುರುತುಗಳು ಮತ್ತು ಶೂನ್ಯ (೦) ಈ ಹತ್ತು ಗುರುತುಗಳ ಸಹಾಯದಿಂದ ಕೋಟ್ಯನುಕೋಟಿ ಸಂಖ್ಯೆಗಳನ್ನು ಅತಿ ಸುಲಭವಾಗಿ ಬರೆದು ತೋರಿಸಬಹುದಾದ ದಶಕಪದ್ಧತಿಯ ಉಪಯೋಗವೇ ಮಾನವಕುಲದ ಬುದ್ಧಿವಿಕಾಸಕ್ಕೂ ಎಲ್ಲ ಶಾಸ್ತ್ರಗಳ ಬೆಳವಣಿಗೆಗೂ ಅತ್ಯಂತ ಸಹಾಯಕಾರಿಯಾಗಿದೆಯೆಂಬದನ್ನು ಆಧುನಿಕ ಶಾಸ್ತ್ರಜ್ಞರೆಲ್ಲರೂ ಒಪ್ಪಿಕೊಂಡಿರುವರು. ಯಂತ್ರಗಳಲ್ಲಿ ವರ್ತುಲಾಕಾರದ ಗಾಲಿಯ ಮಹತ್ತ್ವವೆಷ್ಟಿದೆಯೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಚಕ್ಕಡಿ ಮೋಟಾರು ಮುಂತಾದ ವಾಹನಗಳನ್ನು ಮೊದಲುಗೊಂಡು ಗಿರಣಿಗಳು ಚಿಕ್ಕದೊಡ್ಡ ಗಡಿಯಾರಗಳು ಮೊದಲಾದ ಎಲ್ಲ ಯಂತ್ರಸಾಧನಗಳಲ್ಲಿ ಗಾಲಿಯನ್ನು ತೆಗೆದುಹಾಕಿದರೆ ಯಾವ ಬಗೆಯ ಅನರ್ಥವಾಗಬಹುದೆಂಬುದನ್ನು ಕಲ್ಪಿಸಬಹುದಷ್ಟೇ? ಗಣಿತಶಾಸ್ತ್ರದಲ್ಲಿಯೂ ಸಂಖ್ಯಾಲೇಖನ ಪದ್ಧತಿಯೊಳಗಿನ ಶೂನ್ಯವನ್ನು ಕಳೆದರೆ ಅಷ್ಟೇ ಅನರ್ಥವು ಸಂಭವಿಸುವದು. ಇಷ್ಟು ಮಹತ್ವದ್ದಾದ ಶೂನ್ಯದ ಉಪಯೋಗವನ್ನು ಪ್ರಚಾರದಲ್ಲಿ ತಂದು ಗಣಿತಶಾಸ್ತ್ರವನ್ನು ವಿಕಾಸಗೊಳಿಸಿ ಅದನ್ನು ಪರಿಪೂರ್ಣತೆಯ ಸ್ವರೂಪಕ್ಕೆ ತಂದ ಶ್ರೇಯಸ್ಸು ನಮ್ಮ ಪೂರ್ವಜರಿಗೆ ಸಲ್ಲುವದಾದ್ದರಿಂದ ಭಾರತವಾಸಿಗಳಾದ ನಾವು ಅತ್ಯಂತ ಅಭಿಮಾನ ಪಡಬೇಕಾಗಿದೆ. ಮತ್ತು ಈ ಶೂನ್ಯದ ಉಪಯೋಗದಿಂದಾದ ಹೊಸ ಸಂಖ್ಯಾಲೇಖನ ಪದ್ಧತಿಯಿಂದ ಭಾರತೀಯರು ಗಣಿತಶಾಸ್ತ್ರದಲ್ಲಿ ಹೊಸ ಹೊಸ ಶೋಧನಗಳನ್ನು ನಡೆಯಿಸಿ ಅದನ್ನು ಮುಂದುವರಿಸಲು ಆವಶ್ಯಕವಾದ ರಾಜಮಾರ್ಗವನ್ನು ಪಾಕಿಕೊಟ್ಟಂತಾಯಿತು. ಮತ್ತು ಹದಿನೈದನೆಯ ಶತಮಾನದ ಕೊನೆಯವರೆಗೂ ಅಂಕಗಣಿತ ಬೀಜಗಣಿತ ಮುಂತಾದ ಗಣಿತಶಾಸ್ತ್ರದ ವಿಷಯಗಳಲ್ಲಿ ಭಾರತೀಯರೇ ಜಗತ್ತಿಗೆ ಮಾರ್ಗದರ್ಶಕರಾಗಿದ್ದರು. ಆ ಕಾಲದಲ್ಲಿ ಭಾರತದ ರಾಜಕೀಯ ಪರಿಸ್ಥಿತಿಯಿಂದ ಉಂಟಾದ ಅಶಾಂತತೆಯ ಮೂಲಕ ಮಿಕ್ಕಶಾಸ್ತ್ರಗಳ ಪ್ರಗತಿಯು ಕುಂಠಿತವಾಗಿದ್ದರೂ ಗಣಿತಶಾಸ್ತ್ರದಲ್ಲಿ ಮಾತ್ರ ನಮ್ಮವರೇ

ಜಗತ್ತಿನಲ್ಲೆಲ್ಲ ಮುಂದುವರಿದವರಾಗಿದ್ದರು. ಹೀಗಿದ್ದುದರಿಂದ ಭವಿಷ್ಯದಲ್ಲಿಯೂ ಕೂಡ ಭೌತಿಕಶಾಸ್ತ್ರ ವಿಷಯಗಳಲ್ಲಿ ನಮ್ಮವರೇ ಅಗ್ರಪೂಜೆಯನ್ನು ಹೊಂದಬಹುದೆಂದು ಆಶಿಸಲು ಆಧಾರವುಂಟಾಗುವದು.

ನಾವು ಮೋಟಾರು, ಗಡಿಯಾರ, ರೇಡಿಯೋ ಮುಂತಾದ ಅದ್ಭುತ ಸಾಮರ್ಥ್ಯವುಳ್ಳ ಯಂತ್ರಗಳನ್ನು ಪ್ರತಿನಿತ್ಯ ಉಪಯೋಗಿಸುತ್ತಿದ್ದರೂ ಅವುಗಳ ಯಾಂತ್ರಿಕರಚನೆ ಮತ್ತು ಶಾಸ್ತ್ರೀಯ ಯೋಜನೆ ಇವುಗಳ ಮಹತ್ವವನ್ನು ಎಷ್ಟು ಮಾತ್ರವೂ ಅರಿಯದಿರುವಂತೆಯೇ ನಾವು ಅಡಿಗಡಿಗೆ ಉಪಯೋಗಿಸುತ್ತಿರುವ ದಶಕಪದ್ಧತಿ ಮತ್ತು ಅದರಲ್ಲಿ ಗರ್ಭಿತವಾಗಿರುವ ಅಂಕಿಗಳ ಸ್ವಂತ ಬೆಲೆ ಮತ್ತು ಸ್ಥಾನಿಕ ಬೆಲೆ ಇವುಗಳ ಯೋಜನೆಯಿಂದುಂಟಾಗುವ ಶಾಸ್ತ್ರೀಯ ಸೌಕರ್ಯವನ್ನು ಕಂಡೂಕಾಣದಂತಿದ್ದೇವೆ. ಗಣಿತಶಾಸ್ತ್ರದ ಪ್ರಗತಿಯಲ್ಲಿ ಮನಸ್ಸು ಹಾಕಿ ಪರಿಶ್ರಮಮಾಡುತ್ತಿರುವವರಿಗಷ್ಟೇ ಈ ದಶಕಪದ್ಧತಿಯ ಮಹತ್ವವು ಹೆಜ್ಜೆ ಹೆಜ್ಜೆಗೆ ಕಂಡುಬರುವದು. ಆಧುನಿಕ ಗಣಿತಶಾಸ್ತ್ರದ ಭವ್ಯವಾದ ಕಟ್ಟಡಕ್ಕೆ ದಶಕಪದ್ಧತಿಯೇ ಭದ್ರವಾದ ತಳಹದಿಯೆಂಬದನ್ನು ಅವರು ತಿಳಿದು ಅದರ ಶೋಧಕರಿಗೆ ತಲೆವಾಗುತ್ತಿರುವರು.

ಈ ದಶಕಪದ್ಧತಿಯು ಪ್ರಚಾರದಲ್ಲಿ ಬರುವದಕ್ಕಿಂತ ಮೊದಲು ಸಂಖ್ಯಾಲೇಖನದಲ್ಲಿ ಒಂಬತ್ತು ಅಂಕಿಗಳಲ್ಲದೆ ೧೦-೨೦-೩೦ ಮುಂತಾದ ೯೦ ರ ವರೆಗಿನ ದಶಕಗಳಿಗೂ ಪ್ರತಿಯೊಂದು ನೂರಕ್ಕೂ ಪ್ರತಿಸಾವಿರಕ್ಕೂ ಬೇರೆ ಬೇರೆ ಗುರುತುಗಳನ್ನು ಕಲ್ಪಿಸಿಕೊಂಡಿದ್ದರು. ಆದುದರಿಂದ ಸಂಖ್ಯಾಲೇಖಕರು ಸಾವಿರಕ್ಕಿಂತ ಹೆಚ್ಚು ಗುರುತುಗಳನ್ನು ಉಪಯೋಗಿಸಬೇಕಾಗುತ್ತಿತ್ತು. ಗಡಿಯಾರದ ಮುಖಪತ್ರದ ಮೇಲೆಯೂ ಕೆಲವು ಪುಸ್ತಕಗಳ ಪ್ರಾರಂಭದ ಮುಖಪತ್ರಗಳಲ್ಲಿಯೂ ಈಗಲೂ ಮುದ್ರಿಸುತ್ತಿರುವ ರೋಮನ್ ಅಂಕಿಗಳನ್ನು ನಾವು ನೋಡಿದರೆ ಆ ಕಾಲದ ಸಂಖ್ಯಾಲೇಖನದಲ್ಲಿರುವ ತೊಂದರೆಯ ಕಲ್ಪನೆಯಾಗಬಹುದು.

ಪ್ರಕೃತದ ಸುಂದರವಾದ ದಶಕಪದ್ಧತಿಯಲ್ಲಿಯ ಸ್ಥಾನಿಕಬೆಲೆಯ ಕಲ್ಪನೆಯ ಸಹಾಯದಿಂದ ಅಖಿಲ ಜಗತ್ತಿನ ಜನಸಂಖ್ಯೆಯನ್ನು ತೋರಿಸುವ ಸಂಖ್ಯೆಯನ್ನು ಸಾಧಾರಣ ಮಾನದ ಟಪ್ಪಣಿ ಪುಸ್ತಕದೊಳಗಿನ ಪುಟದಲ್ಲಿ ಅರ್ಧ ಸಾಲಿಗಿಂತಲೂ ಕಡಿಮೆ ಸ್ಥಳದಲ್ಲಿ ಬರೆದು ತೋರಿಸಬಹುದಾಗಿದೆ. ಹೆಚ್ಚೇಕೆ? ಸಮುದ್ರದ ದಂಡೆಯ ಮೇಲಿನ ಉಸುಬಿನ ಕಣಗಳ ಇಲ್ಲವೆ ಅಖಂಡ ಜಗತ್ತಿನ ಘಟಕಗಳ ಪರಮಾಣುಗಳ ಸಂಖ್ಯೆಯನ್ನು ಕೂಡ ಅಲ್ಪ ಅವಕಾಶದಲ್ಲಿ ಬರೆದು ತೋರಿಸಲು ಇದರಿಂದ ಸಾಧ್ಯವಾಗಿದೆ. ಕೇವಲ ಒಂಬತ್ತು ಅಂಕೆಗಳು ಮತ್ತು ಶೂನ್ಯ ಇವಿಷ್ಟೇ ಗುರುತುಗಳ ಸಹಾಯದಿಂದ ಇಷ್ಟು ದೊಡ್ಡ ಸಂಖ್ಯೆಯನ್ನು ಬರೆದು ತೋರಿಸಲು ಸಾಧ್ಯವಾಗುವಂಥ ಯೋಜನೆಯನ್ನು ಕಲ್ಪಿಸಿದ್ದು ಎಷ್ಟು ಗಹನ ವಿಷಯವೆಂಬದನ್ನು ಬಲ್ಲವರೇ ಊಹಿಸಬೇಕು! ಇದರಲ್ಲಿಯೂ ಆಕಾಶ ಸದೃಶವಾದ ಶೂನ್ಯವನ್ನು ಅದರಷ್ಟೇ 'ನಾಸ್ತಿ' ಸ್ವರೂಪದಲ್ಲಿಟ್ಟುಕೊಂಡು ಅದಕ್ಕೆ ಅನಂತವಾದ ಬೆಲೆಯ 'ಅಸ್ತಿ' ಸ್ವರೂಪವನ್ನು ಕಲ್ಪಿಸಿಕೊಟ್ಟಿದ್ದು ಭಾರತೀಯ ತತ್ತ್ವಜ್ಞಾನಿಗಳ ಮಿದುಳಿನಿಂದಲೇ ಹೊರಟಿರಬೇಕಲ್ಲದೆ ಅನ್ಯರಿಗೆ ಇದು ಅಸಾಧ್ಯವೆಂಬದನ್ನು ಎಲ್ಲರೂ ಒಪ್ಪಲೇಬೇಕು. ಭಾರತೀಯ ವೇದಾಂತದಲ್ಲಿ 'ಶೂನ್ಯ ಆಕಾಶ'ವೇ ಅಖಿಲ ಪ್ರಪಂಚದ ವ್ಯುತ್ಪತ್ತಿ ಸ್ಥಿತಿ ಸಂಸ್ಕೃತಿಗಳಿಗೆ ಹೇತುವಾಗುವಂತೆ ಭಾರತೀಯ ಗಣಿತಶಾಸ್ತ್ರದಲ್ಲಿ ಶೂನ್ಯವು ಸಂಖ್ಯಾರಚನೆಯ ಉತ್ಪತ್ತಿ ಬೆಳೆವಣಿಗೆ ವಿಕಾಸಗಳಿಗೆ ಕಾರಣವಾಗಿದೆ. ನಮ್ಮವರು ಅಂಕಗಣಿತದಲ್ಲಿ ನಿಜವಾಗಿ (ಸ್ವತಂತ್ರವಾಗಿ) ಏನೂ ಬೆಲೆಯಿಲ್ಲದಿರುವ ಶೂನ್ಯಕ್ಕೆ ಸ್ಥಾನಪರತ್ವದಿಂದ ಬೆಲೆಯನ್ನು ಕಲ್ಪಿಸಿಕೊಟ್ಟರುವರಷ್ಟೆ ಅಲ್ಲ; ಅದಕ್ಕೆ ಅನಂತಬೆಲೆಯನ್ನು ಕಲ್ಪಿಸಿ ಕೊಟ್ಟರು.

ಅಂಕಿಗಳಿಗೆ ಸಂಖ್ಯಾರಚನೆಯಲ್ಲಿ ಸ್ಥಾನಿಕ ಬೆಲೆಯನ್ನು ಕಲ್ಪಿಸಿದುದು ಕೂಡ ಅತಿ ಮಹತ್ವದ ತಾತ್ವಿಕ ವಿವೇಚನೆಗೆ ಒಳಗಾಗಿರುವದು. ಒಂದು ರೂ. ಗೆ ೧೦ ಆಣೆಗಳು ೧ ಆ. ಗೆ ೧೦ ಪೈಗಳು

ಎಂದು ತಿಳಿಯೋಣ ಆಗ ಮೂರು ರೂಪಾಯಿ ಐದು ಆಣೆ ಏಳು ಪೈಗಳನ್ನು ಅತಿ ಸುಲಭವಾಗಿ ೩೫೭ ಹೀಗೆ ಬರೆದು ತೋರಿಸಬಹುದು. ಈ ಸಂಖ್ಯೆಯಲ್ಲಿ ಏಳು ಇದು ಮೊದಲನೆಯ ಸ್ಥಾನ ವಾಗಿರುವದರಿಂದ ಅದು ಪೈಯೆಂದೂ ಐದು ಆಣೆಗಳೆಂದೂ ಮೂರು ರೂಪಾಯಿಗಳೆಂದೂ ಆಯಾ ಸ್ಥಾನದ ಮೇಲಿಂದಲೇ ಗೊತ್ತಾಗುವದು. ಇದರಲ್ಲಿ ೩ ರೂ. ೫ ಆ. ೭ ಪೈ. ಹೀಗೆ ಹೆಸರಿಟ್ಟು ಬರೆದು ತೋರಿಸುವ ಆವಶ್ಯಕತೆಯುಳಿಯಲಾರದು. ಇದೇ ಮೇರೆಗೆ ೧೨೩ ಈ ಸಂಖ್ಯೆಯಲ್ಲಿ ಮೂರು ಎಕ್ಕಂಗಳು ಎರಡು ದಶಕಗಳು ಒಂದು ಶತಕ ಈ ರೀತಿಯಾದ ಸ್ಥಾನಿಕ ಬೆಲೆಯ ಕಲ್ಪನೆಯಿರುವದರಿಂದ ಮೂರು ಎರಡು ಒಂದು ಈ ಅಂಕೆಗಳಿಗೆ ಅಷ್ಟಷ್ಟು ಬೆಲೆಯು ತಾನಾಗಿ ಹುಟ್ಟಿಬಿಡುವದು. ಈ ಬಗೆಯಾದ ಸ್ವತಂತ್ರ ಬೆಲೆ ಸ್ಥಾನಿಕ ಬೆಲೆ ಈ ಎರಡು ಬಗೆಯಾದ ಬೆಲೆಯ ಕಲ್ಪನೆಯು ಕೂಡ ಹಿಂದು ತತ್ತ್ವಜ್ಞಾನದ ಮೂಲ ಆಧಾರವನ್ನೇ ಅವಲಂಬಿಸುವದು. ಹಿಂದು ತತ್ತ್ವಜ್ಞಾನದಲ್ಲಿ ಪದಾರ್ಥಗಳಿಗೆ ಅವುಗಳ ಸ್ವಂತ ಬೆಲೆಯಲ್ಲದೆ ಸುತ್ತಲಿನ ಪದಾರ್ಥಗಳ ಮೂಲಕವಾದ ಸ್ಥಾನಿಕ ಬೆಲೆಯೂ ಇದೆ. ಮತ್ತು ಸ್ವಂತ ಬೆಲೆಗಿಂತಲೂ ಈ ಸ್ಥಾನಿಕ ಬೆಲೆಯು ಅನಂತವಾಗಿರುವದು. ಈ ತತ್ತ್ವಜ್ಞಾನದ ವೈಶಿಷ್ಟ್ಯವೇ ಹಿಂದೂ ಗಣಿತಶಾಸ್ತ್ರಜ್ಞರು ಪರಿಶೋಧಿಸಿ ನಿರ್ಣಯಿಸಿದ ಅಂಕಿಗಳ ಸ್ವತಂತ್ರ ಬೆಲೆ ಸ್ಥಾನಿಕ ಬೆಲೆ ಇವುಗಳ ಕಲ್ಪನೆಗೆ ಮೂಲಾಧಾರವಾಗಿದೆಯೆಂದು ಹೇಳಿದರೆ ಪುನರುಕ್ತಿದೋಷವು ಬರಲಾರದೆಂದು ಭಾವಿಸುವೆವು.

ಸಂಖ್ಯಾಲೇಖನ ಕ್ರಮದೊಳಗಿನ ಈ ಬಗೆಯಾದ ಅಂಕಿಗಳ ಸ್ವತಂತ್ರ ಬೆಲೆ ಮತ್ತು ಸ್ಥಾನಿಕ ಬೆಲೆ ಇವನ್ನು ಮೊತ್ತಮೊದಲು ಕಂಡುಹಿಡಿದವರು ಯಾರೆಂಬ ಬಗ್ಗೆ ಶಾಸ್ತ್ರಜ್ಞರಲ್ಲಿ ಮೊನ್ನೆ ಮೊನ್ನಿನವರೆಗೂ ವಾದವಿವಾದಗಳು ನಡೆದೇ ಇದ್ದುವು. ಇದೊಂದು ದೊಡ್ಡ ವಾದಗ್ರಸ್ತ ವಿಷಯವೆನಿಸಿಕೊಂಡಿದ್ದಿತು. ಭಾರತೀಯರು, ಗ್ರೀಕರು, ಅರಬರು, ತಿಬೇಟಿಯನ್ನರು ಮುಂತಾದ ಅನೇಕರ ಹೆಸರು ಈ ವಿಷಯಕ್ಕೆ ಆಗಾಗ ಮುಂದೆ ಬರುತ್ತಿದ್ದಿತು. ಆದರೆ ಇತ್ತೀಚೆಗಿನ ಶೋಧಗಳಿಂದ ಇಂಥ ಮಹತ್ವದ ವಿಷಯದ ಶ್ರೇಯಸ್ಸು ಭಾರತೀಯರಿಗೇ ಸಲ್ಲಬೇಕೆಂದು ನಿಸ್ಸಂದೇಹವಾದ ನಿರ್ಣಯವಾಗಿದೆ.

ಯಾವದೊಂದು ಶೋಧದ ಶ್ರೇಯಸ್ಸು ಯಾವುದಾದರೊಂದು ವ್ಯಕ್ತಿಗೋ ಜನಾಂಗಕ್ಕೋ ಸಲ್ಲಬೇಕೆಂದು ನಿರ್ಣಯಿಸಬೇಕಾದರೆ ಎರಡು ಸಂಗತಿಗಳನ್ನು ಅನುಲಕ್ಷಿಸಿ ನೋಡಬೇಕಾಗುವದು. ಮೊದಲನೆಯದಾಗಿ ಅದು ಆ ಜನರಿಗೆ ಆವಶ್ಯಕವಾಗಿತ್ತೋ ಹೇಗೆ? ಎರಡನೆಯದಾಗಿ ಅದನ್ನು ಆ ವ್ಯಕ್ತಿಯು ಅಥವಾ ಆ ದೇಶದ ಜನರು ಮಿಕ್ಕವರಿಗಿಂತಲೂ ಮೊದಲು ಉಪಯೋಗಿಸುತ್ತಿದ್ದರೋ ಹೇಗೆ? ಸಾಧಕರು ಈ ಎರಡು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಸ್ಥಾಪಿಸಿಕೊಡಬೇಕಾಗುವದು. ಹಿಂದು, ಬೌದ್ಧ ಮತ್ತು ಜೈನ ಧರ್ಮಗಳಲ್ಲಿ ಮತ್ತು ತತ್ಸಂಬಂಧವಾದ ಸಾಹಿತ್ಯಗಳಲ್ಲಿ ಬಹು ದೊಡ್ಡ ಸಂಖ್ಯೆಗಳನ್ನು ಎಣಿಸಿ ಬರೆಯುವ ಪರಿಪಾಠವು ಕ್ರಿಸ್ತಶಕಾರಂಭವಾಗುವದಕ್ಕಿಂತಲೂ ಎಷ್ಟೋಕಾಲ ಮೊದಲೇ ಇತ್ತೆಂಬ ಬಗ್ಗೆ ಬೇಕಾದಷ್ಟು ಆಧಾರಗಳಿವೆ. ಭಾರತೀಯರಿಗೆ ತಮ್ಮ ಧಾರ್ಮಿಕ ನಿವೇಚನೆಗೆ ಇಂಥ ದೊಡ್ಡ ದೊಡ್ಡ ಸಂಖ್ಯೆಗಳ ವಿವೇಚನೆಯ ಆವಶ್ಯಕತೆ ಇತ್ತೆಂಬದು ಇದರಿಂದ ಸಿದ್ಧವಾಗುವದು. ಮತ್ತು ಕ್ರಿ. ಶಕಾರಂಭವಾಗುವದಕ್ಕಿಂತಲೂ ನೂರಾರು ವರ್ಷಗಳ ಮೊದಲೇ ಹುಟ್ಟಿದ ಬೌದ್ಧರ **ಲಲಿತ ವಿಸ್ತಾರ**ವೆಂಬ ಗ್ರಂಥದಲ್ಲಿ ನಮ್ಮ ಸದ್ಯದ ಸಂಖ್ಯಾಲೇಖನ ಕ್ರಮದಂತೆ ೫೬ ಸ್ಥಾನಗಳನ್ನು ಆಕ್ರಮಿಸುವಷ್ಟು ದೊಡ್ಡ ಸಂಖ್ಯೆಯು ಉಕ್ತವಾಗಿದೆ. ಜೈನ ತತ್ತ್ವಜ್ಞಾನಿಗಳು ೨೫೬೨೫ ಇಷ್ಟು ದೊಡ್ಡ ಸಂಖ್ಯೆಯನ್ನು ವಿವೇಚಿಸಿದ್ದಾರೆ. ಅರ್ಥಾತ್ ಭಾರತೀಯರು ತಮ್ಮ ಧರ್ಮ ಮತ್ತು ತತ್ತ್ವಜ್ಞಾನಗಳಲ್ಲಿ ಮಿಕ್ಕ ರಾಷ್ಟ್ರಗಳ ಜನರು ಅರಿತಿದ್ದ ಸಂಖ್ಯೆಗಳಿಗಿಂತಲೂ ಬಹು

ದೊಡ್ಡದಾದ ಸಂಖ್ಯೆಗಳನ್ನು ಪರ್ಯಾಲೋಚಿಸಿರುವರು. ಅವು ಅವರ ಸಾಹಿತ್ಯಗಳಲ್ಲಿ ಸುಸ್ಪಷ್ಟವಾಗಿ ಕಂಡುಬರುವವು. ಆದುದರಿಂದ ಹೆಚ್ಚು ದೊಡ್ಡ ದೊಡ್ಡ ಸಂಖ್ಯೆಗಳನ್ನು ಬರೆದು ಓದುವದು ಭಾರತೀಯರಿಗೆ ಮಿಕ್ಕ ರಾಷ್ಟ್ರಗಳ ಜನರಿಗಿಂತಲೂ ಮೊದಲೇ ಆವಶ್ಯಕವಾಗಿತ್ತೆಂದೂ ಅದು ಅವರಲ್ಲಿ ಪ್ರಚಾರದಲ್ಲಿತ್ತೆಂದೂ ಸಿದ್ಧವಾಗುವದು.

ಇನ್ನು ಶೂನ್ಯದ ಉಪಯೋಗದ ವಿಚಾರವನ್ನು ನೋಡೋಣ. ಕ್ರಿ. ಶಕಕ್ಕಿಂತಲೂ ಎರಡುನೂರು ವರುಷಗಳ ಮೊದಲೇ ರಚಿತವಾದ ಪಿಂಗಳನ '**ಛಂದಸ್ಸೂತ್ರ**'ದಲ್ಲಿ ಶೂನ್ಯವು ಉಪಯೋಗಿಸಲ್ಪಟ್ಟಿದೆ. ಸಂಸ್ಕೃತ ಸಾಹಿತ್ಯದೊಳಗೆ **ವಿಷ್ಣುಪುರಾಣ, ಅಗ್ನಿಪುರಾಣ, ವಾಯುಪುರಾಣ, ವಾಸವದತ್ತೆ** ಇವುಗಳಲ್ಲಿ ಸಂಖ್ಯಾಲೇಖನ ಕ್ರಮದಲ್ಲಿ ಅಂಕಿಗಳ ಸ್ಥಾನಿಕ ಬೆಲೆಯ ವಿಚಾರವು ಉಕ್ತವಾಗಿದೆ. ಪಾತಂಜಲಿಯ **ಯೋಗಸೂತ್ರ**ದ ಮೇಲೆ ಬರೆಯಲ್ಪಟ್ಟ **ವ್ಯಾಸ ಭಾಷ್ಯ**ದಲ್ಲಿ ಅದೇ ಅಂಕಿಯು ದಹಂ ಸ್ಥಾನದಲ್ಲಿದ್ದಾಗ ದಶಕವನ್ನೂ ಶತಂ ಸ್ಥಾನದಲ್ಲಿದ್ದಾಗ ಶತಕವನ್ನೂ ತೋರಿಸುವದೆಂದು ಸುಸ್ಪಷ್ಟವಾದ ಉಲ್ಲೇಖವಿದೆ. ಶಂಕರಾಚಾರ್ಯರ **ಶಾರೀರಕ ಭಾಷ್ಯ**ದಲ್ಲಿಯೂ ಇಷ್ಟೇ ಸುವ್ಯಕ್ತವಾದ ವಿವೇಚನೆಯಿರುವದು. ಕ್ರಿ. ಶಕದ ಮೂರನೆಯ ಶತಮಾನದಲ್ಲಿ ಬರೆಯಲ್ಪಟ್ಟ '**ಆರ್ಯಭಟ್ಟೀಯ**' ಗ್ರಂಥದಲ್ಲಿಯೂ ಐದನೆಯ ಶತಮಾನದಲ್ಲಿ ರಚಿತವಾದ '**ಪಂಚಸಿದ್ಧಾಂತಿಕಾ**'ದಲ್ಲಿಯೂ ಇನ್ನನೇಕ ಗಣಿತ ವಿಷಯದ ಮತ್ತು ಜ್ಯೋತಿಷ ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿಯೂ ಅಂಕಿಗಳ ಸ್ಥಾನಿಕ ಬೆಲೆಯ ಕಲ್ಪನೆಯಿಂದೊಡ ಗೂಡಿದ ದಶಕ ಪದ್ಧತಿಯ ಸಂಖ್ಯಾಲೇಖನ ಕ್ರಮವು ಉಕ್ತವಾಗಿರುವದು. ಇವೆಲ್ಲ ಆಧಾರ ಗಳನ್ನು ನೋಡಿದರೆ ಸದ್ಯಕ್ಕೆ ಪ್ರಚಾರದಲ್ಲಿರುವ ಸಂಖ್ಯಾಲೇಖನ ಪದ್ಧತಿಯು ನಮ್ಮ ದೇಶದಲ್ಲಿ ಕ್ರಿ. ಶಕಕ್ಕಿಂತಲೂ ಎರಡುನೂರು ವರ್ಷಗಳ ಮೊದಲೇ ಪ್ರಚಾರದಲ್ಲಿತ್ತೆಂದೂ ನಮ್ಮವರು ಅದನ್ನು ಚೆನ್ನಾಗಿ ಅರಿತುಕೊಂಡು ಉಪಯೋಗಿಸುತ್ತಿದ್ದರೆಂದೂ ಸಿದ್ಧವಾಗುವದು.

ಪ್ರಕೃತದ ಸಂಖ್ಯಾಲೇಖನ ಪದ್ಧತಿಯನ್ನು ಕಂಡುಹಿಡಿದ ಶ್ರೇಯಸ್ಸು ಭಾರತೀಯರಿಗೆ ಸಲ್ಲುವದೆಂಬ ಮಾತಿಗೆ ಹಲವು ಐತಿಹಾಸಿಕ ಸಂಗತಿಗಳೂ ಆಧಾರವಾಗಿವೆ. ಆರನೆಯ ಶತಮಾನ ದಿಂದೀಚೆಗಿನ ಹಲವು ಶಿಲಾಲೇಖಗಳಲ್ಲಿಯೂ ದಾನದತ್ತಿಗಳನ್ನು ವಿವರಿಸುವ ತಾಮ್ರಪಟ ಗಳಲ್ಲಿಯೂ ದಶಕಪದ್ಧತಿಯ ಸಂಖ್ಯಾಲೇಖನ ಕ್ರಮವು ಕಂಡುಬರುವದು. ಕ್ರಿ. ಶ. ದ ೫೯೫, ೬೭೪, ೭೨೫, ೭೩೬, ೭೫೬ ಮೊದಲಾದ ಇಸವಿಗಳ ಶಿಲಾಲೇಖನಗಳಲ್ಲಿ ಈ ಬಗೆಯ ಸಂಖ್ಯಾಲೇಖನ ಕ್ರಮವು ಕಂಡುಬಂದಿದೆ. ಇದರಿಂದ ಆರು ಏಳನೆಯ ಶತಮಾನಗಳಿಗಿಂತಲೂ ಮೊದಲೇ ನಮ್ಮ ದೇಶದಲ್ಲಿ ಸಾಮಾನ್ಯ ಜನಸಮುದಾಯಕ್ಕೂ ಕೂಡ ಈ ಬಗೆಯ ಸಂಖ್ಯಾ ಲೇಖನ ಕ್ರಮವು ಸುಪರಿಚಿತವಾಗಿತ್ತೆಂದೂ ಅದನ್ನು ಅವರು ತಮ್ಮ ದಿನದ ವ್ಯವಹಾರದಲ್ಲಿ ಬಳಸುತ್ತಿದ್ದರೆಂದೂ ಸಿದ್ಧವಾಗುವದು.

ಸುಮಾತ್ರಾದೊಳಗಿನ ಪಾಲೆಬಾಂಗ್‌ದಲ್ಲಿಯೂ ಇಂಡೋಚಾಯನಾದೊಳಗಿನ ಸಾಂಬರ ದಲ್ಲಿಯೂ ಶಾಲಿವಾಹನ ಶಕವರ್ಷ ೬೦೫ (ಕ್ರಿ. ಶ. ೬೮೩) ರಲ್ಲಿ ಹಿಂದೂ ಅರಸನಾದ ಶ್ರೀ ವಿಜಯನಿಂದ ಕೆತ್ತಿಸಲ್ಪಟ್ಟ ಶಿಲಾಲೇಖಗಳು ಉಪಲಬ್ಧವಾಗಿವೆ. ಈ ಶಿಲಾಲೇಖಗಳಿಂದ ಭಾರತೀಯರು ಪೂರ್ವದಲ್ಲಿ ಸುಮಾತ್ರಾ ಇಂಡೋಚಾಯನಾಗಳವರೆಗೂ ಹೋಗಿ ವಿಜಯಶಾಲಿ ಗಳಾಗಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿಕೊಂಡು ಅಳಿದರೆಂದೂ ಅಲ್ಲಿ ಹೋಗಿ ವಸಾಹತು ಗಳನ್ನು ಕಲ್ಪಿಸಿದ್ದರೆಂದೂ ಸಿದ್ಧವಾಗುವದಲ್ಲದೆ ಅವರು ತಮ್ಮ ಸಂಗಡ ತಮ್ಮ ಸಂಸ್ಕೃತಿ ಶಾಸ್ತ್ರ-ಜ್ಞಾನಗಳನ್ನು ಒಯ್ದು ಪ್ರಚಾರದಲ್ಲಿ ತಂದರೆಂದೂ ನಿರ್ಧಾರವಾಗುವದು. ಇದೇ ಮೇರೆಗೆ **ಪ್ರಕೃತದ ಸಂಖ್ಯಾಲೇಖನ ಕ್ರಮವನ್ನೂ ಕೂಡ ಆ ದೇಶಗಳಿಗೆ ನಮ್ಮವರೇ ಒಯ್ದರೆಂಬದು**

ನಿರ್ವಿವಾದವಾಗುವದು. ಇವು ಪೂರ್ವದೇಶಗಳ ಮಾತು. ಇದೇ ಮೇರೆಗೆ ಪಶ್ಚಿಮದ ದೇಶಗಳಲ್ಲಿ ಸೀರಿಯಾ ದೇಶದ ವಿದ್ವಾಂಸನಾದ ಸೆವೆರಸ್ ಸಭಕ್ತ್ ನೆಂಬವನು ಕ್ರಿ. ಶ. ೬೨೨ ರಲ್ಲಿ ಬರೆದ ಗ್ರಂಥದಲ್ಲಿ, (ಪ್ರಕೃತದ ಸಂಖ್ಯಾಲೇಖನ ಕ್ರಮದ ವಿಷಯದಲ್ಲಿ ಬರೆದಿರುವ ಲೇಖಗಳಲ್ಲಿ ಇದೇ ಎಲ್ಲಕ್ಕೂ ಹಿಂದಿನದು,) ಈ ಬಗೆಯಾದ ಉಲ್ಲೇಖವಿರುವದು. ಇದರಿಂದ ಪ್ರಕೃತದ ಸಂಖ್ಯಾಲೇಖನ ಪದ್ಧತಿಯನ್ನು ಮೊತ್ತಮೊದಲು ಶೋಧಿಸಿ ಪ್ರಯೋಗಿಸಿದ ಶ್ರೇಯಸ್ಸು ಭಾರತೀಯರಿಗೇ ಸಲ್ಲುವದೆಂದೂ ಆವರ ಕೀರ್ತಿಯು ಏಳನೆಯ ಶತಮಾನದ ಆರಂಭದಲ್ಲಿಯೇ ಯುಫ್ರೆತೀಸ್ ನದಿಯ ದಂಡೆಯವರೆಗೂ ಹಬ್ಬಿತ್ತೆಂದೂ ಸಿದ್ಧವಾಗುವದು. ಆ ಲೇಖವು ಹೀಗಿದೆ :—

"ನಾನು ಭಾರತೀಯರ ಶಾಸ್ತ್ರಜ್ಞಾನಕ್ಕೆ ಸಂಬಂಧಿಸುವ ವಿವಾದವನ್ನು ಬಿಟ್ಟು ಬಿಡುವೆನು. ಅವರು ಸೀರಿಯನ್ನರಿಗಿಂತಲೂ ಭಿನ್ನರಾಗಿರುವರು. ಜ್ಯೋತಿಷ ಶಾಸ್ತ್ರಕ್ಕೆ ಸಂಬಂಧಿಸಿದ ಅವರ ಶೋಧಗಳು, ಗ್ರೀಕರು, ಬಾಬಿಲೋನಿಯನ್ನರು ಇವರ ಶೋಧಗಳಿಗಿಂತಲೂ ಹೆಚ್ಚು ಪರಿಶುದ್ಧವಾಗಿವೆ. ಅವರ ಗಣಿತಶಾಸ್ತ್ರಕ್ಕೆ ಸಂಬಂಧಿಸಿದ ಜ್ಞಾನವು ವರ್ಣನಾತೀತವಾಗಿದೆ. ಅವರು ಒಂಬತ್ತೇ ಗುರುತುಗಳಿಂದ ಎಲ್ಲ ಸಂಖ್ಯೆಗಳನ್ನು ಬರೆದು ತೋರಿಸಬಲ್ಲರೆಂಬದೊಂದೇ ಮಾತನ್ನು ಇಲ್ಲಿ ಹೇಳಿಲಿಚ್ಛಿಸುವೆನು. ತಾವೇ ಸರ್ವಜ್ಞರೆಂದೂ ತಾವೇ ಎಲ್ಲ ಶಾಸ್ತ್ರಗಳ ಎಲ್ಲೆಯನ್ನು ಮುಟ್ಟಿದವರೆಂದೂ ಗ್ರೀಕರು ಭಾವಿಸಿಕೊಂಡಿದ್ದರೆ ಅವರು ತಮ್ಮಂತೆಯೇ ಜ್ಞಾನಸಂಪನ್ನರಾದ ಇತರ ಜನರೂ ಈ ಲೋಕದಲ್ಲಿರುವರೆಂಬದನ್ನು ತಿಳಿದಿರಲಿ."

ಪ್ರಾಚೀನಕಾಲದ ಅರಬ್ಬಿ ಗ್ರಂಥಕಾರರು ಪ್ರಕೃತದ ಸಂಖ್ಯಾಲೇಖನ ಪದ್ಧತಿಯನ್ನು ಕಂಡು ಹಿಡಿದವರು ಭಾರತೀಯರೇ ಎಂಬುದನ್ನು ನಿಷ್ಕರ್ಷೆಯಾಗಿ ಹೇಳಿದ್ದಾರೆ. ಇವರಲ್ಲಿ ಇಬನ್ ವಾಹರೊ (೮೫೫) ಖುವಾಹಿರೋ (೮೭೦) ಮತ್ತು ಅಬುಲ್ ಹಸನ್ ಅಲ್ ಮಸೂತಿ (೯೪೩) ಇವರು ಪ್ರಮುಖರು.

ಈ ಎಲ್ಲ ವಿವೇಚನೆಯಿಂದ ಪ್ರಕೃತದ ದಶಕ ಪದ್ಧತಿಯ ಸಂಖ್ಯಾಲೇಖನ ಕ್ರಮವನ್ನು ಪ್ರಚಾರದಲ್ಲಿ ತಂದವರು ಭಾರತೀಯರೇ ಎಂಬದು ಸಿದ್ಧವಾಗುವದು. ಮತ್ತು ಕ್ರಿ. ಶ. ಎಂಟು ಅಥವಾ ಒಂಬತ್ತನೆಯ ಶತಮಾನಕ್ಕಿಂತಲೂ ಮೊದಲು ಈ ದಶಕಪದ್ಧತಿಯು ತಮ್ಮಲ್ಲಿ ಪ್ರಚಾರದಲ್ಲಿತ್ತೆಂಬ ಬಗ್ಗೆ ಇನ್ನಾವ ರಾಷ್ಟ್ರದವರೂ ತಕ್ಕ ಆಧಾರಗಳನ್ನು ತೋರಿಸಲು ಸಾಧ್ಯವಿಲ್ಲ. ಆದುದರಿಂದ ಇಡಿಯ ಜಗತ್ತೇ ಈ ವಿಷಯದಲ್ಲಿ ನಮ್ಮ ಪೂರ್ವಜರ ಆಭಾರವನ್ನು ಮನ್ನಿಸಬೇಕಾಗಿದೆ. ಪೂರ್ವಕಾಲದ ಭಾರತೀಯ ವಿದ್ವಾಂಸರು ತಮ್ಮ ಆಯುಷ್ಯವನ್ನೆಲ್ಲ ಇಂಥ ಗಹನವಾದ ವಿಷಯಗಳ ಸಂಶೋಧನೆಗಳಲ್ಲಿ ಕಳೆದು ಜಗತ್ತನ್ನೆಲ್ಲ ಋಣಿಯಾಗಿ ಮಾಡಿರುವರು. ಅವರ ಪರಿಶ್ರಮದ ಫಲವನ್ನು ಇಂದಿಗೂ ಇಡಿಯ ಜಗತ್ತೇ ಅನುಭವಿಸುತ್ತದೆ. ಇನ್ನು ಮುಂದೆಯೂ ಅನುಭವಿಸುವದೆಂಬುದರಲ್ಲಿ ಸಂದೇಹವಿಲ್ಲ.

(ಡಾ. ಎ. ಎನ್. ಸಿಂಗ ಅವರ ಲೇಖನದ ಆಧಾರದಿಂದ)

ಆಹಾರ ಮೀಮಾಂಸೆ

ಸದ್ಯದ ಆಹಾರ ಸಾಮಗ್ರಿಗಳ ಕೊರತೆಯ ಕಾಲದಲ್ಲಿ ನಮ್ಮ ನಮ್ಮ ಪರಿಸ್ಥಿತಿಗೆ ಅನುಗುಣವಾಗಿ ಲಭ್ಯವಾಗಿರುವಷ್ಟೇ ಆಹಾರವನ್ನು ಹೇಗೆ ಉಪಯೋಗಿಸಿಕೊಂಡರೆ ಹೆಚ್ಚು ಪ್ರತಿಫಲವನ್ನು ಹೊಂದಬಹುದೆಂಬ ವಿಚಾರವನ್ನು ವಿಮರ್ಶಿಸುವದೆ ಪ್ರಕೃತ ಲೇಖನದ ಉದ್ದೇಶವು. ಆಹಾರ ಸಾಮಗ್ರಿಗಳ ಆರೋಗ್ಯಾನುಗುಣವಾದ ಯೋಜನೆ ಅದನ್ನು ತಯಾರಿಸುವ ಕ್ರಮ ಇವೆರಡು ಮುಖ್ಯ ಮಾತುಗಳನ್ನು ಇದರಲ್ಲಿ ಸಂಕ್ಷೇಪವಾಗಿ ವಿವರಿಸಲಾಗಿದೆ.

ನಾವು ತೆಗೆದುಕೊಳ್ಳುವ ಆಹಾರವು ನಮ್ಮ ಶರೀರದ ಬೆಳೆವಣಿಗೆಗೂ ಪೋಷಣೆಗೂ ಅನುಕೂಲವಾದದ್ದಿರಬೇಕಲ್ಲದೆ ಶರೀರದಲ್ಲಿ ಸಾಕಷ್ಟು ಉಷ್ಣತೆಯನ್ನು ಹುಟ್ಟಿಸಿ ಕಾರ್ಯ ಮಾಡುವ ಶಕ್ತಿಯನ್ನು ಕೊಡಬೇಕಾಗುವದು. ನಮ್ಮ ಶರೀರವು ಕೆಲವೊಂದು ಅವಧಿಯವರೆಗೆ ಬೆಳವಣಿಗೆಯನ್ನು ಹೊಂದಬೇಕಾಗುವದು. ಅಲ್ಲದೆ ಪ್ರತಿದಿನ ನಡೆಯಿಸುವ ಕಾರ್ಯಕಲಾಪಗಳಿಂದಾಗುವ ಸವಕಳಿಯನ್ನು ಪೂರೈಸಿಕೊಳ್ಳಬೇಕಾಗುವದು. ಹಾಲು, ತತ್ತಿ, ಎಣ್ಣೆಯ ಕಾಳುಗಳು, ಬೇಳೆಯ ಕಾಳುಗಳು ಇವುಗಳಲ್ಲಿರುವ ಪ್ರೋಟೀನಗಳು ಬೇರೆ ಬೇರೆ ಕ್ಷಾರಗಳು ವ್ಹಿಟಾಮಿನ್ ಎಂಬ ಜೀವನಸತ್ತ್ವಗಳು ಇವುಗಳಿಂದ ನಮ್ಮ ಶರೀರದ ಬೆಳೆವಣಿಗೆಯ ಮತ್ತು ಸವಕಳಿಯನ್ನು ಪೂರೈಸುವ ಕಾರ್ಯಗಳು ನಡೆಯುವವು. ನಾವು ಉಪಯೋಗಿಸುವ ಪಿಷ್ಟ, ಸಕ್ಕರೆ ಮತ್ತು ನೆಣ ಇವುಗಳಿಂದ ಶರೀರದಲ್ಲಿ ಉಷ್ಣತೆಯುಂಟಾಗಿ ಕಾರ್ಯಮಾಡುವ ಶಕ್ತಿಯುಂಟಾಗುವದು.

ನಾವು ಉಪಯೋಗಿಸುವ ಆಹಾರದೊಳಗಿನ ಘಟಕಗಳನ್ನು ವಿಭಜಿಸಿ ನೋಡಿದರೆ ಅವುಗಳಲ್ಲಿ ಮುಖ್ಯವಾಗಿ ಪ್ರೋಟೀನಗಳು, ನೆಣಗಳು, ಕಾರ್ಬೋಹೈಡ್ರೇಟಗಳು, ಕ್ಷಾರಗಳು ಜೀವನಸತ್ತ್ವಗಳು ಮತ್ತು ನೀರು ಎಂಬ ಘಟಕಗಳು ಇರುವವೆಂಬದು ಕಂಡುಬರುವದು.

ನಮ್ಮಲ್ಲಿ ಬಹುಜನರು ಬಹು ಪ್ರಮಾಣದಿಂದ ಉಪಯೋಗಿಸುವ ಆಹಾರವೆಂದರೆ ಅಕ್ಕಿ ಜೋಳ ಬೇಳೆ ಅಲ್ಪಸ್ವಲ್ಪ ಕಾಯಿಪಲ್ಲೆ ಮತ್ತು ಮಸಾಲೆಗಳು. ಇವುಗಳಲ್ಲಿ ಶರೀರದ ಬೆಳೆವಣಿಗೆಗೂ ಸವಕಳಿಯ ಪೂರೈಕೆಗೂ ಅವಶ್ಯಕವಾದ ಘಟಕಗಳು ತೀರ ಕಡಿಮೆ ಪ್ರಮಾಣದಲ್ಲಿರುತ್ತವೆ. ಶ್ರೀಮಂತರು ಉಪಯೋಗಿಸುವ ಹಾಲು, ಹಣ್ಣು, ತುಪ್ಪ, ತತ್ತಿ ಇವುಗಳಲ್ಲಿ ಪ್ರೋಟೀನಗಳು ಎಂದರೆ ನೆಣದ ಅಂಶವು ಹೆಚ್ಚಾಗಿರುವದು. ಆದುದರಿಂದ ಬಡಜನರು ಒಂದು ಪೃಷ್ಟಿಯಿಂದ ಅರೆಹೊಟ್ಟೆಯುಂಡು ಬದುಕುತ್ತಿದ್ದರೆ ಶ್ರೀಮಂತರು ಇನ್ನೊಂದು ರೀತಿಯಿಂದ ಉಂಡು ಉಪವಾಸಿಗಳಾಗಿ ಕಾಲಕ್ಷೇಪ ಮಾಡುತ್ತಿರುವರೆಂದು ಹೇಳಬೇಕಾಗುವದು. ಶರೀರಪೋಷಣೆ ಮತ್ತು ಬೆಳವಣಿಗೆ ಹಾಗು ಆರೋಗ್ಯರಕ್ಷಣೆ ಇವುಗಳ ದೃಷ್ಟಿಯಿಂದ ನೋಡಿದರೆ ಮೇಲೆ ಹೇಳಿದ ಎರಡೂ ಬಗೆಯ ಆಹಾರಯೋಜನೆಗಳು ಅಷ್ಟೇ ದೋಷಯುಕ್ತವೆನಿಸುವವು. ಮೇಲಾಗಿ ಆಹಾರವನ್ನು ತಯಾರಿಸುವ ಕ್ರಮದಲ್ಲಿರುವ ದೋಷಗಳಿಂದಲೂ ಅವುಗಳ ಪೋಷಕ ಶಕ್ತಿಯು ಇನ್ನಷ್ಟು ನಷ್ಟವಾಗಿ ಹೋಗುವದು. ಉದಾಹರಣಾರ್ಥವಾಗಿ ಅಕ್ಕಿ ಮುಂತಾದ ಧಾನ್ಯಗಳ ಕಾಳುಗಳ ಮೇಲಿರುವ ತೆಳ್ಳನ್ನ ಪರೆಯಲ್ಲಿಯೂ ಒಳಭಾಗದಲ್ಲಿರುವ ಬೀಜಾಂಕುರಗಳಲ್ಲಿಯೂ ವ್ಹಿಟಾಮಿನ್ ಎಂಬ ಜೀವನಸತ್ತ್ವಗಳೂ ಸತ್ವಯುಕ್ತವಾಗಿರುವ ಕ್ಷಾರಗಳೂ ವಿಶೇಷವಾಗಿರುವವು. ಬತ್ತವನ್ನು ಗಿರಣಿಯಲ್ಲಿ ಹಾಕಿದಾಗ

ಅದರ ಮೇಲಿನ ಪರೆಯೂ ಬೀಜಾಂಕುರವೂ ಸಂಪೂರ್ಣ ಸುಲಿದು ಹೋಗಿ ಉಳಿಯುವ ಬಿಳ್ಪಗಿನ ಅಕ್ಕಿಯು ತೀರ ನಿಸ್ಸತ್ವವಾಗಿರುವದು. ಜೋಳ ಗೋದಿ ಮುಂತಾದ ಧಾನ್ಯ ಗಳನ್ನು ಗಿರಣಿಯಲ್ಲಿ ಬೀಸುವಾಗ ಹುಟ್ಟುವ ಕಾವಿನಿಂದ ಅದರೊಳಗಿನ ಅತಿ ಮುಖ್ಯವಾದ ಆಹಾರ ಘಟಕಗಳು ಹುರಿದು ಸುಟ್ಟುಹೋಗುವವು. ಇದರಿಂದಲೂ ನಮ್ಮ ಆಹಾರವು ಮತ್ತಷ್ಟು ಅಪ್ರಯೋಜಕವೂ ದೋಷಯುಕ್ತವೂ ಆಗುವದು.

ನಾವು ಉಪಯೋಗಿಸುವ ಆಹಾರ ಸಾಮಗ್ರಿಗಳಲ್ಲಿ ಮೇಲೆ ಹೇಳಿರುವ ಬೇರೆ ಬೇರೆ ಘಟಕಗಳು ಹೆಚ್ಚು ಕಡಿಮೆ ಪ್ರಮಾಣದಲ್ಲಿರುವವು. ಕೆಲವೊಂದು ಪದಾರ್ಥದಲ್ಲಿರುವ ಸಾಮಗ್ರಿಯು ಮತ್ತೆ ಕೆಲವುಗಳಲ್ಲಿ ಇರುವದೇ ಇಲ್ಲ. ಈ ಬಗೆಯ ಕುಂದು ಕೊರತೆಗಳನ್ನು ಸರಿಪಡಿಸುವದಕ್ಕಾಗಿ ಬೇರೆ ಬೇರೆ ಜೀನಸುಗಳನ್ನು ತಕ್ಕ ಪ್ರಮಾಣದಲ್ಲಿ ಮಿಶ್ರಮಾಡಿ ಪ್ರತಿದಿವಸ ತಕ್ಕಷ್ಟು ಪ್ರಮಾಣದಿಂದ ಸೇವಿಸುತ್ತ ಹೋದರೆ ಅದು ಸರಿಯಾದ ಆಹಾರ-ವೆನಿಸುವದು. ಇದಕ್ಕೆ ಶಾಸ್ತ್ರಜ್ಞರು ಸಮತೋಲ ಆಹಾರ (balanced diet) ಎನ್ನುವರು. ಬಡತನವೇ ಮೂಲಕಾರಣವಾದ ಆಹಾರ ಸಾಮಗ್ರಿಗಳ ಕೊರತೆಯಿಂದ ನಮ್ಮ ಜನತೆಗೆ ಉಂಟಾಗಿರುವ ಹಾನಿಗಿಂತಲೂ ಅಷ್ಟೇ ಪೆಚ್ಚದಲ್ಲಿಯೇ ದೊರಕಿಸಬಹುದಾದ ಬೇರೆ ಬೇರೆ ಜೀನಸುಗಳನ್ನು ತಕ್ಕ ಪ್ರಮಾಣದಲ್ಲಿ ಸೇರಿಸಿ ಸೇವಿಸದಿರುವದರಿಂದುಂಟಾಗುವ ಹಾನಿಯೇ ಹೆಚ್ಚಿಂದು ಆಧುನಿಕ ಸಂಶೋಧಕರು ಕಂಡುಹಿಡಿದಿದ್ದಾರೆ. ಸಮತೋಲ ಆಹಾರವನ್ನು ಸೇವಿಸಲಿಕ್ಕೆ ಮಧ್ಯಮ ತರಗತಿಯ ಒಬ್ಬ ಮನುಷ್ಯನಿಗೆ ಒಂದು ತಿಂಗಳಿಗೆ ಸರಾಸರಿ ೫ ರೂ. ವೆಚ್ಚವೂ ಹೆಚ್ಚಿನ ತರಗತಿಯ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳುವ ಪರಿಸ್ಥಿತಿ-ಯುಳ್ಳವನಿಗೆ ಒಂದು ತಿಂಗಳಿಗೆ ೭ ರೂ. ವೆಚ್ಚವೂ ಬರುವದೆಂದು ಅವರು ಕಂಡುಹಿಡಿದಿ-ದ್ದಾರೆ. ಇದು ಮುಂಬಯಿಯಂಥ ದೊಡ್ಡ ಊರಿನ ಮಾತು. ಆದ್ದರಿಂದ ಹಳ್ಳಿಗಳಲ್ಲಿ ಈ ವೆಚ್ಚವು ಕಡಿಮೆಯಾಗುವದೆಂಬದು ಸ್ವಾಭಾವಿಕವೇ ಸರಿ. ಸಮತೋಲ ಆಹಾರವೆಂಬ ದೃಷ್ಟಿಯಿಂದ ಶಾಕಾಹಾರ ಮಾಂಸಾಹಾರಗಳೆರಡೂ ಅಷ್ಟೇ ಯೋಗ್ಯತೆಯವಿರುವವು.

ಒಬ್ಬ ಮನುಷ್ಯನಿಗೆ ಒಂದು ದಿವಸಕ್ಕೆ ಮುಂದೆ ಹೇಳುವಷ್ಟು ಆಹಾರ ಸಾಮಗ್ರಿಯು ದೊರೆತರೆ ಅದು ಸಮತೋಲ ಆಹಾರವೆನಿಸುವುದು. ಅಕ್ಕಿ (೧೧ ಔಂಸು) ಅಕ್ಕಿಯತೌಡು (೧ ಔಂಸು) ಇತರ ಧಾನ್ಯಗಳು— ಗೋದಿ ಸೆಜ್ಜೆ ಜೋಳ ಮು. (೫ ಔಂಸು) ಬೇಳೆಯ ಕಾಳುಗಳು—ಜೆನ್ನಂಗಿ ತೊಗರಿ ಬಟಗಡಲೆ ಅವರೆ ಮುಂ. (೨ ಔಂಸು) ಹುರುಳಿ (೧ ಔ.) ಸೋಯಾಬೀನ* (೧೪ ಔ.) ಕಾಳಿನ ಎಣ್ಣೆ (೧ ಔಂಸು) ತುಪ್ಪ—ಬೆಣ್ಣೆ (೧ ಔಂಸ) ಹಾಲು (೧೫ ಔಂಸು) ಹಿಂಡಿ—ನೆಲಗಡಲೆ ಮುಂ. (೪ ಔಂಸು) ಸಕ್ಕರೆ (೧ ಔಂಸು) ಕಾಯಿಪಲ್ಲೆ—ಛಪ್ಪರ ಬದನೇಕಾಯಿ, ಗಜ್ಜರಿ, ಉಳ್ಳೇಗಡ್ಡಿ, ಬಟಾಟೆ ಮುಂ. (೩ ಔಂಸು) ತೊಪ್ಪಲಪಲ್ಲೆ (೬ ಔಂಸು) ಮಸಾಲೆ ಮತ್ತು ಕ್ವಾರಗಳು ತುಸು ಪ್ರಮಾಣದಲ್ಲಿ.

ಇನ್ನು ಆಹಾರವನ್ನು ತಯಾರಿಸುವ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಿ ಈ ಲೇಖನವನ್ನು ಮುಗಿಸುವೆವು.

---

* ನಾವು ಸೋಯಾಬೀನವನ್ನು ಧಾರವಾಡ ಜಿಲ್ಲೆಯೊಳಗಿನ ಹುಲಕೋಟಿಯ ಸೀಡ ಸೊಸಾಯಟಿಯ ಚೇರಮನ್ನರಿಂದಾಗಲಿ ಸರದಾರ ಮಹಬೂಬ ಅಲ್ಲಿಖಾನ ಕಾಟನ್ ಕಮಿಶನ್ ಏಜಂಟ್ ಹುಬ್ಬಳ್ಳಿ ಇವರಿಂದಾಗಲಿ ದೊರಕಿಸಬಹುದು. ಇವುಗಳ ಬೆಲೆಯು ಲಂ ರತ್ಯಲಿನ ಒಂದು ಮಣಕ್ಕೆ ಎರಡುವರೆ ಮೂರು ರೂಪಾಯಿ ಬೀಳಬಹುದು.

ಅನ್ನ—ಮನೆಯಲ್ಲಿ ಕುಟ್ಟಿದ ಅಕ್ಕಿಯ ಅನ್ನವು ಆಹಾರದ ದೃಷ್ಟಿಯಿಂದ ಉತ್ತಮವಾದದ್ದು. **ವಡಪಲ** ಅಕ್ಕಿಯ ಅನ್ನವು ಇನ್ನೂ ಉತ್ತಮವಾದದ್ದು. ಗಿರಣಿಯಲ್ಲಿ ತಯಾರಾದ ಹಸನಾದ ಅಕ್ಕಿಯಿಂದ ಅನ್ನವನ್ನು ಮಾಡುವದು ಸುಲಭವೆನಿಸುವದು. ಯಾಕೆಂದರೆ, ಅದು ಸುಲಭವಾಗಿ ಕುದಿಯುವದು, ಕರಗಿ ಮುದ್ದೆಯಾಗುವದಿಲ್ಲ. ಹೆಚ್ಚು ಹಸನಮಾಡದೆ ಇದ್ದ ಕುಟ್ಟಿದ ಅಕ್ಕಿಯು ಅಥವಾ **ವಡಪಲ** ಅಕ್ಕಿಯು ಕುದಿಯಲಿಕ್ಕೆ ಹೆಚ್ಚು ಹೊತ್ತು ಹತ್ತುವದು. ಅಕ್ಕಿಯನ್ನು ಕುದಿಸಲಿಕ್ಕೆ ನೀರಿಗೆ ಹಾಕುವ ಮೊದಲು ಎರಡು ಮೂರು ಸಲ ತಿಕ್ಕಿ ತಿಕ್ಕಿ ತೊಳೆದು ನೀರು ಜೆಲ್ಲುವದೂ ಉಂಟು. ಮತ್ತು ಅಕ್ಕಿಯು ಕುದಿದ ಬಳಿಕ ಮೇಲಿನ ಗಂಜಿಯನ್ನು ಬಸಿದು ಚಲ್ಲುವದಂತೂ ಬಹು ಜನರಲ್ಲಿ ರೂಢಿಯಾಗಿದೆ. ಇದು ತೀರ ಅನಿಷ್ಟ ಪದ್ಧತಿಯು ಇದರಿಂದ ನಮ್ಮ ಶರೀರಕ್ಕೆ ಉಪಯೋಗವಾಗುವಂಥ ಒಳ್ಳೆಯ ರಸವತ್ತಾದ ಭಾಗವನ್ನೆಲ್ಲ ಹೊರಗೆ ಜೆಲ್ಲಿಕೊಟ್ಟು ಒಳಗಿನ ಬೆಂಡನ್ನು ತಿಂದಂತಾಗುವದು. ಅಕ್ಕಿಯನ್ನು ತೊಳೆದ ಕಚ್ಚಿನ ಮತ್ತು ಕುದಿಸಿದ ಗಂಜಿಯ ಸಂಗಡ ಅಕ್ಕಿಯಲ್ಲಿದ್ದ ಕ್ಷಾರವೆಲ್ಲ ಸೇರಿಕೊಂಡಿರುವದು. ಆದ್ದರಿಂದ ಕೈಯಿಂದ ಕುಟ್ಟಿ ಹೆಚ್ಚು ಹಸನಮಾಡದಿರುವ ಅಕ್ಕಿಯನ್ನು ಕಾರವಾರದ ಕಡೆಗೆ ಮಾಡುವಂತೆ ಗಂಜಿ (ಅಂಬಲಿ) ಯನ್ನು ಮಾಡಿ ಉಪಯೋಗಿಸುವದು ಒಳಿತು. ಅಥವಾ ಅಕ್ಕಿಯನ್ನು ಬೀಸಿ ರೊಟ್ಟಿಯನ್ನು ಮಾಡಿದರೂ ಅಡ್ಡಿಯಿಲ್ಲ. ಹೊಸ ಧಾನ್ಯದಲ್ಲಿ ಜೀವನಕ್ಕೆ ಆವಶ್ಯಕವಾದ ಪದಾರ್ಥಗಳು ಹೆಚ್ಚಾಗಿರುವವು. ಅಕ್ಕಿಯು ಹಳೆಯದಾಗುತ್ತ ಹೋದಂತೆ ಅದರಲ್ಲಿರುವ ಪೌಷ್ಟಿಕ ಪದಾರ್ಥಗಳು ಕಡಿಮೆಯಾಗುತ್ತ ಹೋಗಿ ಅದು ನಿಸ್ಸತ್ವವಾಗುವದು. ಹೊಸ ಅಕ್ಕಿಯ ಅನ್ನವು ಪಚನಕ್ಕೆ ಜಡವೆಂಬದು ಎಲ್ಲರ ಅನುಭವದ ಮಾತು.

ಅಕ್ಕಿಯ ನುಚ್ಚಿನ ಸಂಗಡ ಬತ್ತದಲ್ಲಿರುವ ಬೀಜಾಂಕುರವು ಕೂಡಿರುವದು. ಆದುದರಿಂದ ಅಕ್ಕಿಗಿಂತಲೂ ನುಚ್ಚು ಹೆಚ್ಚು ಹಿತಕರವಾದ ಆಹಾರವೆನಿಸುವದು. ಅದು ಅಗ್ಗವೂ ಆಗಿದೆ.

ಅಕ್ಕಿಯ ತೌಡಿನಲ್ಲಿ ನಮ್ಮ ಆಹಾರದ ಪದಾರ್ಥವಾದ ಪ್ರೋಟೀನಗಳೂ ಕ್ಷಾರಗಳೂ ಜೀವನಸತ್ತ್ವಗಳೂ ಇರುವವು. ಆದ್ದರಿಂದ ವಾರದಲ್ಲಿ ಒಂದೆರಡು ಸಾರೆ ಸ್ವಲ್ಪ ತೌಡನ್ನು ಸೇವಿಸುವದು ಅವಶ್ಯವಾಗಿದೆ. ದೊಡ್ಡ ತೌಡನ್ನು ಜೆಲ್ಲಿದರೆ ಅಡ್ಡಿಯಿಲ್ಲ ಆದರೆ **ವಡಪಲ**ಅಕ್ಕಿಯನ್ನು ತಳಿಸುವಾಗ ಹೊರಟ ನುಣುಪಾದ ತೌಡನ್ನು ರಸಪಲ್ಲೆಯ ಸಂಗಡವಾಗಲಿ ರೊಟ್ಟಿಯನ್ನು ಮಾಡುವ ಹಿಟ್ಟಿನ ಸಂಗಡವಾಗಲಿ ಬೆರಸಿ ತಿನ್ನುವದು ಅತ್ಯಂತ ಹಿತಕಾರಿಯಾಗಿರುವದು.

ಕುಡುಕಲ ಅಕ್ಕಿ (ಕುಚಗೆ ಅಕ್ಕಿ) ಕಾರವಾರದ ಕಡೆಗೆ ಬತ್ತವನ್ನು ಕುದಿಸಿ ಒಣಗಿಸಿ ಕುಟ್ಟಿ ಅಕ್ಕಿಯನ್ನು ಮಾಡುವ ರೂಢಿಯುಂಟು. ಹಾಗೆ ಕುದಿಸಿದಾಗ ಅದರೊಳಗಿನ ಕ್ಷಾರಗಳೂ ಜೀವನಸತ್ವಗಳೂ ಅಂಶತಃ ನಾಶವಾಗಿರುವವು. ಆದರೂ ಚೆನ್ನಾಗಿ ಹಸನು ಮಾಡಿದ ಗಿರಣಿಯ ಅಕ್ಕಿಗಿಂತಲೂ ಈ ಕುದುಕಲ ಅಕ್ಕಿಯು ಮೇಲ್ತರದ್ದೆನಿಸುವದು.

ಜೋಳವನ್ನೂ ಗೋದಿಯನ್ನು ಮನೆಯಲ್ಲಿ ಬೀಸಿ ಹಿಟ್ಟುಮಾಡಿಕೊಂಡು ಉಪಯೋಗಿಸುವದೇ ಉತ್ತಮವಾದ ಮಾರ್ಗವು. ಗಿರಣಿಯಲ್ಲಿ ಬೀಸಿದ ಹಿಟ್ಟಿನಲ್ಲಿ ಜೀವನಸತ್ವಗಳೂ ತೈಲದ ಅಂಶವೂ ಸುಟ್ಟುಹೋಗಿ ಹಿಟ್ಟು ನಿರ್ಜೀವವಾಗುವದು. ಪೇಟೆಯಲ್ಲಿ ಮಾರಲಿಕ್ಕೆ ದೊರೆಯುವ ಮೈದಾಹಿಟ್ಟು (ಬಿಳಿಯ ಬಣ್ಣವುಳ್ಳ ನುಣುಪಾದ ಹಿಟ್ಟು) ಆಹಾರದ ದೃಷ್ಟಿಯಿಂದ ತೀರ ನಿರುಪಯುಕ್ತವಾದದ್ದು. ಮನೆಯಲ್ಲಿ ಬೀಸಿದ ಗೋದಿಯ ಹಿಟ್ಟಿನಲ್ಲಿ ಹೊರಡುವ ತೌಡನ್ನು ಹೊರಗೆ ಜೆಲ್ಲಬಾರದು. ಅದನ್ನು ಪುನಃ ಸಣ್ಣಾಗಿ ಬೀಸಿ ಹಿಟ್ಟಿನಲ್ಲಿ ಕೂಡಿಸಿ ಉಪಯೋಗಿಸಬೇಕು. ಅಕ್ಕಿಯ ಮತ್ತು ಗೋದಿಯ ತೌಡಿನಲ್ಲಿ ಸೆಲ್ಯುಲೂಜ ಎಂಬ ಒಂದು ಬಗೆಯ ಬಿರುಸಾದ ಪದಾರ್ಥವಿರುತ್ತದೆ. ಇದರಿಂದ **ಕರುಳಿನ ಕೊನೆಯ ಭಾಗವು** ಚೇತನ

ಗೊಳ್ಳುತ್ತದೆ. ಮತ್ತು ಶಹರಗಳಲ್ಲಿರುವ ಸುಶಿಕ್ಷಿತರಲ್ಲಿ ಸರ್ವಸಾಮಾನ್ಯವಾಗಿರುವ ಮಲಬದ್ಧತೆಯ ರೋಗಕ್ಕೆ ಈ ತೌಡು ಒಳ್ಳೆಯ ಔಷಧವಾಗುವದು. ತೌಡನ್ನು ತೆಗೆದು ಜಲ್ಲಿದ ಹಿಟ್ಟನ್ನೂ ಗಿರಣಿಯ ಅಕ್ಕಿಯನ್ನೂ ಉಪಯೋಗಿಸುವದರಿಂದಲೇ ಈ ರೋಗವುಂಟಾಗುವದು. ಜೋಳವನ್ನು ಮನೆಯಲ್ಲಿ ಬೀಸಿ ಹಿಟ್ಟುಮಾಡುವದು ಒಳಿತೆಂದು ಮೇಲೆ ಹೇಳಿದೆ. ಅದರಂತೆಯೇ ಜೋಳವನ್ನು ನೆನೆಯಿಟ್ಟು ಮೊಳಿಕೆಯೊಡೆದಬಳಿಕ ಒಣಗಿಸಿ ಮೊಳಕೆಯು ಹೋಗುವವರೆಗೆ ತುಳಿಸಿ ತುಸು ಹುರಿದು ಬೀಸಿದ ಹಿಟ್ಟಿನಲ್ಲಿ 'ಮಾಲ್ಟ' ಎಂಬ ದ್ರವ್ಯವು ಸಿದ್ಧವಾಗಿರುವದರಿಂದ ಅದು ಉತ್ತಮ ಆಹಾರವೆನಿಸುವದು. ಇಂಥ ಹಿಟ್ಟಿನ ಗಂಜಿಯನ್ನು ಮಾಡಿ ಉಪ್ಪು ಕೂಡಿಸಿಯಾಗಲಿ ಹಾಲಿನಲ್ಲಿ ಕುದಿಸಿ ಸಕ್ಕರೆಬೆರಸಿಯಾಗಲಿ ಉಪಯೋಗಿಸಿದರೆ ಬಹುರುಚಿಕರವಾಗುವದು, ಅಷ್ಟೇ ಹಿತಕರವೂ ಆಗುವದು.

ಮೊಳಿಕೆಯೊಡೆದ ಕಾಳುಗಳು— ನಮ್ಮಲ್ಲಿ ಹೆಸರು, ಮಡಕೆ, ಕಡಲೆ ಮೊದಲಾದ ಕಾಳುಗಳನ್ನು ನೆನೆಯಿಟ್ಟು ಮೊಳಿಕೆಯೊಡೆದ ಬಳಿಕ ಉಸುಳಿ ಮಾಡಿ ಉಪಯೋಗಿಸುವ ಪರಿಪಾಠವುಂಟಷ್ಟೆ? ಹೀಗೆ ಕಾಳುಗಳನ್ನು ಮೊಳಿಕೆಯೊಡೆಯುವಂತೆ ಮಾಡುವದರಿಂದ ಅದರಲ್ಲಿ ಜೀವನಸತ್ವದಿಂದೊಡಗೂಡಿದ 'ಮಾಲ್ಟ' ಎಂಬ ಪದಾರ್ಥವು ಸಿದ್ಧವಾಗುವದು. ಆಗ ಕಾಳಿನಲ್ಲಿರುವ ಸ್ಟಾರ್ಚ ಮತ್ತು ಪ್ರೋಟೀನುಗಳ ಪಾಕವಾಗಲು ಅನುಕೂಲವಾಗುವುದಲ್ಲದೆ ಒಂದು ಬಗೆಯ ಹುಳಿಪದಾರ್ಥವು ಹುಟ್ಟುವದು. ಅದು ಆಹಾರವು ಪಚನವಾಗುವದಕ್ಕೆ ಸಹಾಯಮಾಡುವದು. ಕಾಳುಗಳನ್ನು ಮೊಳಿಕೆಯೊಡೆಯುವಂತೆ ಮಾಡಲು ಸರಿಯಾದ ಕ್ರಮವನ್ನು ಅನುಸರಿಸಬೇಕು. ಕಾಳುಗಳನ್ನು ಹಸನಮಾಡಿ ಸ್ವಚ್ಛವಾದ ನೀರಿನಲ್ಲಿ ಸುಮಾರು ೨೪ ತಾಸುಗಳ ವರೆಗೆ ನೆನೆಯಿಡಬೇಕು; ನಡುವೆ ಮೂರು ನಾಲ್ಕು ಸಲ ನೀರನ್ನು ಬದಲಿಸಿದರೆ ಒಳಿತಾಗುವದು. ನೆನೆದ ಕಾಳನ್ನು ಕಂಬಳಿಯ ಅಥವಾ ಗೋಣಿತಟ್ಟಿನಮೇಲೆ ಸುರುವಿ ಮೇಲೆ ಅಂಥದೆ ಹೊದಿಕೆಯನ್ನು ತಂಬಲವಾಗಿರುವಂತೆ ಇಟ್ಟಿರಬೇಕು. ಚಳಿಗಾಲವಾಗಿದ್ದರೆ ಮೇಲೆ ಮಣೆ ಮುಂತಾದ ಯಾವದೊಂದು ಮುಚ್ಚಳವನ್ನು ಹೇರಿಟ್ಟರೆ ಒಳಿತು. ಸುಮಾರು ಎರಡು ದಿವಸಗಳ ನಂತರ ಆ ಕಾಳುಗಳಿಗೆ ಮೊಳಿಕೆಯೊಡೆಯುವದು. ಈ ಬಗೆಯ 'ಮಾಲ್ಟ'ದಲ್ಲಿ ಹಸಿಯ ಕಾಳಿಗಿಂತಲೂ ಹೆಚ್ಚಿನ ಆಹಾರದ್ರವ್ಯವು ಸಿದ್ಧವಾಗಿರುವದು. ಇದರಲ್ಲಿ 'ಅ' ಮತ್ತು 'ಕ' ಜೀವನಸತ್ವಗಳು ತಯಾರಾಗಿರುವವು. ಈ ಬಗೆಯ ಕಾಳನ್ನು ಉಸುಳಿಮಾಡುವಾಗ ಮತ್ತೆ ಕುದಿಸಿ ನೀರು ಬಸಿಯುವದು ಸರಿಯಾದ ಕ್ರಮವಲ್ಲ. ಈ ಮೊಳಿಕೆಯೊಡೆದ ಕಾಳನ್ನು ವಗ್ಗರಣೆಗೆ ಹಾಕಿ ಸಂಗಡ ಅವರವರು ಉಪಯೋಗಿಸುವ ಮಸಾಲೆ, ಬೆಲ್ಲ, ಕೊಬ್ಬರಿ ಮುಂತಾದ ರುಚಿಕರ ಪದಾರ್ಥಗಳನ್ನು ಸೇರಿಸಿ ಸೇವಿಸಿದರೆ ಸಾಕು.

ಈ ಸಂದರ್ಭದಲ್ಲಿ ಸೋಯಾಬೀನನ್ನು ಕುರಿತು ನಾಲ್ಕುಮಾತು ಹೇಳಿದರೆ ಅಪ್ರಸ್ತುತವೆನಿಸದು. ಸೋಯಾಬೀನುಗಳು ನಮ್ಮ ದೇಶದಲ್ಲಿ ಪ್ರಚಾರದಲ್ಲಿರುವ ಅವರೆಯ ಕಾಳಿನಷ್ಟೇ ಬೆಲೆಗೆ ದೊರೆಯಬಹುದು. ಅದನ್ನು ನಾವು ನಮ್ಮ ಭೂಮಿಯಲ್ಲಿ ಬಿತ್ತಿ ಬೆಳೆಯುವದಕ್ಕೆ ಸಾಧ್ಯವಿದೆ. ಸೋಯಾಬೀನು ಶಾಕಾಹಾರಿಗಳಿಗೆ ಮಾಂಸದಷ್ಟೇ ಪೌಷ್ಟಿಕದ್ರವ್ಯಗಳನ್ನು ಒದಗಿಸಿಕೊಡಬಲ್ಲದು. ಇದರಲ್ಲಿ ನೂರಕ್ಕೆ ೪೦ ರಷ್ಟು ಪ್ರೋಟೀನುಗಳೂ ೨೦ರಷ್ಟು ಎಣ್ಣೆಯೂ ಇರುವವು. ಇವು ಪೋಷಕದ್ರವ್ಯವೆಂಬ ದೃಷ್ಟಿಯಿಂದ ಮಾಂಸಾಹಾರದೊಳಗಿನ ಪ್ರೊಟೀನು ನೆಣಗಳಿಗೆ ಸರಿಸಮಾನವಾಗಿರುವವು. ಎಲ್ಲ ಬಗೆಯ ಬೇಳೆಯ ಕಾಳುಗಳ ಬದಲು ಇದನ್ನು ಉಪಯೋಗಿಸಬಹುದು. ಸೋಯಾಬೀನು ಮೊದಲು ಮಂಚೂರಿಯಾದಿಂದ ನಮ್ಮ ದೇಶಕ್ಕೆ ಬಂದಿತು. ಸದ್ಯಕ್ಕೆ ಮುಂಬಯಿ ಇಲಾಖೆಯ ಒಕ್ಕಲುತನದ ಖಾತೆಯವರು ಇದನ್ನು ಬೆಳೆಯಲು ಪ್ರೋತ್ಸಾಹನ ಕೊಡುತ್ತಿದ್ದಾರೆ.

ಸೋಯಾಬೀನದಿಂದ ಮಾಲ್ಟ ತಯಾರಿಸುವಾಗ ಅಂದರೆ ಅದು ಮೊಳಕೆಯೊಡೆಯುವಾಗ ಒಂದು ಬಗೆಯ ದುರ್ವಾಸನೆ ಬರುವದುಂಟು. ಮೂರು ನಾಲ್ಕು ಸಲ ಸ್ವಚ್ಛ ನೀರಿನಿಂದ ತೊಳೆದು ಬಿಟ್ಟರೆ ಆ ದುರ್ವಾಸನೆ ಇಲ್ಲದಂತಾಗುವದು. ಮೊಳಕೆಯೊಡೆದ ಕಾಳನ್ನು ಸುಲಿದು ಬೇಳೆಮಾಡಿ ಒಣಗಿಸಿ ಇತರ ಕಾಳುಗಳ ಬೇಳೆಗಳ ಸಂಗಡ ಕೂಡಿಸಿ ಬೀಸಿ ತಯಾರಾದ ಹಿಟ್ಟನ್ನು ಉಪಯೋಗಿಸಿದರೆ ಹಿತವೂ ರುಚಿಕರವೂ ಆಗುವದು. ಸೋಯಾಬೀನಿನ ಬೇಳೆಯು ಬೇಗನೆ ಬೇಯುವದಿಲ್ಲ. ಮತ್ತು ಅವರ ಹಿಟ್ಟಿಗೆ ಒಂದು ಬಗೆಯಾದ ಒಗರು ರುಚಿಯಿರುವದು. ಸೋಯಾಬೀನಗಳನ್ನು ಕಾಫಿಯ ಬೀಜಗಳಂತೆ ಹುರಿದು ಪುಡಿಮಾಡಿಟ್ಟುಕೊಂಡು ಅದರಿಂದ ಸಾದಾ ಕಾಫಿಯಂತೆ ಕಾಫಿಯನ್ನು ಮಾಡಿ ಕುಡಿಯುವದರಿಂದ ಚಹಾ ಕಾಫಿಗಳಿಗಿಂತಲೂ ಹೆಚ್ಚು ಹಿತಕರವಾಗುವದು.

ನಾವು ದಿನದ ಅಡುಗೆಯಲ್ಲಿ ವಗ್ಗರಣೆ ಮುಂತಾದ ಕೆಲಸಗಳಿಗೆ ವನಸ್ಪತಿಗಳಿಂದ ತೆಗೆದ ಎಣ್ಣೆಯನ್ನು ಉಪಯೋಗಿಸುತ್ತೀವಷ್ಟೆ? ಹಾಗೆ ಉಪಯೋಗಿಸುವ ಎಣ್ಣೆಯನ್ನು ಚೆನ್ನಾಗಿ ಬಿಸಿಲು ಬಿದ್ದಾಗ ಅಗಲಬಾಯಿಯ ಪಾತ್ರೆಯಲ್ಲಿ ತುಂಬಿ ಕೆಲವು ತಾಸುಗಳ ವರೆಗೆ ಬಿಸಿಲಿಗೆ ತೆರೆದಿಟ್ಟರ ಬೇಕು. ಆಗ ಇದರಲ್ಲಿ 'ಡ' ಜೀವನಸತ್ವವು ತಯಾರಾಗುವದು. ತುಪ್ಪವು ನಾವು ಆಹಾರ ದಲ್ಲಿ ಉಪಯೋಗಿಸುವ ಎರಡನೆಯ ಸ್ನಿಗ್ಧ ಪದಾರ್ಥವಾಗಿದೆ. ಬೆಣ್ಣೆಯಲ್ಲಿ ತುಪ್ಪಕ್ಕಿಂತ ಹೆಚ್ಚು ಜೀವನಸತ್ವಗಳಿರುವವು. ಮತ್ತು ಬೆಣ್ಣೆಯು ಪಚನಕ್ಕೆ ಹಗುರಾಗಿರುವದು. ಆದ್ದರಿಂದ ತಾಜಾ ಬೆಣ್ಣೆಯನ್ನೇ ಹೆಚ್ಚಾಗಿ ಉಪಯೋಗಿಸುವದು ಒಳಿತು.

ಕಾಯಿಪಲ್ಲೆಗಳಿಗಿಂತಲೂ ತೊಪ್ಪಲ ಪಲ್ಲೆಗಳು ನಮಗೆ ಹೆಚ್ಚಿಗೆ ಪೋಷಕ ಪದಾರ್ಥಗಳನ್ನು ಒದಗಿಸಿಕೊಡಬಲ್ಲವು. ಅವು ತಾಜಾ ಇರಬೇಕು. ಕ್ಯಾಬೇಜ, ಪಾಲಕ, ಹರಿವಿ, ಹುಣಚಿಕ್ಕು, ಮೆಂತೆ ಮುಂತಾದ ತೊಪ್ಪಲ ಪಲ್ಲೆಗಳಲ್ಲಿ ಕಬ್ಬಿಣ, ಕ್ಯಾಲ್ಸಿಯಮ್, ಫಾಸ್ಫರಸ್ ಮುಂತಾದ ಖನಿಜ ದ್ರವ್ಯಗಳು ಹೆಚ್ಚಾಗಿರುವವು. ಅವು ನಮ್ಮ ಶರೀರದ ಆರೋಗ್ಯರಕ್ಷಣೆಗೂ ಪೋಷಣೆಗೂ ಅತ್ಯವಶ್ಯವಾಗಿ ಬೇಕು. ಮೂಲಂಗಿ ಸೀಮೂಲಂಗಿ ಇವುಗಳ ತೊಪ್ಪಲಗಳನ್ನು ತೆಗೆದು ಚೆಲ್ಲಿ ಗಡ್ಡೆಯನ್ನಷ್ಟೆ ಉಪಯೋಗಿಸುವ ರೂಢಿಯು ಒಳಿತಲ್ಲ. ಇದರಿಂದ ರಸವನ್ನು ಚೆಲ್ಲಿಕೊಟ್ಟು ಕಸವನ್ನು ತಿಂದಂತಾಗುವದು. ಚಪ್ಪರಬದನೇಕಾಯಿ, ಪಪ್ಪಯಿ ಮುಂತಾದವುಗಳಲ್ಲಿಯೂ ಜೀವನ ಸತ್ವಗಳು ಹೆಚ್ಚಾಗಿರುವವು. ಕಾಯಿಪಲ್ಲೆಯನ್ನಾಗಲಿ ತೊಪ್ಪಲು ಪಲ್ಲೆಯನ್ನಾಗಲಿ ಅವು ಗಳ ಒಗರು ಮುರಿಯಬೇಕೆಂದು ಹೆಚ್ಚಿ ಕುದಿಸಿ ನೀರು ಬಸಿದು ಚೆಲ್ಲುವದು ಒಳಿತಲ್ಲ. ಹಾಗೆ ಮಾಡುವದರಿಂದ ಜೀವನ ಸತ್ವಗಳು ನಾಶವಾಗುವದಲ್ಲದೆ ಅವುಗಳಲ್ಲಿರುವ ಖನಿಜ ದ್ರವ್ಯ ಗಳನ್ನು ಬಸಿದು ಚೆಲ್ಲಿದಂತಾಗಿ ಉಳಿಯುವ ಪಲ್ಲೆಯು ನಿಸ್ಸತ್ವವಾಗುವದು. ಇವುಗಳಿಂದ ಪಚಡಿ ತಯಾರಿಸಿ ಉಪಯೋಗಿಸಬೇಕು. ಊರೊಳಗೆ ಕಾಲರಾ ಮುಂತಾದ ಪಿಡಗು ಇರು ವಾಗ ಇವನ್ನು ಪೊಟ್ಯಾಶಿಯಮ್ ಪರಮಾಂಗನೇಟ ಕೂಡಿದ ನೀರಿನಿಂದ ತೊಳೆದು ಉಪಯೋಗಿಸಬೇಕು.

ದಿನದ ಅಡುಗೆಯಲ್ಲಿ ಮಸಾಲೆಯ ಜೀನಸುಗಳನ್ನು ಮಿತಿಯಿಂದ ಉಪಯೋಗಿಸುವದು ಒಳಿತು. ಖಾರಗೆಣಸು (ಅಲ್ಲ), ಕಾಳಮೆಣಸು, ಜೀರಿಗೆ, ಲವಂಗ, ಹವೀಜ ಮುಂತಾದ ಮಸಾಲೆಯ ಜೀನಸುಗಳಲ್ಲಿ ಅಯೋಡೀನದಂಥ ಖನಿಜ ದ್ರವ್ಯಗಳಿರುವದರಿಂದ ಅವು ಪಚನ ಶಕ್ತಿಯನ್ನು ಹೆಚ್ಚಿಸುವದಕ್ಕೆ ಸಹಾಯವಾಗುವವು. ಮತ್ತು ಆಹಾರದ ಜೀನಸುಗಳು ರುಚಿಕರ ವಾಗುವವು. ಮೆಣಸಿನಕಾಯಿ ಒಣ ಮೆಣಸಿನಕಾಯಿ ಇವುಗಳಲ್ಲಿ 'ಕ' ಜೀವನಸತ್ವವಿರುವದು. ಮಿತಿಮೀರಿ ಮಸಾಲೆ ಕಾರಗಳನ್ನು ಸೇವಿಸಿದರೆ ಅಪಾಯವಾಗುವದು.

ಜಾಹೀರ ನೋಟೀಸು

ನಂ. A. 8
3-7-1943

ಧಾರವಾಡ ಜಿಲ್ಲಾ ಸ್ಕೂಲ್‌ಬೋರ್ಡ ಎಡ್ಮಿನಿಸ್ಟ್ರೇಟಿವ್ಹ ಆಫೀಸರರ ಕಡೆಯಿಂದ—

ಈ ಮೂಲಕ ತಿಳಿಸುವದೇನಂದರೆ—೧೯೪೩-೪೪ ನೇ ಸಾಲಿನ ಬಗ್ಗೆ ಧಾರವಾಡ ಜಿಲ್ಲಾ ಸ್ಕೂಲ್‌ಬೋರ್ಡಿನ ಕೆಳಗೆ ಶಿಕ್ಷಕ **ಹಾಗೂ ಶಿಕ್ಷಿಕೆಯರ ಜಾಗೆಗಳ ಬಗ್ಗೆ** ಉಪೇದವಾರರನ್ನು ಆರಿಸತಕ್ಕದ್ದಿದೆ. ಕಾರಣ ಸದರ ಜಾಗೆಗಳ ಬಗ್ಗೆ ಅರ್ಜಿಮಾಡಲಿಚ್ಛಿಸುವ ಉಪೇದವಾರರು ತಮ್ಮ ಅರ್ಜಿಗಳನ್ನು ಛಾಪೀ ನಮೂನೆಯಲ್ಲಿ ನಮ್ಮ ಕಡೆಗೆ ತಾರೀಖು **೧೫-೮-೧೯೪೩** ನೇದರೊಳಗಾಗಿ ತಪ್ಪದೆ ಮುಟ್ಟುವಂತೆ ಕಳಿಸತಕ್ಕದ್ದು. ತಾರೀಖು ೫-೭-೧೯೪೩ ನೇದರ ಮೊದಲು ಹಾಗೂ ತಾರೀಖು ೧೦-೮-೧೯೪೩ ನೇದರ ಮೇಲೆ ಬಂದ ಅರ್ಜಿಗಳ ವಿಚಾರವಾಗಲಿಕ್ಕಿಲ್ಲ.

೨. ಅರ್ಜಿಯ ಛಾಪಿ ನಮೂನೆಗಳು ಆಯಾ **ತಾಲೂಕ ಶಾಲಾ** ಮಾಸ್ತರರ ಕಡೆಗೆ **ಅರ್ಧ ಆಣೆ** ಬೆಲೆಗೆ ದೊರೆಯುವ ವ್ಯವಸ್ಥೆ ಮಾಡಿದೆ. ಛಾಪಿ ನಮೂನೆಯಲ್ಲಿ ಇಲ್ಲದ ಅರ್ಜಿಗಳ ವಿಚಾರವಾಗಲಿಕ್ಕಿಲ್ಲ. ಅರ್ಜಿಯಲ್ಲಿ ಮ್ಯಾಜಿಸ್ಟ್ರೇಟರ ಸಹಿ ತೆಗೆದುಕೊಳ್ಳುವದು ಕಠಿಣವಾದರೆ ನೀವು ಕಲಿತ ಸಂಸ್ಥೆಯ ಮುಖ್ಯಾಧ್ಯಾಪಕರಿಂದ ಸಹಿಮಾಡಿಸಬೇಕು.

(*Sd.*) **N. T. Jagatap,**
Administrative Officer,
D. S. B. Dharwar.

ಪ್ರಕಟನೆ

ಸಧ್ಯ ರಾಷ್ಟ್ರೀಯ ಅಧ್ಯಾಪನ ಕೇಂದ್ರದಲ್ಲಿ ಶಿಕ್ಷಣಪಡೆದು ಸನ್ ೧೯೪೩ನೆಯ ಇಸ್ವಿಯ ಸರ್ಟಿಫಿಕೇಟ್ ಪರೀಕ್ಷೆಯಲ್ಲಿ ಪಾಸಾದ ಶಿಕ್ಷಕ ಶಿಕ್ಷಿಕೆಯರ ಹೆಸರುಗಳು ಕೆಳಗೆ ಕೊಟ್ಟ ಪ್ರಕಾರ ಗುಣಾನುಕ್ರಮವಾಗಿ ಇರುವವು.

ಅ.ನಂ.	ಹೆಸರುಗಳು	ಗುಣಗಳು.	ಅ. ನಂ.	ಹೆಸರುಗಳು	ಗುಣಗಳು
೧	ಎಸ್. ಎಸ್. ಮಲಕಣ್ಣವರ	೭೯೫	೬	ಎಸ್ ಜಿ. ಗೌಡರ	೭೫೪
೨	ವ್ಹಿ. ಎನ್. ಪಾಪಳೆ	೭೪೧	೭	ಎಸ್. ಜಿ. ಶಿವಪೂಜಿಮಠ	೭೫೨
೩	ಎಸ್. ವಾಯ್. ಪಟಗುಂದಿ	೭೭೧	೪	ಜಿ. ವ್ಹಿ. ನೂಲವಿ	೭೪೬
೪	ಜಿ. ಎಚ್. ಕಡಗದಕೈ	೭೬೯	೯	ಎಸ್. ಎನ್. ರೋಡಗಿ	೭೪೫
೫	ಆರ್. ಎ. ಜೋಶಿ	೭೬೧	೧೦	ಎಸ್. ಬಿ. ಕತ್ತಿ	೭೩೫

ಅ. ನಂ.	ಹೆಸರುಗಳು	ಗುಣಗಳು
೧೧	ಜಿ. ವ್ಹಿ. ಅಣ್ಣಾನಾಯಿಕ	೭೩೧
೧೨	ಬಿ. ಆರ್. ಆಲದಗೇರಿ	೭೨೫
೧೩	ಆರ್. ಎಮ್. ನಿಂಬಾಳಕರ	೭೨೦
೧೪	ಎ. ಆರ್. ಬೀಡಕರ	೭೦೦
೧೫	ಸಿ. ಎಸ್. ಕುಪ್ಪಸದ	೬೯೮
೧೬	ಎಸ್. ಎಮ್. ಅಂಗಡಿ	೬೯೬
೧೭	ಜಿ. ಬಿ. ನಾಡಗೌಡ	೬೯೫
೧೮	ಎಸ್. ವ್ಹಿ. ಭಟ್ಟ	೬೯೨
೧೯	ಎಂ. ವಾಯ್. ರೊಡ್ಡಣ್ಣವರ	೬೮೪
೨೦	(ಅ) ಎಲ್. ಎಲ್. ಗುಡಿಕೇರಿ	೬೮೨
೨೦	(ಬ) ಎಮ್. ಎನ್. ಕುಲಕರ್ಣಿ	೬೮೨
೨೨	ಸಿ. ಕೆ. ನೇಕಾರ	೬೮೦
೨೩	ಎಸ್. ಕೆ. ನೇರ್ಲಿಕರ	೬೭೦
೨೪	ಮಧುರೆ ಡಿ. ಪಿ.	೬೬೭
೨೫	ಟಿ. ಎಮ್. ಕುಲಕರ್ಣಿ	೬೬೬

ಅ. ನಂ.	ಹೆಸರುಗಳು	ಗುಣಗಳು
೨೬	ಬಿ. ವ್ಹಿ. ಅಣೆಪ್ಪನವರ	೬೫೯
೨೭	ಎನ್. ಬಿ. ಮುದಕವಿ	೬೫೫
೨೮	ವ್ಹಿ. ಎಸ್. ಲೋಕರೆ	೬೫೨
೨೯	ಎಚ್. ಆರ್. ಕುಲಕರ್ಣಿ	೬೪೯
೩೦	ಸಿ. ಎಸ್. ಬಿರಾದಾರ	೬೪೫
೩೧	ಆರ್. ಎಚ್. ಮಣ್ಣೇರಿ	೬೩೬
೩೨	ಎಲ್. ಆರ್. ದೊಡ್ಡಪತ್ತಾರ	೬೩೬
೩೩	(ಅ) ವಾಯ್.ಬಿ. ಮುಂಡಲಗೇರಿ	೬೧೪
೩೩	(ಬ) ಮಿಸ್. ಇಂದಿರಾಬಾಯಿ ಜಾನ್ ಡೇವಿಡ್	೬೧೪
೩೫	ಜಿ. ಎಮ್. ಸದರ ಜೋಶಿ	೫೪೫
೩೬	ಮಿಸೆಸ್. ಬಸವ್ವಾ ಪಾಟೀಲ	೫೩೬
೩೭	ಎಚ್. ಎ. ದೌಡಿ	೫೩೬
೩೪	ಸಿ. ಬಿ. ಮುಜುಮದಾರ	೫೫೬
೩೯	ಎಮ್. ಎಚ್. ಪಂಚಗಟ್ಟಿ	೫೪೫

(*Sd.*) R. V. Desai,
H. M. B. T. C. Dharwar,

ಗಂಡುಮಕ್ಕಳ ಟ್ರೇನಿಂಗ್ ಕಾಲೇಜ ಧಾರವಾಡ

ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮ ೧೯೪೩

ಒಟ್ಟು ಗುಣಗಳು ೯೫೦

ಡಿ. ಎಸ್. ಬಿ. ಧಾರವಾಡ

ನಂ.	ಹೆಸರುಗಳು	ಗುಣಗಳು
೧	ಅ. ಮ. ಕಿಲ್ಲೇದಾರ	೫೧೯
೨	ಅ. ದಾ. ಮುಂಡಗೋಡ	೫೧೩
೩	ಅ. ಹು. ನವಲಗುಂದ	೫೫೪
೪	ಅ. ಬ. ಮುಲ್ಲಾನವರ	೫೨೮
೫	ಅ. ರಾ. ಪೀರಚಾದೆ	೪೪೦
೬	ಭ. ರಾ. ಒಡ್ಡರ	೫೨೧
೭	ಭೀ. ಹ. ಸಬನೀಸ	೪೭೦
೮	ಭೀ. ಮು. ಕಿತ್ತೂರ	೫೬೧

ನಂ.	ಹೆಸರುಗಳು	ಗುಣಗಳು
೯	ಭೀ. ಬ. ರಾಜಪುರೋಹಿತ	೬೩೦
೧೦	ಧ. ಮ. ದುಶಿ	೫೩೨
೧೧	ದಾ. ಮು: ನದಾಫ	೪೮೪
೧೨	ಫ. ಭಿ. ತಳವಾರ	೬೧೯
೧೩	ಗ. ಬ. ಪಟ್ಟಣದ	೫೯೦
೧೪	ಗಿ. ಹ. ಬಾಲನಗೌಡರ	೪೫೪
೧೫	ಗು. ಬ. ನಾಡಿಗೇರ	೪೪೬
೧೬	ಗು. ವಿ. ಉಮಚಗಿ	೪೭೪
೧೭	ಗು. ಚ. ಮಠ	೫೩೦

ನಂ.	ಹೆಸರುಗಳು	ಗುಣಗಳು
೧೮	ಗೋ. ಹ. ಕಣ್ಣೇಕಲ್	೬೫೧
೧೯	ಹು. ಗು. ರಟ್ಟೀಹಳ್ಳಿ	೬೪೦
೨೦	ಕ. ಆ. ನಡುವಿನಮನಿ	೫೪೩
೨೧	ಕ್ಯಾ. ಬ. ಕಮಡೊಳ್ಳಿ	೪೦೦
೨೨	ಲ. ಬ. ಅಬ್ಬೀಗೇರಿ	೫೪೨
೨೩	ಮ. ದೇ. ಪಾಟೀಲ	೪೫೭
೨೪	ಮ. ಲಿ. ಕುಲಕರ್ಣಿ	೫೧೫
೨೫	ಮ. ಕ. ಹರದಗಟ್ಟಿ	೬೦೨
೨೬	ಮ. ನೂ. ಯಾಲಕ್ಕಿ	೫೪೦
೨೭	ಶಿ. ರಂ. ಪಾಟೀಲ	೫೬೪
೨೮	ಶಿ. ಭೀ. ಕುಲಕರ್ಣಿ	೫೪೪
೨೯	ಶಿ. ತೋ. ಹಿರೇಮಠ	೬೦೦
೩೦	ತಿ. ಬ. ಹಡಪದ	೫೫೩
೩೧	ವೀ. ಬ. ನೆಗಳೂರ	೬೧೬
೩೨	ವಿ. ಬ. ಶೀಪರಮಟ್ಟಿ	೫೧೩

ಡಿ. ಎಸ್. ಬಿ. ಬೆಳಗಾಂವಿ

೩೩	ಅ. ಚ. ಗುರವ	೫೪೫
೩೪	ಅ. ಖೋ. ಕಾವರೆ	೬೫೫
೩೫	ಬ. ಸೆ. ಇಂಗಳಗಿ	೬೬೭
೩೬	ಬ. ವೀ. ಕುರುಬೆಟ್ಟ	೬೬೮
೩೭	ಬಾ. ಜ. ಭೋರೆ	೫೪೨
೩೮	ಬಾ. ಶಾ. ಚೌಕಾಕೆ	೫೧೩
೩೯	ಬಾ. ನಿ. ಭಾವೀಹಾಳ	೫೪೫
೪೦	ಭೀ. ಬಾ. ಕುಲಕರ್ಣಿ	೫೨೯
೪೧	ಭೀ. ನ. ಮಣ್ಣೂರ	೬೪೪
೪೨	ಭೀ. ರಾ. ಬಿಲಾವರ	೫೩೪
೪೩	ದಾ ಗು. ಜೋಶಿ	೬೧೫
೪೪	ದಾ. ದು. ಮ್ಯಾಗೇರಿ	೫೧೨
೪೫	ದು. ಮಾ. ಜಾಡರ	೫೭೪
೪೬	ದು. ಸ. ಹರಗಾಪುರ	೫೦೪
೪೭	ಗ. ಘ. ದಳವಾಯಿ	೫೭೦
೪೮	ಗ. ಆ. ಮಿರಜಕರ	೬೧೭
೪೯	ಗೋ. ಅ. ಕುಲಕರ್ಣಿ	೫೨೩
೫೦	ಜಿ. ಚಿ. ದೇಸಾಯಿ	೬೦೭
೫೧	ಕೃ. ರಾ. ಭಡಕಲ್ಲ	೫೯೪

ನಂ.	ಹೆಸರುಗಳು	ಗುಣಗಳು
೫೨	ಲ. ಲ. ತಳವಾರ	೪೫೯
೫೩	ಲಿ. ನೀ. ಕಿಡೆಣ್ಣವರ	೬೧೨
೫೪	ಮ. ಭೀ. ಅನೂರೆ	೫೩೧
೫೫	ಮ. ವಿ. ತೋಟಿಗೇರ	೫೭೬
೫೬	ನ. ರಾ. ದೇಶಮುಖ	೪೪೭
೫೭	ನಾ. ದ. ಕುರಂದವಾಡ	೫೫೩
೫೮	ಪ್ರ. ಕೃ. ವೈದ್ಯ	೬೨೪
೫೯	ರಾ. ದೇ. ಅಂಗಡಿ	೫೫೯
೬೦	ರಾ. ರಾ. ಬೆಟಗೇರಿ	೫೫೩
೬೧	ರು. ತಿ. ಕುರುಬೆಟ್ಟ	೪೫೭
೬೨	ರು. ಚ. ಗಣಾಚಾರಿ	೪೬೫
೬೩	ಸ. ಕೂ. ಖೋದಾನಪುರ	೬೦೪
೬೪	ಸಾ. ಶ್ರೀ. ಕತ್ತಿ	೪೪೬
೬೫	ಸಾ. ಲ. ರಾವುತ	೫೭೦
೬೬	ಸೂ. ಜ. ರಜಪುತ	೪೫೭
೬೭	ಸ್ವಾ. ಅ. ಕುಲಕರ್ಣಿ	೬೦೫
೬೮	ಶ. ದು. ಮಠದ	೬೩೩
೬೯	ಶಿ. ಬ. ಕರೋಶಿ	೬೦೨
೭೦	ತಿ. ಭೀ. ಅಮ್ಮಿನಭಾವಿ	೫೪೨
೭೧	ವಾ. ಗು. ಹುದ್ದಾರ	೫೬೭

ಡಿ. ಎಸ್. ಬಿ. ವಿಜಾಪುರ

೭೩	ಅ. ಗ. ತಳವಾರ	೫೦೧
೭೪	ಅ. ಸಿ. ಲೋಖಂಡೆ	೬೨೧
೭೫	ಅ. ತಾ. ದಾಬಡೆ	೫೫೨
೭೬	ಬ. ಹ. ಬುರ್ಲಿ	೬೦೧
೭೭	ಬ. ಭೀ. ಪಾಟೀಲ	೫೨೦
೭೮	ಬಾ. ಖೋ. ಭೋವೇರ	೫೪೧
೭೯	ಚ. ಅ. ಕೋರಿ	೫೩೧
೮೦	ಚ. ವೀ. ಕುಂಬಾರ	೫೪೩
೮೧	ಧ. ಸ. ವಾರಿ	೫೧೫
೮೨	ಧೀ. ರಾ. ಉಮರ್ಜಿ	೫೦೧
೮೩	ಗು. ಮ. ಗೌರ	೫೬೧
೮೪	ಗೈ. ಕ. ಕೊಟ್ನಾಳ	೫೬೪
೮೫	ಹ. ರಾ. ಕುರುಬೆಟ್ಟ	೪೭೫
೮೬	ಜ. ಭೀ. ಗಿರಿಗೌಡರ	೪೪೨

ನಂ.	ಹೆಸರುಗಳು	ಗುಣಗಳು
೮೭	ಮು. ಸೆ. ಅವರಾದಿ	೫೫೧
೮೮	ಮು. ಚಿ. ಪುರಂದರೆ	೬೦೯
೮೯	ಮು. ತಿ. ಗುಡೂರ	೪೯೫
೯೦	ನಾ. ವೆ. ಕೌಜದಾರ	೫೩೮
೯೧	ಪಾ. ಗೋ. ಅಮೀನಗಡ	೫೦೨
೯೨	ಪಾ. ತಿ. ಎಡಹಳ್ಳಿ	೫೧೧
೯೩	ರಾ. ಗು. ಜೋಶಿ	೪೫೧
೯೪	ರಾ. ಅ. ಮೊಖಾಶಿ	೪೮೬
೯೫	ಸಾ. ತು. ವಿಧಾತೆ	೫೨೩
೯೬	ಶ. ರ. ಪಾಟೀಲ	೫೫೩
೯೭	ಶ. ಅ. ಹೆರೂರ	೫೮೮
೯೮	ಸೆ. ಎ. ಚಲವಾದಿ	೪೫೦
೯೯	ವಿ. ಕಂ. ಹಿರೇಮಠ	೫೫೦

ಡಿ. ಸ್ಕೂ. ಬೋ. ಕಾರವಾರ

೧೦೦	ಅ. ಬೀ. ನಾಯಿಕ	೫೧೭
೧೦೧	ಕು. ಲಿಂ. ಹೆಗಡೆ	೫೮೫
೧೦೨	ಕೃ. ಮು. ಭಟ್ಟ	೫೭೬
೧೦೩	ನಾ. ಭೀ. ಭಟ್ಟ	೪೭೦
೧೦೪	ನಾ. ರ. ಐಗಳ	೫೨೧
೧೦೫	ನಾ. ಡಿ. ಸಾನು	೫೯೭
೧೦೬	ಪಾ. ನಾ. ಶೆಟ್ಟಿ	೪೫೯
೧೦೭	ರಾ. ಬೀ. ನಾಯಿಕ	೫೬೦
೧೦೮	ರಾ. ಮು. ಶೇಟ	೪೦೩
೧೦೯	ಸು. ಅ. ನಾಯಿಕ	೩೬೫
೧೧೦	ಶ. ದೊ. ನಾಯಿಕ	೪೪೪

ಡಿ. ಎಸ್. ಬಿ. ಸೊಲ್ಲಾಪುರ

೧೧೧	ಭಾ. ಪ. ಹೊರಗಿನ ಮತ	೫೪೫

ಮ್ಯು. ಸ್ಕೂ. ಬೋ. ಧಾರವಾಡ

೧೧೨	ಫ. ಹ. ಶಿಂಧೆ	೪೭೯

ಮ್ಯು. ಸ್ಕೂ. ಬೋ. ಹುಬ್ಬಳ್ಳಿ

೧೧೩	ಬ. ಮು. ಹಿರೇಮಠ	೫೧೬
೧೧೪	ದೇ. ಅ. ಹೋಮಕರ	೫೭೬
೧೧೫	ಗ. ಚ. ಮಜ್ಜಿಗುಡ್ಡ	೬೭೭

ನಂ,	ಹೆಸರುಗಳು	ಗುಣಗಳು
೧೧೬	ಈ. ಅ. ಮೆಣಸಿನಕಾಯಿ	೫೫೪
೧೧೭	ಮು. ಅ. ಮಳಗಿ	೪೯೩
೧೧೪	ಪಾ. ಎ. ಅಪ್ಪಣ್ಣವರ	೪೪೬
೧೧೯	ರು. ಚ. ಹಿರೇಮಠ	೪೩೯
೧೨೦	ಶ. ಚ. ಭುಲ್ಲಿ	೫೪೧
೧೨೧	ಎ. ಭೀ. ಕುಸುಗಲ್ಲು	೪೯೧

ಮ್ಯು. ಸ್ಕೂ. ಬೋ. ಗದಗ

೧೨೨	ಅ. ಸಿ. ಗಚ್ಚಿನಮಠ	೫೭೪
೧೨೩	ಭೀ. ರಾ. ಸವದತ್ತಿ	೫೧೪
೧೨೪	ಗು. ಪ. ವಿರಕ್ತಮಠ	೪೧೯
೧೨೫	ಹ. ಫ. ಪಲ್ಲೇದ	೫೭೧
೧೨೬	ಮ. ಬ. ಶೆಟ್ಟೆಪ್ಪನವರ	೫೭೪
೧೨೭	ನಾಗೇಂದ್ರಸಾ ಮು. ಬಾಕಳೆ	೪೪೪
೧೨೪	ಸ. ಫ. ಹೂಗಾರ	೫೪೫
೧೨೯	ಸ. ಸ. ಕೊರ್ಲಹಳ್ಳಿ	೫೬೨

ಮ್ಯು. ಸ್ಕೂ. ಬೋ. ವಿಜಾಪುರ

೧೩೦	ಅ. ತ್ರಿ. ಹಿಪ್ಪರಗಿ	೫೫೩
೧೩೧	ಬಾ. ನಿ. ಮಳಲಿ	೪೪೯
೧೩೨	ಕ. ಜಾ. ಜಾಗೀರದಾರ	೪೫೪
೧೩೩	ನಿ. ಸಾ. ಸಜ್ಜನ	೪೫೪
೧೩೪	ಪು. ಬ. ಮತ	೫೦೫

ಮ್ಯು. ಸ್ಕೂ. ಬೋ. ಸೊಲ್ಹಾಪುರ

೧೩೫	ಗು. ರೇ. ಆವಟಿ	೫೭೪

ಪಿ. ಸಿ. ಸೆಟಿಲಮೆಂಟ ಹುಟಗಿ

೧೩೬	ಫ. ಎ. ಹಲಕುರ್ಕಿ	೪೪೭

ಹೊರಗಿನವರು

ಧಾರವಾಡ ಜಿಲ್ಲೆ

ಬಾಸೆಲ್ ಮಿಶನ್ ಸ್ಕೂಲ್ ಗದಗ

೧೩೭	ದೇ. ದಾ. ಜೇಸುದಾಸ	೪೯೪

ಕೆ. ಎಲ್. ಈ. ಸೊಸಾಯಿಟಿ, ಧಾರವಾಡ

೧೩೮	ಗು. ಪ. ಯರನಾಳ	೫೭೯
೧೩೯	ಟಾ. ಭೀ. ಬಂಕಾಪುರ	೫೬೪

ನಂ.	ಹೆಸರುಗಳು	ಗುಣಗಳು
	ಎಜ್ಯುಕೇಶನ್ ಸೊಸಾಯಿಟಿ ಹುಲಕೋಟಿ	
೧೪೦	ಹ. ಡಾ. ಜಲರಡ್ಡಿ	೫೬೦
	ಮಾಡರ್ನ ಎಜ್ಯುಕೇಶನ್ ಸೊಸಾಯಿಟಿ ಧಾರವಾಡ	
೧೪೧	ಇ. ಕಾ. ಅಬ್ಯಾಳ	೪೮೦
	ಸೇಂಟ್ ಥಾಮಸ್ ಪ್ರಾಯಮರಿಸ್ಕೂಲ್ ಅಳಣಾವರ	
೧೪೨	ಜು. ಬ. ಫಿಗೇರ	೪೮೨
	ಎಡೆಡ್ ಪ್ರಾಯಮರಿಸ್ಕೂಲ್ ಕಲ್ಲೆ ಗದಗ	
೧೪೩	ಕೃ. ಸಿ. ಸಿಂಧೆ	೫೩೪
	ಆಂಜನೇಯ ಎಜ್ಯುಕೇಶನ್ ಸೊಸಾಯಿಟಿ ಧಾರವಾಡ	
೧೪೪	ಕೃ. ರಾ. ಕಟ್ಟಿ	೪೮೧
೧೪೫	ಶಾ. ಗು. ಬಾಗಲಕೋಟೆ	೪೯೪
	ಪಿ. ಎಸ್. ಈ. ಮಂಡಲ ಧಾರವಾಡ	
೧೪೬	ಮೂ. ಸಾ. ಹಡಪದ	೫೪೪
೧೪೭	ಸೋ. ಗ. ಸಂಗಣ್ಣವರ	೫೫೬
	ಯೂನಿಯನ್ ಕೋ. ಆ. ಸೊಸಾಯಿಟಿ ಹುಲಕೋಟಿ	
೧೪೮	ನಾ. ದೇ. ಬಡಿಗೇರ	೫೭೦
	ಮಾಡರ್ನ ಎಜ್ಯುಕೇಶನ್ ಸೊಸಾಯಿಟಿ ಧಾರವಾಡ	
೧೪೯	ಸಾ. ಸಾ. ಗುಂಡಿ	೫೭೩
	ಬಾಸೆಲ್ ಮಿಶನ್ ಟೌನ್‌ಸ್ಕೂಲ್ ಗದಗ	
೧೫೦	ಸು. ಸ. ಕೋರಿಶಟ್ಟಿ	೫೭೪
	ಹುಬ್ಬಳ್ಳಿ ಎಜ್ಯುಕೇಶನ್ ಸೊಸಾಯಿಟಿ ಹುಬ್ಬಳ್ಳಿ	
೧೫೧	ವೀ. ಬ. ಹನಸಿ	೫೪೧

ನಂ.	ಹೆಸರುಗಳು	ಗುಣಗಳು
	ಬೆಳಗಾವಿ ಜಿಲ್ಲೆ	
	ಪ್ರಾಯವೇಟ ರೋಡಿಯನ್ ಎಡೆಡ್‌ಸ್ಕೂಲ್ ಬೆಳಗಾವಿ	
೧೫೨	ಕೃ. ರಾ. ಕುಲಕರ್ಣಿ	೫೫೨
	ಪ್ರಾಯಮರಿಸ್ಕೂಲ್ ಗೋಕಾಕ ಫಾಲ್ಸ ತಾ. ಗೋಕಾಕ	
೧೫೩	ನಾ. ವ್ಯಾ. ಜಂಬಗಿ	೫೯೭
	ಎಡೆಡ್ ಪ್ರಾಯಮರಿಸ್ಕೂಲ್ ನಂ. ೧ ಅಥಣಿ	
೧೫೪	ರಾ. ಶಿ. ದೀಕ್ಷಿತ	೫೯೧
	ಕುಂದರನಾಡ ಶಿಕ್ಷಣ ಪ್ರಸಾರ ಮಂಡಳ ಅಂಕಲಗಿ	
೧೫೫	ಶಿ. ನಿ. ಮಾರಿಹಾಳ	೫೪೬
	ವಿಜಾಪುರ ಜಿಲ್ಲೆ	
	ಪಿ. ಎಸ್. ಪಿ. ಮಂಡಳ ಬಾಗಲಕೋಟೆ	
೧೫೬	ನಾ. ರಾ. ಉಮ್ಮರ್ಜಿ	೫೮೨
	ಬಸವೇಶ್ವರ ಪ್ರಾ. ಸ್ಕೂ. ಬಾಗಲಕೋಟೆ	
೧೫೭	ಶಿ. ಹ. ಪಾಟೀಲ	೫೮೬
	ವ್ಹಾಲಂಟೆರಿ ಎಡೆಡ್‌ಸ್ಕೂಲ್ ಕೊಳಗಿ	
೧೫೮	ದ. ಅ. ದೀಕ್ಷಿತ	೫೭೩
	ಹೊರಗಿನಿಂದ ಪರೀಕ್ಷೆಗೆ ಕುಳಿತವರು	
	ಡಿ. ಎಸ್. ಬಿ ಬೆಳಗಾವಿ	
೧೬೦	ಜಿ. ಜಿ. ಕುಲಕರ್ಣಿ	೪೯೯
	ಡಿ. ಎಸ್. ಬಿ. ವಿಜಾಪುರ	
೧೬೨	ನಾ. ಶಾ. ಜೋಶಿ	೩೭೨
	ಡಿ. ಎಸ್. ಬಿ. ಕಾರವಾರ	
೧೬೩	ಮ. ಬಾ. ನಾಯಿಕ	೪೦೧
೧೬೪	ಎನ್. ವ್ಹಿ. ಕಳಗುಜ್ಜಿ	P
೧೬೬	ರಾ. ಗೋ. ಗಾವಕರ	೪೩೪
	ಎಡೆಡ್ ಪ್ರಾ. ಶಾ. ನಂ. ೨ ಅಥಣಿ	
೧೬೭	ರಾ. ಭ. ನಾರಪ್ಪನವರ	P

ಧಾರವಾಡ ಟ್ರೇ. ಕಾ.
ತಾ ೫ ಜೂನ ೧೯೪೨

(*Sd.*) H. S. Torgal,
ಪ್ರಿನ್ಸಿಪಾಲರು,

ನಂಬರು	ಪಾರಿತೋಷಕದ ಹೆಸರು	ಪಾರಿತೋಷಕ	ಪಡೆದವರ ಹೆಸರಗಳು
೧	ಗಾಯಿಲ್ಸ ಪ್ರಾಯಿಝು ಶಿಕ್ಷಣದಲ್ಲಿ ೧ ನೆಯ ನಂ. ಬಂದುದಕ್ಕಾಗಿ	೧೬ ರೂ. ೮ ಆ. ೦ ಪೈ	ಬಿ. ಎನ್. ಮಣ್ಣೂರ ಡಿ. ಸ್ಕೂ. ಬೋ. ಬೆಳಗಾವಿ
೨	ಜನರಲ್ ಪ್ರಾಯಿಝು ೧ ನೆಯದು ಶಿಕ್ಷಣ ವಿಷಯದಲ್ಲಿ ೨ ನೆಯ ನಂಬರು ಬಂದುದಕ್ಕಾಗಿ	೧೨ ರೂ. ೦ ಆ. ೦ ಪೈ.	ಎಚ್. ಜಿ. ರಟ್ಟಿಹಳ್ಳಿ ಡಿ. ಸ್ಕೂ. ಬೋ. ಧಾರವಾಡ
೩	ಸರ್ ಜೇಮ್ಸ ಮಾಂಟೀಥ ಪ್ರಾಯಿಝು ೧ ನೆಯದು. ಕನ್ನಡದಲ್ಲಿ ೧ ನೆಯ ನಂ. ಬಂದುದಕ್ಕಾಗಿ	೧೫ ರೂ. ೦ ಆ. ೦ ಪೈ.	ಜಿ. ಎಚ್. ಕಣೇಕಲ್ ಡಿ. ಸ್ಕೂ. ಬೋ. ಧಾರವಾಡ
೪	ಸರ್ ಜೇಮ್ಸ ಮಾಂಟೀಥ ಪ್ರಾಯಿಝು ೨ ನೆಯದು. ಕನ್ನಡದಲ್ಲಿ ೨ ನೆಯ ನಂ. ಬಂದುದಕ್ಕಾಗಿ	೧೩ ರೂ. ೦ ಆ. ೦ ಪೈ.	ಪಿ.ಕೆ. ಪೈದ್ಯ ಡಿ.ಎಸ್.ಬಿ. ಬೆಳಗಾವಿ ಎಸ್. ಡಿ. ಮಠದ ಡಿ.ಎಸ್.ಬಿ. ಬೆಳಗಾವಿ } ಇಬ್ಬರಲ್ಲಿ ಸಮನಾಗಿ ಹಂಚಿದೆ
೫	ಜನರಲ್ ಪ್ರಾಯಿಝು ೨ ನೆಯದು ಗಣಿತ ಮತ್ತು ಶಾಸ್ತ್ರೀಯ ವಿಷಯಗಳಲ್ಲಿ ೧ ನೆಯ ನಂ. ಬಂದುದಕ್ಕಾಗಿ	೧೨ ರೂ. ೦ ಆ. ೦ ಪೈ.	ಬಿ. ಎನ್. ಮಣ್ಣೂರ ಡಿ. ಎಸ್. ಬಿ. ಬೆಳಗಾವಿ
೬	ಜನರಲ್ ಪ್ರಾಯಿಝು ೩ ನೆಯದು ಚಿತ್ರಕಲೆ ಮತ್ತು ಕೈಕೆಲಸಗಳಲ್ಲಿ ೧ ನೆಯ ನಂ. ಬಂದುದಕ್ಕಾಗಿ	೧೨ ರೂ. ೦ ಆ. ೦ ಪೈ.	ಸಿ.ಎ. ಕೋರಿ ಡಿ.ಎಸ್.ಬಿ.ವಿಜಾಪುರ ಎನ್.ಎಂ.ಬಾಕ್ಳೆ ಮ್ಯು.ಸ್ಕೂ.ಬೋ.ಗದಗ } ಇಬ್ಬರಲ್ಲಿ ಸಮನಾಗಿ ಹಂಚಿದೆ
೭	ಚಾಟ್ ಫೀಲ್ಡ ಮೆಮೋರಿಯಲ್ ಪ್ರಾಯಿಝು ಜನರಲ್--ಪ್ರೊಫಿಸಿಯನ್ಸಿ	೧೬ ರೂ. ೦ ಆ. ೦ ಪೈ.	ಬಿ. ಎನ್. ಮಣ್ಣೂರ ಡಿ. ಎಸ್. ಬಿ. ಬೆಳಗಾವಿ

ಟ್ರೇನಿಂಗ್ ಕಾಲೇಜ ಫಾರ್ ಮೆನ್ ಧಾರವಾಡ
ತಾ|| ೫ ಜೂನ್ ೧೯೪೩

(*Sd.*) H. S. Torgal
ಪ್ರಿನ್ಸಿಪಾಲರು

ಧಾರವಾಡದ ಹೆ. ಟ್ರೇ. ಕಾ. ಸ. ಪ. ಪರಿಣಾಮ ೧೯೪೩

೨ನೇ ವರ್ಷದ ಪರೀಕ್ಷೆ ಪಾಸಾದವರು ಒಟ್ಟು ಗುಣಗಳು ೯೭೫

ನಂ.	ಹೆಸರು	ಗುಣಗಳು	ನಂ.	ಹೆಸರು	ಗುಣಗಳು
೧	ಗುರಲಿಂಗವ್ವ ಗಣಾಚಾರಿ	೫೩೩	೧೬	ಕೃಷ್ಣಾಬಾಯಿ ಘಂಟಿ	೪೯೮
೨	ಪ್ರವಾಸಿಬಾಯಿ ಗವಳಿ	೫೦೩	೧೭	ಸಾವಿತ್ರವ್ವ ಮಣಕವಾಡ	೫೬೬
೩	ಸುಶೀಲಾಬಾಯಿ ಜೋಗಿನ	೪೭೮	೧೮	ತಿಪ್ಪವ್ಮಾ ಹೊಸೂರಕರ	೪೫೬
೪	ಮಿಲ್ಕಾಬಾಯಿ ಮುಷ್ಟಿಗೇರಿ	೪೯೧	೧೯	ಭಾಗೀರಥಿಬಾಯಿ ಗುಡೋಡಗಿ	೪೩೪
೫	ಕಾಳವ್ವ ಟಂಕಸಾಲಿ	೪೫೬	೨೦	ಶಿವಗಂಗವ್ವ ಪಟ್ಟಣಶೆಟ್ಟಿ	೬೨೧
೬	ರಿಂದವ್ವ ಮಂಟೂರ	೬೭೯	೨೧	ಪದ್ಮಾವತಿ ಉಮರ್ಜಿ	೬೮೦
೭	ಯಲ್ಲೂಬಾಯಿ ದೇವಕರ	೫೩೦	೨೨	ಸರೋಜಿನಿಬಾಯಿ ಗೋಕಾವಿ	೬೭೧
೮	ಯೋಹಾನವ್ವ ಜೋಗುಳ	೫೪೯	೨೩	ಯಲ್ಲವ್ವ ಚಲವಾದಿ	೫೨೭
೯	ಜೀವುಬಾಯಿ ಜಾಡಿಗೇರಮತ	೫೭೮	೨೪	ಕಮಲಾಬಾಯಿ ಮಾಳವದೆ	೫೦೩
೧೦	ಕೇಸೂಬಾಯಿ ಲಮಾಣಿ	೪೩೫	೨೫	ಸಾವಿತ್ರೆವ್ವ ಅಂತರವಳ್ಳಿ	೫೦೨
೧೧	ಗಂಗೂಬಾಯಿ ಪಾಟೀಲ	೬೧೨	೨೬	ಸಾವಿತ್ರೆವ್ವ ಮಸೂತಿ	೪೩೬
೧೨	ರಮಾಬಾಯಿ ಶೇಣವಿ	೫೩೪	೨೭	ಶಿವಗಂಗವ್ವ ಕುಂದರಗಿ	೫೬೩
೧೩	ಲಕ್ಷ್ಮೀಬಾಯಿ ಬೆನಾಡಿ	೫೫೩	೨೮	ಗೌರವ್ವ ಅವಲಕ್ಕಿ	೫೭೭
೧೪	ದೇವಕ್ಕಾ ಮಡಿವಾಳರ	೫೭೩	೨೯	ದುಂಡವ್ವ ತೋಟಗೇರ	೪೩೯
೧೫	ಹುಚ್ಚವ್ವ ಹೊಸಮನಿ	೪೭೧	೩೦	ಚಿನ್ನವ್ವ ಚಿನಗುಡಿ	೪೭೫

೧ ನೇ ವರ್ಷದ ಪರೀಕ್ಷೆ ಪಾಸಾದವರು ಒಟ್ಟು ಗುಣಗಳು ೯೦೦

ನಂ.	ಹೆಸರು	ಗುಣಗಳು	ನಂ.	ಹೆಸರು	ಗುಣಗಳು
೧	ಜೊಸೆಫಿನ್ ರೋಡ್ರಿಗ್ಸ	೫೦೫	೧೬	ಗಂಗೂಬಾಯಿ ಮಳಗೀಕರ	೬೦೦
೨	ಗಂಗವ್ವ ಕಲ್ಲಾಪೂರ	೫೦೯	೧೭	ಯಲ್ಲೂಬಾಯಿ ಗಜೇಂದ್ರಗಡ	೫೬೬
೩	ಬಸವಂತೆವ್ವ ಜುಗತಿಮತ	೪೬೨	೧೮	ಲಕ್ಷ್ಮೀಬಾಯಿ ಜಾಲಿಹಾಳ	೫೬೬
೪	ಗುಲಾಬವ್ವ ಅಣವೇಕರ	೫೬೪	೧೯	ಶಶಿಕಲಾ ಪ್ರಭು	೬೦೦
೫	ಮರೆವ್ವ ದಲಭಂಜನ	೫೩೬	೨೦	ಸೀತಾಬಾಯಿ ಗಾಂವಕರ	೫೫೯
೬	ದೇವಕ್ಕ ಪಾಸ್ತೆ	೫೭೬	೨೧	ಕೊಂಡುಬಾಯಿ ನಾಗಣೆ	೪೪೦
೭	ಅಡಿವೆವ್ವ ಸುಣಗಾರ	೫೪೫	೨೨	ಭಾಗೀರತಿಬಾಯಿ ಪಾಟೀಲ	೫೪೪
೮	ಸುಂದ್ರವ್ವ ನಲೂಡಿ	೪೭೫	೨೩	ನಿಜಲಿಂಗವ್ವ ನಾಯಿಕ	೫೪೪
೯	ಸುಶೀಲಾ ಕೇಣಿ	೫೬೪	೨೪	ಶಾಂತಾ ಶಾನಭಾಗ	೫೬೨
೧೦	ಮರೆವ್ವ ಬೆಟಗೇರಿ	೬೧೧	೨೫	ಮಂಕಾಳಿ ನಾಯಿಕ	೫೨೬
೧೧	ಸಾತವ್ವ ಪೂಜಾರ	೫೮೭	೨೬	ಚನ್ನವ್ವ ಬಿರಾದಾರ	೫೦೪
೧೨	ಶಾರದಾಬಾಯಿ ಪಾಂಢ್ರೆ	೫೪೧	೨೭	ಹಂಪವ್ವ ಉಪ್ಪಳದ	೪೬೫
೧೩	ಗುಣವಂತಿ ಕೊಟಬಾಗಿ	೬೦೬	೨೮	ಸಾವಿತ್ರಿಬಾಯಿ ಬಡಿಗೇರ	೪೭೧
೧೪	ಪ್ರೀತಾಬಾಯಿ ಕಂಬಳಿ	೪೫೬	೨೯	ಸೀತಾಬಾಯಿ ಶಾಸ್ತ್ರಿ	೪೯೭
೧೫	ಚಿನ್ನವ್ವ ಬನ್ನಾ	೫೪೪	೩೦	ಯಮನವ್ವ ವಡ್ಡರ	೪೭೨

(*Sd.*) E. S. Elizah,

ಲೇಡಿ ಸುಪರಿಟೆಂಡೆಂಟ ಟ್ರೇ. ಕಾ. ಫಾರ ವಿಮೆನ್, ಧಾರವಾಡ

ಪ್ರ ಕ ಟ ನೆ

ಕನ್ನಡ "ವರ್ಧ ಪ್ರಾಯಿಜ" ಪರೀಕ್ಷೆ ೧೯೪೪

೧. **ಪರೀಕ್ಷೆಯ ವಿಷಯಗಳು:—**

(ಅ) ಹಳಗನ್ನಡ ಮತ್ತು ಹೊಸಗನ್ನಡ ಗದ್ಯಪದ್ಯ ಭಾಗಗಳ ಅರ್ಥ ವಿವರಣೆ ಮಾಡಲಿಕ್ಕೂ ಅವುಗಳಿಗೆ ಟೀಕೆ ಟಿಪ್ಪಣಿಗಳನ್ನು ಬರೆಯಲಿಕ್ಕೂ ಹಳೆಯ ಮತ್ತು ಹೊಸ ಕನ್ನಡದಲ್ಲಿ ನಿಬಂಧ ಬರೆಯಲಿಕ್ಕೂ ಉಮೇದವಾರರು ಸಮರ್ಥರಾಗಿರಬೇಕು.

(ಬ) ವರ್ಧ್‌ಸಾಹೇಬರು ರಚಿಸಿರುವ ಪ್ರಾಕ್ಟಿಕ್ಯಾವ್ಯಮಾಲೆ ಎಂಬ ಗ್ರಂಥವನ್ನು ಸಾದ್ಯಂತವಾಗಿ ಓದಿ ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಪರೀಕ್ಷೆಯಲ್ಲಿ ಅರ್ಥ ವಿವರಣೆ, ಟೀಕೆ ಟಿಪ್ಪಣಿ, ಸ್ವತಂತ್ರ ನಿಬಂಧ, ಪದ್ಯರಚನೆ ಈ ವಿಷಯಗಳ ಸಮಾವೇಶವಾಗುವದು.

೨. **ಬಹುಮಾನ :—**

ಈ ಮೊದಲು ಇದ್ದ ೮೦ ರೂ. ಗಳ ಒಂದೇ ಬಹುಮಾನದ ಬದಲಾಗಿ ಈಗ ಬಹುಮಾನಗಳು ಎರಡು ಎಂದು ಗೊತ್ತಾಗಿದೆ. **ಮೊದಲನೆಯ ಬಹುಮಾನ ೫೦ ರೂ. ೨ನೆಯ ಬಹುಮಾನ ೩೦ ರೂ.**

ಮೊದಲನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ ಕ್ಕೆ ೭೫ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಎರಡನೆಯ ಬಹುಮಾನ ಪಡೆಯುವ ಉಮೇದವಾರನು ಒಟ್ಟಿನಲ್ಲಿ ೧೦೦ ಕ್ಕೆ ೫೦ ಅಥವಾ ಅದಕ್ಕಿಂತ ಹೆಚ್ಚು ಗುಣಗಳನ್ನೂ ಪಡೆದಿರಬೇಕು. ಈ ಉಮೇದವಾರರು ಯಾವ ವಿಷಯದಲ್ಲಿಯೂ ಅಸಮಾಧಾನಕರವಾಗಿ ಕಡಿಮೆ ಗುಣಗಳನ್ನು ಪಡೆದು ನಾಪಾಸಾಗಿರಕೂಡದು.

ಒಂದುವೇಳೆ ಒಬ್ಬನಿಗಿಂತ ಹೆಚ್ಚು ಉಮೇದವಾರರು ಸಮಾನ ಗುಣಗಳನ್ನು ಪಡೆದು ಸಮಾಧಾನಕರವಾಗಿ ಪಾಸಾಗಿದ್ದರೆ ಬಹುಮಾನಗಳನ್ನು ಸರಿಯಾಗಿ ವಿಭಜಿಸಿ ಹಂಚಲಾಗುವದು.

೩. **ಅರ್ಜಿ ಮಾಡತಕ್ಕ ಅವಧಿ :—**

ಪರೀಕ್ಷೆಗೆ ಕೂಡ್ರಲಿಚ್ಛಿಸುವವರು ೧೯೪೪ನೆಯ ಇಸವಿಯ ಅಗಸ್ಟ ತಿಂಗಳ ೧ನೆಯ ತಾರೀಖಿನೊಳಗಾಗಿ ಮೆ|| ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾ|| ದಕ್ಷಿಣಭಾಗ ಇವರಿಗೆ ಮುಟ್ಟುವಂತೆ ಅಪೇಕ್ಷಾಪತ್ರವನ್ನು ಕಳುಹಿಸತಕ್ಕದ್ದು.

೪. **ಪರೀಕ್ಷೆಯ ಸ್ಥಳ ದಿವಸ ಹಾಗು ವೇಳೆ :—**

ಧಾರವಾಡ ಗಂಡುಮಕ್ಕಳ ಟ್ರೇನಿಂಗ್ ಕಾಲೇಜದಲ್ಲಿ ಈ ಪರೀಕ್ಷೆಯು ೧೯೪೪ನೆಯ ಇಸವಿಯ ಅಗಸ್ಟ ತಿಂಗಳಲ್ಲಿ ನಡೆಯುವದು. ತಾರೀಖು ವೇಳೆ ಮೊದಲಾದವುಗಳನ್ನು ಹಿಂದಿನಿಂದ ಪ್ರಕಟಿಸಲಾಗುವದು.

೫. ಪ್ರಶ್ನೆಗಳ ಕಾಗದಗಳು ಕೆಳಗೆ ಬರೆದಂತೆ ಇವೆ :—

ಪ್ರತಿಯೊಂದು ಕಾಗದಕ್ಕೆ ೩ ತಾಸು ಅವಧಿಯೂ ೧೦೦ ಗುಣಗಳೂ ಉಂಟು.

ಮೊದಲನೆಯದು :—	ಪ್ರಾಕ್ಟಿಕ್ಯಾವ್ಯಮಾಲೆ	೭೦	ಗುಣ ೧೦೦
	ವ್ಯಾಕರಣ ಮತ್ತು ಛಂದಸ್ಸು	೩೦	
ಎರಡನೆಯದು :—	ಹಳೆಗನ್ನಡ ನಿಬಂಧ	೫೦	೧೦೦
	* ಕನ್ನಡ ಬಾವುಟದಲ್ಲಿಯ ಕವಿತಾ ಭಾಗ	೩೦	
	ಹಳೆಗನ್ನಡ ಅಪರಿಚಿತ ಗದ್ಯಭಾಗಗಳು	೨೦	
ಮೂರನೆಯದು :—	ಹೊಸಗನ್ನಡ ನಿಬಂಧ; ಹನ್ನೆರಡನೆಯ	೭೫	೧೦೦
	ಶತಮಾನದ ಕನ್ನಡ ಸಾಹಿತ್ಯ ಪರಿಚಯ	೨೫	

೫. 'ಕನ್ನಡ ಬಾವುಟದಲ್ಲಿಯ ಕವಿತಾಭಾಗ'ದ ವಿವರಣೆ

ಈ ಭಾಗಕ್ಕೆ ೩೦ ಗುಣಗಳು ಇರುವವು.

೧	ರಾಷ್ಟ್ರಕೂಟ ರಾಜನ ಶಾಸನ	....	ಪುಟ ೫
೨	ಕನ್ನಡನಾಡಿನಜೆಲುವು	....	ಪುಟ ೧೭–೨೦ ಪೂರ್ಣ
೩	ಬಸವಣ್ಣನವರ ಗುಣ	....	ಪುಟ ೪೫
೪	ಮಹಾದೇವಿಯಕ್ಕ	....	ಪುಟ ೪೬–೪೯ ಪೂರ್ಣ
೫	ಕನಕದಾಸರು	....	ಪುಟ ೫೯–೬೧ ಪೂರ್ಣ
೬	ಅರುಣೋದಯ	....	ಪುಟ ೯೭
೭	ಕಾರ್ಗಾಲದ ವೈಭವ	....	ಪುಟ ೧೦೦
೮	ಕೊಡಗು	....	ಪುಟ ೧೦೨
೯	ತೆಂಕಣ ಗಾಳಿಯಾಟ	....	ಪುಟ ೧೦೬
೧೦	ಕುಮಾರವ್ಯಾಸ	....	ಪುಟ ೧೨೧
೧೧	ಬೇಲೂರಿನ ತಿಲಾಬಾಲಿಕೆಯರು	....	ಪುಟ ೧೩೬

ಈ ಕವಿತಾ ವಿಭಾಗಗಳನ್ನು ಸಂಪೂರ್ಣ ಅಭ್ಯಾಸಮಾಡಬೇಕು. ಮತ್ತು ಮೂರನೆಯ ಕಾಗದದ ವಿಷಯಗಳಲ್ಲಿ ೨೫ ಗುಣಗಳ 'ಹನ್ನೆರಡನೆಯ ಶತಮಾನದ ಕನ್ನಡ ಸಾಹಿತ್ಯ ಪರಿಚಯ' ಎಂಬ ಭಾಗದ ಅಭ್ಯಾಸಕ್ಕಾಗಿ ಕನ್ನಡ ಕವಿಚರಿತೆಯ ಮೊದಲನೆಯ ಭಾಗವನ್ನು ಓದಬಹುದು.

Training College for men,
Dharwar.
7–6–1943

(*Sd.*) H. S. Torgal,
Principal.

ಪತ್ರಗಳ ಮುಖ್ಯಾಂಶಗಳು

ವಿಜಾಪುರ ಜಿಲ್ಲೆ

ಕಲಾದಗಿ :— ಈ ಭಾಗದ ಶಿ. ಶಿ. ಸಮ್ಮೇಲನವು ಕಳೆದ ಫೆಬ್ರುವರಿಯಲ್ಲಿ ಶ್ರೀಮಾನ್ ಗುಂಜೀಕರ ರವರ ಹಿರಿಯತನದಲ್ಲಿ ಸಾಗಿತು. ಪಾಠ, ಚರ್ಚೆ, ವಿವೇಚನ, ಉಪನ್ಯಾಸಗಳು ನಡೆದವು. ರಾತ್ರಿಯಲ್ಲಿ ಶಾಲಾ ಬಾಲ-ಬಾಲಿಕೆಯರು ಏಕಾಂಕ ನಾಟಕಗಳನ್ನು ಅಭಿನಯಿಸಿದರು. ಯಶಸ್ವಿಯಾದವರಿಗೆ ಬೆಳ್ಳಿಯಬಟ್ಟಲು, ಪದಕಗಳನ್ನು ಮೆಚ್ಚುಗೆಯಾಗಿ ಕೊಡಲಾಯಿತು.

ನಾಲತವಾಡ :— ಇಲ್ಲಿಯ ಪ್ರೌಢ ಶಿಕ್ಷಣದ ವರ್ಗ ಹಾಗು ಅನ್ನಪೂರ್ಣೇಶ್ವರಿ ವಾಚನಾಲಯಗಳು ಪ್ರಗತಿಪರವಾಗಿವೆ.

ಗುಡೂರು :— ಈ ಭಾಗದ ಶಿ. ಶಿ. ಸಮ್ಮೇಲನವು ಕಳೆದ ಮಾರ್ಚ ತಿಂಗಳಲ್ಲಿ ಆಯಿತು. ಆಗ ಶ್ರೀ. ಗಣಪತಸಾ ಪಾಟೀಲ ಮತ್ತು ಡಾ. ಕುಲಕರ್ಣಿ ಮೊದಲಾದವರು ಬಹಳ ಸಹಾಯ ಮಾಡಿದರು.

ತಾಳಿಕೋಟೆ :— ಈ ಭಾಗದ ಶಾಲಾ ಬಾಲಕರ ಆಟಗಳ ಸಮ್ಮೇಲನವು ಡಿ. ಎ. ಇ. ಅವರಾದ ಶ್ರೀಮಾನ್ ಗುಂಜೀಕರರ ಹಿರಿಯತನದಲ್ಲಿ ಸಾಗಿತು. ಬಾಲಕರು ಲವ-ಕುಶರ ನಾಟಕವನ್ನು ಅಭಿನಯಿಸಿ ತೋರಿಸಿದರು.

ಬಾಗಲಕೋಟೆ:— ಹೆಣ್ಣು ಮಕ್ಕಳ ಎರಡನೆಯ ನಂಬರಿನ ಶಾಲೆಯವರಿಂದ ಪ್ರೌಢ ಸ್ತ್ರೀಯರ ನಿರಕ್ಷರತೆಯ ನಿವಾರಣೆಗಾಗಿ ಮೇಲಿನ ವರ್ಗಗಳ ವಿದ್ಯಾರ್ಥಿನಿಯರಿಂದ ಗೃಹವರ್ಗವನ್ನು ಆರಂಭಿಸಲಾಗಿತ್ತು. ೨೧ ವಿದ್ಯಾರ್ಥಿನಿಯರು ಪಾಸಾದರು. ತಕ್ಕ ಸಹಾಯ ಸಲಹೆಗಳನ್ನು ಶ್ರೀ. ಕವಾಲ ಅವರು ಕೊಟ್ಟರು.

ಶಿರೂರು :— ಮಕ್ಕಳ ಚರ್ಚಾಮಂಡಳಕ್ಕೆ ಡಿ. ಎ. ಇ. ಅವರು ಪ್ರೋತ್ಸಾಹವಿತ್ತಿರುವರು.

ಕೊಡಗಾನೂರು :— ಶಾಲಾವಾಚನಾಲಯದ ೬ನೆಯ ವಾರ್ಷಿಕವೃತ್ತವು ನಮ್ಮ ಕೈಸೇರಿದೆ. ಕಾರ್ಯದರ್ಶಿಗಳ ಪ್ರಯತ್ನವು ಜೆನ್ನಾಗಿದೆ.

ಬೀಳಗಿ :— ಈ ಭಾಗದ ಶಿ. ಶಿ. ಸಮ್ಮೇಲನದಲ್ಲಿ ಸುಮಾರು ೫೦ ಜನರು ಕೂಡಿದ್ದರು. ವಿದ್ಯಾರ್ಥಿಗಳು 'ನಳದಮಯಂತಿ' 'ಶಾಲೆಕಲಿಯದವನ ಗೋಳು' ಎಂಬ ನಾಟಕಗಳನ್ನು ಮಾಡಿತೋರಿಸಿದರು.

ಹುನಗುಂದ :— ಶ್ರೀಮಾನ್ ಗುಡಿಸಾಗರ ಸಾಹೇಬರಿಗೆ ಬೀಳ್ಕೊಡುವ ಸಮಾರಂಭವಾಯಿತು.

ಮುದ್ದೇಬಿಹಾಳ:— ಈ ಭಾಗದ ಶಿಕ್ಷಣ ಸಮ್ಮೇಲನವು ೧೧-೭-೪೩ನೆಯ ದಿವಸ ಶ್ರೀಮಾನ್ **ಗುಡಿಸಾಗರ** ಅವರ ಹಿರಿಯತನದಲ್ಲಿ ಸಾಗಿತು. ಸಮ್ಮೇಲನದ ಎಲ್ಲ ಕಾರ್ಯಕ್ರಮಗಳು ಸುವ್ಯವಸ್ಥಿತವಾಗಿಯೂ ಮನೋಹರವಾಗಿಯೂ ಜರುಗಿದವು.

ಕಾರವಾರ ಜಿಲ್ಲೆ

ಕುಮಟಾ :— ಈ ಭಾಗದ ಶಿ. ಶಿ. ಸಮ್ಮೇಲನವು ಇಲ್ಲಿಯ ಸಬ್‌ಜಜ್‌ರಾದ ಶ್ರೀ. ಜೋಶಿ ಅವರ ಹಿರಿಯತನದಲ್ಲಿ ಆನಂದಕರವಾಗಿ ಸಾಗಿತು.

ಅಸ್ಕಿ :— ಇಲ್ಲಿಯ ಸಾರ್ವಜನಿಕ ವಾಚನಾಲಯವನ್ನು ಅ. ಡಿ. ಎ. ಇ. ಅವರಾದ ಶ್ರೀ ಮುರ್ಡೇಶ್ವರರು ಸಂದರ್ಶಿಸಿ ಸಮಾಧಾನವನ್ನು ವ್ಯಕ್ತಮಾಡಿದರು.

ಭಟ್ಕಳ :— ಶಾಲೆಯ ಮಾಸ್ತರರಾದ ಶ್ರೀ. ಅನಂತ ಪ್ರಭು ಅವರ ಪ್ರಯತ್ನದಿಂದ ಬಹಳ ವಿದ್ಯಾರ್ಥಿಗಳು, ಹಿಂದುಸ್ತಾನಿ ಪರೀಕ್ಷೆಯಲ್ಲಿ [illegible] ಉತ್ತೀರ್ಣರಾಗಿದ್ದಾರೆ.

ಕುಮಟಾ:— ಅ. ಡೆ. ಎ. ಇ. ಅವರಾದ ಶ್ರೀಮಾನ್ ಹೆಗಡೆ ಅವರು ಇಲ್ಲಿಯ ಕ.ಗ. ಮ. ಶಾಲೆಯಲ್ಲಿ ಇಲ್ಲಿಯ ೧೦ ಶಾಲೆಗಳ ಸುಮಾರು ೫೦ ಶಿಕ್ಷಕರನ್ನು ಕೂಡಿಸಿ ಬಾಲಕರ ವರ್ಗಕ್ಕೆ ಶಬ್ದಪದ್ಧತಿ ವಾಕ್ಯಪದ್ಧತಿಗಳಿಂದ ಕಲಿಸುವ ರೀತಿಗಳನ್ನು ತೋರಿಸಿದರು. ಹಾಗು ಕಳೆದ ನಾಲ್ಕು ವರ್ಷಗಳಲ್ಲಿ ಬಾಲಕರ ವರ್ಗದಲ್ಲಿ ನಾಪಾಸಾದ ಹುಡುಗರ ಬಗೆಗೆ ರೇಖಾ-ಪತ್ರ ತೆಗೆದು ತೋರಿಸಿದರು. ಇದರಿಂದ ಹೊಸಪದ್ಧತಿಯನ್ನು ಅನುಸರಿಸಲು ಎಲ್ಲರಲ್ಲಿಯೂ ಉತ್ಸಾಹವುಂಟಾಯಿತು.

ಧಾರವಾಡ ಜಿಲ್ಲೆ

ಸೂಡಿ:— ಕುಮಾರಿ ಸಂಘದವರು ಗಜೇಂದ್ರಗಡ ಕೋಟೆಯ ಪಯಣಕ್ಕೆ ಹೋದಾಗ ಶ್ರೀ. ಭುಜಂಗರಾವ ಮತ್ತು ಶ್ರೀ. ಮಾಲೋಜಿರಾವ ಘೋರ್ಪಡೆ ಇವರು ಹತ್ತತ್ತು ರೂಪಾಯಿ-ಗಳನ್ನು ಕೊಟ್ಟು ಗೌರವಿಸಿದರು.

ಕುಡುಪಲಿ:— ಹಿರಿಯಕೆರೂರ ತಾಲೂಕಿನ ವಿದ್ಯಾರ್ಥಿಗಳ ಲೇಝಿಮ್ಮೀವು ಪಂದ್ಯಾಟವು ನೆ. ಮಾನುಲೇದಾರರ ಹಿರಿಯತನದಲ್ಲಿ ಸಾಗಿತು. ಆಗ ಕುಡುಪಲಿಯವರು ಮೊದಲನೆಯ ನಂಬರು ಪಡೆಯಲು ಊರ ಹಿರಿಯರು, ಮೆರವಣಿಗೆಯಿಂದ ಹುಡುಗರನ್ನು ಗೌರವಿಸಿದರು.

ಹಲಗೇರಿ:— ದಾವಣಗೇರಿಯ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ. ಎನ್. ಆರ್. ಗುಂಡಪ್ಪನವರು ತಮ್ಮ ಮಕ್ಕಳ ವಿವಾಹ ಸಮಾರಂಭದ ಕಾಲಕ್ಕೆ ಗ. ಮ. ಶಾಲೆಯ ಉಪಯೋಗಕ್ಕಾಗಿ ಒಂದುನೂರು ರೂಪಾಯಿಗಳ ದಾನವನ್ನು ಇತ್ತರು.

ಧಾರವಾಡ:— ನಗರ ಸ್ಕೂ. ಬೋ. ದವರು ಪಂದ್ಯಾಟಗಳ ಸ್ಪರ್ಧೆಯನ್ನು ಏರ್ಪಡಿಸಿದ್ದರು. ಈ ಸಮಾರಂಭಕ್ಕೆ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾ. ರಾದ ಶ್ರೀಮಾನ್ ಡಾಕ್ಟರ ಕಾಮತ ಅವರು ಅಧ್ಯಕ್ಷರಾಗಿದ್ದರು. ಅವರು— "ಶಾರೀರಿಕ ಜಟುವಟಿಕೆಗಳ ಪ್ರದರ್ಶನವು ರಾಷ್ಟ್ರದ ಏಳಿಗೆಯ ಸಾಧನವು. ಬಾಲ-ಬಾಲಿಕೆಯರ ಶರೀರ ಸಾಮರ್ಥ್ಯವನ್ನು ಬೆಳಿಸುವದು ಶಿಕ್ಷಕರ ಕರ್ತವ್ಯವು. ನೆವಹೇಳಿ ಹಿಂದುಳಿಯುವದು ದುಃಖದಾಯಕವು." ಎಂದು ಮುಂತಾಗಿ ತಿಳಿಯಪಡಿಸಿದರು.

ಕದರವಂಡಲಗಿ:— ವಾಚನಾಲಯದ ಕೆಲಸವು ಜೋರ್ನಾಗಿ ಸಾಗಿದೆ. ಮೆ. ಕಳಸೂರ ಅವರ ಹಿರಿಯತನದಲ್ಲಿ ಸಂಯುಕ್ತ ರಾಷ್ಟ್ರದಿನವನ್ನು ಆಚರಿಸಲಾಯಿತು.

ಗದಗ:— ಉರ್ದು ಹೆಣ್ಣು ಮಕ್ಕಳ ಮೊದಲನೆಯ ನಂಬರ ಶಾಲೆಯಲ್ಲಿ ಜನಾನಾ-ಜಲಸಾ ನೆರೆಯಿತು ಪ್ರಮುಖ ಸ್ತ್ರೀಯರು, ೫ ರೂ. ಮೆಚ್ಚುಗೆ ಕೊಟ್ಟರು.

ಹಾವೇರಿ:— ಸೇವಾನಿವೃತ್ತರಾಗತಕ್ಕ ಶ್ರೀಮಾನ್ ಜ. ದೇ. ವಾಟೀಲ ಮಾಸ್ತರರನ್ನು ಬೀಳ್ಕೊಡುವದಕ್ಕಾಗಿ ನ್ಯಾಯಮೂರ್ತಿಗಳಾದ ಶ್ರೀಮಾನ್ ಪಾಟೀಲ ಅವರ ಹಿರಿಯತನದಲ್ಲಿ ಸಮಾರಂಭವಾಯಿತು. ಎಲ್ಲರೂ ಪಾಟೀಲ ಮಾಸ್ತರರ ಜಾಣ್ಮೆ, ಕರ್ತವ್ಯದಕ್ಷತೆ ಪರೋಪಕಾರಗಳನ್ನು ವರ್ಣಿಸಿದರು.

ಧಾರವಾಡ:— ಇಲ್ಲಿಯ ಮ್ಯು. ಸ್ಕೂ. ಬೋರ್ಡಿನ ಹಾಗೂ ಸಹಾಯಧನವನ್ನು ಪಡೆಯುವ ಸುಮಾರು ೪೦ ಶಾಲೆಗಳ ವಿದ್ಯಾರ್ಥಿಗಳು ಶಿಕ್ಷಕರೊಂದಿಗೆ ೧೪-೬-೪೩ನೆಯ ದಿವಸ ಸಂಯುಕ್ತ ರಾಷ್ಟ್ರದಿವಸವನ್ನು ಆಚರಿಸಿದರು. ಮೆ. ರಾಯಣ್ಣವರ ಎಡ್ಮಿನಿಸ್ಟ್ರೇಟಿವ್ಹ ಸಾಹೇಬರು ಬಹಳ ದಕ್ಷತೆಯನ್ನು ವಹಿಸಿದ್ದರು. ಬ್ರಿಟಿಶ ಸರಕಾರದವರು ಯುದ್ಧದಲ್ಲಿ ಯಾಕೆ ತೊಡಗಿರುವರು. ಹಾಗು ಈಗ ಜಯದ ಮೇಲೆ ಜಯ ಹೇಗೆ ಒದಗುತ್ತಲಿವೆ ಎಂಬುವನ್ನೆಲ್ಲ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಲಾಯಿತು

ಬೆಳಗಾವಿ ಜಿಲ್ಲೆ

ತೇರದಾಳ :— ಈ ತಾಲೂಕಿನ ಶಿ. ಶಿ. ಸಮ್ಮೇಲನವು ಮಹಾಲಕರಿಯವರ ಅಧ್ಯಕ್ಷತೆಯಲ್ಲಿ ಸಾಗಿತು. ಪಾಠ-ಚರ್ಚೆ-ಕಸರತ್ತು ಮೊದಲಾದ ವಿವಿಧ ಕಾರ್ಯಕ್ರಮಗಳು ಸರಿಯಾಗಿ ಸಾಗಿದವು.

ಕಿತ್ತೂರು :— ಬೆಟಸೂರು ಪಟ್ಟದೇವರು ಶಾಲೆಗೆ ಆಗಮಿಸಿ ಒಂದೆರಡು ಪಾಠಗಳನ್ನು ಕಲಿಸಿ ತೋರಿಸಿ ಬೆಂಡು ಬತ್ತಾಸಗಳನ್ನು ಹಂಚಿದರು.

ಉರುಬಿನಹಟ್ಟಿ :— ಊರ ಹಿರಿಯರು ಶಾಲೆಯ ಕೆಲಸವನ್ನು ಕಂಡು ಸಂತೋಷಬಟ್ಟು ೧೦ ಪಾಟಿ ೧೦ ಪುಸ್ತಕಗಳನ್ನು ವಿದ್ಯಾರ್ಥಿಗಳಿಗೆ ಮೆಚ್ಚುಗೆ ಕೊಟ್ಟರು.

ಮನ್ನೋಳಿ :— ಇಲ್ಲಿಯ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಸ್ಕೌಟ್ ಪದಕ ಮತ್ತು ಪ್ರಮಾಣಪತ್ರಗಳನ್ನು ಶ್ರೀ. ಹಾರನಹಳ್ಳಿ ಅನಂತರಾಯರ ಹಿರಿಯತನದಲ್ಲಿ ಆದ ಸಭೆಯಲ್ಲಿ ಕೊಡಲಾಯಿತು.

ಗುರ್ಲಹೊಸೂರು :— ಶ್ರೀ. ಎನ್. ಆರ್. ಕುಲಕರ್ಣಿ ವಕೀಲರ ಹಿರಿಯತನದಲ್ಲಿ ಸಭೆಯಾಗಿ ಶ್ರಿ. ಖರೆ ಅವರು ಕೊಟ್ಟ ೩೫ ರೂ. ಗಳ ಪಾಟಿ-ಪುಸ್ತಕ ಮೊದಲಾದವುಗಳನ್ನು ಕೂಡಿದ ೧೨೮ ಬಾಲ-ಬಾಲಿಕೆಯರಲ್ಲಿ ಹಂಚಲಾಯಿತು. ವ್ಯಾಯಾಮಕೋಶ, ಎಂಬ ೬ ಪುಸ್ತಕಗಳನ್ನು (೪೨ ರೂ.) ಶಾಲೆಗಾಗಿ ಉಚಿತವಾಗಿ ಕೊಟ್ಟಿರುವರು. ಶ್ರೀ. ಖರೆ ಅವರ ಕೊಡುಗೆಯು ಅಭಿನಂದನೀಯವು.

ಹೂಲಿ :— ವೇ. ಮೂ. ಚರಮೂರ್ತಿಸ್ವಾಮಿ ಸಾಂಬಯ್ಯನಮಠ ಇವರು ಶಾಲೆಯನ್ನು ಸಂದರ್ಶಿಸಿ ೪೨ ರೂ. ಗಳ ಶಿಕ್ಷಣೋಪಕರಣಗಳನ್ನು ಕೊಟ್ಟರು.

ದಡ್ಡಿ :— ಇಲ್ಲಿಯ ಪ್ರಮುಖ ನಾಗರಿಕರಾದ ಶ್ರೀಮಾನ್ ನಾಯಿಕ ವಿಷ್ಣುಪಂತರು ೫ ರೂ. ಶ್ರೀಶೈಲಪ್ಪ ತವಕರಿ ೨ ರೂ. ಶ್ರೀ. ರುದ್ರಪ್ಪ ಕೊಲ್ಹಾರೆ ೧ ರೂ. ಹೀಗೆ ಕನ್ನಡ ಶಾಲೆಯ ವಿದ್ಯಾರ್ಥಿಗಳ ಸಹಾಯಕ್ಕಾಗಿ ಕೊಟ್ಟರು.

ಬೈಲಹೊಂಗಲ :— ಹಿಂದುಸ್ತಾನಿ ಶಿಕ್ಷಕರ ಪ್ರಯತ್ನದಿಂದ ಮಧ್ಯಮಾ, ಪ್ರಾಥಮಿಕ, ಹಿಂದುಸ್ತಾನಿ ಪರೀಕ್ಷೆಗಳ ಪರಿಣಾಮ ಚೆನ್ನಾಗಿ ಆಗಿದೆ. ಊರವರು ಸಭೆಮಾಡಿ ಸಂತೋಷವನ್ನು ವ್ಯಕ್ತಮಾಡಿದರು.

ಬೆಲ್ಲದ ಬಾಗೇವಾಡಿ :—ಊರ ಹಿರಿಯರು ಶಾಲೆಯ ವಿದ್ಯಾರ್ಥಿಗಳ ಸಹಾಯಕ್ಕಾಗಿ ೨೫ ರು. ಗಳ ಪಾಟಿ ಪುಸ್ತಕಗಳನ್ನು ಕೊಟ್ಟರು. ಶ್ರೀ. ಮೆಣಶಿ ಸಾಹೇಬರು ಮಾಡಿದ ಉಪದೇಶದ ಸ್ಫೂರ್ತಿಯಿಂದ ಶ್ರೀ. ಶಿವಲಿಂಗಪ್ಪನವರು ೩ ರೂ. ಶ್ರೀ. ಬಸಪ್ರಭಪ್ಪನವರು ೨ ರೂ. ಗಳನ್ನು ಆಗಲೆ ಕೊಟ್ಟರು.

ಹಿಡಕಲ್ಲ :— ೧೯೪೦ ರವರೆಗೆ ಇಲ್ಲಿ ಒಬ್ಬರೇ ಶಿಕ್ಷಕರು ಇದ್ದರು. ಈಗ ಶ್ರೀ. ಕೊಕಟನೂರ ಅವರ ಪ್ರಯತ್ನದಿಂದ ೧೬೦ ವಿದ್ಯಾರ್ಥಿಗಳಾಗಿದ್ದು ಪೂರ್ಣ ಪ್ರಾಥಮಿಕ ಶಾಲೆಯಾಗಿದೆ.

ಖವಟಕೊಪ್ಪ :— ೩೦ ವಿದ್ಯಾರ್ಥಿಗಳು ಹೆಡ್‌ಮಾಸ್ತರರ ಕೂಡ ಹೊರಟು ೮ ಮೈಲುಗಳ ಮೇಲಿರುವ ಕಿತ್ತೂರ ಸಕ್ಕರೆಯ ಕಾರಖಾನೆಯನ್ನು ನೋಡಿಕೊಂಡು ಬಂದರು.

ಗಣಿತ ಶಿಕ್ಷಕ

★

೬೧೨ ಪುಟಗಳು ಂ ಬೆಲೆ ೧ ರೂ. ಂ ೫-೬-೬ನೆಯ ಇ. ಗಳಿಗಾಗಿ

೨-೩ ಕ್ಲಾಸುಗಳು ಒಬ್ಬ ಮಾಸ್ತರರ ಕಡೆಗೆ ಇರುವಂಥ ಶಾಲೆಗಳಲ್ಲಿ ಗಣಿತ ಶಿಕ್ಷಕವು ನಿಜವಾಗಿಯೇ ಗಣಿತ-ಶಿಕ್ಷಕನಾಗಿ ಸಹಾಯಕವಾಗಿಲ್ಲವೇ? ೧೦ವರ್ಷ ಅನುಭವ ತಕ್ಕೊಂಡವರಿಗೆ ಇದರ ಬಗ್ಗೆ ಹೆಚ್ಚಿಗೆ ವರ್ಣಿಸುವದು ಬೇಡ. ಇಷ್ಟರಲ್ಲಿಯೇ ಎಲ್ಲರ ಪ್ರೀತಿಗೆ ಪಾತ್ರವಾಗಿ ಅನೇಕಸಾರೆ ಮುದ್ರಣ ಹೊಂದಿದೆ. ಈಗಿನ ತುಟಾಗ್ರತೆಯ ಕಾಲದಲ್ಲಿ ವೆಚ್ಚ ಮಾಡಿದ ಹಣದಿಂದ ಬಹಳ ಲಾಭವಾಗಬೇಡವೇ?

ಕೊರತೆ ಇಲ್ಲ ಂ ಬೆಲೆ ಕಡಿಮೆ ಂ ವೆಚ್ಚವಿಲ್ಲದೆ ಪೂರೈಕೆ

ಪುಸ್ತಕಗಳು ಕರ್ನಾಟಕದ ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ದೊರೆಯುತ್ತವೆ. ದೊರೆಯುವದಿಲ್ಲೆಂದು ಅನಿಸಿದರೆ ನಿಮಗೆ ಬೇಕಾಗುವಷ್ಟು ಪ್ರತಿಗಳ ಮೂಲಬೆಲೆಯನ್ನು ಮನಿಯಾರ್ಡರದಿಂದ ಕಳಿಸಿ ಪಾವತಿಗಳನ್ನು ಕಾಯ್ದಿರಿಸಿ. ಅವನ್ನು ತೆಗೆದುಕೊಂಡು ಯಾವ ವೆಚ್ಚವೂ ಇಲ್ಲದೆ ಪುಸ್ತಕ ಕೊಡುವಂತೆ ನಿಮ್ಮ ಸಮೀಪದ ಪುಸ್ತಕವ್ಯಾಪಾರಿಗಳಲ್ಲಿ ಇಲ್ಲವೆ ದೊಡ್ಡ ಶಾಲೆಗಳಲ್ಲಿ ವ್ಯವಸ್ಥೆ ಮಾಡಲಾಗುವದು. ಶಕ್ಯವಾದರೆ ನಿಮ್ಮ ಊರಿಗೇ ತಂದುಕೊಡಬಹುದು. ಹೆಚ್ಚಿನ ವಿವರಕ್ಕೆ ಬರೆಯಿರಿ.

ಬ. ದು. ಹಿರೇಮಠ, ಮಾಸ್ತರ ವಿಜಾಪುರ.

ಹೊಸ ಪುಸ್ತಕ! ಸರಕಾರದಿಂದ ಮಂಜೂರ! ಲಾಭ ಪಡೆಯಿರಿ!

ಹೊಸ ಪದ್ಧತಿಯ ಹಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಟೆಕ್ಸ್ಟ ಬುಕ್ ಎಂದು ಮಂಜೂರ ಮಾಡಿರುವರು. ಇದರಲ್ಲಿ ಮನೆಯ ಜಮಾಖರ್ಚಿನ ವಿಷಯಗಳು ಸಂಪೂರ್ಣವಿರುವವಲ್ಲದೆ ಪ್ರಾ. ನೋಟು, ಹುಂಡಿ, ಚೆಕ್ಕು, ಮನಿಯಾರ್ಡರು ಮುಂತಾದ ವ್ಯವಹಾರುಪಯುಕ್ತವಾದ ಮಾಹಿತಿಗಳೂ ಇವೆ. ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಉಮೇದವಾರರಿಗೆ ಬಹು ಉಪಯುಕ್ತವಿದೆ.

ಬೆಲೆ: ೮ ಆಣೆ

ಹೊಸ ಪದ್ಧತಿಯ ಆರಂಭದ ಜಮಾಖರ್ಚು

(ಕನ್ನಡ ೪ನೆಯ ಇಯತ್ತೆಯವರಿಗಾಗಿ)

ಸರಕಾರದವರು ಈ ಪುಸ್ತಕವನ್ನು ಮಂಜೂರ ಮಾಡಿದ್ದಾರೆ. ಮಂಜೂರಿ ನಂ. ೧೯-೨-೪೩ ಇರುತ್ತದೆ. ಈ ಪುಸ್ತಕದಲ್ಲಿ ದಿನದ ವ್ಯವಹಾರಗಳ ಲೆಖ್ಖವನ್ನಿಡುವದು, ಶಾಲೆಯ ಸ್ಟೇಶನರಿ ಸಾಮಾನುಗಳ, ಸಹಕಾರಿ ಸಂಘದ ಅಂಗಡಿಯ ಲೆಖ್ಖ ಇಡುವದು, ವ್ಯವಹಾರುಪಯುಕ್ತವಾದ ಮಾಹಿತಿಗಳೂ ಪ್ರಶ್ನೆಗಳೂ ಅವುಗಳ ಉತ್ತರಗಳೂ ಇರುವವು. ಇದು ಸ್ಕಾಲರಶಿಪ್ ಪರೀಕ್ಷೆಯ ಉಮೇದುವಾರರಿಗೆ ಬಹು ಉಪಯುಕ್ತವಿರುತ್ತದೆ.

ಬೆಲೆ: ೩ ಆಣೆ

ಪತ್ತೆ: ರಾ. ಸಿ. ಸಜ್ಜನ, ಜೋರಾಪುರ ಪೇಟೆ, ವಿಜಾಪುರ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮಿಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ-ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ-ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು-ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ಜುಲೈ-ಅಗಷ್ಟ-ಸಪ್ಟಂಬರ ೧೯೪೩

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ
೧.	ಟ್ರೇನಿಂಗ್ ಕಾಲೇಜದ ಚಟುವಟಿಕೆಗಳು	೧
೨.	ನಮ್ಮ ವಿದ್ಯಾರ್ಥಿಕಾರಿಗಳು	೫
೩.	ದೇವರು ಮನುಷ್ಯನಿಗೆ ಯಾಕೆ ಬೇಕು ?	೬
೪.	ಕಾಯಿಪಲ್ಯಗಳನ್ನು ಬೆಳೆಯುವವರಿಗೆ ಸೂಕ್ತ ಸಲಹೆಗಳು ..	೧೧
೫.	ಹೆಣ್ಣುಮಕ್ಕಳ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಅನುಭವಗಳು ೧೯೪೩	೧೬
೬.	ಸ್ತ್ರೀ ಶಿಕ್ಷಣ	೨೧
೭.	ಕನ್ನಡ ಬುಕ್ ಕಮಿಟಿಯವರಿಂದ ಮುಂಜೂರಾದ ಪುಸ್ತಕಗಳು ..	೨೪
೮.	ಪ್ರಕಟನೆ	೨೫
೯.	ಪತ್ರಗಳ ಸುಖ್ಯಾಂಶಗಳು	೨೪
೧೦.	ದುರಾತೆಯ ದುಷ್ಪರಿಣಾಮ (ಸಾಕ್ಷರಿಗಳಾದ ಪ್ರಬುದ್ಧರಿಗಾಗಿ) ..	೨೬

ಸಾಹಿತ್ಯಕ ವರ್ಷದ ಚಂದಾ ಹಣ ಎರಡು ರೂಪಾಯಿಗಳು ಮಾತ್ರ.

Printed by V. Y. Jathar at the Karnatak Printing Works, Dharwar and Published by H. S. Torgal, Esq. M. A., Principal Training College For-Men Dharwar, at his Office. 6233-43-1365.

ಸುಂದರ ಮುದ್ರಣ ! ಸುಲಭ ಬೆಲೆ !! ಸ್ವಲ್ಪೇ ಪ್ರತಿಗಳಿವೆ !!! ತ್ವರೆಮಾಡಿರಿ !!!

ಹೊಸ ಅಭ್ಯಾಸಪತ್ರಿಕೆಯನ್ನನುಸರಿಸಿ ಕನ್ನಡ ಹೆಣ್ಣುಮಕ್ಕಳ ೫-೬-೭ನೇ ಇಯತ್ತೆಗಳಿಗಾಗಿ ಬರೆಯಲ್ಪಟ್ಟಿದೆ.

ಶೀಬಸವಕುಮಾರ ಕೃತ **ಗೃಹವಿಜ್ಞಾನಶಾಸ್ತ್ರ** ಅಥವಾ **ಗೃಹಶಿಕ್ಷಣದ ಕೈಗನ್ನಡಿ**

ಮುಂಬಯಿ ವಿದ್ಯಾಖಾತೆಯ ಪಠ್ಯಪುಸ್ತಕ ಮಂಡಲಿಯವರಿಂದ ಮಂಜೂರಾಗಿದೆ.

ಗೃಹಿಣಿಯರಿಗೆ ಇದು ಕೈಗನ್ನಡಿಯಂತಿದೆ ಎಂದು ಅನೇಕ ಮಹಿಳೆಯರಿಂದಲೂ, ವಿದ್ವಾಂಸ ಮಹನೀಯರಿಂದಲೂ ಮನ್ನಣೆಹೊಂದಿದೆ. ಕೇವಲ ಹೆಣ್ಣುಮಕ್ಕಳ ಸಲುವಾಗಿ ಈ ಪುಸ್ತಕ ಬರೆಯಲ್ಪಟ್ಟಿದೆ. ವಿದ್ಯಾರ್ಥಿನಿಯರು ಇದರ ಸಹಾಯದಿಂದ ಪಾಕಶಾಸ್ತ್ರವಲ್ಲದೆ, ಆರೋಗ್ಯಶಾಸ್ತ್ರ ಮುಂತಾದವುಗಳ ವಿಜ್ಞಾನವನ್ನು ತಿಳಿಕೊಳ್ಳಲು ಸುಲಭವಾಗಿದೆ. ಭಾವೀ ಗೃಹಿಣಿಯರಾಗಲಿರುವ ವಿದ್ಯಾರ್ಥಿನಿಯರ ಜೀವನವು ಸುಖಮಯವಾಗಬೇಕಾದರೆ ಗೃಹಶಿಕ್ಷಣವು ಬೇಕಲ್ಲವೇ ? ಹಾಗಾದರೆ ಅಂಥಹದೆಲ್ಲ ಈ ಗೃಹವಿಜ್ಞಾನ ಶಾಸ್ತ್ರದಲ್ಲಿದೆ. ಬೇಕಾದವರು ಇಂದೇ ಕೆಳಗಿನ ವಿಳಾಸದಿಂದ ತರಿಸಿಕೊಂಡು ಅದರಲ್ಲಿರುವ ಏಳು ಶಾಸ್ತ್ರಗಳ ಮಹತ್ವವನ್ನು ತಿಳಿದುಕೊಳ್ಳಿರಿ.

ಒಂದು ಪ್ರತಿಗೆ ಬೆಲೆ ೪ ಆಣೆ (ವ್ಹಿ. ಪಿ. ವೆಚ್ಚ ಬೇರೆ)

ಪ್ರಕಾಶಕರು :—

ಪಶುಪತಯ್ಯ ಚಿನ್ನಯ್ಯ ಶಾಬಾದಿಮಠ, ಬುಕ್ಕಡಿಪೊ **ಗದಗ ಸಿಟಿ**

ವಿ ನ ಂ ತಿ

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಳುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. ಈ ತ್ರೈಮಾಸಪತ್ರಿಕೆಯು ಪ್ರತಿ ಮೂರು ತಿಂಗಳ ಕೊನೆಯ ವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶರು, ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳಿಸಬಹುದು.

೪. ತಾವು ಪ್ರಕಟನೆಗಾಗಿ ಕಳುಹಿಸಿರುವ ಲೇಖನಗಳನ್ನು ತಿರುಗಿ ಪಡೆಯಲು ಅಪೇಕ್ಷಿಸುವವರೂ ಅದರ ಪರಿಣಾಮವನ್ನು ಕೂಡಲೆ ತಿಳಿದುಕೊಳ್ಳಲಿಚ್ಛಿಸುವವರೂ ಅದಕ್ಕಾಗಿ ತಗಲುವ ಅಂಚೆಯ ಚೀಟಿಗಳನ್ನು ತಮ್ಮ ಲೇಖನದ ಸಂಗಡ ಕಳುಹಿಸಿಕೊಡಬೇಕು.

ಜಾಹಿರಾತಿನ ದರಗಳು

ಪುಟ	೧೨ ತಿಂಗಳುಗಳಲ್ಲಿ ನಾಲ್ಕು ಸಾರೆ	೬ ತಿಂಗಳುಗಳಲ್ಲಿ ೨ ಸಾರೆ	೩ ತಿಂಗಳುಗಳಲ್ಲಿ ಒಮ್ಮೆ
೧	೧೨ ರೂ.	೭½ ರೂ.	೪ ರೂ.
½	೭½ ರೂ.	೪ ರೂ.	೨½ ರೂ.
¼	೫ ರೂ.	೨½ ರೂ.	೧½ ರೂ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು :

ಹನುಮಂತರಾವ ಸುಬ್ಬರಾವ ತೊರಗಲ್, ಎಂ. ಎ.

ಸಂಪುಟ ೮೨	ಜುಲೈ-ಅಗಸ್ಟ-ಸಪ್ಟಂಬರ ೧೯೪೩	ವರ್ಷ ೧೬ ಸಂ. ೪-೫-೬

ಟ್ರೇನಿಂಗ್ ಕಾಲೇಜದ ಚಟುವಟಿಕೆಗಳು

ಕಳೆದ ಜುಲೈ ಅಗಸ್ಟ ತಿಂಗಳುಗಳಲ್ಲಿ ನಮ್ಮ ಟ್ರೇನಿಂಗ್ ಕಾಲೇಜದ ವಿದ್ಯಾರ್ಥಿಗಳು ನಡೆಯಿಸಿದ ವಾದ-ವಿವಾದ ಮುಂಡಲದ ಆಶ್ರಯದಲ್ಲಿ ಅನೇಕ ಚಟುವಟಿಕೆಗಳು ನಡೆದವು. ಅವುಗಳಲ್ಲಿ ನಮ್ಮ ಕಾಲೇಜಕ್ಕೆ ಆಗಮಿಸಿದ ಇಬ್ಬರು ಮಾನ್ಯ ಅತಿಥಿಗಳು ವಿದ್ಯಾರ್ಥಿ ಶಿಕ್ಷಕರಿಗೆ ಸಲುವಳಿಯಾಗುವಂಥ ವಿಷಯಗಳ ಮೇಲೆ ಉಪನ್ಯಾನಮಾಡಿದರು. ಮಂಗಳೂರಿನ ಶ್ರೀ. **ಶಿವರಾವು ಕಾರಂತರು** 'ಮಕ್ಕಳ ಭಾಷಾಶಿಕ್ಷಣ' ಎಂಬ ವಿಷಯದಲ್ಲಿಯೂ ಸಾಂಗ್ಲಿಯ ವಿಲಿಂಗ್ಡನ್ ಕಾಲೇಜದ ಪ್ರಿನ್ಸಿಪಾಲರಾದ ಶ್ರೀಮಾನ್ **ವಿನಾಯಕರಾವ್ ಗೋಕಾಕ** ಇವರು 'ಹೊಸ ಸಾಹಿತ್ಯದ ಕೆಲವು ಪ್ರಕಾರಗಳು' ಎಂಬ ವಿಷಯದ ಮೇಲೆಯೂ ಉಪನ್ಯಾನ ಮಾಡಿದರು. ನಮ್ಮ ಪ್ರಾಥಮಿಕ ಶಿಕ್ಷಕರಿಗೆ ಈ ವಿಷಯಗಳ ಪರಿಚಯವು ಅವಶ್ಯವೆನಿಸುವದರಿಂದ ಅವರ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಕೊಡಲಾಗಿದೆ.

೧. **ಮಕ್ಕಳ ಭಾಷಾಶಿಕ್ಷಣ**—"ಭಾಷೆಯ ಶಿಕ್ಷಣವು ಒಹಳ ಮುಹತ್ವದ್ದು. ಪರೀಕ್ಷೆಯ ದೃಷ್ಟಿ, ಹೊಟ್ಟೆಯ ಚಿಂತೆ ಇವುಗಳನ್ನು ಬಿಟ್ಟು, ಬದಿಗಿರಿಸಿ, ನಾವು ಈ ವಿಷಯದ ಕಡೆಗೆ ನೋಡಿದರೆ ಹಲಕೆಲವು ಹೊಸ ಸಂಗತಿಗಳು ಗೋಚರವಾಗಬಹುದು. ಮಕ್ಕಳು ಐದಾರು ವರ್ಷದವರಾದ ಬಳಿಕ ಶಾಲೆಗಳಿಗೆ ಬರುತ್ತಾರೆ. ಮುಂದೆ ಏಳೆಂಟು ವರ್ಷಗಳ ವರಗೆ ಕಲಿಯುತ್ತಾರೆ. ಕನ್ನಡ ನಾಡಿನಲ್ಲಿ ಹುಟ್ಟಿ-ಬೆಳೆದು ಕನ್ನಡವನ್ನು ಕಲಿತು ಕನ್ನಡದಲ್ಲಿ ಜೆನ್ನಾಗಿ ಬರೆಯಲಿಕ್ಕೆ ಬರುವದಿಲ್ಲವೆ! ಬರೆಯಲುಬಾರದಿದ್ದರೆ ಹೋಗಲಿ, ಆದರೆ ಬಹು ಜನರಿಗಾದರೂ ತಕ್ಕಮಟ್ಟಿಗಾದರೂ ಓದಲೂ, ಮಾತನಾಡಲೂ ಬರುತ್ತಿರುವದಿಲ್ಲವಲ್ಲ! ಹೀಗೇಕೆ ಆಗಬೇಕು? ಈಗಿನ ಕಲಿಸುವ ಕ್ರಮದಲ್ಲಿಯೇ ದೋಷಗಳಿರಬಹುದೇನು ?

ನಾವು ಕಲಿಸುವುದು ಚಿಕ್ಕಮಕ್ಕಳಿಗೆ; ನಮಗೆ ಅವರ ದೇಹ-ಮನಸ್ಸುಗಳ ಬೆಳವಣಿಗೆಯು ಸರಿಯಾಗಿ ತಿಳಿಯಬೇಕಾದದ್ದು ಆವಶ್ಯ. ಮಕ್ಕಳಿಗೆ ಪಾಠಗಳಲ್ಲಿ ಆಸಕ್ತಿ ಇರದೆ ಹೋದರೆ ಅದು ಅವರಿಗೆ ತಿಳಿಯದು. ಸರಿಯಾಗಿ ತಿಳಿಯದುದರಿಂದ ಅದರ ವಿಷಯದಲ್ಲಿ ಅವರು ಒಡನುಡಿಯರು. ಇಂತಹ ಅವಸ್ಥೆಯಲ್ಲಿ ಸಾಗಿಸಿದ ಪಾಠಗಳಲ್ಲಿ ಪುಸ್ತಕದಲ್ಲಿ ಬರೆದ ವಾಕ್ಯಗಳ ಉಚ್ಚಾರ ಪುನರುಚ್ಚಾರಗಳು ಆಗುವವೇ ಹೊರತು ಅವರ ಭಾಷೆಯು ಬೆಳೆಯದು.

ಅವರ ಅನುಭವಕ್ಕೆ ಬಾರದ ವಿಷಯಗಳಗ್ನು ಕಲಿಸುವದು ಅವರ ಭಾಷೆಯ ಕೊಲೆಗೆ ಕಾರಣವಾಗುವದು. 'ಮಾನವ ಜನ್ಮವು ದೊಡ್ಡದು ಇದರ ಹಾನಿ ಮಾಡಲು ಬೇಡಿ,' ಎಂಬ ಪದ್ಯದ ಅರ್ಥವು ಕೂಡಲು ಬೆಳ್ಳಗಾದ ಮುದುಕರಿಗೂ ಸಹ ಚೆನ್ನಾಗಿ ತಿಳಿಯದಿರುವಾಗ ಎಂಟು ಹತ್ತು ವರ್ಷಗಳ ಹಸುಗೂಸುಗಳಿಗೆ ಹೇಗೆ ತಾನೆ ತಿಳಿದೀತು! ಅವರ ವಯಸ್ಸಿಗೆ ತಕ್ಕಂತಹ ವಿಷಯಗಳನ್ನೆ ಕಲಿಸಬೇಕಷ್ಟೆ; ಮಕ್ಕಳಿಗೆ ತುಸ ಸ್ವಾತಂತ್ರ್ಯಕೊಟ್ಟರೆ ಏನು ಚಮತ್ಕಾರವಾಗುವದೋ ನೋಡಿರಿ. ಚಿಕ್ಕಮಕ್ಕಳು ಮರಾಠಿ, ತೆಲಗು, ತಮಿಳು, ಉರ್ದು, ಇಂಗ್ಲಿಷ ಮುಂತಾದ ಮಾತನಾಡುವವರ ಬಳಗದಲ್ಲಿ ಆಡುತ್ತಲಿದ್ದರೆ ನಾಲ್ಕಾರು ತಿಂಗಳುಗಳಲ್ಲಿ ಒಂದೊಂದು ಭಾಷೆಯನ್ನು ಆಡಲು ಸಹಜವಾಗಿ ಕಲಿತುಬಿಡುವರು. ಇದಕ್ಕೆ ಅವರ ಆಸಕ್ತಿಯೇ ಕಾರಣವು. ಅದು ಕಡಿಮೆಯಾದರೆ ಎಷ್ಟು ವರ್ಷ ಕಲಿಸಿದರೂ ಅದು ಬರುವದಿಲ್ಲ; ಬಂದಷ್ಟು ಕೂಡ ಬೇಗನೆ ಮರೆತುಹೋಗುವದು.

ಈಗ ನಾವು ಕಲಿಸುವದು ಗ್ರಂಥಸ್ಥ ಭಾಷೆ. ಇದು ವ್ಯಾಕರಣ ಛಂದಸ್ಸು ಮೊದಲಾದವುಗಳ ಕಟ್ಟುನಿಟ್ಟುಗಳಿಗೆ ಒಳಗಾಗಿದೆ. ಮಕ್ಕಳ ದೃಷ್ಟಿಯಿಂದ ನೋಡಿದರೆ ಈಗಿನ ಗ್ರಂಥಸ್ಥಭಾಷೆಯಲ್ಲಿ ಜೀವಂತತನವು ಕಡಿಮೆ. "ಒಂದಾನೊಂದು ಊರಲ್ಲಿ ಒಬ್ಬ ಅರಸನಿದ್ದನು. ಅವನಿಗೆ ಬಹಳ ಐಶ್ವರ್ಯವಿತ್ತು" ಹೀಗೆ ಹೇಳುವದರ ಬದಲು "ಒಂದು ಊರು ಇತ್ತು. ಅಲ್ಲಿ ಒಬ್ಬ ಅರಸನಿದ್ದ. ಅವನ ಒಳಿಯಲ್ಲಿ ಬಹಳ ಹಣವಿತ್ತು." ಹೀಗೆ ಬರೆದು ದನ್ನು ಓದಿದರೆ ಮಕ್ಕಳಿಗೆ ಚೆನ್ನಾಗಿ ತಿಳಿಯುವುದು. ಅದೇನೇನೋ ಹೊಳೆಯುವದು, ಅವರ ಭಾಷೆ ಬೆಳೆಯುವದು. ನಮ್ಮ ದೇಶದ ಅನೇಕ ಅಜ್ಜ ಅಜ್ಜಿಯರು ವ್ಯಾಕರಣವನ್ನು ಕಲಿತಿರುವದಿಲ್ಲ. ಅವರಿಗೆ ಓದು-ಬರೆಹಗಳೂ ಬರುತ್ತಿರುವದಿಲ್ಲ. ಹೀಗಿದ್ದರೂ ಅವರು ಹೇಳುವ ಕತೆಗಳನ್ನು ಮಕ್ಕಳು ಲಕ್ಷ್ಯವಿಟ್ಟು ಏಕೆ ಕೇಳುವರು? ಅವರಾಡುವ ಭಾಷೆಯಲ್ಲಿ ಜೀವವಿದೆ. ಇದರಂತೆ ಹಳ್ಳಿಯ ಹಾಡುಗಳೂ ಸಾಮಾನ್ಯ ಜನರಿಗೆ ಹೆಚ್ಚಾಗಿ ತಿಳಿಯುವವು. ಜೀವಂತ ಭಾಷೆಯು ವ್ಯಾಕರಣದ ಒತ್ತಾಯವನ್ನು ಸಹಿಸುತ್ತಿರುವದಿಲ್ಲ. ಮಕ್ಕಳಿಗೆ ಕೃದಂತ-ಕೃದ್ವಾಚಕ, ಹೃಸ್ವಸ್ವರ ಮೊದಲಾದ ಹೆಸರುಗಳನ್ನು ಉಚ್ಚರಿಸಲಿಕ್ಕೆ ಸಹ ಬರಲಿಕ್ಕಿಲ್ಲ. ಕರ್ಮಣಿ ಪ್ರಯೋಗದ ಮಾತಂತೂ ದೂರಿರಲಿ! ಹೀಗಿದ್ದರೂ ಅವರು "ನಾಯಿಯು ಹೋಗುತ್ತಾನೆ" ಹೀಗೆ ಎಂದೂ ಹೇಳರು. ಒಹಳವಾದರೆ "ಒಂದು ನಾಯಿ ಇತ್ತರೀ; ಅದು ಓಡತಿತ್ತರೀ" ಎಂದು ತಮ್ಮ ಗ್ರಾಮ್ಯ ನುಡಿಗಳಲ್ಲಿ ಆಡಬಹುದು. ಇದರಿಂದ ಮಕ್ಕಳಲ್ಲಿ ಭಾಷೆ ಬೆಳೆಯಲು ಆಷ್ಟೊಂದು ತೊಂದರೆಯಾಗುವದಿಲ್ಲ. ಆದರೆ ಪರಭಾಷೆಗಳ ವ್ಯಾಕರಣದ ಹೊರೆಯನ್ನು ಕನ್ನಡದ ಮೇಲೆ ಹಾಕಿ "ಇಲ್ಲಿ ಟಾಯಿಸ್‌ರಾಯ್ಟರ ಮಾಡಿ ಕೊಡಲ್ಪಡುತ್ತೆ" ಮುಂತಾದ ಅಶುದ್ಧ ರೀತಿಯಲ್ಲಿ ಬರೆಯುವ ಪರಭಾಷಾ ಪಂಡಿತರಿಂದ ನಮ್ಮ ಭಾಷೆಯು ಕೆಡುತ್ತದೆ. ಗಿಡ, ಮರ, ನದಿ, ದನಕರು ಮೊದಲಾದವುಗಳ ಕೂಡ ಕೃತಕಸಂಭಾಷಣೆಗಳನ್ನು ಕೊಡುವ ಗ್ರಂಥಕರ್ತರಿಂದ ಕೆಡುತ್ತಲಿದೆ. ಇಂಥವುಗಳನ್ನು ಕಲಿಸುವದರಿಂದ ಮಾತುಗಾರಿಕೆ ಹೆಚ್ಚುವದಿಲ್ಲ.

ಭಾಷಾಶಿಕ್ಷಣಕ್ಕೆ ಮಾತು ಮೊದಲು; ನಂತರ ಓದು; ಆ ಬಳಿಕ ಬರೆಹ. ಅದುಕಾರಣ ಶಾಲೆಯಲ್ಲಿ ಮಕ್ಕಳು ಆದಷ್ಟು ಹೆಚ್ಚಾಗಿ ಚೆನ್ನಾಗಿ ಮಾತನಾಡಬೇಕು. ಕೇಳಬೇಕು. ತಪ್ಪು ತಡೆಗಳಿಲ್ಲದೆ ಓದಬೇಕು. ಹವಣಿಯಾಗಿ ಬರೆಯಬೇಕು. ಈ ಕ್ರಮವನ್ನು ಬಿಟ್ಟು ಮೊದಲೆ ಬರೆಯಲುಪಚ್ಚಿದರೆ ಮುಂದೆ ಆಗತಕ್ಕ ಬಹಳ ಲಾಭಗಳಿಗೆ ಇಂದಿನಿಂದಲೆ ಎರವಾಗಬೇಕಾಗುತ್ತದೆ. ಬಹಳ ಶಬ್ದಗಳನ್ನು ಉಪಯೋಗಿಸುವದೊಂದೇ ಜಾಣತನದ ಮುಖ್ಯ ಲಕ್ಷಣವಲ್ಲ. ಮೊದಲನೆಯ ಇಯತ್ತೆಯ ಮಕ್ಕಳು ಸಾಮಾನ್ಯವಾಗಿ ೩೦೦ ಕ್ಕಿಂತ

ಕಡಿಮೆ ಪದಗಳನ್ನು ಉಪಯೋಗಿಸಿದರೆ ಕಲಿತ ಪಂಡಿತರು ಕೂಡ ೩೦೦೦ ಕ್ಕಿಂತ ಕಡಿಮೆ ಪದಗಳನ್ನು ಬಳಸುತ್ತಾರೆಂದು ನನಗೆ ಅರ್ಥಕೋಶವನ್ನು ರಚಿಸುವಾಗ ಕಂಡುಬಂದಿರುತ್ತದೆ. ಮಕ್ಕಳ ಹಿತದಸಲುವಾಗಿ ಶಿಕ್ಷಕರು ಕಲಿಸುವ ಪಾಠಗಳಲ್ಲಿ ಮಹಾಪ್ರಾಣ ಒತ್ತಕ್ಷರಗಳುಳ್ಳ ಸಂಸ್ಕೃತ ಪದಗಳನ್ನು ಬಿಟ್ಟು ಹೊಸಕಾಲದಲ್ಲಿ ಅರ್ಥವಿಶೇಷವನ್ನು ಸೂಚಿಸುವ ನಮ್ಮ ತಿಳಿಗನ್ನಡದ– ಹೂಗನ್ನಡದ ಬಳಕೆಯ ಪದಗಳನ್ನೆ ಹೆಚ್ಚಾಗಿ ಉಪಯೋಗಿಸುವದು ಒಳ್ಳೆಯದು. ಇದರಿಂದ ಮಕ್ಕಳಲ್ಲಿ ಮಾತಿನ ಚಾಣ್ಮೆಯು ಹೆಚ್ಚುವದು.

ಶಿಕ್ಷಕರು ಆಸಕ್ತಿಯಿಂದ ಪಾಠ ಹೇಳುತ್ತಿದ್ದಷ್ಟಕ್ಕೆ ಎಲ್ಲವೂ ಸರಿಯಾಗದು. ಮಕ್ಕಳಲ್ಲಿಯೂ ಆಸಕ್ತಿ ಬೇಕು. ಆಸಕ್ತಿಯಿದ್ದರೆ ಪಾಠವು ನಡೆದಾಗ ಮಕ್ಕಳಲ್ಲಿ ಅಭಿಮಾನವು ಉಂಟಾಗುವದು. ಅದೂ ಹಲವುತರವಾಗಿರುವದು. ಉದಾಹರಣೆಗಾಗಿ ಕಡುಬಿನ ಊಟದ ಹಾಡನ್ನೆ ತಕ್ಕೊಳ್ಳೋಣ. ಇದನ್ನೋದಿದವರಲ್ಲಿ ಕೆಲವರು ರಂಗನ ತಮ್ಮನ ಅಭಿಮಾನಿಗಳಾಗಬಹುದು. ಮತ್ತೆ ಕೆಲವರು ಮಂಗನ ಅಭಿಮಾನಿಗಳಾಗಬಹುದು. ಇವರು ತಮ್ಮ ಅಭಿಮಾನಕ್ಕೆ ಅನುಗುಣವಾಗಿ ಬೇರೆಬೇರೆ ತರದ ಧ್ವನಿ ಹಾಗು ಬೇರೆ ಬೇರೆ ಏರಿಳಿತಗಳಿಂದ ಹಾಡಬಹುದು. ಹೀಗೆ ಆಗುವದೇ ಇಷ್ಟ. ಜೀವಂತ ಲಕ್ಷಣ. ಪದ್ಯವನ್ನು ಗದ್ಯದಂತೆ ಓದಬಹುದು. ಗದ್ಯವನ್ನು ಪದ್ಯದಂತೆಯೂ ಹಾಡಬಹುದು.

ಮಕ್ಕಳು ಸರಿಯಾಗಿ ಕೇಳದ್ದನ್ನು ಬರೆಯಹೋದರೆ ತಪ್ಪುವದು ಸಹಜ. ಅದುಕಾರಣ ಅವರು ಸರಿಯಾಗಿ ಕೇಳಿಕೊಂಡಿರೋ ಇಲ್ಲವೋ ಎಂಬುದನ್ನು ಪರೀಕ್ಷಿಸುವದಕ್ಕಾಗಿ ಅವರಿಂದ ಉಚ್ಚರಿಸಿ ನೋಡಬೇಕು. ಲ ಳ, ನ ಣ, ಇ ಈ, ಶ ಷ ಸ, ಗಳನ್ನು ಬರೆಯುವಾಗ ತಪ್ಪುವದುಂಟು. ಒಂಟೆ ಬದಲು ಒಟ್ಟೆ ಎಂದೂ ಉಂಟು ಬದಲು ಉಟ್ಟು ಎಂದೂ ಹಲವರು ಬರೆಯುವದುಂಟು. ಇದಕ್ಕಾಗಿ ಶಿಕ್ಷಕರು ಮಕ್ಕಳ ಕೈಗಳನ್ನು ತಿದ್ದುವ ಮೊದಲು ಅವರ ಕಿವಿತಿದ್ದುವದು ಒಳ್ಳೆಯದು. ಇನ್ನು ಭಾಷೆಯ ದೋಷಗಳು ಕೆಲವು ಇರುವವು. ಉದಾಹರಣೆ– ನಮ್ಮ ಕನ್ನಡನುಡಿಯಲ್ಲಿ ದೀರ್ಘ ಅಕ್ಷರದ ಮುಂದಿನ ಅಕ್ಷರವು ಜೆನ್ನಾಗಿ ಕೇಳಿಸುವದಿಲ್ಲ. 'ಕಾಗೆ' ಎಂಬ ಪದವನ್ನು ಉಚ್ಚರಿಸಿದಾಗ 'ಕಾ' ಇದು ಕೇಳಿಸಿದಷ್ಟು ಜೆನ್ನಾಗಿ 'ಗೆ' ಕೇಳಿಸದು. ಇಂತಹ ದೋಷಗಳಿಗೆ ಆರಂಭದಲ್ಲಿ ವ್ಯಸನಪಡಬೇಕಾಗಿಲ್ಲ.''

ಅಂದಿನ ಸಭೆಯ ಅಧ್ಯಕ್ಷರಾಗಿದ್ದ ಶ್ರೀ. ಉಮಡಿರಾಯರು ಉಪನ್ಯಾಸಕರ ಮಾತು ಮುಗಿದ ಬಳಿಕ ' ಇಂದಿನ ಮಾನ್ಯ ಅತಿಥಿಗಳಾದ ಶ್ರೀ. ಕಾರಂತರು ಬಾಲಪ್ರಪಂಚ, ಅರ್ಥಕೋಶ ಹಲವು ಕಥೆ, ಕಾದಂಬರಿ, ನಾಟಕಗಳು ಮುಂತಾದುವುಗಳನ್ನು ಬರೆದು ನಮಗೆ ಚಿರಪರಿಚಿತರಾಗಿದ್ದಾರೆ. ಅವರು ಇಂದು ಒಂದು ಅತಿ ಮಹತ್ವದ ವಿಷಯದಲ್ಲಿ ತಮ್ಮ ಅನುಭವಗಳನ್ನು ಹೇಳಿರುವರು. ಇವರು ಕೊಟ್ಟ ಸಲಹೆಸೂಚನೆಗಳು ನಮ್ಮ ಶಾಲೆಗಳಲ್ಲಿಯ ಕೆಳಗಿನ ವರ್ಗಗಳ ಶಿಕ್ಷಕರಿಗೆ ತುಂಬ ಉಪಯುಕ್ತವಾಗಿವೆ. ಪ್ರತಿಯೊಬ್ಬರು ತಮ್ಮ ಭಾಷೆಯನ್ನು ಕೂಡ ಸಾಕಷ್ಟು ತಿದ್ದಿಕೊಂಡು ಬೆಳೆಯಿಸಿಕೊಂಡು ಜೀವಂತತನವನ್ನು ತಂದುಕೊಳ್ಳುವರೆಂದು ಆಶಿಸುತ್ತೇನೆ. ಎಂದು ಮುಂತಾಗಿ ಮಾನಾಡಿದ ಬಳಿಕ ಅಂದಿನ ಸಭೆಯ ಕಾರ್ಯವು ಕೊನೆಗಂಡಿತು.

೨. **ಹೊಸ ಸಾಹಿತ್ಯದಲ್ಲಿಯ ಕೆಲವು ಪ್ರಕಾರಗಳು :—** " ಹೊಸಕಾಲದಲ್ಲಿ ಹೊಸ ತರದ ಆಚಾರ-ವಿಚಾರಗಳು ಬಳಕೆಯಲ್ಲಿ ಬರುವದು ಸ್ವಾಭಾವಿಕವು. ಈ ಟ್ರೇನಿಂಗ್ ಕಾಲೇಜದಲ್ಲಿಯೇ ನೋಡಿರಿ. ಈಗ ಹತ್ತಿಪ್ಪತ್ತು ವರ್ಷಗಳ ಹಿಂದೆ ಇದ್ದ ರೂಢಿಗಳು ಇಂದು ಉಳಿದಿಲ್ಲ. ಹಲವು ತರದ ಮಾರ್ಪಾಡುಗಳಾಗಿವೆ. ಇದರಂತೆ ಎಲ್ಲ ಸಂಸ್ಥೆಗಳಲ್ಲಿಯೂ

ಆಗುತ್ತಲಿದೆ. ನಮ್ಮ ಕನ್ನಡ ಸಾಹಿತ್ಯದಲ್ಲಿಯೂ ಇದೇ ಬಗೆಯಾಗಿ ಕೆಲವು ಹೊಸ ಪ್ರಕಾರ ಗಳು ಬಂದಿವೆ. ಇನ್ನೂ ಬರುತ್ತಲಿವೆ. ಹೀಗೆಯೆ ಹಿಂದುಸ್ತಾನದ, ಪ್ರಪಂಚದ, ಎಲ್ಲ ಭಾಷೆ ಗಳಲ್ಲಿಯೂ ಬರುತ್ತಲಿವೆ. ಯಾವಾಗಲೂ ಹೊಸ ಸಾಹಿತ್ಯವು ನಿರ್ಮಾಣವಾಗುತ್ತಲಿರುವದೇ ಪುನರುಜ್ಜೀವನದ ಲಕ್ಷಣವೆಂದು ಮಾನ್ಯ ಅರವಿಂದ ಘೋಷರು ಹೇಳಿದ್ದಾರೆ.

ನಮ್ಮ ಹಿಂದಿನ ಆಚಾರ ವಿಚಾರಗಳಿಗೆ, ರೂಢಿಗಳಿಗೆ, ಅನುಗುಣವಾಗಿ ಇದ್ದ ಹಳೆಯ ಸಾಹಿತ್ಯದಲ್ಲಿ ಇಂದು ಕಳೆದು, ಮರೆಯಾಗಿ ಹೋಗುವಂತಿರುವದನ್ನು ಹೊಗಗೊಟ್ಟು ಇಂದಿನ ಹೊಸತರದ ಜೀವನ ಕ್ರಮಕ್ಕೆ ಅನುಗುಣವಾದ ಕೆಲವು ಪ್ರಕಾರಗಳಿಗೆ ಎಡೆಗೊಟ್ಟು **ನಿಷ್ಕಪಟ ಬುದ್ಧಿವಂತಿಕೆಗೆ ಆಸ್ಪದವೀಯುವದು ಹೊಸ ಸಾಹಿತ್ಯದ ಮೊದಲನೆಯ ಲಕ್ಷಣವು.** ನಮ್ಮಲ್ಲಿ ಆಗಿಹೋದ ಸಾಧುಸಂತರೂ ಕವಿರತ್ನರೂ ತಮ್ಮ ಕಾಲದಲ್ಲಿ ಅಂಧ ಶ್ರದ್ಧೆಯಿಂದ ಕೂಡಿರದೆ ಸಮಾಜದ ಲೋಪ ದೋಷಗಳನ್ನು ಲಕ್ಷ್ಯವಿಟ್ಟು ನೋಡಿಕೊಂಡು ತಮ್ಮ ತಮ್ಮ ವ್ಯಕ್ತಿ ವೈಶಿಷ್ಟ್ಯದಿಂದ ಹೊಸತರದ ತಮ್ಮ ದೃಷ್ಟಿಯನ್ನು ಕಂಡುಕೊಂಡು ಹೊಸತರದ ಸಾಹಿತ್ಯ ನಿರ್ಮಾಣ ಮಾಡಿದರು. ನಾವು ಈಗ ಸುಮಾರು ಐದುನೂರು ವರ್ಷಗಳಿಂದಲೂ ಅವರ ಹಾದಿಯನ್ನು ತುಳಿಯುತ್ತಲಿದ್ದೇವೆ. ಈ ಐದುನೂರು ವರ್ಷಗಳಲ್ಲಿ ಸಮಾಜದ ಜೀವನ ಕ್ರಮದಲ್ಲಿ ಏನೂ ಹೆಚ್ಚು ಕಡಿಮೆ ಯಾಗಿಲ್ಲವೆ? ಆಗಿದೆ. ಅದಕ್ಕಾಗಿ **ಹೊಸತರದ ಆತ್ಮದೃಷ್ಟಿಯು** ಬೇಕು. **ಇದು ಹೊಸ ಸಾಹಿತ್ಯದ ಎರಡನೆಯ ಲಕ್ಷಣವು.** ಸಮಾಜ-ದಲ್ಲಿ ಅನೇಕ ತರಗತಿಯ ಜನರಿರುವರು. ಅವರಲ್ಲಿ ತರತರದ ರೂಢಿಗಳಿರುವವು. ಅವರವರ ಆಶೆ ಆಕಾಂಕ್ಷೆಗಳೂ ಬೇರೆ ಬೇರೆ ಯಾಗಿರುವವು. ಜೀವನದಲ್ಲಿಯ ಸುಖಶಾಂತಿಗಳಿಗೆ ವಿವಿಧ ಬಗೆಗಳಿರುವವು. ಕಾಲವು ಹೊಸ-ಹೊಸತಾದಂತೆ ಒದಗಿದ ವಿವಿಧ ಸಮಸ್ಯೆಗಳಿಂದ ಅನೇಕ ತರದ ಜಾಗೃತಿಯಾಗುತ್ತಲಿರುವದು. ಅನೇಕತೆಯಲ್ಲಿ ಏಕರೂಪತೆಯನ್ನೂ ಏಕ-ರೂಪದಲ್ಲಿ ಅನೇಕತೆಯನ್ನೂ ಸಮಾಜವು ಬಯಸುತ್ತಿರುವದು. ಈ ರೀತಿಯಾಗಿ **ನಮ್ಮ ಜನ-ಜೀವನದಲ್ಲಿಯ ವೈವಿಧ್ಯವು ಕಂಡು ಬರುವಂತೆ ಮಾಡುವದು ಹೊಸ ಸಾಹಿತ್ಯದ ಮೂರನೆಯ ಲಕ್ಷಣವು.**

ಈ ಮೂರು ಲಕ್ಷಣ ಸೂತ್ರಗಳಿಗೆ ಅನುಸರಿಸಿ ಪ್ರಗತಿಪರವಾದ ಎಲ್ಲ ಭಾಷೆಗಳಲ್ಲಿಯೂ ಹೊಸ ಸಾಹಿತ್ಯವು ನಿರ್ಮಾಣವಾಗುತ್ತಲಿದೆ; ನಮ್ಮ ಕನ್ನಡದಲ್ಲಿಯೂ ನಿರ್ಮಾಣವಾಗುತ್ತ ಲಿದೆ. ಹೀಗೆ ನಿರ್ಮಾಣವಾದ ಎಲ್ಲ ವಿಭಾಗಗಳ ಸಮಾಲೋಚನೆಯನ್ನು ಇಂದು ಮಾಡಲಿಕ್ಕಾಗುವಂತಿಲ್ಲ. ಆದರೂ ಏಕಾಂಕ ನಾಟಕಗಳ ವಿಷಯವೊಂದನ್ನು ಎತ್ತಿ ನೋಡುವಾ.

ಕನ್ನಡದಲ್ಲಿ ಏಕಾಂಕ ನಾಟಕದ ಹಲವು ಹೊತ್ತಿಗೆಗಳು ಈಗಾಗಲೆ ಬಯಲಿಗೆ ಬಂದಿವೆ. ಅವುಗಳನ್ನು ಪರಿಶೀಲಿಸಿದರೆ ಉಳಿದ ಭಾಷೆಗಳಿಗಿಂತ ನಮ್ಮ ಕನ್ನಡವು ಸಾಕಷ್ಟು ಮುಂದುವರಿದಿದೆ ಎಂದು ಹೇಳಬಹುದು. ಶ್ರೀ. **ಕೈಲಾಸಂ** ಇವರು **ಟೊಳ್ಳು-ಗಟ್ಟಿ**ಯಲ್ಲಿ ಈಗಿನ ವಿದ್ಯೆ ಕಲಿತವರ ಲೋಪದೋಷಗಳನ್ನು ಜೆನ್ನಾಗಿ ತೋರಿಸಿದ್ದಾರೆ. **ಪ್ರೊ. ಜಹಾಗೀರದಾರ** ಅವರು **ಸರ್ಕಸದಲ್ಲಿ ಸರಸ್ವತಿ**ಯಲ್ಲಿ ಭೂಮಿತಿಯಲ್ಲಿ ಮಗ್ನರಾದವರ, ಅಮರಕೋಶವನ್ನು ಕಂಠಪಾಠ ಮಾಡುವವರ ನವಕರಿಗಾಗಿ ಅರ್ಜಿಗಳನ್ನು ಹಾಕುವವರ ಸ್ವರೂಪಗಳನ್ನು ಜೆನ್ನಾಗಿ ಚಿತ್ರಿಸಿ ದ್ದಾರೆ. ಶ್ರೀ. **ಎನ್. ಕೆ. ಕುಲಕರ್ಣಿ** ಅವರು **ಬಾರ್‌ರೂಮು**ದಲ್ಲಿ ಹೆಚ್ಚು ಕಲಿತವರ ಹುಚ್ಚು ತನವನ್ನು ತೋರಿಸಿದ್ದಾರೆ. ಶ್ರೀ. **ಬೇಂದ್ರೆ** ಅವರು **ಸಾಂಯೋ ಆಟ, ಗೊಲ್ಲ**ಗಳಲ್ಲಿ ಶ್ರೀ. **ಕೈಲಾಸಂ** ಅವರು **ಮ್ಯುನಿಸಿಪಲ್ ರೂಲ್ಸ್**ದಲ್ಲಿ ಶ್ರೀ. **ಮುಂಗಳಿ** ಅವರು **ಸಾವನ ಸಾವಕ**ದಲ್ಲಿ

ಸಮಾಜದ ನ್ಯೂನತೆ ಶೃಂಗಾರ ಅರಿವು ಮರೆವು ಮೊದಲಾದ ಸಂಗತಿಗಳನ್ನು ಹೊಸತರದಲ್ಲಿ ಚೆನ್ನಾಗಿ ಹೇಳಿದ್ದಾರೆ. ಪುನರುಜ್ಜೀವನದ ದಾರಿಯನ್ನು ತೋರಿಸಿದ್ದಾರೆ. ಇವುಗಳನ್ನು ಓದಿದರೆ ನಮ್ಮೆಲ್ಲರಲ್ಲಿಯೂ ವಿಧಾಯಕ ದೃಷ್ಟಿಯು ಬಾರದೆ ಇರದು.

ಹೊಸ ಸಾಹಿತ್ಯದ ರಹಸ್ಯವು ತನ್ನನ್ನು ತಾನು ತಿಳಿಯುವದರಲ್ಲಿ ಇದೆ. ತನ್ನ ತಿಳಿವು ತನ್ನಲ್ಲಿಯೇ ಇದೆ. ದೇವಲೋಕವು ಮನುಷ್ಯರ ಮನಸ್ಸಿನಲ್ಲಿದೆ. ಸಪ್ತಸ್ವರ್ಗಗಳು ಕೂಡ ನಮ್ಮ ಮನಸ್ಸಿನಲ್ಲಿಯೇ ಇವೆ. ನಾವೆಲ್ಲರೂ ಆತ್ಮದೃಷ್ಟಿಯನ್ನು ಕಂಡುಕೊಂಡು ಹೊಸ ಸಾಹಿತ್ಯದ ಕಡೆಗೆ ನೋಡಬೇಕು. ಈಗಿನ ಕಾಲದ ವಿಡಂಬನ ವಿಮರ್ಶೆಗಳೂ ಏಕಾಂಕ ನಾಟಕಗಳೂ ಹೊಸ ತಿಳಿವನ್ನು ತಿಳಿಸುತ್ತಲಿವೆ. ಹಳೆಯದೆ ಹೆಚ್ಚಿನದೆಂದು ತಿಳಿದು ಈಗಿನ ಸ್ಥಿತಿಗೆ ಕೊರಗದೆ ಮರುಗದೆ ಹೊಸ ಸಾಹಿತ್ಯದ ಹೊಸ ಸವಿಯನ್ನು ತಾವೆಲ್ಲರೂ ಸವಿಯುವಿರೆಂದು ಆಶಿಸುತ್ತೇನೆ.

ಮಾರವಾಡದ ಜನರು ದೂರದೂರದ ನಾಡುಗಳಲ್ಲಿ ಇದ್ದರೂ ತಮ್ಮ ನಾಡನುಡಿಯನ್ನು ಬಿಡುವದಿಲ್ಲ. ಇಷ್ಟೇ ಅಲ್ಲ, ಅಲ್ಲಿಯ ಧನವನ್ನು ತಮ್ಮ ನಾಡಿಗೆ ಒಯ್ದು ನಾಡುನುಡಿಗಳ ಹೆಚ್ಚಳವನ್ನು ಮಾಡುತ್ತಲಿರುವರು. ಇದೇ ಗತ್ತುಗಾರಿಕೆಯನ್ನು ಕನ್ನಡಿಗರು ಏಕೆ ಅವಲಂಬಿಸ ಬಾರದು? ಇಂದಿನ ಪಕ್ಷಪಂಗಡಗಳ ಕಲಹ-ಧೂಳಿ-ವಿಷಗಳ ಕೊನೆಯಲ್ಲಿ ಅಮೃತ ಉದಯ ವಾಗದೆ ಹೋಗಲಿಕ್ಕಿಲ್ಲ. ನಮ್ಮೆಲ್ಲರಿಗೆ ಹೊಸ ಸಾಹಿತ್ಯದೊಂದಿಗೆ ಹೊಸದಾಗಿ ಕನ್ನಡ ನಾಡನ್ನು ಕಟ್ಟುವ ಗುರಿಯೂ ಇದೆ. ಒಂದು ಮಾತಿನವರು ಒಂದು ನಾಡಿನಲ್ಲಿ ಕೂಡಿ ಇರಬೇಕೆಂದು ಇಡಿಯ ಮಾನವ ಜನಾಂಗವೇ ಒಪ್ಪುವದು. ಇಂಗ್ಲಿಷರ ಪ್ರೀತಿಯ ವೀರನಾದ ನೆಲ್ಸನ್ನನು ಹೇಳಿದಂತೆ ನಾನಾದರೂ ಹೇಳುವದೇನಂದರೆ ಪ್ರತಿಯೊಬ್ಬ ಕನ್ನಡಿಗನು ತನ್ನ ಕೆಲಸವನ್ನು ತಾನು ಮಾಡಿ ನಾಡುಕಟ್ಟಲಿಕ್ಕೆ ಯತ್ನಿಸಬೇಕು. ಇದುವೇ ನಾಡಿನ ಅಡಿಗಲ್ಲು, ಎಂದು ನಾನು ತಿಳಿದಿದ್ದೇನೆ.

ಉಪನ್ಯಾಸಕರ ಮಾತು ಮುಗಿದ ಬಳಿಕ ಅಂದಿನ ಸಭೆಯ ಅಧ್ಯಕ್ಷರಾಗಿದ್ದ ಶ್ರೀ. ಬೈಚ ವಾಳರಾಯರು ಕವಿಗಳೂ, ಗಮಕಿಗಳೂ, ಕೀರ್ತಿಪೆತ್ತ ವಿಮರ್ಶಕರೂ ಹೊಸ ಸಾಹಿತ್ಯದ ಕೆಲವು ಪ್ರಕಾರಗಳ ನಿರ್ಮಾಣಕರೂ, ಸುಜ್ಞಾನಸಂಪನ್ನರೂ, ಕರ್ತೃತ್ವಶಾಲಿಗಳೂ, ಪ್ರತಿಭಾ ಸಂಪನ್ನರೂ, ಪ್ರಖ್ಯಾತ ಮೇಧಾವಿಗಳೂ, ವಿಲಿಂಗ್ಡನ್ ಕಾಲೇಜಿನ ಪ್ರಿನ್ಸಿಪಾಲರೂ ಆದ ಶ್ರೀಮಾನ್ ಎ. ಕೃ. ಗೋಕಾಕ ಅವರು ಇಂದು ನಮ್ಮೆಲ್ಲರಿಗೆ ಹೊಸ ಸಾಹಿತ್ಯಕ್ಷೇತ್ರವ ಒಂದು ಅಂಗದ ದಿಗ್ದರ್ಶನವನ್ನು ಮಾಡಿ ಕೊಟ್ಟುದಕ್ಕಾಗಿ ನಾವೆಲ್ಲರೂ, ನಮ್ಮ ಈ ಶಿಕ್ಷಣ ಸಂಸ್ಥೆಯೂ ಸುದ್ಯೈವಿಗಳೆಂದು ತಿಳಿದು ಅವರಿಗೆ ಧನ್ಯವಾದಗಳನ್ನು ಅರ್ಪಿಸುವೆವು ಎಂದು ಮಾತಾಡಿ ಸಭಾಕಾರ್ಯವನ್ನು ಪೂರ್ತಿಗೊಳಿಸಿದರು.

ನಮ್ಮ ವಿದ್ಯಾಧಿಕಾರಿಗಳು

೧. ನಮ್ಮ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿದ್ದ ಡಾ. ಕಾಮುತೆರವರು ಕಳೆದ ಆಗಸ್ಟ ತಿಂಗಳಲ್ಲಿ ಸೇವಾನಿವೃತ್ತರಾದರು. ೧೯೪೨ನೆಯ ಇಸ್ವಿಯ ಸಪ್ಟಂಬರ ತಿಂಗಳ ಸಂಚಿಕೆಯಲ್ಲಿ ಅವರ ಪರಿಚಯವನ್ನು ಕೊಟ್ಟಿದೆ. ಡಾ. ಕಾಮುತೆರವರು ಒಂದೇ ವರ್ಷ ಇನ್‌ಸ್ಪೆಕ್ಟರ

ರಾಗಿದ್ದರೂ ಜೆನ್ನಾಗಿ ಕೆಲಸಮಾಡಿ ಕೀರ್ತಿ ಸಂಪಾದನೆ ಮಾಡಿದರೆಂದು ಹೇಳಬಹುದು. ಹಲವರು ಕಾರ್ಯತತ್ಪರತೆ, ಸಮಯನಿಷ್ಠೆ, ಚಾಚೂ ತಪ್ಪದೆ ನಿಯಮಾನುಸರಣ ಮಾಡುವಿಕೆ ಮುಂತಾದವುಗಳನ್ನು ದೊಡ್ಡ ಅಧಿಕಾರದಲ್ಲಿರುವಾಗ ಮರೆತುಬಿಟ್ಟು ತಮ್ಮ ಸ್ವಂತದ ಸುಖ ಸಮಾಧಾನಗಳಿಗೇ ಹೆಚ್ಚು ಮಹತ್ವಕೊಡುವದುಂಟು. ಆದರೆ ಡಾ|| ಕಾಮತರವರು ಇದಕ್ಕೆ ಅಪವಾದವಾಗಿದ್ದರು. ಅವರು ತಮ್ಮ ಮುಂದಿನ ಆಯುಷ್ಯದಲ್ಲಿ ಕನ್ನಡ ನಾಡುನುಡಿಗಳ ಸೇವೆಯಲ್ಲಿ ತತ್ಪರರಾಗಿದ್ದು ಹೆಚ್ಚಿನ ಕೀರ್ತಿಯನ್ನು ಗಳಿಸಲೆಂದು ಹಾರೈಸುವೆವು.

೨. ಡಾ. ಕಾಮತರವರು ಸೇವಾನಿವೃತ್ತರಾದ ಬಳಿಕ ಅವರ ಸ್ಥಳಕ್ಕೆ ಶ್ರೀಮಾನ್ ಖುರ್ಷಾಜುದ್ದೀನ್ ಖಾನ್, M. A., M. Ed. ಅವರು ನಮ್ಮ ಭಾಗದ ಎಜ್ಯುಕೇಶನಲ್ ಇನ್ ಸ್ಪೆಕ್ಟರರಾಗಿ ಬಂದಿರುವರು. ಅವರು ಹುಟ್ಟಿದ ಊರು ಭೋಪಾಳ (೧೮೯೯). ಅವರ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣವೆಲ್ಲ ಅಲ್ಲಿಯೇ ನಡೆಯಿತು. ಮುಂದೆ ಅವರು ಬರೋಡಾ ಕಾಲೇಜವನ್ನು ಸೇರಿ ಬಿ. ಎ. ಪದವಿಯನ್ನು ಪಡೆದರು. ತರುವಾಯ ಅಲೀಗಡ ಕಾಲೇಜಕ್ಕೆ ಹೋಗಿ ಎಮ್. ಎ. ಪದವಿಯನ್ನು ಹೊಂದಿದರು. ಆ ಬಳಿಕ ಶಿಕ್ಷಣವಿಷಯದಲ್ಲಿ ಆಸಕ್ತಿಯುಳ್ಳವರಾಗಿದ್ದುದರಿಂದ ಬಿ.ಟಿ. ಡಿಗ್ರಿಯನ್ನು ದೊರಕಿಸಿ ಹೆಚ್ಚಿನ ಶಿಕ್ಷಣಕ್ಕಾಗಿ ಇಂಗ್ಲಂಡಕ್ಕೆ ತೆರಳಿದರು. ಅಲ್ಲಿ ಎರಡು ವರ್ಷಗಳವರೆಗೆ ಉಳಿದು ಅನೇಕ ಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಿ ಪ್ರಮುಖ ಶಿಕ್ಷಣ ಶಾಸ್ತ್ರಜ್ಞರ ಜ್ಞಾನಾನುಭವಗಳ ಲಾಭವನ್ನು ಪಡೆದು ಲೀಡ್ಸ್ ವಿಶ್ವವಿದ್ಯಾನಿಲಯದ ಎಮ್. ಈಡಿ. ಎಂಬ ಉಚ್ಚತರದ ಪದವಿಯನ್ನು ದೊರಕಿಸಿಕೊಂಡು ಮರಳಿಬಂದರು. ಅವರ ಶಿಕ್ಷಣ ಪ್ರೇಮವನ್ನೂ ಆ ವಿಷಯದಲ್ಲಿ ಪಡೆದಿರುವ ಹೆಚ್ಚಿನ ಯೋಗ್ಯತೆಯನ್ನೂ ಕಂಡ ಮುಂಬಯಿ ಸರಕಾರದವರು ಅವರನ್ನು ಒಮ್ಮೆಲೆ ಜಳಗಾಂವ ಹೈಯ್‌ಸ್ಕೂಲಿನ ಮುಖ್ಯಾಧ್ಯಾಪಕರನ್ನಾಗಿ ನಿಯಮಿಸಿದರು (೧೯೨೯). ಮುಂದೆ ಏಳೆಂಟು ವರ್ಷ ಜಳಗಾಂವ ಹೈಸ್ಕೂಲಿನಲ್ಲಿಯೂ ಧುಳಿಯಾದೊಳಗಿನ ಗರುಡ ಹೈಸ್ಕೂಲಿನಲ್ಲಿಯೂ ಕೆಲಸಮಾಡಿದ ಬಳಿಕ ಎರಡು ವರ್ಷ ಉತ್ತರಭಾಗದೊಳಗಿನ ಉರ್ದು ಸ್ಕೂಲುಗಳ ಮೇಲಿನ ಡಿಪ್ಯುಟಿ ಎಜ್ಯುಕೇಶನಲ ಇನ್‌ಸ್ಪೆಕ್ಟರರಾಗಿ ನಿಯಮಿಸಲ್ಪಟ್ಟಿದ್ದರು. ೧೯೩೯ನೆಯ ಇಸ್ವಿಯ ಸಪ್ಟಂಬರ ತಿಂಗಳಲ್ಲಿ ಉತ್ತರಭಾಗದ ಅಸಿ. ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದರು. ಕೆಲವು ದಿನಗಳಹಿಂದೆ ಅಹಮ್ಮದಾಬಾದ ಮ್ಯುನಿಸಿಪಾಲಿಟಿಯ ವಿಶೇಷ ಕಾರ್ಯನಿರ್ವಹಣದ ಸಂದರ್ಭದಲ್ಲಿ ಮುಂಬಯಿ ಸರಕಾರದವರು ಇವರನ್ನು ಅದರ ಆಡಳಿತೆಯ ಅಧಿಕಾರಿಗಳನ್ನಾಗಿ ಆರಿಸಿ ಕಳುಹಿಸಿದ್ದರು. ಅಲ್ಲಿಂದ ನಮ್ಮ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿ ಬಂದಿರುವರು. ಇವರು ವಿದ್ಯಾವಿನಯಸಂಪನ್ನರೂ ಕೈಕೊಂಡ ಕಾರ್ಯದಲ್ಲಿ ತುಂಬ ಆಸ್ಥೆಯುಳ್ಳವರೂ ನ್ಯಾಯನಿಷ್ಠರೂ ಉತ್ಸಾಹಶಾಲಿಗಳೂ ಆಗಿರುವರೆಂದು ಹೆಸರುಗೊಂಡಿದ್ದಾರೆ. ಪೂರ್ವವಯಸ್ಸಿನಲ್ಲಿಯೇ ಮೇಲ್ತರಗತಿಯ ಅಧಿಕಾರಕ್ಕೆ ಬಂದವರಾದ ಇವರು ವಿದ್ಯಾ ಸುಧಾರಣೆಯ ವಿಷಯಗಳಲ್ಲಿ ಹೆಚ್ಚು ಆಸಕ್ತಿಯುಳ್ಳವರಾಗಿದ್ದು ಅದಕ್ಕೆ ಅನುಗುಣವಾದ ಶಾರೀರಿಕ ಮಾನಸಿಕ ಪರಿಸ್ಥಿತಿಯುಳ್ಳವರಾಗಿ ಇನ್ನೂ ಹತ್ತೆಂಟು ವರುಷ ಕೆಲಸ ಮಾಡಲು ಅವಕಾಶವಿದೆ. ಮತ್ತು ಇದಕ್ಕೂ ಹೆಚ್ಚಿನ ಅಧಿಕಾರಕ್ಕೆ ಏರುವ ಸಂಭವವೂ ಉಂಟು. ಆದುದರಿಂದ ಇವರಿಂದ ನಮ್ಮ ವಿದ್ಯಾ ಇಲಾಖೆಯಲ್ಲಿ ಹೆಚ್ಚಿನ ಪ್ರಗತಿಯಾಗಬಹುದೆಂದೂ ನಮ್ಮ ಭಾಗದ ಎಲ್ಲ ಬಗೆಯ ಶಿಕ್ಷಣ ಸಂಸ್ಥೆಗಳ ಉತ್ಕರ್ಷವಾಗಬಹುದೆಂದೂ ಆಶಿಸಬಹುದಾಗಿದೆ.

ದೇವರು ಮನುಷ್ಯನಿಗೆ ಯಾಕೆ ಬೇಕು?

ಇದೊಂದು ಅತಿ ಜಟಿಲವಾದ ಸಮಸ್ಯೆ. ಈ ಸಮಸ್ಯೆಯನ್ನು ಬಿಡಿಸಲು ಹವಣಿಸಿದವರು ತೀರ ವಿರಳ. ಹಾಗೆ ಯತ್ನಿಸಿದವರಲ್ಲಿ ಯಶಸ್ಸು ಪಡೆದವರು ಮತ್ತೂ ವಿರಳ. ದೇವರು ಇದ್ದಾನೆಯೇ? ಇಲ್ಲವೇ? ಎನ್ನುವ ಸಂದೇಹದಲ್ಲಿ ತೊಳಲುವ ಅಲ್ಪಸಂಖ್ಯಾಕರನ್ನೂ ದೇವರು ಇಲ್ಲವೇ ಇಲ್ಲವೆನ್ನುವ ನಾಸ್ತಿಕರಾದ ತೀರ ಸ್ವಲ್ಪಜನರನ್ನೂ ಬಿಟ್ಟುಳಿದ ಅಖಿಲಮಾನವ ಕುಲವೇ ಆತನ ಒಂದಿಲ್ಲೊಂದು ಬಗೆಯ ರೂಪ ಪ್ರಕಾರ ಶಕ್ತಿಸ್ವರೂಪಗಳನ್ನು ಒಪ್ಪಿಕೊಂಡು ನಂಬಿ ನಡೆಯುತ್ತಲಿದೆ.

ಹಿಂದೊಂದು ಕಾಲದಲ್ಲಿ ದೇವರ ಅಸ್ತಿತ್ವ ನಾಸ್ತಿತ್ವಗಳನ್ನು ಕಂಡುಕೊಳ್ಳಲು ಹವಣಿಸಿದ ಘನವಿದ್ವಾಂಸನಾದ ವಿಜ್ಞಾನಿಯೊಬ್ಬನು ಬಹುಕಾಲದ ಬಹುವಿಧದ ಪರಿಶ್ರಮದ ಫಲವಾಗಿ ಒಂದು ನಿರ್ಣಯಕ್ಕೆ ಮುಟ್ಟಿ ತನ್ನ ಮನೆಯ ಪಡಸಾಲೆಯ ಗೋಡೆಯ ಮೇಲೆ ದೊಡ್ಡದೊಡ್ಡ ಅಕ್ಷರಗಳಲ್ಲಿ "God is no where; God is nothing" (ದೇವರು ಎಲ್ಲಿಯೂ ಇಲ್ಲ; ದೇವರು ಏನೂ ಅಲ್ಲ ಅದೊಂದು ಭ್ರಮೆ) ಎಂದು ಬರೆದಿಟ್ಟುಕೊಂಡಿದ್ದನಂತೆ. ಅವನನ್ನು ಕಾಣಲು ಬಂದ ಇನ್ನೊಬ್ಬ ಆಸ್ತಿಕವಾದಿಯಾದ ಶಾಸ್ತ್ರಜ್ಞನು ಅವೇ ಅಕ್ಷರಗಳನ್ನೇ ತನಗೆ ಅನುಗುಣವಾದ ರೀತಿಯಲ್ಲಿ ಕಂಡು ಹೀಗೆ ಓದಿಕೊಂಡನಂತೆ— "God is now here; God is no thing" [ದೇವರು ಈಗ ಇಲ್ಲಿ ಇದ್ದಾನೆ; ದೇವರು (ದೃಶ್ಯ) ಪದಾರ್ಥವಲ್ಲ]. ಅವೇ ಅಕ್ಷರಗಳನ್ನೇ ಅಷ್ಟೇ ಅಕ್ಷರಗಳನ್ನೇ ಇಬ್ಬರು ತೀರ ವಿರುದ್ಧವಾಗಿ ಓದಿ ತಿಳಿದುಕೊಳ್ಳಲು ಕಾರಣವೇನು? ಎಂಬ ಪ್ರಶ್ನೆಗೆ ಅವರವರ ಮನಃಸ್ಥಿತಿಯೇ ಅದಕ್ಕೆ ಕಾರಣವೆಂದು ಉತ್ತರ ಹೇಳಬೇಕಾಗುವದಲ್ಲವೆ?

ಮನುಷ್ಯನು ತನ್ನ ಬುದ್ಧಿಗೂ ಶಕ್ತಿಗೂ ಸಾಧ್ಯವಾದಷ್ಟು ಯತ್ನಮಾಡುವನು. ಹಾಗೆ ಮಾಡಿದ ಯತ್ನವು ತಕ್ಕ ಫಲವನ್ನು ಕೊಡದಂತಾಗಲು ಅಥವಾ ಆ ಪ್ರಯತ್ನದಿಂದ ದಣಿದು ಕೈ ಕುಂಠಿತವಾಗಲು ಅವನೊಂದು ಆಶ್ರಯವನ್ನು ಹುಡುಕುವನು. ಆ ಆಶ್ರಯವೇ ದೇವರು ಎಂದು ಹೇಳುವದುಂಟು. ಮಹಾನದಿಯ ಪ್ರವಾಹದಲ್ಲಿ ತೇಲಿಹೋಗುತ್ತಿರುವ ಮನುಷ್ಯನು ತನ್ನ ಮುಂದೆ ತೇಲುತ್ತಿರುವ ಹುಲ್ಲುಕಡ್ಡಿಯನ್ನಾದರೂ ಬಾಚಿಕೊಂಡು ಅದರ ಆಶ್ರಯವನ್ನು ಕೋರುವದಿಲ್ಲವೆ? ಅದೇಕೆ? ಅವನಿಗೆ ಆ ಹುಲ್ಲುಕಡ್ಡಿಯು ಆಶ್ರಯವನ್ನೀಯಲಾರದೆಂಬದು ತಿಳಿಯದೆ? ಹಾಗೆ ತಿಳಿದರೂ ಬೇರೆ ಆಶ್ರಯವಿಲ್ಲದ ಸಂಕಟಕ್ಕೆ ಆ ಹುಲ್ಲನ್ನೆ ತಬ್ಬಿಕೊಳ್ಳಲು ಹೋಗುವನು. ಹಾಗೆಯೇ ಬಹುಜನರ ದೇವಭಕ್ತಿಯು ತಮಗೊದಗಿದ ಆಪತ್ಕಾಲದಲ್ಲಿ ಬೇರೆ ಸಹಾಯಕರನ್ನು ಕಾಣಲಾರದ ಸಂಕಟದಿಂದ ಹುಟ್ಟಿದುದು. ಕಣ್ಣಾಣದ ಕಂಗಾಲ ಸ್ಥಿತಿಯಲ್ಲಿರುವಾಗಲೇ ಎಷ್ಟೋ ಜನರಿಗೆ ದೇವರ ನೆನಪಾಗುವದು. ಪಾಪಿಯಾದವನು ಪಾಪಕಾರ್ಯಗಳಲ್ಲಿಯೇ ಮಗ್ನನಾಗಿದ್ದು ಕಟ್ಟಕಡೆಗೆ ಅದರ ಯಾವ ದುಷ್ಪರಿಣಾಮವನ್ನೂ ಎಣಿಸಲಾರದೆ ಕೆಲಸಮಾಡತೊಡಗುವನು. ಕೊನೆಗೊಂದುದಿನ ಅವನು ತನ್ನ ಪಾಪದ ಹೊರೆಯನ್ನು ಹೊರಲಾರದೆ ಕುಗ್ಗಿ ಕುಸಿದು ಕೂತು ದೇವರ ಹೆಸರುಗೊಳ್ಳುವನು. ಅವನಿಗೆ ತನ್ನ ಜೀವನವು ಭಾರವೆನಿಸುವದು; ಆಗ ಆತ್ಮಹತ್ಯೆಗೆ ಸಿದ್ಧನಾಗುವನೆಂದರೂ ಅಡ್ಡಿಯಿಲ್ಲ. ಅವನ ಮನಸ್ಸು ಅಷ್ಟು ನಿಷ್ಕುರವಾಗುವದು. ಇಂಥ ಸಂದರ್ಭದಲ್ಲಿಯೇ ಅವನಿಗೆ ದೇವರ ನೆನಪಾಗುವದು. ಬಡವನಾಗಿ ಹುಟ್ಟಿದವನು ಬಡತನದಿಂದ ಬೆಂದು ಬೆಂಡಾಗಿ ಕೂಳಿಲ್ಲದೆ ನೀರಿಲ್ಲದೆ

ಬಳಲುವಾಗ ತನ್ನ ಹಸುಗೂಸುಗಳೂ ಹಸಿವೆಯಿಂದ ಬಾಯಿಬಿಡುವದನ್ನು ನೋಡಲಾರದೆ ಕೊರಗಿ ಸೊರಗಿ ಅನ್ಯದಾರಿಗಾಣದಂತಾದಾಗ 'ದೇವರೇ ನನ್ನನ್ನು ಪಾರುಮಾಡು' ಎಂದು ಬಾಯ್ದೆರೆದು ಅಳಲುವನು. ಜಿಪುಣನಾದ ಚಿನಿವಾಲನು ತನ್ನ ಹೊಟ್ಟಿಬಟ್ಟೆಗಳನ್ನು ಮರೆತು ಹೆಂಡಿರುಮಕ್ಕಳನ್ನಂತೂ ಹತ್ತಿರ ಹಾಯಗೊಡದೆ ಹಣವನ್ನು ಸಂಗ್ರಹಿಸುವನು. ಮತ್ತು ತನ್ನ ಇಡಿಯ ಆಯುಷ್ಯದಲ್ಲೊಂದು ಕ್ಷಣವಾದರೂ ದೇವರ ಚಿಂತನೆಗೆ ಸಮಯವಿಲ್ಲದಷ್ಟು ಧನಲೋಭದಲ್ಲಿ ಮಗ್ನನಾಗಿರುವನು. ಅಕಸ್ಮಾತ್ ಅವನ ಧನವನ್ನೆಲ್ಲ ರಾಜದೂತರೋ ವಂಚಕರೋ ಅಪಹರಿಸಿಬಿಟ್ಟರೆ ಆಗ ಅವನಿಗೆ ಅಕಸ್ಮಾತ್ ದೇವರ ನೆನಪಾಗುವದು. 'ದೇವರೇ ನನ್ನಗತಿಯೇನೆಂ'ದು ಕೇಳುವನು! ರಾಜ್ಯಲೋಭಿಯಾದ ಅರಸನು ಒಂದರಹಿಂದೊಂದರಂತೆ ಹಲವು ರಾಜ್ಯಗಳನ್ನು ಗೆದ್ದುಕೊಂಡರೂ ತೃಪ್ತಿಯಿಲ್ಲದೆ ಜಗತ್ತನ್ನೇ ಗೆಲ್ಲುವ ಆಶೆಯಿಂದ ಮುಂದೆಸಾಗುವನು. ಹಾಗೆ ಸಾಗಿರುವಾಗ ತನಗೊದಗಿದ ಅಪಜಯದಿಂದ ಸರ್ವಸ್ವವನ್ನೂ ಕಳೆದುಕೊಂಡಾಗ 'ಅಯ್ಯೋ ದೇವರೇ ನನ್ನ ರಾಜ್ಯವೇನಾಯಿತು' ಎಂದು ಬಾಯಿಬಿಡುವನು. ಪ್ರಣಯಿಯಾದವನು ತನ್ನ ಪ್ರೇಯಿಸಿಯನ್ನು ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸಿ ಅವಳಿಗಾಗಿಯೇ ಜೀವಿಸುವೆನೆಂದು ಭಾವಿಸಿರುವಾಗ ಅವಳು ಮರಣಹೊಂದಿದರೆ 'ಅಯ್ಯೋ, ದೇವರೇ ನನ್ನ ಪ್ರಿಯತಮೆಯನ್ನು ಎಲ್ಲಿಗೆ ಒಯ್ದುಬಿಟ್ಟೆ! ತಿರುಗಿಕೊಡು' ಎಂದು ಬೇಡಿಕೊಳ್ಳುವನು. ಒಟ್ಟಿಗೆ 'ಸಂಕಟಬಂದಾಗ ವೆಂಕಟರಮಣ' ಎನ್ನುವದು ಮನುಷ್ಯಸ್ವಭಾವ.

ಈ ಉದಾಹರಣೆಗಳಿಂದ ನೋಡಿದರೆ ಮಾನವ ಪ್ರಾಣಿಯು ತನ್ನ ಸ್ವಾರ್ಥದ ದೃಷ್ಟಿಯಲ್ಲಿಯೇ ದೇವರನ್ನು ಸೃಷ್ಟಿಸಿರುವನು. ದೇವರು ತಾನಾಗಿ ಬಂದು ಇದೋ ನಾನಿಲ್ಲಿದ್ದೇನೆ ಎಂದು ಯಾರಿಗೂ ಹೇಳಿಲ್ಲ; ಕಂಡಿಲ್ಲ. ಇನ್ನೊಬ್ಬನ ಹೇಳಿಕೆಯಿಂದ ದೇವರನ್ನು ನಂಬುವದಾಗಲಿ ಅವನನ್ನು ಕಾಣಲು ಬಯಸುವದಾಗಲಿ ಸಾಧ್ಯವಿಲ್ಲ. ಕುದುರೆಗೆ ನೀರು ತೋರಿಸುವದು ನಮ್ಮ ಕೈಯಲ್ಲಿದ್ದರೂ ಅದಕ್ಕೆ ನೀರು ಕುಡಿಸುವದು ನಮ್ಮ ಕೈಯಲ್ಲಿಲ್ಲ. ಅದು ನೀರಡಿಸಿದಾಗಲೆ ನೀರು ಕುಡಿಯುವದಲ್ಲವೇ? ಹಾಗೆಯೇ ದೇವರಲ್ಲಿ ನಂಬುಗೆಯಿಲ್ಲದವನ ಮನಸ್ಸಿನಲ್ಲಿ ದೇವರ ಭಾವನೆಯನ್ನು ತುಂಬುವದು ಅನ್ಯರಿಗೆ ಸಾಧ್ಯವೇ ಇಲ್ಲ. ಪ್ರತಿಯೊಬ್ಬನ ಹೃದಯದಲ್ಲಿಯೂ ದೇವರಿದ್ದಾನೆಂಬ ಮಾತು ಸತ್ಯವಾಗಿದ್ದರೆ ಆ ಸತ್ಯವನ್ನು ಕಂಡುಕೊಳ್ಳುವದು ಅವನದೇ ಕೆಲಸ. ನನ್ನಲ್ಲಿರುವದನ್ನು ನನಗೆ ಇನ್ನೊಬ್ಬನು ಹೇಗೆ ತೋರಿಸಬಲ್ಲನು?

ನಮ್ಮ ದೇಶದಲ್ಲಿ ಒಣಿಒಣಿಗೂ ಗುಡಿಗುಂಡಾರಗಳನ್ನು ಕಾಣಬಹುದು. ದೇವರಲ್ಲಿ ವಿಶ್ವಾಸವಿಲ್ಲದ ಭಕ್ತಿಹೀನರಿಗೆ ಆ ದೇವರ ಮೂರ್ತಿಗಳೇನುಮಾಡಬಲ್ಲವು? ಎಷ್ಟೋ ಜನರಿಗೆ ದೇವರನ್ನು ಆಶ್ರಯಿಸುವದು ಹೇಡಿತನವೆನ್ನಿಸುವದು. ಪ್ರತಿಯೊಂದು ದೇಶದಲ್ಲಿಯೂ ಎಷ್ಟೋ ಜನ ಸಾಧುಸಂತರು ಆಗಿ ಹೋಗಿರುವರು; ಆಗುತ್ತಲೂ ಇರುವರು; ಆದರೆ ದೇವರು ಧರ್ಮಗಳಲ್ಲಿ ನಂಬುಗೆಯಿಲ್ಲದ ಅಂಧರಿಗೆ ಅವರು ತೋರಿಸಿದ ದೇವರು ಧರ್ಮಗಳ ವಿಚಾರಗಳು ಯಾವ ದಾರಿಯನ್ನು ತೋರಿಸಬಲ್ಲವು? ಅರ್ಥಾತ್ ದೇವರು ಧರ್ಮಗಳ ಭಾವನೆಯು ಪರರಿಂದ ಬಂದು ಮನಸ್ಸಿನೊಳಗೆ ಹೋಗುವ ಸಂಭವವಿಲ್ಲ. ಅದು ಅಂತಃಕರಣದಲ್ಲಿಯೇ ಹುಟ್ಟಿ ವಿಕಾಸಗೊಳ್ಳಬೇಕು. ಸ್ವಾನುಭವವೇ ಈ ವಿಚಾರಗಳ ಉತ್ಪತ್ತಿಗೆ ಮೂಲಾಧಾರವು. ಮತ್ತು ಹೊರಗಿನ ಪರಿಸ್ಥಿತಿಯು ಮಾನವಜೀವನಕ್ಕೆ ಹೊರಗಿನ ಗಾಳಿ ಬೆಳಕು ನೀರುಗಳು ನೆರವಾಗುವಷ್ಟರಮಟ್ಟಿಗೆ ಆ ಸ್ವಾನುಭವಜನ್ಯ ವಿಚಾರಕ್ಕೆ ಸಹಾಯಕವಾಗಬಹುದು. ಜೋಳದ ಎಲೆಯನ್ನು ಖಡ್ಗವಾಗಿ ಮಾರ್ಪಡಿಸುವ ಶಕ್ತಿಯು ನಮಗೆಲ್ಲಿದೆ? ಹಾಗೆಯೇ ನಾಸ್ತಿಕನಾದವನನ್ನು ಆಸ್ತಿಕನಾಗಿ ಮಾಡುವ ಶಕ್ತಿಯು ಹೊರಗೆಲ್ಲಿಯೂ ಇಲ್ಲದೆ ಅದು ಮಾನವನ ಅಂತಃಕರಣದಲ್ಲಿಯೇ ಇರುವದು. ಜೀವಂತ ಗಿಡಕ್ಕೆ ನೀರು ಗೊಬ್ಬರ ಗಾಳಿ ಬೆಳಕುಗಳು ದೊರೆದರೆ

ಅದು ಬೆಳೆಯಬಹುದು. ಆಂದರೆ ಒಣಗಿ ನಿಂತ ಗಿಡಕ್ಕೆ ಎಷ್ಟು ನೀರು ಎಷ್ಟು ಗೊಬ್ಬರ ಹಾಕಿದರೆ ಅದು ಚಿಗಿಯಬಲ್ಲದು? ಹಾಗೆಯೇ ಅಂತಸ್ಥ ಜ್ಞಾನವಿಲ್ಲದವನಿಗೆ ಎಷ್ಟು ಉಪದೇಶ ಮಾಡಿದರೆ ಅವನ ಮುಂದೆ ಎಷ್ಟು ದೇವರ ಮೂರ್ತಿಗಳನ್ನು ನಿಲ್ಲಿಸಿದರೆ ಅವನಲ್ಲಿ ಈಶ್ವರ ಭಕ್ತಿಯುಂಟಾಗಬಹುದು? ಬರೆಯ ದೇವರು ಧರ್ಮಗಳನ್ನು ಕುರಿತು ಮಾತಾಡಿದರೆ ಅವನಲ್ಲಿ ನಿಜವಾದ ಶ್ರದ್ಧೆಯುಂಟೆಂದು ಹೇಳಲು ಸಾಧ್ಯವಿಲ್ಲ. ಹೊರಗಿನ ಮಾತು ಒಳಗಿನ ಅಂತಃಕರಣವನ್ನು ಬೆಳಗಿಸಲಾರದು. ದೇವರು ಅಂತಃಕರಣದಲ್ಲಿರುವನು. ಆದುದರಿಂದ ದೇವರ ವಿಚಾರವು ಒಳಗಿನಿಂದ ಬೆಳಗಿ ಬರಬೇಕು. ತಾತ್ವಿಕ ವಿವೇಚನೆ, ಪ್ರಾರ್ಥನೆ, ಧ್ಯಾನಾಸಕ್ತಿ ಇವೇ ದೇವರ ಭಾವನೆಯ ವಿಕಾಸಕ್ಕೆ ಜೀವಾಳವಾಗುವ ಸಾಧನೆಯ ಮೆಟ್ಟುಗಳು. ಮಾನವನು ಅಂತರ್ಮುಖಿಯಾದಾಗಲೇ ದೇವರ ದರ್ಶನವಾಗಬಹುದು. ಹಾಗೆ ಅಂತರ್ಮುಖಿಯಾಗಲು ಅವನಿಗಿರುವ ಬಹಿರಂಗದ ವ್ಯಾಪಗಳು ಕಳೆದುಹೋಗಬೇಕು. ಹಾಗೆ ಬಹಿರಂಗದ ವ್ಯಾಪಗಳು ಕಳೆಯಲು ಹೊರಗಿನ ದುಃಖಾಪತ್ತುಗಳಂಥ ಜಿಂಕೆಯ ಜಳವು ಸೋಂಕಬೇಕು. ಅರ್ಥಾತ್ ಮನುಷ್ಯನು ಆಪತ್ತಿನಿಂದ ಪೀಡಿತನಾದಾಗಲೇ ದೇವರನ್ನು ಆಶ್ರಯಿಸಲು ಹೊರಡುವನು. ಬಿಸಿಹತ್ತದೆ ಜಿಣ್ಣು ಯು ಕರಗಬಹುದೆ?

ಅಕಬರಬಾದಶಹನನ್ನೂ ಆತನ ದರ್ಬಾರಿನೊಳಗಿನ ಸಂಗೀತ ವಿದ್ಯಾವಿಶಾರದನಾದ ತಾನಸೇನನನ್ನೂ ನೀವು ಕೇಳಿರಬಹುದು. ಬಾದಶಹನು ಒಂದು ದಿನ ತಾನಸೇನನು 'ನಿನಗೆ ಇಷ್ಟು ಮೃದು ಮಧುರವಾಗಿಯೂ ಅಂತಃಕರಣವನ್ನು ಕಲಕಿಸುವಂತೆಯೂ ಹಾಡಲು ಯಾರು ಕಲಿಸಿದರು' ಎಂದು ಕೇಳಿದನು. ತಾನಸೇನನು 'ಸ್ವಾಮಿ ಹರಿದಾಸರು ನನ ಗುರುಗಳು' ಎನ್ನಲು ಅಕಬರನು ಆ ಹರಿದಾಸನನ್ನು ನೋಡಲು ಬಯಸಿ ಅವನೊಡನೆ ಸ್ವಾಮಿಯು ವಾಸಿಸುವ ಊರಹೊರಗಣ ಪರ್ಣಕುಟೀರಕ್ಕೆ ನಡೆದನು. ಅಲ್ಲಿ ದೇವರ ಧ್ಯಾನ ಪರವಶನಾಗಿದ್ದ ಸ್ವಾಮಿಯು ತಾನಸೇನನ ಹಾಡನ್ನು ಕೇಳಿ ಎಚ್ಚೆತ್ತು 'ಏನಿದು, ಎಷ್ಟು ಅಪಸ್ವರವಾಗಿ ಹಾಡಿದೆ, ತಾ ನಿನ್ನ ತಂಬೂರಿಯನ್ನು' ಎಂದು ನುಡಿದು ತಾನೇ ದೇವರ ನಾಮವನ್ನು ಹಾಡತೊಡಗಿದನು. ಅಕಬರ ಬಾದಷಹನು ಆ ತಾಳ ತಾನಗಳ ಲಹರಿಯಲ್ಲಿ ತನ್ನನ್ನು ತಾನೇ ಮರೆತವನಾದನು. ಅರಮನೆಗೆ ತಿರುಗಿ ಬಂದಬಳಿಕ ಬಾದಷಹನು ತಾನಸೇನನಿಗೆ ಪುನಃ ಅದೇ ಹಾಡನ್ನು ಅದೇ ರೀತಿಯಾಗಿ ಹಾಡಲು ಆಜ್ಞಾಪಿಸಿದನು. ಹಾಡು ಮುಗಿದ ಬಳಿಕ 'ನಿನ್ನ ಹಾಡು ಸ್ವಾಮಿಯ ಹಾಡಿನಷ್ಟು ಮೃದು ಮಧುರವಾಗಿ ಅಂತಃಕರಣವನ್ನು ಕದಡಲಿಲ್ಲ; ಹೀಗೇಕಾಯಿತು' ಎಂದನು. ತಾನಸೇನನು 'ಸ್ವಾಮಿಯವರು ಅಂತಃಕರಣದಲ್ಲಿ ನಿಂತಿರುವ ಪರಮಾತ್ಮನ ತೃಪ್ತಿಗಾಗಿ ಹಾಡಿದರು. ನಾನು ದಿಲ್ಲಿಯ ಚಕ್ರವರ್ತಿಯ ಸಂತೋಷಕ್ಕಾಗಿ ಹಾಡಿದೆನು' ಆ ಹಾಡುಗಾರಿಕೆಯಲ್ಲಿರುವ ಭೇದವಿಷ್ಟೇ. ಬೇರೆ ಏನೂ ಇಲ್ಲ' ಎಂದನು. ಅಂತಃಕರಣದ ಪ್ರೇರಣೆಯಿಂದ ಹೊರಡುವ ಭಕ್ತಿವಿಕಾಸಕ್ಕೂ ಬಾಹ್ಯ ಪ್ರೇರಣೆಯಿಂದ ಉಂಟಾಗುವ ದೇವಭಕ್ತಿಗೂ ಇರುವ ತಾರತಮ್ಯವನ್ನು ಈ ಉದಾಹರಣೆಯಿಂದ ಕಲ್ಪಿಸಿಕೊಳ್ಳಬಹುದು.

ದೇವರು ಸರ್ವಾಂತರ್ಯಾಮಿಯು; ಆದ್ಯಂತರಹಿತನು; ಅವನನ್ನು ಇತಿಮಿತಿ ಜ್ಞಾನದಿಂದ ತಿಳಿಯುವದು ಸಾಧ್ಯವಲ್ಲ. ನಮ್ಮ ಮನಸ್ಸು ಹೆಚ್ಚು ಹೆಚ್ಚು ವಿಕಾಸವಾಗುತ್ತ ಹೋದಂತೆ ದೇವರ ಸ್ವರೂಪಜ್ಞಾನಕ್ಕೆ ತಕ್ಕ ಶಕ್ತಿಯನ್ನು ಪಡೆಯಬಹುದು. ದೇವರು ಆದ್ಯಂತರಹಿತನೆಂಬುದನ್ನು ವರ್ಣಿಸಲು ನಮ್ಮ ಉಪನಿಷತ್ಕಾರರಾದ ಋಷಿಗಳಿಗೆ ಅವರ ಶಬ್ದಭಾಂಡಾರವು ಸಾಲಲಿಲ್ಲ. ಆದರೂ "ದೇವರು ಅಣುವಿಗಿಂತ ಅಣುವಾಗಬಲ್ಲನು; ಪ್ರಪಂಚವೆಲ್ಲವನ್ನೂ ಮೀರಿನಿಲ್ಲುವಷ್ಟು ಅದ್ಭುತರೂಪಿಯೂ ಆಗಬಲ್ಲನು. ಅವನು ಜಡನೂ ಹೌದು; ವಿದ್ಯು

ದ್ವೇಗಕ್ಕಿಂತಲೂ ತೀವ್ರವಾಗಿ ಚಲಿಸಬಲ್ಲವನೂ ಹೌದು. ಅವನು ಸ್ಥಿರನೂ ಹೌದು; ಸರ್ವತ್ರ ಸಂಚಾರಿಯೂ ಹೌದು. ಅವನು ಅನಾದಿ ಅನಂತನು. ಅವನು ನಮ್ಮ ಜಂಜಡ ಮನಸ್ಸಿಗೂ ಬುದ್ಧಿಗೂ ನಿಲುಕಲಾರನು" ಎಂದು ಮುಂತಾಗಿ ಜಗತ್ತಿಗೆ ಸಾರಿವೆ.

ಕೆಲವರು ಆಕ್ಷೇಪಕರು ದೇವರು ಮನುಷ್ಯನನ್ನು ಸೃಷ್ಟಿಸಿರುವನೋ ಅಥವಾ ಮನುಷ್ಯನೇ ದೇವರನ್ನು ಸೃಷ್ಟಿಸಿರುವನೋ ಎಂಬುದು ಸಂದೇಹದ ಪ್ರಶ್ನೆ. ಎಂದು ವಾದ ಹೂಡಿರುವದೂ ಉಂಟು. ಮನುಷ್ಯನ ತ್ರಿಕರಣ ಶುದ್ಧಿಯು ಅವನನ್ನು ದೇವರ ಸಾನ್ನಿಧ್ಯಕ್ಕೆ ಒಯ್ಯಬಹುದು. ಅವನು ಹೆಚ್ಚು ಹೆಚ್ಚು ಪುನೀತನಾದ ಹಾಗೆ ಅವನಲ್ಲಿರುವ ದೇವತ್ವವು ವಿಕಾಸಗೊಳ್ಳುವದು. ವಾಲ್ಮೀಕಿಯ ಉದಾಹರಣೆಯನ್ನೇ ನೋಡಿರಿ. ಕಳವು, ಕೊಲೆ, ಸುಲಿಗೆಗಳಿಂದ ಜೀವಿಸುವ ದುಷ್ಕರ್ಮಚಾರಿಯು ತನ್ನ ಪಾಪಕರ್ಮಗಳ ಭಾರದಿಂದ ಕುಸಿದು ಕೂತು 'ಅಯ್ಯೋ ದೇವರೇ ನನ್ನನ್ನು ಈ ಸಂಕಟದಿಂದ ಪಾರುಮಾಡು' ಎಂದು ಅರಚಿಕೊಂಡು ಮನಸ್ಸನ್ನು ಆ ಮಾರ್ಗದಿಂದ ತಿರುಗಿಸಿಬಿಟ್ಟನು. ಬಹಿರ್ಮುಖನಾಗಿ ದುರಾಚಾರಮಗ್ನನಾದವನು ಅಂತರ್ಮುಖಿಯಾಗಿ ತನ್ನಲ್ಲಿದ್ದ ದೇವತ್ವದ ವಿಕಾಸದಿಂದ ಮಹರ್ಷಿಯೆನಿಸಿಕೊಂಡನು. ಅವನಿಗೆ ದೇವದರ್ಶನವಾಯಿತು. ಕವಿವರ ಟೆನಿಸನ್ನನು ನನ್ನ ಶಕ್ತಿಯು ಹತ್ತು ಜನರ ಶಕ್ತಿಗೆ ಸರಿ, ಯಾಕೆಂದರೆ ನನ್ನ ಅಂತಃಕರಣವು ಪವಿತ್ರವಾಗಿದೆ. (My strength is as the strength of ten, because my heart is pure). ಎಂದು ಹಾಡಿರುವನು. ಈ ತತ್ತ್ವ ನಿಮಾಂಸೆಯು ಪ್ರತಿಯೊಬ್ಬನೂ ಅನುಸರಿಸಲು ತಕ್ಕುದಾಗಿದೆ.

ದೇವರ ಚಿಂತನೆಯಲ್ಲಿ ತೊಡಗಿದ ಮನುಷ್ಯನ ಶಕ್ತಿಯು ಹೆಚ್ಚುವದು; ಅವನು ಪ್ರಪಂಚದ ಆಸ್ತಿ ಆಸಕ್ತಿಗಳ ಮೋಹಪಾಶಗಳಿಂದ ಪಾರಾಗಬಲ್ಲವನಾಗುವನು. ದೇವರ ಘನತೆಯ ವಿಚಾರಗಳಲ್ಲಿ ತೊಡಗಿದವನಿಗೆ ತನ್ನ ಅಪರಾಧಗಳ ಅರಿವಾಗುವದು ದೇವರ ಅರಿವಾಗುವವರೆಗೂ ಮನುಷ್ಯನು ತನ್ನ ಆಸ್ತಿ ಆಸಕ್ತಿಗಳನ್ನೂ ಇಂದ್ರಿಯ ಕ್ರಿಯಾಲಾಲಸೆಯನ್ನೂ ತೊರೆಯಲಾರನು. ನಿಜವಾಗಿ ಮನುಷ್ಯನ ಅಂತಃಕರಣವು ಕೆಟ್ಟದಲ್ಲ. ಹೊರಗಿನ ಸಂಸ್ಕಾರಗಳಂತೆ ಅದು ಮೂರ್ಪಡುವದು. ಬಹಿರ್ಮುಖಿಯಾದವನ ಅಂತಃಕರಣವು ಬಹಿರ್ಮುಖಿಯಾಗುವದು. ಅಂತರ್ಮುಖಿಯಾದವನದು ಅಂತರ್ಮುಖಿಯಾಗುವದು. ಏಂದರೆ ಮಾನವನು ದೇವರನ್ನು ತನ್ನ ಅಂತಃಕರಣಲ್ಲಿಯೇ ಸೃಷ್ಟಿಸಿಕೊಳ್ಳುವನು. ಹೊರಗಿನ ದೇವರು ಒಳಗೆ ಹೋಗಿ ಅವನ ಮೇಲೆ ಯಾವ ಪ್ರೇರಣೆಯನ್ನೂ ಮಾಡಲಾರನು.

ದೇವರ ಚಿಂತನೆಯಲ್ಲಿ ತೊಡಗಿದ ಮನುಷ್ಯನ ಶಕ್ತಿ ವಿಕಾಸವಾಗುವದು. ಇದನ್ನೇ ಇನ್ನೊಂದು ರೀತಿಯಲ್ಲಿ 'ಅಂತಃಕರಣದ ಕಿಲ್ಮಿಷಗಳನ್ನು ಕಳೆದು ಪುನೀತನಾದವನು ದೇವತಾ ಶಕ್ತಿಯನ್ನು ಹೊಂದುವನು' ಎಂದು ಹೇಳಬಹುದು. ಹೀಗೆ ಆತ್ಮವಿಕಾಸವನ್ನು ಹೊಂದಿದ ವ್ಯಕ್ತಿಯು ಹಿಂದಿನ ವ್ಯಕ್ತಿಗಿಂತ ತೀರ ಭಿನ್ನನಾಗಿಬಿಡುವನು. ಜಗತ್ತಿನಲ್ಲೆಲ್ಲ ಅಸಾಧಾರಣ ಶಕ್ತಿಯುತರೆನಿಸಿಕೊಂಡ ಬಹುಜನ ಸಾಧುಸಂತರ ಪೂರ್ವಾಶ್ರಮದ ಚರಿತ್ರೆಯು ಅಷ್ಟು ಆಕರ್ಷಕವಾಗಿರುವದಿಲ್ಲ. ತೀರ ಹೀನಾಯಪರಿಸ್ಥಿತಿಯಲ್ಲಿಯೇ ಹುಟ್ಟಿದ್ದವರೂ ಇದ್ದಾರೆ. ಸಾಮಾನ್ಯರು ಹುಟ್ಟುವ ಮಣ್ಣಿನಲ್ಲಿಯೇ ಹುಟ್ಟಿ ಅವರುಣ್ಣುವ ಅನ್ನ ಉಪ್ಪುಗಳನ್ನು ಉಂಡು ಬೆಳೆದ ಅವರೇ ಮುಂದೆ ಆತ್ಮವಿಕಾಸವನ್ನು ಪಡೆದು ಪ್ರಪಂಚಕ್ಕೇ ಮಾರ್ಗದರ್ಶಕರಾಗಿರುವರು. ಇಂಥ ಸಾಧುಸಂತರು ಅಖಿಲಪ್ರಪಂಚವನ್ನೇ ಮೇಲೆ ಕೆಳಗೆ ಮಾಡುವಷ್ಟು ಶಕ್ತಿಸಂಪನ್ನರಾಗಿರುವರು. ಇಂಥವರನ್ನು ದೇವರು ಸೃಷ್ಟಿಸಿದನೋ ಅಥವಾ ಅವರೇ ದೇವರಾಗುವರೋ ಎಂಬುದು ಸಂದೇಹದ ಮಾತಲ್ಲವೆ?

(ಮುಂದೆಸಾಗುವದು)

ಕಾಯಿಪಲ್ಯಗಳನ್ನು ಬೆಳೆಯುವವರಿಗೆ ಸೂಕ್ತಸಲಹೆಗಳು

ಶ್ರೀ. ಎಸ್. ಜಿ. ಬೈಚವಾಳ, ಎಮ್. ಎ.

ಈಗ 'ಆಹಾರವನ್ನು ಹೆಚ್ಚು ಬೆಳೆಯಿರಿ' ಎಂಬ ಆಂದೋಲನದ ಒಂದು ಅಂಗವಾದ ಕಾಯಿಪಲ್ಯೆಯನ್ನು ಹೆಚ್ಚಾಗಿ ಬೆಳೆಯಿಸಬೇಕೆಂಬ ಕಾರ್ಯಕ್ರಮಕ್ಕೆ ಅನುಕೂಲವಾಗುವ ಈ ಕೆಳಗಿನ ಸೂಚನೆಗಳನ್ನು ಬಂಗ್ಲೆಗಳ ಒಡೆಯರೂ ಸಣ್ಣ ತೋಟಗಳ ಯಜಮಾನರೂ ಅವಶ್ಯವಾಗಿ ಗಮನಿಸತಕ್ಕದ್ದು.

೧. **ಯೋಗ್ಯ ಸ್ಥಳವನ್ನು ಆರಿಸುವಿಕೆ:**— ಆರಿಸಿದ ಸ್ಥಳಕ್ಕೆ ನೀರಿನ ಪೂರೈಕೆಯು ಚೆನ್ನಾಗಿ ಆಗುವಂತಿದ್ದು ಅದರ ಮೇಲೆ ಇತರ ಗಿಡಗಳ ಅಥವಾ ಬಂಗಲೆಯ ನೆರಳು ಬೀಳಬಾರದು. ಉತ್ತಮವಾದ ಹೂಗಳು ಬೆಳೆದಂತಹ ಮಡಿಗಳು ಇದಕ್ಕೆ ಯೋಗ್ಯವಾದುವು ಆದರೆ ಹುಲ್ಲು ಬೆಳೆದ ಕೆಲವು ಪ್ರದೇಶವನ್ನು ಕೂಡ ಆಗಿಸಿ ಈ ಕಾರ್ಯಕ್ಕೆ ಉಪಯೋಗಿಸಬೇಕು. ಬಚ್ಚಲದ ಅಥವಾ ಅಡಿಗೆಯ ಮನೆಯ ನೀರಿನಿಂದ ಸಾಗುವಳಿ ಮಾಡಲಿಕ್ಕೆ ಅನುಕೂಲವಿದ್ದ ಸ್ಥಳವನ್ನೇ ಶಕ್ಯವಿದ್ದಷ್ಟನ್ನು ಆರಿಸಬೇಕು. ಆದ್ದರಿಂದ ಆ ಬೆಳೆಗೆ ನೀರುಣಿಸಲು ಸುಲಭ ಸಾಧ್ಯವಾಗುವುದು. ಹದಗೊಳಿಸಿದ ಭೂಮಿಯು ಸುಮಾರು ಒಂದು ಫೂಟು ಆಳವಾದುದೂ ನೀರುಣಿಸಿದುದೂ ಇರಬೇಕು. ಆರಿಸಿದ ಮಡಿಗಳಿಗೆ ಗೊಬ್ಬರವನ್ನು ಚನ್ನಾಗಿ ಹಾಕಿದರೆ ಸಾಮಾನ್ಯವಾಗಿ ಎಲ್ಲ ತರದ ಕಾಯಿಪಲ್ಯಗಳನ್ನು ಯಶಸ್ವಿಯಾಗಿ ಬೆಳೆದುಕೊಳ್ಳಬಹುದು. ಬಂಗಲೆಯ ಸುತ್ತುಮುತ್ತಲಿನ ಭೂಮಿಯು ಗರಸು ಆಗಿದ್ದರೆ ಮೆತ್ತಗಿನ ಬಿಳಿಯ ಮಣ್ಣಿನ ಪದರು ತೀರ ಕಡಮೆಯಾಗಿದ್ದರೆ ಹೊಸ ಮಣ್ಣನ್ನು ಹೊರಗಿನಿಂದ ತಂದು ಎಂಟು ಇಂಚಿನಿಂದ ಹನ್ನೆರಡು ಇಂಚಿನ ವರೆಗೆ ಎತ್ತರಿಸಿದ ಮಡಿಗಳನ್ನು ತಯಾರಿಸಬೇಕು. ಬೆಳೆಯಲು ಯೋಗ್ಯವಾದ ಭೂಮಿಯು ಸಾಕಷ್ಟು ಇಲ್ಲದಿದ್ದರೆ ತೆರವಿದ್ದ ಪೆಟ್ಟಿಗೆಗಳನ್ನೂ ಸಾಮಾನು ಹಾಕಿ ಬಂದ ಪೆಟ್ಟಿಗೆಗಳನ್ನೂ ಬುಟ್ಟಿ ಮುಂತಾದವುಗಳನ್ನೂ ವಿಲಾಯತಿ ಹಕ್ಕರಿಕೆಯ ಸೊಪ್ಪು, ಚಪ್ಪರ ಬದನೆಕಾಯಿ, ಕುರ್ಬಿಗೆ ಸೊಪ್ಪು ಮುಂತಾದವುಗಳನ್ನು ಬೆಳೆಯಿಸುವುದಕ್ಕಾಗಿ ಉಪಯೋಗಿಸಬಹುದು. ಮಳೆಗಾಲವಿಲ್ಲದಿದ್ದಾಗ ನೀರಿನ ಪೂರೈಕೆಯು ಚೆನ್ನಾಗಿ ಇರತಕ್ಕದ್ದು. ಕೋಳಿ, ನಾಯಿ, ಆಡು ಮುಂತಾದವುಗಳಿಂದ ಅಪಾಯವಾಗದಂತೆ ಬೆಳೆಯನ್ನು ಕಾಪಾಡಬೇಕು.

೨. **ತೋಟದ ಉಪಕರಣಗಳು ಮತ್ತು ಸಾಮಗ್ರಿಗಳು:**—ಕೈಕೆಲಸದ ಸಾಮಾನುಗಳಾದ ಕೊಡಲಿ, ಸಲಿಕೆ, ಗುದ್ದಲಿ, ಕಬ್ಬಿಣ-ಉಕ್ಕಿನ ಜಂತಿಗುಂಟೆ, ಕುರಚಿಗೆ, ಜರಜರಿ, ಕಬ್ಬಿಣ-ಬುಟ್ಟಿ ಇತ್ಯಾದಿ. ಜೀಕಳಿಯಿದ್ದರೆ ಅದರ ಸಹಾಯದಿಂದ ಕ್ರಿಮಿನಾಶಕ ಔಷಧವನ್ನು ಪೈರುಗಳಿಗೆ ಚಿಮುಕಿಸಬಹುದು. ಕಲಮು ಮಾಡುವ ಕತ್ತರಿ, ಚಾಕು ಇವು ಸಹ ಕಾಯಿಪಲ್ಯಗಳನ್ನು ಬೆಳೆಯಲು ಸಹಾಯವಾಗುವವು.

೩. **ಬೀಜಗಳ ಪೂರೈಕೆ:**—ವಿಶಿಷ್ಟ ಕಾಯಿಪಲ್ಯೆಯನ್ನು ಬೆಳೆಯಬೇಕೆಂದು ಇಚ್ಛಿಸಿದ ನಂತರ ನಂಬಲರ್ಹರಾದ ಬೀಜದ ವ್ಯಾಪಾರಿಗಳಿಂದ ಬೀಜಗಳನ್ನು ದೊರಕಿಸಬೇಕು. ಬೀಜಗಳನ್ನು ಬಿತ್ತುವ ಕಾಲಕ್ಕಿಂತ ಸ್ವಲ್ಪ ಮುಂಚಿತವಾಗಿಯೆ ತರಿಸಬೇಕು. ಒಂದು ವರ್ಷದನಂತರ ತೋಟದ ಒಡೆಯರು ತಮ್ಮಲ್ಲಿಯೆ ಬೆಳೆದ ಬೆಳೆಗಳ ಬೀಜಗಳನ್ನು ಮುಂದಿನ ಬೆಳೆಗೋಸ್ಕರ

ಕಾಯ್ದಿಟ್ಟುಕೊಳ್ಳಬಹುದು. ಕ್ಯಾಬೇಜು, ನವಲಕೋಲು, ಕಾಲಿಫ್ಲಾವರ ಮುಂತಾದುವುಗಳ ಬೀಜಗಳು ಸಾದಾ ಸ್ಥಿತಿಯಲ್ಲಿ ದೊರೆಯಲು ಸಾಧ್ಯವಿಲ್ಲದ್ದರಿಂದ ಪ್ರತಿವರ್ಷ ಅವನ್ನು ಕೊಳ್ಳಬೇಕು. ಚಪ್ಪರಬದನೆ, ಬದನೆ, ಬೆಂಡೆ, ಸವತೆ, ಅವರೆ, ಬಟಗಡಲೆ ಮುಂತಾದವುಗಳ ಬೀಜಗಳನ್ನು ತಮ್ಮ ಸ್ಥಳಗಳಲ್ಲೆ ದೊರಕಿಸಿಕೊಂಡು ಬೆಳೆಯನ್ನು ಬೆಳೆಯಿಸಬೇಕು. ಇದಕ್ಕಾಗಿ ಕೊಬ್ಬಿನಿಂದ ಬೆಳೆದ ಗಿಡಗಳನ್ನು ಕೇವಲ ಬೀಜಕ್ಕಾಗಿ ಬಿಡಬೇಕು. ಬೀಜಗಳನ್ನು ತರಿಸುವಾಗ ಸ್ವಲ್ಪ ಹೆಚ್ಚಾಗಿಯೆ ತರಿಸಿಕೊಳ್ಳಬೇಕು. ಏಕೆಂದರೆ ಅಕಸ್ಮಾತ್ ಹೆಚ್ಚು ಮಳೆಯಾದರೆ ಇಲ್ಲವೆ, ಹವಾಮಾನವು ಕೆಟ್ಟರೆ ಆಗ ಬೀಜವು ಅಂಕುರಿಸದೆ ಹೋಗುವ ಸಂಭವವಿರುತ್ತದೆ. ಪುನಃ ಬಿತ್ತಲಿಕ್ಕೆ ಹೊಸ ಬೀಜವು ಬೇಕಾಗುವದು. ಬೀಜಗಳನ್ನು ಜಾಟಲಿಗಳಲ್ಲಿ, ಟಿನ್ನು-ಗಳಲ್ಲಿ ಅಥವಾ ಪೆಟ್ಟಿಗೆಗಳಲ್ಲಿ ಎಚ್ಚರಿಕೆಯಿಂದ ಸಂಗ್ರಹಿಸಿಡಬೇಕು. ಇಲ್ಲದೆ ಹೋದರೆ ತೇವಿನಿಂದ, ಬುಳಸಿನಿಂದ ಇಲ್ಲವೆ ಹುಳಗಳಿಂದ ಕೆಟ್ಟುಹೋಗಬಹುದು. ಜಾಟಲಿ ಮುಂತಾದವುಗಳಲ್ಲಿ ಡಾಂಬರ ಗುಳಿಗೆಗಳನ್ನು ಹಾಕಿಟ್ಟರೆ ಹುಳಗಳು ಹತ್ತಿ ಬೀಜಗಳು ಕೆಡಲಾರವು. ಒಣ ಸ್ಥಳಗಳಲ್ಲಿ ಬೀಜಗಳನ್ನು ಇಟ್ಟರೆ ಅವು ಎರಡು ಮೂರು ವರ್ಷ ತಾಳುವುವು.

೪. **ಮಡಿಗಳ ಅಳತೆ :—** ಸಾಮಾನ್ಯವಾಗಿ ಮಡಿಗಳು ಮೂರು ಫೂಟಿಗಿಂತ ಹೆಚ್ಚು ಅಗಲವಾಗಿರಬಾರದು. ಉದ್ದವು ಬೇಕಾದಷ್ಟಿದ್ದರೂ ಚಿಂತೆಯಿಲ್ಲ. ಏಕೆಂದರೆ ಅಗಲವು ಹೆಚ್ಚಾದರೆ ಮಡಿಗಳನ್ನು ತುಳಿಯುವ ಪ್ರಸಂಗ ಬರಬಹುದು. ಎತ್ತರಿಸಿದ ಮಡಿಗಳ ಬಗ್ಗೆ ಮಾತ್ರ ಈ ಸೂಚನೆಯು ಅನ್ವಯಿಸುವುದು. ಮಡಿಗಳು ಸಮಾಂತರವಾಗಿ ಒಂದಕ್ಕೊಂದು ಎದುರಿನಲ್ಲಿದ್ದರೆ ಅವುಗಳ ನಡುವಿನ ಹಾದಿಯ ಮೇಲೆ ಉರುಟು ಉಸುಕನ್ನು ಉರುಟು-ಹರಳನ್ನು ಅಥವಾ ಇಟ್ಟಂಗಿಯ ಅಥವಾ ಕಲ್ಲಿನ ತುಂಡುಗಳನ್ನು ಹರವಬೇಕು.

೫. **ಮಡಿಗಳನ್ನು ಸಿದ್ಧಗೊಳಿಸುವಿಕೆ :—** ಹೂವುಗಳನ್ನು ಬೆಳೆಯುವುದಕ್ಕೆ ಯಾವ ಪ್ರಕಾರವಾಗಿ ಮಡಿಗಳನ್ನು ತಯಾರಿಸುತ್ತಾರೋ ಅದೇ ಪ್ರಕಾರವಾಗಿ ತಯಾರಿಸಬೇಕು. ಹತ್ತು ಹನ್ನೆರಡು ಇಂಚುಗಳ ವರೆಗೆ ಆಳವಾಗಿ ಮಡಿಗಳು ಅಗಿಯಲ್ಪಡಬೇಕು. ಹೆಂಟಿಗಳನ್ನೂ ಗಂಟುಗಳನ್ನೂ ಒಡೆದು ಪುಡಿ ಮಾಡಬೇಕು. ಚೆನ್ನಾಗಿ ಕಳಿತ ಬೂದಿ ಅಥವಾ ಸಗಣಿಯ ಗೊಬ್ಬರವನ್ನು ಮೂರು ಫೂಟು ಅಗಲ ೪ ಫೂಟು ಇದ್ದ ಒಂದು ಮಡಿಗೆ ೪ ಪೌಂಡಿನ ಎರಡು ಬುಟ್ಟಿ ಗೊಬ್ಬರವನ್ನು — ಹಾಕಬೇಕು. ಮಡಿಗಳು ಸಾಧಾರಣ ಸಪಾಟಾಗಿದ್ದು ಒಂದು ಮಗ್ಗಲಿಗೆ ಹೆಚ್ಚಾದ ನೀರು ಹರಿದು ಹೋಗುವುದಕ್ಕಾಗಿ ಇಳಿಜಾರಾಗಿರಬೇಕು. ಮಳೆ ಹೆಚ್ಚು ಬೀಳುವ ಭಾಗದಲ್ಲಿ ಮಡಿಗಳ ಸುತ್ತುಮುತ್ತ ೯ ಇಂಚು ಆಳವಾದ ಹರಿಯನ್ನು ಅಗೆದು ಹೆಚ್ಚಾದ ನೀರು ಹೊರಗೆ ಹೋಗುವ ವ್ಯವಸ್ಥೆಯನ್ನು ಮಾಡಬೇಕು. ತೇವವು ಹೆಚ್ಚಾದರೆ, ಅಥವಾ ಅಲ್ಲಲ್ಲಿ ನೀರು ಹೆಚ್ಚು ಅವಧಿಯ ವರೆಗೆ ನಿಂತರೆ ಕಾಯಪಲ್ಯದ ಸರಿಯಾದ ಬೆಳವಣಿಗೆಗೆ ತೊಂದರೆಯಾಗುವುದು.

೬. **ಕಾಯಿಪಲ್ಯವ ಸಸಿಗಳಿಗೆ ನೀರುಣಿಸುವಿಕೆ :—** ಚೆನ್ನಾಗಿ ಕಾಯಿಪಲ್ಯ ಬೆಳೆಯಬೇಕಾದರೆ ಬೇಸಗೆಯಲ್ಲಿಯೂ ಚಳಿಗಾಲದಲ್ಲಿಯೂ ನೀರುಣಿಸುವುದು ಅವಶ್ಯ. ಹೆಚ್ಚಾಗಿ ಹರಿದು ಹೋಗುವ ನೀರನ್ನು ಸಿಮೆಂಟಿನ ಹೊಂಡ, ಪೌದು ಅಥವಾ ಪೀಪುಗಳಲ್ಲಿ ಸಂಗ್ರಹಿಸಿ ನೀರುಣಿಸುವ ಕಾರ್ಯಕ್ಕೆ ಉಪಯೋಗಿಸಬೇಕು. ಸಾಮಾನ್ಯವಾಗಿ ನೀರುಣಿಸುವುದರ ಬಗ್ಗೆ ನಿಶ್ಚಿತ ನಿಯಮವನ್ನು ಹೇಳಲಿಕ್ಕೆ ಬರುವುದಿಲ್ಲ. ಆದರೆ ಬಂಗಲೆಯ ತೋಟಗಳಲ್ಲಿಯ ಗಿಡಗಳು ನೀರು ಕಡಿಮೆಯಾಗಿ ಅಲ್ಲ, ನೀರು ಹೆಚ್ಚಾಗಿ ನಾಶವಾಗುವುವು. ಎಲೆಗಳು ಮ್ಲಾನವಾಗಿ ತಲೆಬಾಗಿಸಿದವೆಂದರೆ ಗಿಡಗಳಿಗೆ ನೀರು ಬೇಕಾಗಿದೆಯೆಂದು ತಿಳಿದು ಕೊಳ್ಳ

ಬೇಕು. ಅಲ್ಲದೆ ಮಡಿಗಳ ಮಣ್ಣನ್ನು ಕೈಯಲ್ಲಿ ಹಿಡಿದು ಪರೀಕ್ಷಿಸಬೇಕು. ಹಿಡಿಯಲ್ಲಿ ಮಣ್ಣನ್ನು ಗಟ್ಟಿಯಾಗಿ ಹಿಡಿದಾಗ ಅದು ತೇವವಾಗಿ ಎನಿಸಿ ಉಂಡೆಯಾದರೆ ನೀರುಣಿಸುವುದು ಅನವಶ್ಯಕವೆಂದು ತಿಳಿಯಬೇಕು. ಚಳಿಗಾಲದಲ್ಲಿ ಹತ್ತುದಿನಕ್ಕೊಮ್ಮೆ, ಬೇಸಗೆಯಲ್ಲಿ ಆರು ದಿನಕ್ಕೊಮ್ಮೆ ನೀರುಣಿಸುವುದು ಅವಶ್ಯವೆಂದು ಕಂಡು ಬರುವುದು. ಮಳೆಗಾಲದಲ್ಲಿ ಮಳೆಯು ಬಹಳ ದಿನಗಳ ವರೆಗೆ ಸೆಳೆದಾಗ (ಬಾರದಾಗ) ಮಾತ್ರ ನೀರುಣಿಸುವುದು ಅವಶ್ಯವಾಗುವುದು. ಕಾಯಿಪಲ್ಯಗಳ ಗಿಡಗಳಿಗೆ ಸಾಯಂಕಾಲದಲ್ಲಿಯೆ ನೀರುಣಿಸಬೇಕು. ಬಿಸಿಲು ಇದ್ದಾಗ ನೀರು ಹಾಕಬಾರದು. ನೀರುಣಿಸುವ ಕಲೆಯನ್ನು ಅರಿಯದ ಗಂಡಸಿನ ಕೈಯಲ್ಲಿ ನೀರಿನ ಜರಜರಿಯನ್ನು ಕೊಡುವುದು ಸಸಿಗಳಿಗೆ ಅಪಾಯಕಾರವೇ ಸರಿ. ಕುಡಿಗಳಿಗೆ ಹೆಚ್ಚು ನೀರುಣಿಸುವುದು ಸರಿಯಲ್ಲ.

೭. **ಗೊಬ್ಬರ ಹಾಕುವುದು:—** ಮಡಿಯನ್ನು ಸಿದ್ಧಗೊಳಿಸುವಾಗ ಎರಡು ಬುಟ್ಟಿ-ಗಳಂತೆ ಗೊಬ್ಬರವನ್ನು ಹಾಕಿ ಬೀಜಗಳನ್ನು ಬಿತ್ತಿದ ಮೇಲೆ, ಹೆಚ್ಚಿನ ಗೊಬ್ಬರವನ್ನು ಹಾಕುವ ರೂಢಿಯುಂಟು. ಸೇಂಗಾದ ಹಿಂಡಿಯ ಪುಡಿಯನ್ನು ಹೂಬಿಡುವ ಕಾಯಿಪಲ್ಯಗಳಾದ ಚಪ್ಪರ ಬದನೆಕಾಯಿ, ಅವರೆ, ಬೆಂಡಿ-ಮುಂತಾದವುಗಳ ಅಗಿಗಳು ಆರು-ಎಂಟು ಇಂಚು ಎತ್ತರವಾಗಿ ಬೆಳೆದಾಗ ಗೊಬ್ಬರದಂತೆ ಉಪಯೋಗಿಸಬೇಕು. ಹೂಬಿಡದ ಪಲ್ಯಗಳಾದ ಕ್ಯಾಬೇಜ, ವಿಲಾಯತಿ ಹಕ್ಕರಿಕೆ, ನವಲ್‌ಕೋಲು ಮುಂತಾದವುಗಳ ಅಗಿಗಳು ನಾಲ್ಕಮೂರು ಫೂಟಿನ ಪ್ರತಿಯೊಂದು ಮಡಿಗೆ ೧½ ಪೌಂಡಿನಷ್ಟು ಸೇಂಗಾ ಹಿಂಡಿಯ ಪುಡಿಯನ್ನು ಹಾಕ-ಬೇಕು. ಅಥವಾ ಪ್ರತಿಯೊಂದು ಮಡಿಗೆ ½ ಪೌಂಡು ಕೋಳಿಯ ಗೊಬ್ಬರವನ್ನೂ ಹಾಕಬೇಕು.

೮. **ಕಾಯಿಪಲ್ಯದ ಅಗಿಗಳನ್ನು ತಯಾರಿಸುವಿಕೆ:—** ಟೊಮೆಟೊ, ಕಾಲಿಫ್ಲಾವರ್ ಮೆಣಸಿನಕಾಯಿ, ಉಳ್ಳೇಗಡ್ಡಿ ಮುಂತಾದವುಗಳನ್ನು ಹಚ್ಚಬೇಕಾದರೆ ಮೊದಲು ಅಗಿಗಳನ್ನು ತಯಾರಿಸಿ ಆ ಮೇಲೆ ಅವುಗಳನ್ನು ಮಡಿಗಳಿಗೆ ಸ್ಥಳಾಂತರಿಸಬೇಕು ಮಣ್ಣಿನ ಕುಂಡೆ, ಕಟ್ಟಿಗೆಯ ಪೆಟ್ಟಿಗೆ ಅಥವಾ ಬುಟ್ಟಿಗಳಲ್ಲಿ ಸ್ವಲ್ಪ ಅಗಿಗಳನ್ನು ತಯಾರಿಸಲು ಬೀಜಗಳನ್ನು ಬಿತ್ತಬಹುದು. ದೊಡ್ಡ ಪ್ರಮಾಣದಲ್ಲಿ ಬೇಕಾದಾಗ ಮೂರು ನಾಲ್ಕು ಫೂಟಿನ ಎತ್ತರವಾದ ಮಡಿಯನ್ನು ತಯಾರಿಸಿ, ಅದರಲ್ಲಿ ನಾಲ್ಕು ಅಥವಾ ಐದು ಇಂಚಿನ ಅಂತರದಲ್ಲಿ ಬೀಜಬಿತ್ತಬೇಕು. ಬೀಜ-ಗಳನ್ನು ಭೂಮಿಯಲ್ಲಿ ತೇಲಿಸಿ ಹಾಕಬೇಕು; ಅಗಿಗಳು ಸ್ಥಳಾಂತರಿಸಲು ಯೋಗ್ಯವಾಗುವ ವರೆಗೆ ಎಂದರೆ ನಾಲ್ಕಾರುಇಂಚು ಎತ್ತರವಾಗುವವರೆಗೆ ಸಣ್ಣತೂತಿನ ಜರಜರಿಯಿಂದ ನೀರುಣಿಸಬೇಕು.

೯. **ಅಗಿಗಳನ್ನು ಕಿತ್ತು ಹಚ್ಚುವದು:—** ಅನೇಕ ತರದ ಕಾಯಿಪಲ್ಯಗಳ ಸಸಿಗಳನ್ನು ಸ್ಥಳಾಂತರಿಸುವ ಅವಶ್ಯಕತೆಯಿಲ್ಲ. ಉದಾ:— ಕಡಲೆ, ಅವರೆ, ಸವತೆ, ಬುಡ್ಡಿಯಾಗುವ ಪಲ್ಲೆ, ಕುಂಬಳಕಾಯಿ, ಗಜ್ಜರಿ, ಬೆಂಡಿ, ಮೂಲಂಗಿ, ಬೀಟುಗಡ್ಡೆ, ಗೆಣಸು, ಮೆಂತೆ, ಕೋತಂಬರಿ, ಬಸಳೆಸೊಪ್ಪು, ಮುಂತಾದುವು. ಇವುಗಳನ್ನು ಬಿಟ್ಟು ಉಳಿದ ಕಾಯಿಪಲ್ಯಗಳನ್ನು ಬೆಳೆಯ ಬೇಕಾದರೆ ಮಡಿಯಿಂದ ಅಗಿಗಳನ್ನು ಬೇರುಸಹಿತನಾಗಿ ಕೆತ್ತುತೆಗೆದು ಬೇರೆ ಮಡಿಗಳಲ್ಲಿ ಎಚ್ಚರದಿಂದ ಊರಬೇಕು. ಅಗಿಗಳನ್ನು ಯಾವಾಗಲೂ ಸೂರ್ಯನು ಅಸ್ತವಾದ ಮೇಲೆ ಸಂಜೆಯ ಕಾಲದಲ್ಲಿ ಹಚ್ಚತಕ್ಕದ್ದು. ಬಟಾಟೆಗಳನ್ನು ಬೆಳೆಯಬೇಕಾದರೆ ಅವುಗಳ ಗಣ್ಣು ಗಳಿದ್ದ ಭಾಗಗಳನ್ನು ನೇರವಾಗಿ ಮಡಿಗಳಲ್ಲಿ ಹೂಳುವರು. ಸವತೆ, ಪಡುವಲ, ಹೀರೆಕಾಯಿ, ಹಾಲುಗುಂಬಳ ಮುಂತಾದವುಗಳ ಬೀಜಗಳನ್ನು ದುಂಡಗಿನ ಮಡಿಯಲ್ಲಿ ತೂತುಮಾಡಿ ಹೂಳಬೇಕು. ಪ್ರತಿಯೊಂದು ಮಡಿಯಲ್ಲಿ ಆರು ಬೀಜಗಳನ್ನು ಹಾಕಿ, ಅವು ಮೇಲಕ್ಕೆ ಬೆಳೆ-ದಂತೆ ಅವನ್ನು ಹಂದರಗಳಿಗೆ ಹಬ್ಬಿಸುವರು.

೧೦. ಬೀಜಗಳನ್ನು ಹಾಕುವ ಯೋಗ್ಯಕಾಲ

ಮೇದಿಂದ ಅಕ್ಟೋಬರದ ವರೆಗೆ— ಕಡಲೆ, ಅವರೆ, ಚಪ್ಪರಬದನೆ, ಮೆಣಸಿನ ಗಿಡ ಉಳ್ಳೇಗಡ್ಡೆ, ವಿಲಾಯತಿ ಹಕ್ಕರಕಿ, ಬಸಳೆ, ಮೂಲಂಗಿ, ಸವತೆ, ಬೆಂಡಿ, ಕುಂಬಳ, ಹಾಲು ಗುಂಬಳ, ಮುಡಿಗೆಣಸು. ಇತ್ಯಾದಿ.

ಸಪ್ಟಂಬರದಿಂದ ಫೇಬ್ರುವರಿ ವರೆಗೆ— ಗಜ್ಜರಿ, ಗೆಣಸು, ಕಾಲಿಫ್ಲಾವರ್, ಕ್ಯಾಬೇಜ ಹಕ್ಕರಿಕೆ, ನವಲಕೋಲು, ಬೀಟು, ಬಟಾಟಿ, ಮೂಲಂಗಿ, ಕಡಲೆ, ಚಪ್ಪರಬದನೆ, ಉಳ್ಳೇಗಡ್ಡಿ ಮೆಂತೆ, ಕುಂಬಳ ಇತ್ಯಾದಿ.

ಜಾನೇವರಿಯಿಂದ ಏಪ್ರಿಲ್ ವರೆಗೆ— ಮೂಲಂಗಿ, ವಿಲಾಯತಿ ಹಕ್ಕರಿಕೆ, ಬಸಳೆ ಚಪ್ಪರಬದನೆ, ಬೆಂಡೆ, ಉಳ್ಳೇಗಡ್ಡಿ, ಗೊಂಚಲವರಿ, ಕೋತಂಬರಿ, ಮೆಂತೆ, ಹಾಲುಗುಂಬ ಕಾಯಿ.

(ಹೆಚ್ಚು ಮಳೆಯಾಗುವ ಸಮುದ್ರದ ದಂಡೆಯ ಪ್ರದೇಶಗಳಲ್ಲಿ ಕಾಯಿಪಲ್ಲೆಗಳನ್ನು ಮಳೆಗಾಲದಲ್ಲಿಯೆ ಎತ್ತರವಾದ ಮಡಿಗಳಲ್ಲಿ ಬೆಳೆಯಬೇಕು.)

೧. ಮಡಿಗಳ ಪೋಷಣ ಕ್ರಮ:— ಮಡಿಗಳಲ್ಲಿಯ ಹುಲ್ಲನ್ನು ಆಗಾಗ ಕಿತ್ತಬೇಕು ಕಳೆಯನ್ನು ತೆಗೆಯಬೇಕು. ಮಡಿಯಲ್ಲಿ ಮಣ್ಣನ್ನು ಮೇಲೆ ಕೆಳಗೆ ಮಾಡಿ ಚೆನ್ನಾಗಿ ಬೆರ ಬೇಕು. ಇವೆರಡೂ ಕಾರ್ಯಗಳನ್ನು ಭೂಮಿಯು ಸಾಕಷ್ಟು ಒಣಗಿದಾಗ ಮಾತ್ರ ಮಾಡ ತಕ್ಕದ್ದು; ಆದರೆ ಮಡಿಗಳು ತೀರ ಹಸಿಯಿದ್ದಾಗ ಮಾಡತಕ್ಕದ್ದಲ್ಲ. ಕರಕೆಯು ತಲೆಯೆತ್ತಿ ಕೂಡಲೆ ಅದನ್ನು ಕಿತ್ತೊಗೆಯಬೇಕು. ಹೀಗೆ ಮೇಲಿಂದ ಮೇಲೆ ಕರಿಕೆಯನ್ನು ಕಿತ್ತುತ್ತ ಹೋದರೆ ಅದು ಬೇಗ ನಾಶವಾಗುವುದು.

೧೨. ಕ್ರಿಮಿನಾಶಕ ವ್ಯವಸ್ಥೆ ಮತ್ತು ಸಸಿಗಳ ರೋಗ ನಿವಾರಣೆ:—

(೧) **ಸಸಿ ಕತ್ತರಿಸುವ ಹುಳ:—** ಇವು ಬೆಳೆಯು ಎಳಕ ಇರುವಾಗ ಮಡಿಗಳ ಗೋಚರಿಸುತ್ತವೆ. ಅವು ನೆಲದಲ್ಲಿಯೆ ಇದ್ದು, ರಾತ್ರಿಯಲ್ಲೇ ಹೊರಗೆ ಬಂದು ಎಳೆಯ ಸ ಗಳನ್ನು ನೆಲಸಮವಾಗಿ ಕಡಿಯುತ್ತವೆ. ಇವು ನುಣುಪಾದ, ಗಡುಚಾದ, ದುಂಡಾದ, ಕಪ್ಪು ಹಸಿರು ಮೂಡಿಯ ಬಣ್ಣದ, ಒಂದು ಅರ್ಧ ಇಂಚು ಉದ್ದವಾದ ಕೀಡಿಗಳು. ಇವುಗಳನ್ನ ತಡವಿದಾಗ ಇವು ತಮ್ಮ ದೇಹವನ್ನು ಬೆಟ್ಟಿಬೆನಕದಂತೆ ಮುದುಡಿಕೊಳ್ಳುವುವು. ಇ ಸಾಮಾನ್ಯವಾಗಿ ಅಲ್ಲಿ ಇಲ್ಲಿ ಒಂಟಿಯಾಗಿ ಕಾಣುತ್ತವೆ. ಅಗಿಯ ಸುತ್ತಮುತ್ತಲು ಇ ಭೂಮಿಯನ್ನು ಅಗೆದು ಈ ಕೀಡೆಗಳನ್ನು ನಾಶಗೊಳಿಸುವುವೇ ನಿಯಂತ್ರಣದ ಅತ್ಯುತ್ತಮವಾ ಉಪಾಯ. ೨೫ ಭಾಗ ಗೋದಿಯ ತೌಡಿಗೆ ಒಂದು ಭಾಗ ಸುಂಬಳಕಾರವನ್ನು ಕೂಡಿ ಗುಳಿಗೆಗಳನ್ನು ಮಾಡಿ, ನೀರಿನಿಂದಲೂ ಕಾಕಂಬಿಯಿಂದಲೂ ತೋಯಿಸಿ ಒಂದು ಎಕ ಭೂಮಿಯಲ್ಲಿ ಹತ್ತು ಹದಿನೈದು ಪೌಂಡಿನಂತೆ ಹರವಬೇಕು.

(೨) **ಥ್ರಿಪ್ಸ್ ಎಂಬ ಹುಳಗಳು:—** ಇವು ಸಾಧಾರಣವಾಗಿ ಉಳ್ಳೇಗಡ್ಡಿ, ಕಡಲೆ ಮೆಣಸಿನ ಬೆಳೆಗಳ ಮೇಲೆ ದಾಳಿಮಾಡುತ್ತವೆ. ಇವು ಹಳದಿ ಬಣ್ಣದ ಮತ್ತು ಕರಗಸದಂ ಪಕ್ಕಗಳುಳ್ಳ ಸಣ್ಣ ಕ್ರಿಮಿಗಳು. ಇವು ಕೆಲವು ಸಾರೆ ಹೆಚ್ಚು ಸಂಖ್ಯೆಯಲ್ಲಿ ಕಂಡು, ಎಲೆಗ ಮೇಲೆ ಚಿಬ್ಬನ್ನು—ಬೆಳ್ಳನ್ನ ಪರಿಯನ್ನು ಬಿಡುವುವು. ಮೆಣಸಿನ ಕಾಯಿಗಳ ಸಸಿಗಳ ಮೇ ಈ ಹುಳಗಳು ಕುಳಿತರೆ ಎಲೆಗಳು ಮುದುಡಿಕೊಳ್ಳುತ್ತವೆ. ಇವುಗಳನ್ನು ನಿಯಂತ್ರಿಸಬೇಕಾದ ಒಂದು ಔಂಸ ತಂಬಾಕವನ್ನು ೨೦ ಔಂಸ ನೀರಿನಲ್ಲಿ ೨೪ ತಾಸು ತೋಯಿಸಿ, ಮೇಲಿಂದ ಮೇ

ನೀರನ್ನು ಕದಡಿ, ಅಷ್ಟೇ ನೀರನ್ನು ಕೂಡಿಸಿದ ತಂಬಾಕದ ಅರ್ಕವನ್ನು ಸಸಿಗಳಿಗೆ ಸಿಂಪಡಿಸಬೇಕು.

(೩) **ಏಫಿಸ್ ಎಂಬ ಹುಳಗಳು :—** ಇವು ಸಾಧಾರಣವಾಗಿ ಕ್ಯಾಬೇಜ, ನವಲ ಕೋಲು, ಕಾಲಿಫ್ಲಾವರಗಳ ಮೇಲೆ ದಿನಾಲು ಕಂಡುಬರುತ್ತವೆ. ಇವು ಬಹು ತೀವ್ರ ಹೆಚ್ಚಾಗುವ ಹಸಿರು ಹುಳಗಳು. ಇವು ಸಸಿಗಳ ಸೂಕ್ಷ್ಮವಾದ ಮೇಲ್ಭಾಗವನ್ನು ನಾಶಮಾಡುತ್ತವೆ. ಇವುಗಳಿಂದ ಸಸಿಯನ್ನು ಬದುಕಿಸಬೇಕಾದರೆ ತಂಬಾಕದ ಅರ್ಕವನ್ನು ಮೇಲಿಂದ ಮೇಲೆ ಸಿಂಪಡಿಸಬೇಕು.

(೪) **ಜಿಟ್ಟಿಗಳು: —** ಇವು ನಾನಾತರದವಿದ್ದು ಎಲೆಗಳಿಗೆ ತೂತು ಕೆಡವಿ ಸಸಿಗಳಿಗೆ ಹೆಚ್ಚು ಹಾನಿಯನ್ನುಂಟು ಮಾಡುವವು. ಇವು ರಾತ್ರಿಯಲ್ಲಿ ಹೆಚ್ಚಾಗಿ ಬೆಳೆಯನ್ನು ಮುತ್ತುವುವು. ೨ ಪೌಂಡು ಜಿನುಗಾದ ಬೂದಿಯನ್ನು ನಾಲ್ಕು ಔಂಸು ಚಿಮಣಿ ಎಣ್ಣೆಯಲ್ಲಿ ತೋಯಿಸಿ ಎಲೆಗಳ ಮೇಲೆ ಹರವಬೇಕು.

(೫) **ಕೋರೀಹುಳ :—** ಇವುಗಳನ್ನು ಕೈಯಿಂದಲೇ ಹಿಡಿದು ಕೊಲ್ಲಬೇಕು. ಇವು ಎಲೆಗಳ ಮೇಲೆ ಜೀವಿಸಿ ಬೆಳೆಗಳನ್ನು ಹಾಳುಮಾಡುವುವು.

(೬) **ಗೆದ್ದಲಿ :—**ಕೆಲವು ಬೆಳೆಗಳ ಮಡಿಗಳಲ್ಲಿ ಗೆದ್ದಲಿ ಹುಳಗಳು ಹುಟ್ಟಿ ಪೈರಿಗೆ ಬಹಳ ಕೆಡುಕನ್ನು ಉಂಟುಮಾಡುವುವು. ಹೀಗಾದಾಗ ಜರಜರಿಯ ನೀರಿನಲ್ಲಿ ನೂರಕ್ಕೆ ಒಂದು ಪ್ರಮಾಣದಂತೆ ಕ್ರೂಡಾಯಿಲ್ ಎಂಬ ಎಣ್ಣೆಯನ್ನು ಹಾಕಿ ಅದನ್ನು ಸಸಿಗಳ ಸುತ್ತಮುತ್ತ ಸಿಂಪಡಿಸಬೇಕು. ಕ್ರೂಡಾಯಿಲ್ ಸಿಗದಾಗ ಫಿನಾಯಿಲ್ ಎಣ್ಣೆಯನ್ನು ಉಪಯೋಗಿಸಬೇಕು. ಔಡಲ ಹಿಂಡಿಯ ಪುಡಿಯನ್ನು ಗೊಬ್ಬರದಂತೆ ಉಪಯೋಗಿಸಿದರೆ ಗೆದ್ದಲಿಗಳು ಬೆಳೆಗೆ ಅಪಾಯವನ್ನು ಮಾಡಲಾರವು.

(೭) **ಮಿಲ್ಡ್ಯೂ ಜಿಗಿ :—** ಇದು ಎಲೆಗಳ ಮೇಲ್ಭಾಗದ ಮೇಲೆ ಬೂಳಸಿನಂತೆ ಹಬ್ಬುವ ಒಂದು ರೋಗ. ಗಂಧಕದ ಹುಡಿಯನ್ನು ತೆಳ್ಳಗಿನ ಬಟ್ಟೆಯಲ್ಲಿ ಹಾಕಿ ಗಿಡದ ಮೇಲೆ ಸಿಂಪಡಿಸುವುದು ಉತ್ತಮವಾದ ಉಪಾಯವಾಗುವದು.

(೮) **ಸೂಕ್ಷ್ಮ ಜಂತುಗಳ ಪೊಜೆಯಿಕ್ ಎಂಬ ಬೇನೆ:—** ಈ ಬೇನೆಯಿಂದ ಟೊಮೆಟೊ ಮುಂತಾದವುಗಳು ಅಂದಗೆಟ್ಟು ಬೆಳೆಗುಂದಿ ಮುದುಡಿದಂತೆ ಕಾಣುವುವು. ಈ ಬೇನ ಬಂದ ಗಿಡಗಳನ್ನು ಕೂಡಲೆ ನಿರ್ಮೂಲಗೊಳಿಸಬೇಕು.

ಅಗಿಗಳ ರೋಗ, ಕೀಡೆಗಳ ಪೀಡೆಗಳು ಇವು ಬೆಳವಣಿಗೆಯು ಕುಂಠಿತವಾಗುವ ಪರಿಸ್ಥಿತಿಯಲ್ಲಿ ನೀರು ಕೊಳೆತ ಮಡಿಗಳಲ್ಲಿ, ಕರಿಗ ಹತ್ತಿದ ತೋಟಗಳಲ್ಲಿ, ದಟ್ಟಾದ ನೆರಳುಳ್ಳ ಅಥವಾ ತೇವು ಹೆಚ್ಚಾದ ಪ್ರದೇಶದಲ್ಲಿ ಕಂಡುಬರುವುವು. ಶಾಸ್ತ್ರೋಕ್ತ ಪದ್ಧತಿಯಿಂದ ಮಡಿಗಳನ್ನು ಮಾಡಿಕೊಂಡರೆ ಈ ಕೀಡೆಗಳ ಅಥವಾ ರೋಗಗಳ ಭಯವು ಬಹ್ವಂಶದಿಂದಕ ಡಮೆಯಾಗುವುದು.

ವಿ. ಸೂ :— ದೊಡ್ಡ ಶಹರಗಳಲ್ಲಿಯ ಮನೆಗಳ ಆವಾರದಲ್ಲಿ ಕಾಯಿಪಲ್ಲೆಗಳನ್ನು ಬೆಳೆಯಿಸುವದಕ್ಕಾಗಿ ಕೊಟ್ಟಿರುವ ಈ ಸೂಚನೆಗಳು ಹಳ್ಳಿಗಳಲ್ಲಿಯೂ ತೋಟಗಳಲ್ಲಿಯೂ ಈ ಕೆಲಸ ಮಾಡುವವರಿಗೂ ಸಹ ಉಪಯೋಗವಾಗುವವು. ಆದರೆ ಪರಿಸ್ಥಿತಿಗೆ ತಕ್ಕಂತೆ ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕು; ಇಷ್ಟೆ.

ಭಾಷಾ ವಿಷಯಗಳು :— ಒಟ್ಟಿನ ಮೇಲಿನ ನೋಡಿದರೆ ವಿದ್ಯಾರ್ಥಿನಿಯರಿಗೆ ಈ ವಿಷಯದಲ್ಲಿ ಸಾಕಷ್ಟು ಶಿಕ್ಷಣವು ದೊರೆದೇ ಇಲ್ಲವೋ ಏನೋ ಎನ್ನುವಷ್ಟು ಅಸಮಾಧಾನಕರವಾಗಿದೆ. ಆಯಾ ಕೇಂದ್ರಗಳಂತೆ ವಿಂಗಡಿಸಿದರೆ ಅದು ಈ ಬಗೆಯಾಗಬಹುದು.

ಕಾರವಾರ ಕೇಂದ್ರ :—ಜೆಲೋ. (very fair)

ಗದಗ, ವಿಜಾಪುರ ಮತ್ತು ಹುಬ್ಬಳ್ಳಿ ಕೇಂದ್ರಗಳು—ಸಾಧಾರಣ. (fair)

ಧಾರವಾಡ, ಬೆಳಗಾವ ಕೇಂದ್ರಗಳು—ಅಸಮಾಧಾನಕರ. (not satisfactory)

ಪ್ರಶ್ನ ಪತ್ರಿಕೆಯೊಳಗಿನ ೧ ೨-೩ ನೆಯ ಪ್ರಶ್ನೆಗಳು ಉಮೇದುವಾರರ ಭಾಷಾಜ್ಞಾನವನ್ನೂ ಅವರ ಲೇಖನ ಸಾಮರ್ಥ್ಯವನ್ನೂ ಪರೀಕ್ಷಿಸುವಂಥವಿದ್ದವು. ಮತ್ತು ೪-೫-೬ ನೆಯ ಪ್ರಶ್ನೆಗಳು ಅವರ ವ್ಯಾಕರಣ ಜ್ಞಾನವನ್ನೂ ಅದನ್ನು ಉಪಯೋಗಿಸುವ ಕ್ರಮವನ್ನೂ ಕಂಡು ಹಿಡಿಯುವಂಥವಿದ್ದವು. ಆದರೆ ಆ ಪ್ರಶ್ನೆಗಳಿಗೆ ಅವರು ಬರೆದ ಉತ್ತರಗಳು ತೀರ ಅಸಮಾಧಾನಕರವಾಗಿದ್ದು ಅವುಗಳಿಂದ ವಿದ್ಯಾರ್ಥಿನಿಯರ ಯೋಗ್ಯತೆಯನ್ನು ಸರಿಯಾಗಿ ಪರೀಕ್ಷಿಸಲು ಸಾಧ್ಯವೇ ಇರಲಿಲ್ಲವೆನ್ನಬಹುದು.

೧. (ಅ) ಮೂಲವನ್ನು ಮೂರರಲ್ಲೊಂದು ಪಾಲಿಗೆ ಸಂಕ್ಷೇಪಿಸುವದು.

(ಬ) ಸ್ವಂತ ಭಾಷೆಯಲ್ಲಿ ತಿರುಗಿ ಬರೆಯುವದು.

ಈ ಎರಡೂ ಪ್ರಶ್ನೆಗಳಿಗೆ ಬರೆದ ಉತ್ತರಗಳು ಆ ಪ್ರಶ್ನೆಗಳಿಗೆ ತಕ್ಕ ಉತ್ತರಗಳೇ ಆಗಿರಲಿಲ್ಲ. ನೂರರಲ್ಲಿ ೯೮ ರಷ್ಟು ಉಮೇದವಾರರ ಉತ್ತರಗಳು ತೀರ ತಪ್ಪಾಗಿದ್ದವು. ಬಹುಜನ ಉಮೇದುವಾರರು ಆ ಪ್ರಶ್ನೆಗಳ ಅರ್ಥವನ್ನೇ ತಿಳಿದುಕೊಂಡಿಲ್ಲವೇನೋ ಎನ್ನುವಂತಿತ್ತು; ಮೂಲದೊಳಗಿನ ಅಲ್ಲೊಂದು ಇಲ್ಲೊಂದು ಶಬ್ದವನ್ನು ಆರಿಸಿಕೊಂಡು ತಪ್ಪುತಪ್ಪಾಗಿ ಬರೆಯುವದು ಅಥವಾ ಹಲಕೆಲವು ವಾಕ್ಯಗಳನ್ನು ಬಿಟ್ಟು ಬಿಟ್ಟು ಮೂಲವನ್ನೇ ತಿರುಗಿ ಬರೆದು ಬಿಡುವದು ಇವೇ ಸಂಕ್ಷೇಪ ಬರೆಹದ ಕ್ರಮವೆಂದು ತಿಳಿದಂತಿತ್ತು. ಎಷ್ಟೋ ಉಮೇದುವಾರರ ಸಂಕ್ಷೇಪ ಬರೆಹವು ಮೂಲಕ್ಕಿಂತಲೂ ವಿಸ್ತಾರವಾಗಿದ್ದಿತು. ಸ್ವತಂತ್ರ ವಾಕ್ಯಗಳನ್ನೆಲ್ಲ ಅಪೂರ್ಣೋಪವಾಕ್ಯಗಳಾಗಿ ಮಾರ್ಪಡಿಸಿ ಒಂದೇ ಒಂದು ದೊಡ್ಡ ವಾಕ್ಯವನ್ನಾಗಿ ಬರೆದು ಬಿಟ್ಟ ಉದಾಹರಣೆಗಳೂ ಎಷ್ಟೋ ಇವೆ. ಉಮೇದುವಾರರು ತಮ್ಮ ಮಾತುಗಳಲ್ಲಿ ತಿರುಗಿ ಬರೆಯಬೇಕೆಂದು ಹೇಳಿದ ಪ್ರಶ್ನೆಗೆ ಬರೆದ ಉತ್ತರವಂತೂ ತೀರ ವಿಚಿತ್ರವಾಗಿತ್ತು. ಎಷ್ಟೋ ಉಮೇದುವಾರರು ಮೂಲವನ್ನೇ ತಿರುಗಿ ಬರೆದಿದ್ದರು. ಏಳನೆಯ ಪ್ರಶ್ನೆಯನ್ನು ತೀರ ಸ್ವಲ್ಪೇ ಉಮೇದುವಾರರು ಬಿಡಿಸಲು ಹವಣಿಸಿದ್ದರು. ಅವರ ಉತ್ತರವೂ ಕೂಡ ಸಮರ್ಪಕವಾಗಿರಲಿಲ್ಲ. ಮಿಕ್ಕವರಿಗಂತೂ ಆ ಪ್ರಶ್ನೆಯ ಅರ್ಥವೇ ಗೊತ್ತಾಗಲಿಲ್ಲವೆನ್ನಬಹುದು. ಪ್ರಶ್ನ ಪತ್ರಿಕೆಯಲ್ಲಿ ಒಟ್ಟು ಏಳು ಪ್ರಶ್ನೆಗಳಿದ್ದು ಐದೇ ಪ್ರಶ್ನೆಗಳಿಗೆ ಉತ್ತರ ಕೊಡತಕ್ಕದ್ದಿತ್ತು. ಆದರೆ ಬಹು ಜನರು ಏಳೂ ಪ್ರಶ್ನಗಳನ್ನು ಬಿಡಿಸಲು ಹವಣಿಸಿದ್ದರು. ಧಾರವಾಡ, ಬೆಳಗಾಂವಿ ಕೇಂದ್ರಗಳ ಬಹುಜನ ಉಮೇದುವಾರರ ಉತ್ತರದ ಕಾಗದದಲ್ಲಿರುವ ಉತ್ತರಕ್ಕೂ ಪ್ರಶ್ನೆ ಪತ್ರಿಕೆಯಲ್ಲಿಯ ಪ್ರಶ್ನೆಗಳಿಗೂ ಪರಸ್ಪರ ಸಂಬಂಧವೇ ಇಲ್ಲವೇನೋ ಎನ್ನುವಂತಿತ್ತು.

೨. (ಅ) ಉಮೇದುವಾರರಿಗೆ ಭಾವಾರ್ಥವೆಂದರೇನೆಂಬದೇ ತಿಳಿದಂತಿಲ್ಲ. ಮೂಲದಲ್ಲಿ ಕೊಟ್ಟ ಮಾತುಗಳನ್ನೇ ತಿರುಗಿ ಬರೆದ ಉಮೇದುವಾರರೇ ಹೆಚ್ಚು. ಗದ್ಯದ ವಿಷಯದಲ್ಲಿಯೂ ಅಷ್ಟೇ; ಪದ್ಯದ ವಿಷಯದಲ್ಲಿಯೂ ಅಷ್ಟೇ. ಕೊಟ್ಟ ಗದ್ಯಪದ್ಯ ಭಾಗಗಳು ತೀರ ಸುಲಭವಾಗಿದ್ದರೂ ಅವುಗಳ ಅರ್ಥವನ್ನು ಸರಿಯಾಗಿ ತಿಳಿದು

ಕೊಂಡು ಕೇಳಿದ ಪ್ರಶ್ನೆಗೆ ಸಮರ್ಪಕ ಉತ್ತರವನ್ನು ಕೊಟ್ಟ ಉಮೇದುವಾರರು ತೀರ ಕಡಿಮೆ.

(ಬ) ಮೂಲ ಕವಿತೆಯೊಳಗಿನ ವಾಕ್ಯಗಳನ್ನೇ ತಿರುಗಿ ಬರೆದವರೇ ಬಹಳ. ಮಿಕ್ಕವರಲ್ಲಿ ಕೆಲವರು ಕೊಟ್ಟ ವಾಕ್ಯಗಳ ಅರ್ಥ ವಿವರಣೆ ಮಾಡಲು ಹವಣಿಸಿದ್ದರು. ಲೇಖನಕ್ಕೆ ತಕ್ಕ ಶಿರೋ ಲೇಖನವನ್ನು ಬರೆಯಲು ಕೇಳಿದ್ದು ಬಹುಜನ ಉಮೇದುವಾರರ ಉತ್ತರವು ತೀರ ತಪ್ಪಾಗಿತ್ತು.

(ಅ) ಕೊಟ್ಟ ಎರಡು ವಾಕ್ಯಗಳ ಅರ್ಥದಲ್ಲಿರುವ ಭೇದವನ್ನು ಬರೆದು ತೋರಿಸಲು ಬಹುಜನ ಉಮೇದುವಾರರು ಸಮರ್ಥರಾಗಲಿಲ್ಲ. ಎರಡೇ ಉಪಪ್ರಶ್ನೆಗಳಿಗೆ ಉತ್ತರ ಬರೆಯಬೇಕಾಗಿದ್ದು ಬಹುಜನರು ಮೂರೂ ಭಾಗಗಳನ್ನು ಬಿಡಿಸಲು ಹವಣಿಸಿದ್ದರು.

(ಬ) ಗಾದೆಯ ಮಾತುಗಳ ಅರ್ಥವನ್ನು ಸರಿಯಾಗಿ ತಿಳಿದುಕೊಂಡು ಅದನ್ನು ಸರಿಯಾಗಿ ಪ್ರಯೋಗಿಸಿದ ಉಮೇದುವಾರರು ತೀರ ಕಡಿಮೆ. ಒಂದೆರಡು ವಾಕ್ಯಗಳಲ್ಲಿಯೇ ಬರೆಯಬಹುದಾದ ಉತ್ತರವನ್ನು ಎರಡು ಮೂರು ಪುಟಗಳ ವರೆಗೂ ಬೆಳಿಸಿದ್ದನ್ನು ನೋಡಿದರೆ ಇವರಿಗೆ ಪ್ರಶ್ನೆಗೂ ಉತ್ತರಕ್ಕೂ ಇರಬೇಕಾದ ಪ್ರಮಾಣದ ಕಲ್ಪನೆಯೇ ಇಲ್ಲವೆನ್ನಿಸುವದು. ಮುಖ್ಯ ಮುದ್ದೆಯನ್ನು ಮರೆತುಬಿಟ್ಟ ಪುಟಗಟ್ಟಲೆಯಿಂದ ಕಥೆಯನ್ನೋ ಉದಾಹರಣೆ ವಿವರಣೆಗಳನ್ನೋ ಬರೆದದ್ದು ನೋಡಿದರೆ ಆಶ್ಚರ್ಯವಾಗುವದು. ಈ ಪ್ರಶ್ನೆಯಿಂದಲೇ ಉಮೇದುವಾರರ ಭಾಷಾ ಜ್ಞಾನವನ್ನು ಪರೀಕ್ಷಿಸಬಹುದಾಗಿದ್ದಿತು. ಆದರೆ ಅವರ ಉತ್ತರವನ್ನು ನೋಡಿದರೆ ತೀರ ನಿರಾಶೆಯಾಗುವಂತಿತ್ತು.

(ಕ) ಬಹುಜನ ಉಮೇದುವಾರರ ಉತ್ತರವು ಸರಿಯಾಗಿದ್ದಿತು.

(ಅ) ಸರ್ವಸಾಮಾನ್ಯವಾಗಿ ಉತ್ತರವು ಚೆನ್ನಾಗಿತ್ತೆಂದು ಹೇಳಬಹುದು. ಆದರೆ ಕೆಲವರು ನಾಮವನ್ನು ಧಾತುವೆಂದೂ ಧಾತುವನ್ನು ನಾಮವೆಂದೂ ಹೇಳಿರುವದು ಅವರ ವ್ಯಾಕರಣ ಜ್ಞಾನದ ಅಭಾವದ ಗುರುತೆನಿಸುವದು. ಕೆಲವರು ರಚಿಸಿದ ವಾಕ್ಯಗಳು ತೀರ ಅಸಂಬದ್ಧವಾಗಿದ್ದವು. ಕೆಲವರ ವಾಕ್ಯಗಳಿಗೆ ಅರ್ಥವೇ ಆಗುವಂತಿರಲಿಲ್ಲ.

(ಬ) ಸಾಮಾನ್ಯವಾಗಿ ಉತ್ತರವು ಚೆನ್ನಾಗಿದ್ದರೂ ಬರೆಹದ ದೋಷಗಳು ಹೇರಳವಾಗಿದ್ದವು.

(ಕ) 'ಶತ್ರು' ಶಬ್ದವನ್ನು 'ಶತ್ಯೃ' ಎಂದು ಬರೆದವರೇ ಹೆಚ್ಚು. ಪರಿಶುದ್ಧವಾದ ಅಕ್ಷರ ಯೋಜನೆಯ ಜ್ಞಾನದ ಅಭಾವವು ಸರ್ವತ್ರ ಕಂಡು ಬರುತ್ತಿತ್ತು.

(ಅ) ತೀರ ಸ್ವಲ್ಪ ಉಮೇದವಾರರು ಮಾತ್ರ ತಕ್ಕ ಸಮುಚ್ಚಾಯಕಗಳನ್ನು ಉಪಯೋಗಿಸಿ ವಾಕ್ಯರಚನೆ ಮಾಡಿದ್ದರು.

(ಬ) ಕ್ರಿಯಾಪದಗಳ ಲಿಂಗಜ್ಞಾನದ ಅಭಾವವು ಅಲ್ಲಲ್ಲಿ ಕಂಡುಬರುತ್ತಿತ್ತು.

(ಕ) ಈ ಪ್ರಶ್ನೆಯನ್ನು ತೀರ ಸ್ವಲ್ಪೇ ಉಮೇದುವಾರರು ಬಿಡಿಸಿದರು. ಬಿಡಿಸಿದವರ ಉತ್ತರವನ್ನು ನೋಡಿದರೂ ಕೂಡ ಅವರಿಗೆ ವ್ಯಾಕರಣ ವಿಷಯವನ್ನು ಕಲಿಸಿಯೇ ಇಲ್ಲವೋ ಏನೋ ಎನ್ನಿಸುತ್ತಿತ್ತು.

(ಅ) ಪ್ರಯೋಗಕ್ಕೆ ಸಂಬಂಧಿಸಿದ ಮಟ್ಟಿಗೆ ಈ ಪ್ರಶ್ನೆಯ ಉತ್ತರವನ್ನು ಬಹು ಜನರು ಸರಿಯಾಗಿ ಬರೆದಿದ್ದರು. ಆದರೆ ಕೆಲವರು 'ತಾಯಿಗೆ' ಕರ್ತೃ 'ಮಗನಿಂದ' ಕರ್ಮ ಎಂದು ಬರೆದಿದ್ದರು.

(ಬ) ವಾಕ್ಯರಚನಾ ಕ್ರಮವನ್ನು ಬದಲಿಸಿ ಒರೆಯಲು ಬಹು ಜನರಿಗೆ ಬರಲಿಲ್ಲ. ಮೂರೇ ಭಾಗಗಳಿಗೆ ಉತ್ತರ ಬರೆಯತಕ್ಕದ್ದಾದರೂ ಬಹು ಜನರು ಐದೂ ಭಾಗಗಳಿಗೆ ಉತ್ತರ ಬರೆದಿದ್ದರು.

ಸೂಚನೆಗಳು :— (೧) ಸಂಕ್ಷೇಪಿಸಿ ಬರೆಯುವಾಗ ಮುಖ್ಯ ಮತ್ತು ಅಮುಖ್ಯ ಅಂಶಗಳನ್ನು ಬೇರ್ಪಡಿಸಿಕೊಂಡು ಅಮುಖ್ಯವಾದವುಗಳನ್ನು ಬಿಟ್ಟು ಬಿಟ್ಟು ಬರೆಯುವದಕ್ಕೆ ಹೆಚ್ಚು ರೂಢಿ ಮಾಡಿಸಬೇಕು. (೨) ಉಮೇದುವಾರರು ತಮ್ಮ ಸ್ವಂತ ಮಾತುಗಳಲ್ಲಿ ಬರೆಯಬೇಕಾದ ಗದ್ಯ-ಪದ್ಯ ಭಾಗಗಳ ಅರ್ಥವನ್ನು ಮೊದಲು ಚೆನ್ನಾಗಿ ತಿಳಿದುಕೊಂಡು ಆಮೇಲೆ ಅವನ್ನು ತಮ್ಮ ಮಾತುಗಳಲ್ಲಿ ಬರೆಯಲು ಪ್ರಾರಂಭಿಸಬೇಕು. (೩) ಪ್ರಶ್ನೆಯೇನು? ಅದಕ್ಕೆ ತಕ್ಕ ಉತ್ತರವೇನು? ಎಂಬುದನ್ನು ನಿರ್ಧರಿಸಿಕೊಂಡ ಹೊರತು ಬರೆಯಲು ಪ್ರಾರಂಭಿಸಬಾರದು. (೪) ಗಾದೆಯ ಮಾತುಗಳ ವಿವರಣೆಯನ್ನು ನಾಲ್ಕೈದು ಮಾತುಗಳಲ್ಲಯೇ ಹೇಳುವದಕ್ಕೂ ಅಷ್ಟೇ ಮಾತುಗಳಿಂದ ಅರ್ಥವು ಒಡೆದು ಕಾಣುವಂತೆ ಮಾಡುವದಕ್ಕೂ ಅಭ್ಯಾಸ ಮಾಡಿಕೊಳ್ಳಬೇಕು. (೫) ವ್ಯಾಕರಣದ ಪ್ರಶ್ನೆಗಳಿಗೆ ಸಂಧಿಸಿದ ಉತ್ತರಗಳನ್ನು ಬರೆಯುವದಕ್ಕೆ ಅಂಥ ಹಲವು ಪ್ರಶ್ನೆಗಳನ್ನು ಹೆಚ್ಚಾಗಿ ಬಿಡಿಸಿ ರೂಢಿಮಾಡಿಕೊಳ್ಳಬೇಕು.

ನಿಬಂಧ ಬರೆಹ :— ಬರೆಹದ ಶೈಲಿಯಲ್ಲಿಯೂ ವಿಷಯಜ್ಞಾನದಲ್ಲಿಯೂ ತಕ್ಕಷ್ಟು ಪ್ರಗತಿಯಾದಂತೆ ಕಂಡುಬರುವದು. ರಿಪೋರ್ಟು ಅಥವಾ ಪತ್ರಬರೆಹದ ಕ್ರಮದಲ್ಲಿಯೂ ತಕ್ಕಂತೆ ಸುಧಾರಣೆಯಾಗಿದೆಯೆನ್ನಬಹುದು. ಸಂಭಾಷಣೆಯ ಪ್ರಶ್ನೆಯನ್ನು ಬಿಡಿಸಲು ಹವಣಿಸಿದವರು ತೀರ ಕಡಿಮೆ. ಅವರ ಉತ್ತರವೂ ಕೂಡ ಅಸಮರ್ಪಕವಾಗಿತ್ತು. ಬಹುಜನ ಉಮೇದುವಾರರ ಕೈಬರೆಹವೂ ಬರೆಹದ ಕ್ರಮವೂ ಸರಿಯಾಗಿದ್ದಂತೆ ಕಂಡುಬಂದಿತು.

ಗಣಿತ, ಭೂಮಿತಿ, ಜಮಾಖರ್ಚು :— ಬಹುಜನ ಉಮೇದುವಾರರ ಉತ್ತರಗಳು ಚೆನ್ನಾಗಿದ್ದವು. ನೂರರಲ್ಲಿ ೭೮ ರಷ್ಟು ಉಮೇದುವಾರರು ಗಣಿತ ವಿಷಯಗಳಲ್ಲಿ ಪಾಸಾಗಿರುವರು. ಕೆಲವರಂತೂ ೧೦೦ ಕ್ಕೆ ೭೫ ರಷ್ಟು ಗುಣಗಳನ್ನು ದೊರಕಿಸಿದ್ದಾರೆ.

ಹಲವರಿಗೆ ಗಣಿತ ಜಮಾಖರ್ಚುಗಳ ಜ್ಞಾನವು ತಕ್ಕಷ್ಟಿದ್ದರೂ ಭೂಮಿತಿಯ ಜ್ಞಾನವು ಮಾತ್ರ ತೀರ ನಿಕೃಷ್ಟತರದ್ದಾಗಿ ಕಂಡುಬಂದಿತು. ಲೆಕ್ಕಗಳನ್ನು ಬಿಡಿಸುವ ಮತ್ತು ಭೂಮಿತಿಯ ಉತ್ತರಗಳನ್ನು ಬರೆಯುವ ರೀತಿಗೂ ಸರಿಯಾದ ಕ್ರಮಕ್ಕೂ ಹೆಚ್ಚು ಲಕ್ಷ್ಯಕೊಡಬೇಕೆನ್ನಿಸುವದು.

ಇತಿಹಾಸ ಭೂಗೋಲಗಳು :— ಒಟ್ಟಿನ ಮೇಲೆ ಉಮೇದುವಾರರ ಪ್ರಗತಿಯು ಸಮಾಧಾನಕರವಾಗಿದೆಯೆನ್ನಬಹುದು. ಕಾರವಾರ ಗದಗ ಮತ್ತು ಧಾರವಾಡ ಕೇಂದ್ರಗಳ ಉಮೇದುವಾರರ ಉತ್ತರಗಳು ಮಿಕ್ಕ ಕೇಂದ್ರಗಳ ಉಮೇದುವಾರರ ಉತ್ತರಗಳಿಗಿಂತಲೂ ಚೆನ್ನಾಗಿದ್ದವು. ಒಟ್ಟಿಗೆ ಪರೀಕ್ಷೆಗೆ ಕುಳಿತ ೪೯೯ ಉಮೇದುವಾರರಲ್ಲಿ ೪೩ ಉಮೇದುವಾರರು ಮಾತ್ರ ೧೦೦ಕ್ಕೆ ೬೦ಕ್ಕಿಂತ ಹೆಚ್ಚು ಗುಣಗಳನ್ನು ದೊರಕಿಸಿದ್ದರು. ಅವರಲ್ಲಿಯೂ ೭೦ ಕ್ಕಿಂತ ಹೆಚ್ಚು ಗುಣಗಳನ್ನು ಪಡೆದವರು ಎಂಟೇ. ಪಂಜಾಬವನ್ನು ವಶಪಡಿಸಿಕೊಂಡ ಪ್ರಶ್ನೆಯೊಂದನ್ನು ಬಿಟ್ಟು ಮಿಕ್ಕ ಎಲ್ಲ ಪ್ರಶ್ನೆಗಳನ್ನು ಬಿಡಿಸಲು ಬಹುಜನ ಉಮೇದುವಾರರು ಯತ್ನಿಸಿರುವರು.

ಈ ಸಂದರ್ಭದಲ್ಲಿ ಹೋದವರ್ಷ ಹೇಳಿದ ಮಾತನ್ನೇ ತಿರುಗಿ ಈ ವರ್ಷವೂ ಹೇಳಬೇಕಾಗಿದೆ. ಅದೇನಂದರೆ— "ಹೆಣ್ಣುಮಕ್ಕಳ ಶಾಲೆಗಳಲ್ಲಿ ಇತಿಹಾಸವನ್ನು ಕಲಿಸುವಾಗ ಕಾಲಾನುಕ್ರಮದ ಕಲ್ಪನೆಯ ಕಡೆಗೆ ಸಾಕಷ್ಟು ಲಕ್ಷ್ಯವು ಪೂರೈಸಲ್ಪಡುವದಿಲ್ಲ."

ಸರಕಾರದ ಆಡಳಿತೆಗೆ ಸಂಬಂಧಿಸಿದ ಪ್ರಶ್ನೆಗೆ ಬರೆದ ಉತ್ತರವು ಸರ್ವಸಾಮಾನ್ಯವಾಗಿ ಸಮಾಧಾನಕರವಾಗಿಲ್ಲ. ಅಂದಾಜಿನಿಂದ ಬರೆದ ಉತ್ತರವೇ ಹೆಚ್ಚು. ಮ್ಯುನಿಸಿಪಾಲಿಟಿ ಮತ್ತು ಜಿಲ್ಲಾ ಲೋಕಲ್‌ಬೋರ್ಡು ಇವುಗಳ ಭೇದವು ಬಹು ಜನರಿಗೆ ಗೊತ್ತಿಲ್ಲ. ಪ್ರಾಂತಿಕ ಸರಕಾರ ಕೇಂದ್ರ ಸರಕಾರಗಳನ್ನು ವಿಂಗಡಿಸಿ ತಿಳಿದುಕೊಳ್ಳುವುದಕ್ಕೆ ಬಹು ಜನರಿಗೆ ಸಾಧ್ಯವಾಗಲಿಲ್ಲ. ಡಿಸ್ಟ್ರಿಕ್ಟ ಜಜ್ಜರ ಕರ್ತವ್ಯಗಳನ್ನು ತಿಳಿದುಕೊಂಡಿದ್ದ ಉಮೇದುವಾರರು ತೀರ ಕಡಿಮೆ.

ಭೂಗೋಲದಲ್ಲಿ ವಸ್ತುಸ್ಥಿತಿಯನ್ನು ಸರಿಯಾಗಿ ತಿಳಿದುಕೊಂಡ ಉಮೇದುವಾರರು ಕಡಿಮೆ. ಟಿಬೇಟಿಯನ್ನರೂ ಎಸ್ಕಿಮೋ ಜನರೂ ಒಂದೇ ಎಂದೂ ರೇನ್‌ಡಿಅರಗಳು ತಿಬೇಟದಲ್ಲಿರುವವೆಂದೂ ಬಹು ಜನರು ತಿಳಿದುಕೊಂಡಿರುವರು. ಮಳೆಯನ್ನು ಅಳೆಯುವ ಯಂತ್ರದ ಜ್ಞಾನವು ಬಹು ಜನರಿಗೆ ಸರಿಯಾಗಿ ಇದ್ದಿಲ್ಲ. ನಕಾಶೆಯಲ್ಲಿ ನದಿ ಪರ್ವತ ಪಟ್ಟಣಗಳನ್ನು ಯಾವ ಯಾವ ಗುರ್ತುಗಳಿಂದ ತೋರಿಸಬೇಕೆಂಬದು ಬಹು ಜನರಿಗೆ ಗೊತ್ತಿಲ್ಲ. ಶಾಲೆಗಳಲ್ಲಿ ಆಗಾಗ ಪರೀಕ್ಷೆ ತೆಗೆದುಕೊಂಡು ಸರಿಯಾದ ಕ್ರಮದಿಂದ ಉತ್ತರ ಬರೆಯುವ ರೂಢಿಯನ್ನು ಮಾಡಿಸಿದರೆ ಈ ತರದ ತಪ್ಪು ಕಡಿಮೆಯಾಗಬಹುದು.

ಗೃಹಕರ್ಮ ವಿಜ್ಞಾನ :— ಎಷ್ಟೋ ಉಮೇದುವಾರರ ವಿಷಯ ಜ್ಞಾನವು ಚೆನ್ನಾಗಿದ್ದರೂ ಅವರಿಗೆ ತಾವು ತಿಳಿದುಕೊಂಡದ್ದನ್ನು ಸರಿಯಾಗಿ ಬರೆಯುವ ಶಕ್ತಿಯಿರದ್ದರಿಂದ ತೊಂದರೆಯಾಯಿತು. ಭಾವಾದೋಷಗಳು ವಿಪುಲವಾಗಿವೆ. ಅಂದವಾಗಿಯೂ ಅಚ್ಚುಕಟ್ಟಾಗಿಯೂ ಭಾವಪೂರ್ಣವಾಗಿಯೂ ಬರೆಯುವ ರೂಢಿ ಮಾಡಿಸಬೇಕು.

ಧಾರವಾಡ ಕೇಂದ್ರದ ಉಮೇದುವಾರರ ಯೋಗ್ಯತೆಯು ಹೆಚ್ಚು ಚೆನ್ನಾಗಿದ್ದಂತೆಯೂ ಕಾರವಾರ ಕೇಂದ್ರದವರು ಕಡಿಮೆ ತರಗತಿಯವರಾಗಿಯೂ ಕಂಡುಬಂದಿತು.

ಡ್ರಾಯಿಂಗು :— ಚಿತ್ರ ತೆಗೆಯುವದಕ್ಕಾಗಿ ಇಟ್ಟಿರುವ ಪದಾರ್ಥಗಳ ಅಳತೆಯ ಪ್ರಮಾಣದ ಕಲ್ಪನೆಯು ಉಮೇದುವಾರರಿಗೆ ಸರಿಯಾಗಿ ಇರಲಿಲ್ಲ. ಆದ್ದರಿಂದ ಆ ಪದಾರ್ಥಗಳ ಸ್ಥಾನದಲ್ಲಿಯೂ ಪ್ರಮಾಣದಲ್ಲಿಯೂ ತಪ್ಪಾಗಿರುವದು. ಕೆಲವೊಂದು ಎಲೆಯ ಟೊಂಗೆಯನ್ನು ನೋಡಿ ಚಿತ್ರ ತೆಗೆಯುವಾಗ ಟೊಂಗೆ, ದೇಟು, ಎಲೆ ನರಗಳು ಮುಂ. ಬೇರೆಬೇರೆ ಮುಖ್ಯ ಭಾಗಗಳನ್ನು ಚೆನ್ನಾಗಿ ನೋಡಿ ಚಿತ್ರ ತೆಗೆಯಬೇಕೆಂಬುದರ ತಿಳವಳಿಕೆಯು ಸರಿಯಾಗಿದ್ದಂತೆ ಕಂಡು ಬರಲಿಲ್ಲ. ನೆನಪಿನಿಂದ ಚಿತ್ರ ತೆಗೆಯುವಾಗ ಅವರಿಗೆ ತಾವು ಚಿತ್ರಿಸುವ ಪದಾರ್ಥದ ಕಲ್ಪನೆಯು ಸರಿಯಾಗಿರಲಿಲ್ಲ. ಚಿತ್ರಗಳ ಬೇರೆ ಬೇರೆ ಭಾಗಗಳೂ ಕೂಡ ಪ್ರಮಾಣಾನುರೂಪವಾಗಿರಲಿಲ್ಲ. ಹೆಣ್ಣುಮಕ್ಕಳ ಶಾಲೆಗಳಲ್ಲಿ ತಕ್ಕಂತೆ ಶಿಕ್ಷಣ ದೊರೆತರೆ ಇಂಥ ತಪ್ಪು ಕಡಿಮೆಯಾಗಬಹುದು.

ಪ್ರಕೃತಿ ವಿಮರ್ಶೆ :— ಉಮೇದವಾರರ ಪ್ರಗತಿಯು ಒಟ್ಟಿನ ಮೇಲೆ ತಕ್ಕಮಟ್ಟಿಗೆ ಸಮಾಧಾನಕರವಾಗಿದ್ದಂತೆ ಕಂಡು ಬಂದಿತು. ಈ ಮುಂದೆ ಹೇಳುವ ವಿವರಣೆಯಿಂದ ಈ ಮಾತು ವಿಶದವಾಗಬಹುದು.

ಉಮೇದುವಾರರಿಗೆ ಉತ್ತರಗಳನ್ನು ಮುಖ್ಯ ಮುದ್ದಿಗೆ ಅನುಸಾರವಾಗಿ ಸಂಕ್ಷೇಪವಾಗಿ ಬರೆಯುವ ರೂಢಿ ಕಡಿಮೆ. ಒಂದೆರಡು ಮಾತುಗಳಲ್ಲಿ ಹೇಳಬಹುದಾದ ಸಂಗತಿಯನ್ನು ಬೆಳಿಸಿ ಉದ್ದುದ್ದ ಪುರಾಣವಾಗಿ ಬರೆಯುವದರಿಂದ ಉಮೇದುವಾರರ ವೇಳೆಯು ವ್ಯರ್ಥ ಹೋಗುವದಲ್ಲದೆ ಪರೀಕ್ಷಕರಿಗೆ ತಲೆಬೇಸರವುಂಟಾಗುವದು.

'ಹೆಣ್ಣುಗಳು ಪಕ್ವವಾದ ಬಳಿಕ ಅವಕ್ಕೆ ಮನೋಹರವಾದ ಬಣ್ಣವು ಯಾಕೆ ಬರುವದು' ಎಂಬ ಪ್ರಶ್ನೆಗೆ ಬಹುಜನ ಉಮೇದುವಾರರು 'ಇದು ಪ್ರಕೃತಿಯ ಸ್ವಭಾವಸಿದ್ಧವಾದ ನಿಯಮ'

ವೆಂದು ಉತ್ತರ ಬರೆದಿದ್ದಾರೆ. ಇರಬಹುದು. ಆದರೆ ಪ್ರಕೃತಿಯ ಸ್ವಭಾವಸಿದ್ಧವಾದ ನಿಯಮಗಳನ್ನು ಕಂಡುಕೊಂಡು ಅವುಗಳಿಂದಾಗುವ ಪ್ರಯೋಜನವನ್ನು ಕಾರ್ಯಕಾರಣ ಭಾವ ವಿವೇಚನೆಯೊಂದಿಗೆ ಪ್ರತಿಪಾದಿಸುವ ಅಭ್ಯಾಸವನ್ನುಂಟುಮಾಡುವದೇ ಪ್ರಕೃತಿ ವಿಮರ್ಶೆಯ ಧ್ಯೇಯವಾಗಿರುವದರಿಂದ ಅಂಥ ಕಾರ್ಯಕಾರಣ ಭಾವವನ್ನು ಉಮೇದುವಾರರು ತಮ್ಮ ಉತ್ತರದಲ್ಲಿ ಪ್ರತಿಪಾದಿಸುವದು ಆವಶ್ಯವೆಂಬದನ್ನು ಯಾರೂ ಮರೆಯುವಂತಿಲ್ಲ. ಹಾಗೆ ಕಾರ್ಯಕಾರಣ ಭಾವವನ್ನು ವಿವೇಚಿಸದಿರುವದನ್ನು ನೋಡಿದರೆ ಅವರಿಗೆ ಹೀಗೆ ಕೂಲಂಕಷವಾಗಿ ವಿಮರ್ಶಿಸಿ ಕಾರ್ಯಕಾರಣ ಭಾವವನ್ನು ಕಂಡು ಹಿಡಿಯಲು ಕಲಿಸಿಲ್ಲವೇನೋ ಎಂಬ ಸಂಶಯವುಂಟಾಗುವದು.

ವನಸ್ಪತಿಗಳ ಬೇರೆ ಬೇರೆ ಭಾಗಗಳ ಉಪಯೋಗವನ್ನು ಕುರಿತು ಕೇಳಿದ ಪ್ರಶ್ನೆಗೆ ಮನುಷ್ಯರಿಗೆ ಅವುಗಳ ಉಪಯೋಗವೇನೆಂಬದನ್ನು ವಿವರಿಸಿ ಉತ್ತರ ಬರೆದಿದ್ದಾರೆ. ಪ್ರಾಣಿಗಳೇ ಆಗಲಿ ವನಸ್ಪತಿಗಳೇ ಆಗಲಿ ಕೇವಲ ಪರಾರ್ಥಕ್ಕಾಗಿಯೇ ಜೀವಿಸುವ ಸಾಧುಸಂತರಂತೆ ನಿಸ್ವಾರ್ಥಬುದ್ಧಿಯಿಂದ ಜೀವಿಸುವದಿಲ್ಲವೆಂದೂ ಅವು ತಮ್ಮ ತಮ್ಮ ಹಿತದ ದೃಷ್ಟಿಯನ್ನಿಟ್ಟುಕೊಂಡೇ ಎಲ್ಲ ಕಾರ್ಯ ಮಾಡುತ್ತಿರುತ್ತವೆಂದೂ ತಿಳಿಯಬೇಕಾದುದು ಪ್ರಕೃತಿ ವಿಮರ್ಶೆಯ ಅಭ್ಯಾಸದೊಳಗಿನ ಒಂದು ಮಹತ್ತ್ವದ ಗುಟ್ಟಿನ ಮಾತು. ಆದ್ದರಿಂದ ಹೂವುಗಳ ಬೇರೆ ಬೇರೆ ಭಾಗಗಳ ಉಪಯೋಗವೇನೆಂದು ಕೇಳಿದಾಗ ಆಯಾ ಭಾಗಗಳಿಂದ ಆ ವನಸ್ಪತಿಗೆ ಏನು ಪ್ರಯೋಜನವುಂಟೆಂಬದನ್ನು ಹೇಳಬೇಕಲ್ಲದೆ ಮನುಷ್ಯರಿಗೆ ಆಗುವ ಪ್ರಯೋಜನವನ್ನು ಹೇಳುವದು ಪ್ರಕೃತಿ ವಿಮರ್ಶೆ ಮಾಡಿದ ಉಮೇದುವಾರರು ಹೇಳತಕ್ಕ ಉತ್ತರವೆಂದು ಯಾರೂ ಸ್ವೀಕರಿಸಲಾರರು.

ಆಕೃತಿ ಸಹಿತವಾಗಿ ಉತ್ತರ ಬರೆಯಬೇಕೆಂದು ಹೇಳಿದಾಗ ಉಮೇದುವಾರರು ತೆಗೆದಿರುವ ಚಿತ್ರವನ್ನು ನೋಡಿದರೆ ಅವರಿಗೆ ಚಿತ್ರ ತೆಗೆಯುವ ರೂಢಿಯಾಗಿಲ್ಲವೆಂದು ತೀರ ಸಹಜವಾಗಿ ಹೇಳುವಂತಿತ್ತು.

ಮಾವಿನಗಿಡದ ವನಸ್ಪತಿ ಶಾಸ್ತ್ರಕ್ಕೆ ಸಂಬಂಧಿಸಿದ ವರ್ಣನೆಯನ್ನು ಕೇಳಿದರೆ ಕವಿ ವರ್ಣನೆಗೆ ಅನುಗುಣವಾದ ಉತ್ತರವನ್ನು ಬರೆದಿರುವದು ಉಮೇದುವಾರರು ಪ್ರಶ್ನೆಯನ್ನು ತಿಳಿದುಕೊಳ್ಳದೆಯೇ ಉತ್ತರ ಬರೆಯುವರೆಂಬದಕ್ಕೆ ಒಳ್ಳೆಯ ಉದಾಹರಣೆಯಾಗಬಹುದು.

ಗಾಯನ :— ಹೆಣ್ಣುಮಕ್ಕಳು ಸಂಗೀತವನ್ನು ಮಧುರವಾಗಿ ಹಾಡಿದರೂ ಅವರು ಶಾಸ್ತ್ರೋಕ್ತ ಕರ್ನಾಟಕೀ ಪದ್ಧತಿಯನ್ನು ಅನುಸರಿಸಲಿಲ್ಲ. ಅಲ್ಲದೆ ರಾಗಾಂಗ ತಾಳಾಂಗ ಕ್ರಿಯಾದಿಗಳು ವಿಕಲ್ಪವಾಗಿವೆ.

ಹೊಲಿಗೆಯ ಕೆಲಸ :—(ವಿಜಾಪುರ ಕೇಂದ್ರ) ಉರ್ದು ಮತ್ತು ಮರಾಠಿ ಉಮೇದುವಾರರ ಕೆಲಸಕ್ಕಿಂತಲೂ ಕನ್ನಡ ಉಮೇದುವಾರರ ಕೆಲಸವು ಕಡಿಮೆ ತರಗತಿಯದಾಗಿತ್ತು.

(ಹುಬ್ಬಳ್ಳಿ ಕೇಂದ್ರ) :— ಈ ವರ್ಷದ ಪ್ರಶ್ನ ಪತ್ರಿಕೆಯು ಸುಲಭವೂ ಸ್ಪಷ್ಟ ಅರ್ಥಬೋಧಕವೂ ಆಗಿದ್ದರೂ ಎಷ್ಟೋ ಉಮೇದುವಾರರು ನಾನಾ ಬಗೆಯ ತಪ್ಪುಮಾಡಿದ್ದರು. ಕನ್ನಡ ಉಮೇದುವಾರರು ತಯಾರಿಸಿದ ಬ್ಲೌಜ ಚೆನ್ನಾಗಿರಲಿಲ್ಲ. ಮರಾಠಿ ಉಮೇದುವಾರರ ಕೆಲಸವು ತಕ್ಕಮಟ್ಟಿಗೆ ಚೆನ್ನಾಗಿತ್ತು. ಉರ್ದು ಉಮೇದುವಾರರು ಮೊದಲು ಗಾಬರಿಯಾದಂತೆ ಕಂಡುಬಂದಿತು.

ಸ್ತ್ರೀ ಶಿಕ್ಷಣ

ಲೇಖಕರು:— ಶ್ರೀ. ಕರಿಯಪ್ಪ ಹುಚ್ಚಣ್ಣನವರ, ಉಪಾಧ್ಯಕ್ಷ. ಜಿ. ಸ್ಕೂ. ಬೋರ್ಡ ಧಾರವಾಡ.

ನಮ್ಮ ಭಾರತ ರಾಷ್ಟ್ರದ ಸರ್ವಾಂಗಸುಂದರವಾದ ಉನ್ನತಿಯನ್ನು ಬಯಸುತ್ತಿರುವ ನಾವು ಒಂದು ಅತಿ ಮಹತ್ತ್ವರವಾದ ವಿಷಯವನ್ನು ಅಲಕ್ಷ್ಯಮಾಡುತ್ತಿರುವೆವೆಂದು ವಿಷಾದದಿಂದ ಹೇಳಬೇಕಾಗಿದೆ. ಪೂರ್ವಕಾಲದಲ್ಲಿ ನಮ್ಮ ಸ್ತ್ರೀಯರು ಸುಶಿಕ್ಷಿತರೂ ವಿದುಷಿಯರೂ ಆಗಿದ್ದರೆಂದು ಐತಿಹ್ಯವುಂಟು. ಅಂದಿನ ಸುಖ-ಶಾಂತಿಗಳಿಗೆ ಅದೊಳ್ಳೆ ಸಹಾಯಕವೂ ಆಗಿದ್ದಿತು. ಆಗಿನ ಸ್ತ್ರೀಯರು ಬಹು ಸುಯೋಗ್ಯ ಪತ್ನಿಯರೂ, ನಿಜವಾದ ಮಾತೆಯರೂ ಉತ್ತಮ ಗೃಹಸ್ಥಾಶ್ರಮದ ಸಹಾಯಕರೂ ಆಗಿದ್ದರು. ಅವರು ಸಾಮಾಜಿಕ ಸುಧಾರಣಾ ಕಾರ್ಯದಲ್ಲಿಯೂ ಕಂಕಣ ಬದ್ಧರಾಗಿರುತ್ತಿದ್ದರು. ಪ್ರಸಂಗವೊದಗಿದಾಗ ಬಿಚ್ಚುಗತ್ತಿಗಳನ್ನು ಹಿಡಿದು, ಗಂಡುಗಚ್ಚೆಯನ್ನು ತೊಟ್ಟು ರಣಭೂಮಿಗೂ ದುಮ್ಮಿಕ್ಕುತ್ತಿದ್ದರು.

ಗಾರ್ಗಿ ವಿದ್ಯೋತ್ತಮಾರಂತಹ ವಿದ್ಯಾಪಂಡಿತೆಯರೂ, ಕೌಸಲೆ ಸುನೀತಿ ಮಾತೆಯರಂತಹ ವಿದುಷಿಯರೂ, ಸೀತೆ, ಸಾವಿತ್ರಿ, ದಮಯಂತಿಯರಂತಹ ಪತಿವ್ರತೆಯರೂ; ಅಹಲ್ಯಾದೇವಿಯರಂತಹ ರಾಜನೀತಿ ಕುಶಲರೂ, ರಾಣಿ ದುರ್ಗಾವತೀದೇವಿ, ಲಕ್ಷ್ಮೀಬಾಯಿ, ಕಿತ್ತೂರ ಚೆನ್ನಮ್ಮರಂತಹ ವೀರ ವನಿತೆಯರೂ, ಮೀರಾದೇವಿಯಂಥ ಈಶ್ವರ ಭಕ್ತರೂ ನಮ್ಮ ನಾಡಿನಲ್ಲಿಯೇ ಜನಿಸಿ ಬಾಳಿ ಬದುಕಿದರು.

ಆದರೆ ಕಾಲಪರಿಸ್ಥಿತಿಯು ಒಂದೇ ತೆರವಾಗಿರುವದಿಲ್ಲ. ಗತಿ, ಅವಗತಿ, ಪ್ರಗತಿಗಳ ಜಗ್ಗಾಟದಲ್ಲಿ ನಾವೆಲ್ಲರೂ ಸಿಕ್ಕು ಗಿಜಿಬಿಜಿಯಾಗಬೇಕಾಗಿದೆ. ಮೇಲಿಂದ ಮೇಲೆ ಬದಲಾವಣೆಯನ್ನು ಹೊಂದುತ್ತಿರುವದು ಕಾಲದ ಮುಖ್ಯ ಲಕ್ಷಣ. ಇಂದಿನ ಎಳೆಗರುವೇ ನಾಳಿನ ಎತ್ತು. ನಿನ್ನೆ ಮಂಗಲಾಚರಣೆ ನಡೆಯುತ್ತಿದ್ದ ಮನೆಯಲ್ಲಿಯೇ ಇಂದು ಗೋಳಾಟದ ಅಮಂಗಳ ಸ್ಥಿತಿ. ಆದರೂ ನಮ್ಮ ಗತವೈಭವದ ಕಡೆಗೆ ಕಣ್ಣಿಟ್ಟು, ಮುಂದಿನದನ್ನು ಗುರುತಿಸುತ್ತ ಹೋಗುವದು ನಮ್ಮ ಕರ್ತವ್ಯವಾಗಿದೆ.

ಇದೇ ಭಾರತದಲ್ಲಿಯೇ ಹಿಂದೊಮ್ಮೆ ದೇಶ, ಧರ್ಮ, ಮತ್ತು ಸ್ತ್ರೀಜಾತಿಯ ಮೇಲೆ ಆಕ್ರಮಣಗಳು ಪ್ರಾರಂಭವಾದವು. ಸ್ತ್ರೀಯರ ಸತೀತ್ವವನ್ನು ಕಾಪಾಡಲು ಅನೇಕ ಉಪಾಯಗಳನ್ನು ಹುಡುಕಬೇಕಾಯಿತು. ಕನ್ಯೆಯರನ್ನು ಸುರಕ್ಷಿತಗೊಳಿಸಲು ಬಾಲ್ಯವಿವಾಹ, ಪರದಾ ಪದ್ಧತಿಗಳನ್ನು ಬಳಕೆಯಲ್ಲಿ ತರಬೇಕಾಯಿತು. ಆಗಿನ ಪರಿಸ್ಥಿತಿಯು ಅತಿ ಭಯಂಕರವಾದ ಅನಾಹುತದಿಂದ ಕೂಡಿದ್ದಾಗಿತ್ತು. ಆಗ್ಗೆ ಸ್ತ್ರೀಯರು ಮನೆಯಿಂದ ಹೊರಗೆ ಹೋಗುವದು ದುಸ್ತರವಾಗಿತ್ತು. ಆ ಬಿಕ್ಕಟ್ಟಿನ ಸಮಯದಲ್ಲಿ ಸ್ತ್ರೀ ವಿದ್ಯಾಭ್ಯಾಸವು ಪೂರ್ಣವಾಗಿ ನಿಂತು ಹೋಗಿತ್ತು. ಆಗ್ಗೆ ಸ್ತ್ರೀಯರನ್ನು ವಿವಾಹಬಂಧನದಿಂದ ಬಿಗಿದುಹಾಕಿ, ಅವರನ್ನು ಮನೆಯ ನಾಲ್ಕು ಗೋಡೆಗಳ ಪರಿಮಿತಿಯೊಳಗೆ ಕಾಯ್ದಿಡುವ ಪದ್ಧತಿಯುಂಟಾಯಿತು.

ಇತ್ತೀಚೆಗೆ ಹಿಂದುಸ್ಥಾನದ ಧಾರ್ಮಿಕ ರಾಜಕೀಯ ಪರಿಸ್ಥಿತಿ–ಗತಿಗಳಲ್ಲಿ ಮಹತ್ವದ ಬದಲಾವಣೆಗಳು ಆಗುತ್ತಲೇ ನಡೆದಿದ್ದರೂ ಬಾಲ್ಯವಿವಾಹ, ಪರದೆಯಪದ್ಧತಿ, ಸ್ತ್ರೀಯರ ವಿದ್ಯಾ ಸುಧಾರಣೆ ಮೊದಲಾದ ವಿಷಯಗಳಲ್ಲಿ ಮಾತ್ರ ಹೇಳಿಕೊಳ್ಳುವಂತಹ ಬದಲಾವಣೆಗಳಾಗಲಿಲ್ಲ;

ಮತ್ತು ಸ್ತ್ರೀಯರ ದುರವಸ್ಥೆಯು ಹಾಗೇ ಮುಂದುವರಿಯುತ್ತಲೇ ನಡೆದಿದೆ; ಸ್ತ್ರೀಶಿಕ್ಷಣದ ಕಾರ್ಯವಂತೂ, ಹಿಮ್ಮೆಟ್ಟುತ್ತಲೇ ಇದೆ; ಎಂದು ಹೇಳುವದೂ ಉಂಟು.

ಸ್ತ್ರೀಯರಿಗೆ ವಿದ್ಯಾಭ್ಯಾಸವು ಅತ್ಯವಶ್ಯವೆಂಬ ಮಾತಿನ ಬಗೆಗೆ ವಿಚಾರಶೀಲರಲ್ಲಿ ಮತಭೇದವಿಲ್ಲ. ಆದರೆ ಆ ಶಿಕ್ಷಣವು ಯಾವ ಕ್ರಮದ್ದಿರಬೇಕೆಂಬ ವಿಷಯದಲ್ಲಿ ಮಾತ್ರ ಮತಭೇದಗಳು ಕಂಡುಬರುತ್ತವೆ. ಭಾರತೀಯ ಮಹಿಳಾ ಪ್ರಪಂಚಕ್ಕೆ ಸರಿಹೊಂದುವ ಸುಸಂಸ್ಕೃತವಾದ ಶಿಕ್ಷಣದ ಮಟ್ಟನ್ನು ನಿರ್ದಿಷ್ಟಗೊಳಿಸುವದು ತುಂಬ ಕಷ್ಟದ ಮಾತು.

ನಮ್ಮ ಸ್ತ್ರೀಯರು ಸತೀಕ್ಷ್ಣದ ಮರ್ಮವನ್ನು ತಿಳಿದುಕೊಂಡು, ಉತ್ತಮವಾದ ಗೃಹಣಿಯರಾಗುವಂತೆ ಮಾಡುವ ಶಿಕ್ಷಣಕ್ರಮವು ಸರಿಯಾದುದೆಂದು ಸಾಮಾನ್ಯವಾಗಿ ಹೇಳಬಹುದು. ಈ ವಿಷಯದಲ್ಲಿ ಮದ್ರಾಸ ಇಲಾಖೆಯ ಸುವಿಖ್ಯಾತ ವಿದ್ಯಾವತಿಯರಾದ ಡಾ. ಮುಥುಲಕ್ಷ್ಮಿ ಅಮ್ಮಾಳ್ ಎಂಬವರು ಮದ್ರಾಸ್ ಸರಕಾರದಿಂದ ನೇಮಕವಾದ ಶಿಕ್ಷಣಸುಧಾರಣಾ ಸಮಿತಿಯ ಸದಸ್ಯಸ್ಥಾನದಲ್ಲಿದ್ದಾಗ ಒಂದು ಕಡೆ ತಮ್ಮ ಅಭಿಪ್ರಾಯವನ್ನು ಈ ರೀತಿಯಾಗಿ ಪ್ರಕಟಗೊಳಿಸಿದರು:—

"One great draw back of our educational system is the entire dissociation of religious teaching from education. The absence of religious teaching has deterred the Hindu parent from sending his girls to receive instructions at such schools as they do not like that they should be influenced by— Western ideals."

"ಧಾರ್ಮಿಕ ಶಿಕ್ಷಣವನ್ನು ವಿದ್ಯಾಭ್ಯಾಸಕ್ರಮದಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿರುವದು ಈಗಿನ ಶಿಕ್ಷಣಪದ್ಧತಿಯಲ್ಲಿಯ ಒಂದು ವಿಶೇಷವಾದ ದೋಷವಾಗಿರುತ್ತದೆ. ಹಿಂದೂ ಜನರು ವೇದ, ಶಾಸ್ತ್ರ ಮೊದಲಾದ ಧಾರ್ಮಿಕ ಗ್ರಂಥಗಳ ಪಠಣದಿಂದಲೇ ನಿಜವಾದ ಸಂಸ್ಕೃತಿಯನ್ನು ಪಡೆಯಬಹುದೆಂದು ಭಾವಿಸಿ ಧಾರ್ಮಿಕ ಶಿಕ್ಷಣ ಕ್ರಮವಿಲ್ಲದ ಶಾಲೆಗಳಿಗೆ ತಮ್ಮ ಹೆಣ್ಣು ಮಕ್ಕಳನ್ನು ಕಳಿಸಲಿಕ್ಕೆ, ಬಾಲಕಿಯರ ತಂದೆತಾಯಿಗಳು ಅನುಮಾನಿಸುತ್ತಾರೆ. ಇಂಥ ಶಾಲೆಗಳಿಗೆ ಹೋಗುವದರಿಂದ ತಮ್ಮ ಬಾಲಿಕೆಯರು ಪಾಶ್ಚಾತ್ಯ ಆದರ್ಶಗಳಿಗೆ ಒಳಗಾಗಿಬಿಡುವರೆಂದು ಅವರಿಗೆ ಭಯಕ್ಕಿಟ್ಟುಕೊಂಡುಬಿಟ್ಟಿದೆ."

ಡಾ. ಮುಥುಲಕ್ಷ್ಮಿಯವರ ವಿಚಾರದಂತೆ ನಮ್ಮ ಸ್ತ್ರೀಶಿಕ್ಷಣದ ಸಂಸ್ಥೆಗಳಲ್ಲಿ ಧರ್ಮದ ಪ್ರಧಾನ ತತ್ವಗಳನ್ನು ಕಲಿಸಿ, ಗೃಹಶಿಕ್ಷಣ, ಸಮಾಜಸೇವೆ ಮುಂತಾದ ಉಚ್ಚವಿಚಾರಗಳು ಬೆಳೆಯುವಂತೆ ಅವರನ್ನಲ್ಲಿ ತರಬೇತು ಮಾಡಬೇಕೆಂಬುದೇ ಮುಖ್ಯ ಮಾತು. ನಮ್ಮ ಭಾರತೀಯ ಭಗಿನಿಯರಲ್ಲಿ ಇತ್ತೀಚೆಗೆ ಶಿಕ್ಷಣಾಭಿರುಚಿಯು ಬೆಳೆಯುತ್ತಿರುವದು ಕಂಡುಬರುತ್ತಿದೆ. ಇಂಥ ವೇಳೆಯಲ್ಲಿಯೇ ಶಿಕ್ಷಣದ ಯೋಜನೆಯು ಭಾರತದ ನಡೆನುಡಿಗಳಿಗನುಗುಣವಾಗುವಂತೆ ರಚನೆಯಾಗಬೇಕು. ನಮ್ಮ ನಾಡಿನ ಏಳ್ಗೆಗೆ ಅನುಕೂಲವಾಗುವಂಥ ಶಿಕ್ಷಣವು ನಮ್ಮ ಭಾರತೀಯ ಭಗಿನಿಯರಿಗೆ ದೊರೆಯುತ್ತ ಹೋಗಲಿ; ಮತ್ತು ಸ್ತ್ರೀಸಮಾಜದಲ್ಲಿ ಶಿಕ್ಷಣಪ್ರೇಮವು ಭರದಿಂದ ಬೆಳೆಯಲಿ; ಎಂದು ಹಾರೈಸುತ್ತೇವೆ.

ಕನ್ನಡ ಬುಕ್ ಕಮಿಟಿಯವರಿಂದ ಮಂಜೂರಾದ ಪುಸ್ತಕಗಳು

ಟಪ್ಪಣಿ :—ಪ್ರಾ. ಪ್ರಾಥಮಿಕ; ಮಾ. ಮಾಧ್ಯಮಿಕ; ಟ್ರೇ. ಟ್ರೇನಿಂಗ್; ಶಿ. ಶಿಕ್ಷಕ; ವಿ. ವಿದ್ಯಾರ್ಥಿ; ವಾ. ವಾಚನಾಲಯ; ಶಾ. ಶಾಲೆ

ಆ. ಸಂ.	ಪುಸ್ತಕಗಳ ಹೆಸರುಗಳು	ಪ್ರಕಾಶಕರು	ಬೆಲೆ	ಏತಕ್ಕಾಗಿ ಮಂಜೂರಾಗಿವೆ
೧	ಅಷ್ಟಾಂಗ ಹೃದಯ ಅಥವಾ ವಾಗ್ಭಟ ಭಾಗ ೧ ೧ ನೆ ಆ. ೧೯೪೧	ಅನಂತಾಚಾರ್ಯ ಆದ್ಯ ವಿಜಾಪುರ	೫–೦–೦	ಪ್ರಾ. ಮಾ. ಟ್ರೇ. ಶಿ. ವಾ.
೨	ಶಿಕ್ಷಣ ಪ್ರಬೋಧಗಳು ೧ ನೆ ಆ. ೧೯೪೧	ಬೆಂಗಳೂರ ಪ್ರಿಂಟಿಂಗ್ ಆ್ಯಂಡ್ ಪಬ್ಲಿಸಿಂಗ್ ಕಂಪನಿ ಬೆಂಗಳೂರ	೦–೮–೦	ಸದರ ಟ್ರೇ. ವಿ. ವಾ.
೩	ವರ್ಧಾಯೋಜನೆ ಮತ್ತು ಸ್ತ್ರೀ ಶಿಕ್ಷಣ ೧ ನೆ ಆ. ೧೯೪೨	ಸಂಯುಕ್ತ ಕರ್ನಾಟಕ ಪ್ರೆಸ್ ಹುಬ್ಬಳ್ಳಿ	೦–೩–೦	ಟ್ರೇ. ವಿ. ವಾ.

ಪ್ರ ಕ ಟ ನೆ

ಶಿರ್ಶಿ ತಾಲೂಕ ಬನವಾಸಿಯಲ್ಲಿ ಹಾಗೂ ಕುಮಟಾ ತಾಲೂಕ ಬಂಕಿಕೊಡ್ಲದಲ್ಲಿಯ ಪೂರ್ಣ ಪ್ರಾಥಮಿಕ ಗಂಡುಮಕ್ಕಳ ಶಾಲೆಗಳನ್ನು ಅಗ್ರಿಕಲ್ಚರಲ್ ಬಾಯ್ಸು (ಶೇತಕೀ) ಶಾಲೆಗಳಾಗಿ ಪರಿವರ್ತಿಸಬೇಕಾಗಿಯೂ ಮತ್ತು ಅವುಗಳಿಗೆ ಹೊಂದಿ ಬ್ಯಾಕ್‌ವರ್ಡ ಕ್ಲಾಸ ಹಾಸ್ಟೆಲ್ಲ (ಹಿಂದುಳಿದ ವರ್ಗದವರ ಸಲುವಾಗಿ ವಿದ್ಯಾರ್ಥಿ ವಸತಿಗೃಹ) ಗಳನ್ನು ತೆರೆಯಬೇಕೆಂತಲೂ ಸ್ಕೂಲಬೋರ್ಡ ಮತ್ತು ಲೋಕಲ್ ಅಥಾರಿಟಿಯವರು ಠರಾಯಿಸಿದ್ದು ಬ್ಯಾಕ್‌ವರ್ಡಕ್ಲಾಸ ಹಾಸ್ಟೆಲ್‌ಗಳನ್ನು ತೆರೆಯುವದರ ಬಗ್ಗೆ ಸರಕಾರದವರು ಮಂಜೂರಿಕೊಟ್ಟಿದ್ದಾರೆ. ಹಾಗೂ ಶೇತಕೀ ಶಾಲೆಗಳ ಬಗ್ಗೆ ಮಂಜೂರಿ ಕೊಡುವದರಲ್ಲಿದ್ದಾರೆ. ಈ ವಸತಿಗೃಹಗಳಲ್ಲಿ ಹಿಂದುಳಿದ ವರ್ಗದ (ವಿಶಿಷ್ಟವಾಗಿ ಗುಡ್ಡಗಾಡು ಮತ್ತು ಮೂಲನಿವಾಸಿ ಈ ಉಪವರ್ಗಗಳಿಗೆ ಸೇರಿದ) ವಿದ್ಯಾರ್ಥಿಗಳನ್ನಷ್ಟೇ ಸೇರಿಸಿಕೊಳ್ಳಲಾಗುವದು. ಇಂಥ ವಿದ್ಯಾರ್ಥಿಗಳಿಗೆ ವಸತಿಗೃಹದಲ್ಲಿಯ ಊಟ ಮುಂತಾದ ಖರ್ಚಿನ ಬಗ್ಗೆ ಪ್ರತಿ ತಿಂಗಳಿಗೆ ೭ ರೂ. ಗಳಂತೆ ವಿದ್ಯಾರ್ಥಿ ವೇತನವನ್ನು ಕೊಡಮಾಡಿದೆ. ಮೇಲಿನ ಪ್ರತಿಯೊಂದು ಶಾಲೆಯಲ್ಲಿ ಕೊಡತಕ್ಕ ವಿದ್ಯಾರ್ಥಿವೇತನಗಳು ೩೦ ರ ವರೆಗೆ ಇರುವವು. ಮೇಲ್ಕಾಣಿಸಿದ ಜಾತಿ ವರ್ಗದ ನಾಲ್ಕನೇ ಇಯತ್ತೆಗೆ ಮೇಲ್ಪಟ್ಟ ಇಯತ್ತೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳನ್ನು ಹೆಚ್ಚಾಗಿ ಆರಿಸಲಾಗುವದು. ಈ ಅನುಕೂಲತೆ-

ಗಳನ್ನು ದೊರಕಿಸಿ ಕಲಿಯ ಬಯಸುವ ಇಂಥ ವಿದ್ಯಾರ್ಥಿಗಳು ತಮ್ಮ ಶಾಲಾ ಮಾಸ್ತರರ ವಿದ್ಯಮಾನ ಆ ಆ ಶಾಲೆಯ ಹೆಡ್ ಮಾಸ್ತರರಿಗೆ (ಬಂಕಿಕೊಡ್ಲ ಇಲ್ಲವೆ ಬನವಾಸಿ) ಕೂಡಲೇ ಅರ್ಜಿಮಾಡತಕ್ಕದ್ದು. ಮೂರನೇ ಹಾಗೂ ನಾಲ್ಕನೇ ಇಯತ್ತೆಗಳ ಮೇಲ್ಕಾಣಿಸಿದ ಜಾತಿಗಳ ವಿದ್ಯಾರ್ಥಿಗಳು ಸಹ ಅರ್ಜಿಮಾಡಬಹುದು. ಅರ್ಜಿಯಲ್ಲಿ ಈ ಮುಂದೆ ತೋರಿಸಿದ ಮಾಹಿತಿ ಇರಬೇಕು. ೧. ವಿದ್ಯಾರ್ಥಿಯ ಪೂರ್ಣ ಹೆಸರು. ೨. ಜಾತಿ (ಒಳಭೇದ ಸಹಿತ). ೩. ಜನ್ಮತಾರೀಖು. ೪. ಶಾಲೆಯಲ್ಲಿಯ ನಡತೆ. ೫. ಪ್ರಗತಿ. ೬. ಈಗ ಕಲಿಯುತ್ತಿರುವ ಶಾಲೆ. ೭. ಇನ್ನು ಮುಂದೆ ಕಲಿಯಲಿಚ್ಛಿಸುವ ಶಾಲೆ. (ಬಂಕಿಕೊಡ್ಲ ಅಥವಾ ಬನವಾಸಿ) ೮. ತಂದೆ ತಾಯಿಗಳ ಇಲ್ಲವೆ ಪಾಲಕರ ಉತ್ಪನ್ನ ಹಾಗೂ ಧಂದೆ. ೯. ಹೆಡ್ ಮಾಸ್ತರರ ಶರಾ.

ಕಾರಪಾರ,
ತಾ. ೧೪-೯-೧೯೪೩

Sd/ V. S. Nadkarny,
ಎ. ಆ. ಕಾನಡಾ.

ಪತ್ರಗಳ ಮುಖ್ಯಾಂಶಗಳು

ಮಾಸೂರು :— (ಧಾರವಾಡಜಿಲ್ಲೆ) ಶಾಲೆಯಲ್ಲಿ ೧೮-೭-೪೩ ನೆಯ ದಿವಸ ಈ ಭಾಗದ ಶಿ. ಶಿ. ಸಮ್ಮೇಲನವು ಅ. ಡೆ. ಎ. ಇ. ಅವರಾದ ಶ್ರೀ. **ಆಯ್. ಎಸ್. ಬಿದರಿ**ಯವರ ನೇತೃತ್ವದಲ್ಲಿ ಸಾಗಿತು. ಸಾಮೂಹಿಕ ಪ್ರಾರ್ಥನೆ, ಶಾರೀರಿಕ ಚಟುವಟಿಕೆ, ಮಾದರಿಯ ಪಾಠಗಳು, ಚರ್ಚೆ, ಶಿಕ್ಷಣೋಪಯುಕ್ತ ವಸ್ತುಗಳ ಪ್ರದರ್ಶನಗಳು ಜೆನ್ನಾಗಿದ್ದವು.

—ಶ್ರೀ. ಹ. ಪ. ಡಿಸಲೆ ಹೆ. ಮಾಸ್ತರ

ರಾಣೆಬೆನ್ನೂರು :— ಲೋ. ಬೋ. ಹಾಗು, ಗಾವಠಿ ಶಾಲೆಗಳ ಮತ್ತು ಇಲ್ಲಿಯ ಹಾಯಸ್ಕೂಲಿನ ವಿದ್ಯಾರ್ಥಿಗಳ ಶಾರೀರಿಕ ಚಟುವಟಿಕೆಗಳ ಪ್ರದರ್ಶನವು ೨೨-೭-೪೩ ನೆಯ ದಿವಸ ದ. ಭಾ. ದ. ಎ. ಇ. ಅವರಾದ ಡಾ. **ಕಾಮತರ** ಹಿರಿಯತನದಲ್ಲಿ ನಡೆಯಿತು.

ಈ ಭಾಗದ ಶಿ. ಶಿ. ಸಮ್ಮೇಲನವು ೨೪-೭-೪೩ ನೆಯ ದಿವಸ ಡೆ. ಎ. ಇ. ರಾದ ಶ್ರೀ. **ನಾಡಗೇರ** ಅವರ ಹಿರಿಯತನದಲ್ಲಿ ಸಾಗಿತು. ಬೀಟ ಆಫೀಸರರಾದ ಮೆ. **ಹಂದ್ರಾಳ** ಅವರು ಕಾರ್ಯದರ್ಶಿಗಳಿಗೆ ಸೂಚನೆ ಸಲಹೆಗಳನ್ನು ಕೊಡುತ್ತಿದ್ದರು. ಇಲ್ಲಿಯ ಹಾಯಸ್ಕೂಲಿನ ಶಿಕ್ಷಕರು ಪಾಠ ಕಲಿಸಿ ತೋರಿಸಿ ಸಹಕರಿಸಿದರು.

—ಶ್ರೀ. ಲಿ. ಗೋ. ಪವಾರ ಹೆ. ಮಾ. ೧ ನಂ. ಶಾಲೆ.

ಮುಂಕಣಿ :— (ಬಾಗಿಲುಕೋಟೆ ತಾಲೂಕು) ಈ ಭಾಗದ ಶಿ. ಶಿ. ಸಮ್ಮೇಲನವು ಮೆ. ೫ ನೆಯ ಆ. ಡೆ. ಎ. ಇ. ಅವರ ಹಿರಿಯತನದಲ್ಲಿ ಸಾಗಿತು. ವಿದ್ಯಾರ್ಥಿಗಳು ನೇಗಿಲಯೋಗಿ ಎಂಬ ಚಿಕ್ಕನಾಟಕವನ್ನು ಅಭಿನಯಿಸಿದರು. ಸಂಜೆಗೆ ಕ್ಯಾಂಪ್ ಫಾಯರ್ ಆಯಿತು.

—ಶ್ರೀ. ಸ. ಅ. ಕಾಚಕಟ್ಟಿ.

ಸದಲಗಿ :— (ಬೆಳಗಾವಿ ಜಿಲ್ಲೆ) ನಾಗಚತುರ್ಥಿಯ ದಿವಸ ಶಾಲೆಯಲ್ಲಿ ಊರ ಹಿರಿಯರು ಬಂದು ವಿದ್ಯಾರ್ಥಿಗಳ ಅಭ್ಯಾಸ ಆಟ-ವಿನೋದಗಳನ್ನು ಕಂಡು ಸಂತೋಷಭರಿತರಾದರು. ಸಬ್‌ಇನ್‌ಸ್ಪೆಕ್ಟರರಾದ ಶ್ರೀ. **ಹಿರೇಮಠ** ಅವರು ಆಟಿಗೆಗಳಿಗಾಗಿ ೧೦ ರೂಪಾಯಿಗಳನ್ನು ಕೊಟ್ಟರು. ಶ್ರೀ. **ಜಿ. ಎಮ್. ಹಾಲಪ್ಪನವರ** ಇವರು ೨ರೂ. ಕೊಟ್ಟಿದ್ದಲ್ಲದೆ ಶಾಸ್ತ್ರೀಯ ಉಪಕರಣಗಳಿಗಾಗಿ ೧೦ ರೂ. ಕೊಡುವದಾಗಿ ಮಾತು ಕೊಟ್ಟರು. ಶ್ರೀ **ವ್ಹಿ. ಆರ್. ಹಾಲಪ್ಪನವರ** ಇವರು ಪ್ರತಿವರ್ಷದಂತೆ ಪಾಟಿ-ಪುಸ್ತಕ-ವಸ್ತ್ರಗಳನ್ನು ಹಂಚಿದರು.

—ಶ್ರೀ. ನಾ. ಕೆ. ಕುಲಕರ್ಣಿ, ಹೆ. ಮಾ.

ಉಗಾರ :— (ಬೆಳಗಾವಿ ಜಿಲ್ಲೆ) ಶ್ರೀಮಾನ್ ಘಾಳಿ ಅವರ ಹಿರಿಯತನದಲ್ಲಿ ಶಾಲೆಯ ಬಾಲಕರು ಹಾಗು ಶಿಕ್ಷಕರು ಕೂಡಿ ಕಾವ್ಯಗಾಯನ ಮಾಡಿದರು. ಇರೋಜಿ ಅಣ್ಣಪ್ಪನಿಗೆ ೨ ರೂ. ಮೆಚ್ಚುಗೆಯು ದೊರೆಯಿತು. ಶಾಲೆಯ ಕೆಲಸಗಳಿಗಾಗಿ ಗ್ರಾ. ಪ. ಕಮೀಟಿಯವರು ೧೦ ರೂ. ಕೊಟ್ಟರು. ಊರ ಹಿರಿಯರು ಇಲ್ಲಿಯ ಶಾಲಾವಾಚನಾಲಯಕ್ಕೂ ನೆರವಾಗುತ್ತಲಿದ್ದಾರೆ.

—ಶ್ರೀ. ಮಿರ್ಜಿ ಅಣ್ಣಾರಾಯರು.

ಬಾದಾಮಿ :— ಕಳೆದ ಎರಡುವರ್ಷಗಳಲ್ಲಿ ೫೦ ಪ್ರೌಢಸ್ತ್ರೀಯರು ಸಾಕ್ಷರಿಗಳಾಗಿದ್ದಾರೆ. ಕಳೆದವರ್ಷ ಈ ವರ್ಗದಲ್ಲಿ ೩೦ ಹೆಂಗುಸರಿದ್ದರು. ಅವರೆಲ್ಲರೂ ತೇರ್ಗಡೆಹೊಂದಿರುವರು. ಈ ವರ್ಷ ೨೫ ಹೆಂಗುಸರು ಕಲಿಯುತ್ತಲಿದ್ದಾರೆ. ಈ ಊರಲ್ಲಿಯ ಹೆಣ್ಣುಮಕ್ಕಳ ವಾಚನಾಲಯವು ಚೆನ್ನಾಗಿ ಸಾಗಿದೆ.

—ಹೆಡ್‌ಮಿಸ್ಟ್ರೇಸ್‌ರು ಬಾದಾಮಿ.

ಗಳತಗಿ :— (ಬೆಳಗಾವಿ ಜಿಲ್ಲೆ) ೫-೮-೧೯೪೩ ನೆಯ ದಿವಸ ಶಾಲೆಯಲ್ಲಿ ಸಭೆ ನೆರೆಯಿತು. ಊರ ಹಿರಿಯರು ಬಂದಿದ್ದರು. ವಾರ್ಷಿಕ ಪರೀಕ್ಷೆಯಲ್ಲಿ ಮೊದಲನೆಯ ನಂಬರು ಬಂದ ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದೊಂದು ರೂಪಾಯಿಯಂತೆ ೬ ರೂ. ಗಳನ್ನು ಶ್ರೀಮಂತ ಚೌಗುಲೆ ಅಣ್ಣಾರಾಯರು ಕೊಟ್ಟರು. ಹರಿಜನ ಬಾಲಕರ ಉತ್ತೇಜನಕ್ಕಾಗಿ ಶ್ರೀ. ಪಿ. ಎಮ್. ಪಾಟೀಲರು ೫ ರೂ. ಕೊಟ್ಟರು.

—ಶ್ರೀ. ಶಿ. ಪಾ. ಬುರ್ಗೆ, ಹೆ. ಮಾ.

ಕಲಾಡಗಿ :— (ವಿಜಾಪುರ ಜಿಲ್ಲೆ) ೧೬-೮-೧೯೪೩ ನೆಯ ದಿವಸ ಉರ್ದು ಗಂಡುಮಕ್ಕಳ ಶಾಲೆಯಲ್ಲಿ ಮೆ। ಉರ್ದು ಅ. ಡೆ. ಎ. ಇ. ಅವರ ಹಿರಿಯತನದಲ್ಲಿ **ಪಾಲಕರ ದಿವಸ**ವನ್ನು ನೆರವೇರಿಸಲಾಯಿತು. ಆಗ ಇಲ್ಲಿಯ ಸಭ್ಯಗೃಹಸ್ಥರಾದ **ಜನಾಬ ಅಮೀರಸಾಬ ಸಾತಾರೆಕರ** ಇವರು ೬೦ ಬಡವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ವೆಚ್ಚದಿಂದ ಪೂರ್ಣ ಸಮವಸ್ತ್ರಗಳನ್ನು ಮಾಡಿಸಿಕೊಟ್ಟರು ಇದು ಅನುಕರಣೀಯವು.

—ಶ್ರೀ. ಎ. ಎಚ್. ಬಹಾದ್ದೂರ ಹೆ. ಮಾ.

ಬಸವನ ಬಾಗೇವಾಡಿಯಲ್ಲಿ :— ಪ್ರೌಢ ಸ್ತ್ರೀಯರ ಸಲುವಾಗಿ ಮನೆಯ ವರ್ಗವು ಆರಂಭವಾಗಿದೆ. ಕಳೆದವರ್ಷ ೪೦ ಹೆಂಗುಸರು ಸಾಕ್ಷರಿಗಳಾದರು. ಈ ವರ್ಷ ೫೦ ಹೆಂಗುಸರು ಇದರ ಲಾಭವನ್ನು ಹೊಂದುತ್ತಲಿದ್ದಾರೆ. ಹೆಣ್ಣುಮಕ್ಕಳ ಸಲುವಾಗಿ ಇಲ್ಲಿ ಒಂದು ವಾಚನಾಲಯವು ಆರಂಭವಾಗಿದೆ. ಅದಕ್ಕೆ ಶ್ರೀ. ಭೀಮರಾವ ಕುಲಕರ್ಣಿಯವರು ೧೦ ಪುಸ್ತಕಗಳನ್ನು ಕೊಟ್ಟಿದ್ದಾರೆ.

—ಶ್ರೀ. ನೀಲವ್ವ ಮಾಳವಾಡ ಅ. ಸಿ. ಮಿ.

ಗದಗಬೆಟಗೇರಿ :— ಸೆಂಟ್ರಲ್ ಗರ್ಲಸ್ಕೂಲಿನಲ್ಲಿ ೧೫-೮-೧೯೪೩ ನೆಯ ದಿವಸ ಸಭೆ ನೆರೆಯಿತು. ಬಹಳ ವಿದ್ಯಾರ್ಥಿನಿಯರ ಪಾಲಕರು ಬಂದಿದ್ದರು. ಜಾಣವಿದ್ಯಾರ್ಥಿನಿಯರಿಗೆ ಮೆಚ್ಚುಗೆಗಳನ್ನು ಕೊಡಲಾಯಿತು. ಶಿಕ್ಷಣಕ್ರಮ, ಹಾಗು ತಮ್ಮ ತೊಂದರೆ ಇವುಗಳಿಗಾಗಿ ಚರ್ಚೆಯು ನಡೆಯಿತು.

—ಶ್ರೀ. ಅಂಬಕ್ಕ ಬೇಂದ್ರೆ ಹೆ. ಮಿ.

ನಾಗಾವಿ :— (ಧಾರವಾಡ ಜಿಲ್ಲೆ) ಶಾಲೆಯ ವಿದ್ಯಾರ್ಥಿಗಳು ಹುಲಕೋಟಿಯ ಶಿ. ಶಿ. ಸಮ್ಮೇಲನದಲ್ಲಿ ತಾ. ೧-೮-೪೩ ನೆಯ ದಿವಸ ತೋರಿಸಿದ ಶಾರೀರಿಕ ಚಟುವಟಿಕೆ ಸಂಭಾಷಣೆ, ವಿನೋದಗಳಿಗಾಗಿ ಅಧ್ಯಕ್ಷರು ಸಿಫಾರಸು ಪತ್ರವನ್ನೂ ಐದು ರೂ. ಮೆಚ್ಚುಗೆಯನ್ನೂ ಕೊಟ್ಟಿದ್ದಾರೆ.

—ಶ್ರೀ. ಚ. ಭೀ. ಕಾಮುರಡ್ಡಿ, ಹೆ. ಮೂ.

ಬಾದಾಮಿ :— ಈ ಭಾಗದ ಶಿ. ಶಿ. ಸಮ್ಮೇಲನವು ೧೭-೮-೧೯೪೩ ನೆಯ ದಿವಸ ಮೆ. ೧೧ ನೆಯ ಅ. ಡೆ. ಎ. ಇ. ಅವರ ಹಿರಿಯತನದಲ್ಲಿ ಸಾಗಿತು. ವ್ಹಾಲಂಟರಿ ಶಾಲೆಗಳ ಶಿಕ್ಷಕರೂ ಊರ ಹಿರಿಯರೂ ಮುಲ್ಕೀಖಾತೆಯ ಅಧಿಕಾರಿಗಳೂ ಆಗಮಿಸಿ ಸಹಕಾರವಿತ್ತರು. ಪಾಠ, ಭಾಷಣ, ಶಾರೀರಿಕ ಚಟುವಟಿಕೆಗಳು ಆದನಂತರ ಶಿಕ್ಷಕರ ಸುಖದುಃಖ-ತೊಡಕು ತೊಂದರೆಗಳ ಸಮಾಲೋಚನೆಯನ್ನು ಮಾಡಲಾಯಿತು. ಈ ಸಮ್ಮೇಲನವು ಶಾಂತತೆ ಸುವ್ಯವಸ್ಥೆಗಳಿಂದ ಜರುಗಿ ಪರಿಣಾಮಕಾರಿಯಾಯಿತು.

—ಶ್ರೀ. ಸಿ. ಚ. ಪುರಾಣಿಕಮಠ ತಾಲೂಕಾಮಾಸ್ತರ, ಬಾದಾಮಿ

ಹಳ್ಳಿಕೇರಿ :— (ಧಾರವಾಡ ಜಿಲ್ಲೆ) ಅ. ಡೆ. ಎ. ಇ. ಶ್ರೀ. ಡಿ. ಎನ್. ಶಿರಸಂಗಿ ಅವರ ಉಪದೇಶದಿಂದ ಇಲ್ಲಿಯ ಹಿರಿಯರು ಮೂರುತಿಯ ಗುಡಿಯನ್ನು ಬಾಡಿಗೆಯಿಲ್ಲದೆ ಶಾಲೆಯ ಕೆಲಸಕ್ಕಾಗಿ ಕೊಟ್ಟಿರುವರು. ಊರಲ್ಲಿ ಪ್ರೌಢ ಶಿಕ್ಷಣ ವರ್ಗವೂ, ಶಾರದಾ ವಾಚನಾಲಯವೂ, ಶಾಲೆಯಲ್ಲಿ ರವೀಂದ್ರ ವಾಚನಾಲಯವೂ ಆರಂಭವಾಗಿವೆ.

—ಶ್ರೀ. ಎಲ್. ವ್ಹಿ. ಘಾಟಕ.

ಗಂಗಾಪುರ-ಖಾನಾಪುರ :— (ಧಾರವಾಡ ಜಿಲ್ಲೆ) ೫ ನೆಯ ಇಯತ್ತೆಯ ವಿದ್ಯಾರ್ಥಿಯಾದ ವಿ. ಚಿ. ಜನವೀರಗೌಡರ ಇವನು ತನಗೆ ಸಿಕ್ಕ ೨ ರೂ. ಗಳ ನೋಟುಗಳನ್ನು ನಮ್ಮ ಬಳಿಗೆ ತಂದುಕೊಟ್ಟನು. ಅವು ವೇ. ನಾಗಬಸಯ್ಯನವರವೆಂದು ಗೊತ್ತಾದ್ದರಿಂದ ಅವರಿಗೆ ಮುಟ್ಟಿಸಿದೆವು. ಈ ಹುಡುಗನ ಪ್ರಾಮಾಣಿಕತನವು ಆದರ್ಶವಾಗಿದೆ.

—ಶ್ರೀ ಲ. ಹ. ಉಗಲಾಟ ಹೆ. ಮೂ.

ನವಿಲಗುಂದ :— ಶಾಲಾ ಬಾಲಕರು ಸಾಮೂಹಿಕವಾಗಿ ಗಣಪತಿಯ ಉತ್ಸವವನ್ನು ತಾ. ೩-೯-೪೩ ರಿಂದ ಜರುಗಿಸಿದರು. ಶ್ರೀ. ಬಸವಲಿಂಗ ಸ್ವಾಮಿಗಳು, ಶ್ರೀ. ಜೋಶಿ ಕೃಷ್ಣಭಟ್ಟರು, ವೇ. ಶಂಕರ ಶಾಸ್ತ್ರಿಗಳು, ಅ. ಡೆ. ಎ. ಇ. ಶ್ರೀ. ಡಿ. ಎನ್. ಶಿರಸಂಗಿ ಅವರು, ಶ್ರೀ. ಸಿದ್ಧಾಂತಿ ವಕೀಲರು ಭಾಷಣವಿತ್ತರು. ಸಮಾರಂಭಕ್ಕೆ ಊರೊಳಗಿನ ಹಿರಿಯರೂ ಅಧಿಕಾರಿಗಳೂ ಬಂದಿದ್ದರು. ಸ್ಕೂ. ಬೋ. ಚೇಅರಮನ್ನರಾದ ಶ್ರೀ. ಏ. ಎಸ್ ಪಾಟೀಲ ಇವರು ಅಕಸ್ಮಾತ್ ದಯಮಾಡಿಸಿ ೧ ರೂ. ಮೆಚ್ಚುಗೆ ಕೊಟ್ಟರು.

—ಶ್ರೀ. ಕಾಲವಾಡ ಹೆ ಮೂ.

ಸಾಕ್ಷರಿಗಳಾದ ಪ್ರಬುದ್ಧರಿಗಾಗಿ

ದುರಾಶೆಯ ದುಷ್ಪರಿಣಾಮ

ಬಸಪ್ಪನೂ ಭೀಮಪ್ಪನೂ ಒರಗೆಯ ಗೆಳೆಯರು. ಲಂಗೋಟಿಯ ಗೆಳೆಯರು ಅನ್ನುತ್ತಾರಲ್ಲ ಹಾಗೆ. ಚಿಕ್ಕಂದಿನಿಂದಲೂ ಕೂಡಿ ಆಡಿ ಬೆಳೆದವರು. ಅವರಿಬ್ಬರೂ ಒಮ್ಮೆ ಏನೋ ಒಂದು ಕೆಲಸದ ಸಲುವಾಗಿ ನೆರೆಊರಿಗೆ ಹೊರಟಿದ್ದರು. ನಡುದಾರಿಯಲ್ಲಿ ಅವರಿಗೊಂದು ಹಳ್ಳವು ಹತ್ತಿತು. ಅಷ್ಟರಲ್ಲಿ ಮಧ್ಯಾಹ್ನವೂ ಆಗಿತ್ತು. ಬಿಸಿಲೇರಿ ನೆಲಕಾಯ್ದು ನೀರು ನೆಳಲುಗಳನ್ನು ಅರಸುವ ಹೊತ್ತಾಗಿತ್ತು. ಆದುದರಿಂದ ಅವರಿಬ್ಬರೂ ಹಳ್ಳದದಂಡೆಗೆ ಹೋಗಿ, ಅಲ್ಲಿರುವ ಒಂದು ಗಿಡದ ನೆರಳಿಗೆ ಕುಳಿತರು. ಆಮಾತು ಈಮಾತು ಆಡಿ ಊಟದ ಹೊತ್ತಾದದ್ದು ನೋಡಿ ರೊಟ್ಟಿಯ ಗಂಟು ಬಿಚ್ಚಿದರು. ಅದೇ ಹೊತ್ತಿಗ ದಾರಿಕಾರನೊಬ್ಬನು ಅಲ್ಲಿಗೆ ಬಂದನು.

ಬಸಪ್ಪನು ರೊಟ್ಟಿಯ ಗಂಟು ಬಿಚ್ಚಿ ನೋಡಿದನು. ಅದರಲ್ಲಿ ಮೂರೇ ರೊಟ್ಟಿಗಳಿದ್ದವು. ಭೀಮಪ್ಪನ ಗಂಟಿನಲ್ಲಿ ಐದು ರೊಟ್ಟಿಗಳಿದ್ದವು. ದಾರಿಕಾರನು ಅವರು ಊಟಕ್ಕೆ ಕುಳಿತಿರುವದನ್ನು ನೋಡಿ ಸಮೀಪಕ್ಕೆ ಬರಲು 'ಅಣ್ಣಾ, ಹೊತ್ತಾಗಿದೆ. ಇದ್ದುದನ್ನೇ ಮೂವರೂ ಹಂಚಿಕೊಂಡು ಊಟಮಾಡೋಣ' ಎಂದರು. ದಾರಿಕಾರನು 'ಅಣ್ಣಾ, ಅವಸರದ ಕೆಲಸಕ್ಕಾಗಿ ಮುಂಜಾವದಲ್ಲಿಯೇ ಹೊರಟು ಬರಬೇಕಾಯಿತು. ಮನೆಯಲ್ಲಿ ಇನ್ನೂ ಅಡಿಗೆಯಾಗಿರಲಿಲ್ಲ. ಅಷ್ಟೇಕೆ? ಅಡಿಗೆ ಮಾಡುವವಳೇ ಬೇನೆಯಿಂದ ಮಲಗಿದ್ದಾಳೆ' ಎನ್ನುತ್ತ ಹತ್ತಿರ ಬಂದನು. ಮೂವರೂ ದುಂಡಗೆ ಕುಳಿತು ಒಂದೊಂದೇ ರೊಟ್ಟಿಯನ್ನು ತೆಗೆದು ಸರಿಯಾಗಿ ಮೂರು ತುಂಡುಮಾಡಿ ಒಂದೊಂದು ತುಂಡು ಹಂಚಿಕೊಂಡು ಎಲ್ಲ ರೊಟ್ಟಿಗಳನ್ನು ತಿಂದರು.

ಬಸಪ್ಪನೂ ಭೀಮಪ್ಪನೂ ಇನ್ನೂ ಹರಟೆಯಾಡುತ್ತ ಕುಳಿತಿರುವಾಗಲೇ ದಾರಿಕಾರನು 'ಅಣ್ಣಾ, ಅವಸರದ ಕೆಲಸವಿದೆ. ನಿಮ್ಮ ತುತ್ತು ಕಸಿದು ಉಂಡ ನಾನು ಹಾಗೆಯೇ ಹೋಗಲಾರೆ. ಇಕೊಳ್ಳಿರಿ, ನಿಮ್ಮ

ಮಕ್ಕಳಿಗೆ ಏನಾದರೂ ತಿಂಡಿ ತಿನಸುಗಳನ್ನು ಒಯ್ಯಿರಿ' ಎಂದು ನುಡಿದು ಎಂಟು ಆಣೆಗಳನ್ನು ಕೊಟ್ಟು ಮತ್ತೊಮ್ಮೆ ಅವರ ಉಪಕಾರವೆಣಿಸಿ ನಡೆದನು.

ಭೀಮಪ್ಪನು ರೊಕ್ಕವನ್ನು ತಕ್ಕೊಳ್ಳಲು ಒಪ್ಪದಿರುವಾಗಲೇ, ದಾರಿಕಾರನು ಅವನ ಕೈಯಲ್ಲಿ ರೊಕ್ಕವನ್ನು ಹಾಕಿ ನಡೆದುಬಿಟ್ಟನು. ದಾರಿಕಾರನು ಅತ್ತ ದೂರ ಹೋದಬಳಿಕ ಭೀಮಪ್ಪನು 'ಅಣ್ಣಾ, ಇಕೋ ಮೂರಾಣೆಗಳು; ನಿನ್ನವು ಮೂರು ರೊಟ್ಟಿಗಳಿದ್ದುವಷ್ಟೇ. ನನ್ನವು ಐದು ರೊಟ್ಟಿಗಳಿದ್ದವು. ನಾನು ಐದಾಣೆ ಇಟ್ಟುಕೊಂಡಿದ್ದೇನೆ' ಎಂದನು. ಬಸಪ್ಪನು 'ಅದೇಕೆ? ನಾವು ಮೂವರೂ ಸರಿಯಾಗಿ ಹಂಚಿಕೊಂಡು ಉಂಡಿದ್ದೇವೆ, ರೊಕ್ಕವನ್ನೂ ಸರಿಯಾಗಿ ಹಂಚಿಕೊಳ್ಳಬಾರದೇಕೆ? ನನಗೆ ನಾಲ್ಕಾಣೆ ಬರಬೇಕು,' ಎಂದನು. ತಾಮ್ರದ ದುಡ್ಡು ತಾಯಿ ಮಕ್ಕಳನ್ನು ಕೆಡಿಸಿ ಅಗಲಿಸುವದಂತೆ. ಭೀಮಪ್ಪನೂ ಬಸಪ್ಪನೂ ಕಲಹಕ್ಕೇ ನಿಂತರು.

ನಾಲ್ಕಾಣೆ ಮೂರಾಣೆ ಎಂದು ಜಗಳ ನಡೆದಿರುವಾಗಲೇ ಮತ್ತೊಬ್ಬ ದಾರಿಕಾರನು ಅಲ್ಲಿಗೆ ಬಂದನು. ಅವನು ಸಮಾಚಾರವನ್ನೆಲ್ಲ ಕೇಳಿಕೊಂಡು ಮೂರು ರೊಟ್ಟಿಗಳನ್ನು ತಂದಿದ್ದ ಬಸಪ್ಪನು ಒಂದೇ ಆಣೆಯನ್ನು ತೆಗೆದುಕೊಂಡು ಸಮಾಧಾನ ಪಡಬೇಕೆಂದು ನಿರ್ಣಯ ಮಾಡಿದನು. ಅವನ ಲೆಕ್ಕವು ಈ ರೀತಿಯಾಗಿದ್ದಿತು:— "ಇಬ್ಬರೂ ಕೂಡಿ ತಂದಿದ್ದ ಎಂಟು ರೊಟ್ಟಿಗಳಲ್ಲಿ ಸರಿಯಾದ ಇಪ್ಪತ್ತುನಾಲ್ಕು ತುಂಡುಗಳಾದವು. ಮತ್ತು ಒಬ್ಬೊಬ್ಬರು ಎಂಟೆಂಟು ತುಂಡು ತಿಂದರು. ಬಸಪ್ಪನ ಮೂರು ರೊಟ್ಟಿಗಳಲ್ಲಿ ಒಂಬತ್ತು ತುಂಡುಗಳಾದವು. ಅವುಗಳಲ್ಲಿ ಅವನು ಎಂಟು ತುಂಡುಗಳನ್ನು ತಾನೇ ತಿಂದು ಒಂದು ತುಂಡು ಮಾತ್ರ ದಾರಿಕಾರನಿಗೆ ಕೊಟ್ಟಿದ್ದಾನೆ. ದಾರಿಕಾರನು ತಾನು ತಿಂದ ಎಂಟು ತುಂಡು ರೊಟ್ಟಿಗೆ ಸರಿಯಾಗಿ ಎಂಟಾಣೆ ಕೊಟ್ಟಿದ್ದಾನೆ."

ಮೂರಾಣೆಗಳನ್ನು ಕೊಡಲೊಪ್ಪಿದ ಭೀಮಪ್ಪನ ವಿರುದ್ಧ ನ್ಯಾಯ ಹೂಡಿದ ಬಸಪ್ಪನು ಒಂದೇ ಆಣೆ ತಕ್ಕೊಂಡು ತಣ್ಣಗಾಗಬೇಕಾಯಿತು. ಮೇಲಾಗಿ ಅವರವರ ಸ್ನೇಹವೂ ಕೆಟ್ಟುಹೋಯಿತು. ನಮ್ಮ ಹಳ್ಳಿಗಳಲ್ಲಿ ಹಲವು ಸಾರೆ ಹೀಗೆಯೇ ಅನರ್ಥವಾಗುವದಲ್ಲವೇ?

ಗಣಿತ ಶಿಕ್ಷಕ

★

೪೧೨ ಪುಟಗಳು ಬೆಲೆ ೧ ರೂ. ೫-೬-೭ನೆಯ ಇ. ಗಳಿಗಾಗಿ

೨-೩ ಕ್ಲಾಸುಗಳು ಒಬ್ಬ ಮಾಸ್ತರರ ಕಡೆಗೆ ಇರುವಂಥ ಶಾಲೆಗಳಲ್ಲಿ ಗಣಿತ ಶಿಕ್ಷಕವು ನಿಜವಾಗಿಯೇ ಗಣಿತ-ಶಿಕ್ಷಕನಾಗಿ ಸಹಾಯಕವಾಗಿಲ್ಲವೇ? ೧೦ವರ್ಷ ಅನುಭವ ತಕ್ಕೊಂಡವರಿಗೆ ಇದರ ಬಗ್ಗೆ ಹೆಚ್ಚಿಗೆ ವರ್ಣಿಸುವದು ಬೇಡ. ಇಷ್ಟರಲ್ಲಿಯೇ ಎಲ್ಲರ ಪ್ರೀತಿಗೆ ಪಾತ್ರವಾಗಿ ಅನೇಕಸಾರೆ ಮುದ್ರಣ ಹೊಂದಿದೆ. ಈಗಿನ ತುಟಾಗ್ರತೆಯ ಕಾಲದಲ್ಲಿ ವೆಚ್ಚಮಾಡಿದ ಹಣದಿಂದ ಬಹಳ ಲಾಭವಾಗಬೇಡವೇ?

ಕೊರತೆ ಇಲ್ಲ ಬೆಲೆ ಕಡಿಮೆ ವೆಚ್ಚವಿಲ್ಲದೆ ಪೂರೈಕೆ

ಪುಸ್ತಕಗಳು ಕರ್ನಾಟಕದ ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ದೊರೆಯುತ್ತವೆ. ದೊರೆಯುವದಿಲ್ಲೆಂದು ಅನಿಸಿದರೆ, ನಿಮಗೆ ಬೇಕಾಗುವಷ್ಟು ಪ್ರತಿಗಳ ಮೂಲಬೆಲೆಯನ್ನು ಮನಿಯಾರ್ಡರದಿಂದ ಕಳಿಸಿ ಪಾವತಿಗಳನ್ನು ಕಾಯ್ದಿರಿ. ಅವನ್ನು ತೆಗೆದುಕೊಂಡು ಯಾವ ವೆಚ್ಚವೂ ಇಲ್ಲದೆ ಪುಸ್ತಕ ಕೊಡುವಂತೆ ನಿಮ್ಮ ಸಮೀಪದ ಪುಸ್ತಕವ್ಯಾಪಾರಿಲ್ಲಿ ಇಲ್ಲವೆ ದೊಡ್ಡ ಶಾಲೆಲ್ಲಿ ವ್ಯವಸ್ಥೆಮಾಡಲಾಗುವದು. ಶಕ್ಯವಾದರೆ ನಿಮ್ಮ ಊರಿಗೇ ತಂದುಕೊಡಬಹುದು. ಹೆಚ್ಚಿನ ವಿವರಕ್ಕೆ ಬರೆಯಿರಿ.

ಬ. ದು. ಹಿರೇಮಠ, ಮಾಸ್ತರ ವಿಜಾಪುರ.

ಹೊಸ ಪುಸ್ತಕ! ಸರಕಾರದಿಂದ ಮಂಜೂರ! ಲಾಭ ಪಡೆಯಿರಿ!

ಹೊಸ ಪದ್ಧತಿಯ ಹಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತೆಗಳಿಗೆ ಟೆಕ್ಸ್ಟ ಬುಕ್ ಎಂದು ಮಂಜೂರ ಮಾಡಿರುವರು. ಇದರಲ್ಲಿ ಮನೆಯ ಜಮಾಖರ್ಚಿನ ವಿಷಯಗಳು ಸಂಪೂರ್ಣವಿರುವವಲ್ಲದೆ ಪ್ರಾ. ನೋಟು, ಹುಂಡಿ, ಚೆಕ್ಕು, ಮನಿಯಾರ್ಡರು ಮುಂತಾದ ವ್ಯವಹಾರುಪಯುಕ್ತವಾದ ಮಾಹಿತಿಗಳೂ ಇವೆ ಹೆಣ್ಣುಮಕ್ಕಳ ಮತ್ತು ಗಂಡುಮಕ್ಕಳ ಪ್ರಾ. ಶಾ. ಪ್ರ. ಸ. ಪರೀಕ್ಷೆಯ ಉಮೇದವಾರರಿಗೆ ಬಹು ಉಪಯುಕ್ತವಿದೆ.

ಬೆಲೆ: ೮ ಆಣೆ.

ಹೊಸ ಪದ್ಧತಿಯ ಆರಂಭದ ಜಮಾಖರ್ಚು

(ಕನ್ನಡ ೪ನೆಯ ಇಯತ್ತೆಯವರಿಗಾಗಿ)

ಸರಕಾರದವರು ಈ ಪುಸ್ತಕವನ್ನು ಮಂಜೂರ ಮಾಡಿದ್ದಾರೆ. ಮಂಜೂರಿ ನಂ ೧೯೯೦-೭೦-೪೫ ಇರುತ್ತದೆ. ಈ ಪುಸ್ತಕದಲ್ಲಿ ದಿನದ ವ್ಯವಹಾರಗಳ ಲೆಖ್ಖವನ್ನಿಡುವದು, ಶಾಲೆಯ ಸ್ಟೇಶನರಿ ಸಾಮಾನುಗಳ, ಸಹಕಾರಿ ಸಂಘದ ಅಂಗಡಿಯ ಲೆಖ್ಖ ಇಡುವದು, ವ್ಯವಹಾರುಪಯುಕ್ತವಾದ ಮಾಹಿತಿಗಳೂ ಪ್ರಶ್ನೆಗಳೂ ಅವುಗಳ ಉತ್ತರಗಳೂ ಇರುವವು. ಇದು ಸ್ಕಾಲರಶಿಪ್ ಪರೀಕ್ಷೆಯ ಉಮೇದುವಾರರಿಗೆ ಬಹು ಉಪಯುಕ್ತವಿರುತ್ತದೆ.

ಬೆಲೆ: ೩ ಆಣೆ

ಪತ್ರಿ: ರಾ. ಸಿ. ಸಜ್ಜನ, ಜೋರಾಪುರ ಪೇಟೆ, ವಿಜಾಪುರ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು **ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ** ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ವೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕವಿತಾಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ-ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ-ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು-ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕೆಯೂ ಸಮಾವೇಶವಾಗಿವೆ.)

ಕನ್ನಡ

ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ
೧.	ನಿವೇದನೆ	೧
೨.	ಟ್ರೇನಿಂಗ್ ಕಾಲೇಜದ ಚಟುವಟಿಕೆಗಳು	೨
೩.	ಶಾಂತಮೂರ್ತಿ ತೊರಗಲ್ ಹನುಮಂತರಾಯರು	೫
೪.	ರಾಷ್ಟ್ರೀಯ ಶಿಕ್ಷಣದ ಪುನರ್ಘಟನೆ	೬
೫.	ಮನುಷ್ಯನಿಗೆ ದೇವರು ಯಾಕೆ ಬೇಕು ?	೯
೬.	ಆಹಾರ ಮೀಮಾಂಸೆ	೧೦
೭.	ಹೆಣ್ಣುಮಕ್ಕಳ ಪ್ರಾ. ಶಾ. ಪ್ರ. ಪತ್ರ ಪರೀಕ್ಷೆ ೧೯೪೪	೧೩
೮.	ಮುಂಬಯಿ ಇಲಾಖೆಯಲ್ಲಿ ಶಿಕ್ಷಣ ಪ್ರಸಾರ	೧೪
೯.	ಭಾರತೀಯ ಸಂಪಾದಕ ಧುರೀಣ ರಾಮಾನಂದ ಚಟರ್ಜಿಯವರು ..	೧೯
೧೦.	ಮಾನವ ಯತ್ನ	೨೦
೧೧.	ಮಿಡಲ್ ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆ (೧೯೪೪)	೨೧
೧೨.	ಪತ್ರಗಳ ಮುಖ್ಯಾಂಶಗಳು	೨೪
೧೩.	ದೇವರು ಹೆಡ್ಡನೆ ? (ಸಾಕ್ಷರರಿಗಾದ ಪ್ರಬುದ್ಧರಿಗಾಗಿ)	೨೭

ವಾರ್ಷಿಕ ಚಂದಾ ಹಣ ನೂರಕ್ಕು ರೂಪಾಯಿಗಳು ಮಾತ್ರ.

Printed by V. Y. Jathar at the Karnatak Printing Works, Dharwar and Published by H. B. Umadi, Esq. M. A., Principal Training College For-Men Dharwar, at his Office. 6462-43-1365.

ಸುಂದರ ಮುದ್ರಣ ! ಸುಲಭ ಬೆಲೆ !! ಸ್ವಲ್ಪೇ ಪ್ರತಿಗಳಿವೆ !!! ತ್ವರೆಮಾಡಿರಿ !!!!

ಹೊಸ ವಿದ್ಯಾಸಪತ್ರಿಕೆಯನ್ನನುಸರಿಸಿ ಕನ್ನಡ ಹೆಣ್ಣುಮಕ್ಕಳ ೫-೬-೭ನೇ ಇಯತ್ತೆಗಳಿಗಾಗಿ ಬರೆಯಲ್ಪಟ್ಟಿದೆ.

ಶ್ರೀಬಸವನಕುಮಾರ ಕೃತ **ಗೃಹವಿಜ್ಞಾನಶಾಸ್ತ್ರ** ಅಥವಾ **ಗೃಹಶಿಕ್ಷಣದ ಕೈಗನ್ನಡಿ**

ಮುಂಬಯಿ ವಿದ್ಯಾಖಾತೆಯ ಪಠ್ಯಪುಸ್ತಕಮಂಡಲಿಯವರಿಂದ ಮಂಜೂರಾಗಿದೆ

ಗೃಹಿಣಿಯರಿಗೆ ಇದು ಕೈಗನ್ನಡಿಯಂತಿನೆ ಎಂದು ಅನೇಕ ಮಹಿಳೆಯರಿಂದಲೂ, ವಿದ್ವಾಂಸ ಮು-

ಖ್ಯರಿಂದಲೂ ಮನ್ನಣೆಹೊಂದಿನೆ. ಕೇವಲ ಹೆಣ್ಣುಮಕ್ಕಳ ಸಲುವಾಗಿ ಈ ಪುಸ್ತಕ ಬರೆಯಲ್ಪಟ್ಟಿದೆ.

ವಿದ್ಯಾರ್ಥಿನಿಯರು ಇದರ ಸಹಾಯದಿಂದ ಪಾಕಶಾಸ್ತ್ರವಲ್ಲದೆ, ಆರೋಗ್ಯಶಾಸ್ತ್ರ ಮುಂತಾದವುಗಳ ವಿ-

ಜ್ಞಾನವನ್ನು ತಿಳಿಕೊಳ್ಳಲು ಸುಲಭವಾಗಿದೆ. ಭಾವೀ ಗೃಹಿಣಿಯರಾಗಲಿರುವ ವಿದ್ಯಾರ್ಥಿನಿಯರ ಜೀವ-

ನವು ಸುಖಮಯವಾಗಬೇಕಾದರೆ ಗೃಹಶಿಕ್ಷಣವು ಬೇಕಲ್ಲವೇ ? ಹಾಗಾದರೆ ಅಂಥಹವೆಲ್ಲ ಈ ಗೃಹವಿಜ್ಞಾನ

ಶಾಸ್ತ್ರದಲ್ಲಿದೆ. ಬೇಕಾದವರು ಇಂದೇ ಕೆಳಗಿನ ವಿಳಾಸದಿಂದ ತರಿಸಿಕೊಂಡು ಅದರಲ್ಲಿರುವ ಏಳು ಶಾ-

ಸ್ತ್ರಗಳ ಮಹತ್ವವನ್ನು ತಿಳಿದುಕೊಳ್ಳಿರಿ.

ಒಂದು ಪ್ರತಿಗೆ ಬೆಲೆ ೮ ಆಣೆಗಳು (ವ್ಹಿ. ಪಿ. ವೆಚ್ಚ ಬೇರೆ)

ಪ್ರಕಾಶಕರು :—

ಪಶುಪತಯ್ಯ ಚಿನ್ನಯ್ಯ ಶಾಬಾದಿಮಠ, ಬುಕ್‌ಡಿಪೊ **ಗದಗ ಸಿಟಿ**

ವಿನಂತಿ

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಳುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. ಈ **ತ್ರೈಮಾಸಪತ್ರಿಕೆಯು** ಪ್ರತಿ ಮೂರು ತಿಂಗಳ ಕೊನೆಯ ವಾರದಲ್ಲಿ ಪ್ರಸಿದ್ಧ-ವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶರು, ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ ಉಪಕರಣಗಳನ್ನು ವಿಮರ್ಶೆಗಾಗಿ ಕಳಿಸಬಹುದು.

೪. ತಾವು ಪ್ರಕಟನೆಗಾಗಿ ಕಳುಹಿಸಿರುವ ಲೇಖನಗಳನ್ನು ತಿರುಗಿ ಪಡೆಯಲು ಅಪೇ-ಕ್ಷಿಸುವವರೂ ಅದರ ಪರಿಣಾಮವನ್ನು ಕೂಡಲೆ ತಿಳಿದುಕೊಳ್ಳಲಿಚ್ಛಿಸುವವರೂ ಅದಕ್ಕಾಗಿ ತಗಲುವ **ಅಂಚೆಯ ಚೀಟಿ**ಗಳನ್ನು ತಮ್ಮ ಲೇಖನದ ಸಂಗಡ ಕಳುಹಿಸಿಕೊಡಬೇಕು.

ಜಾಹಿರಾತಿನ ದರಗಳು

ಪುಟ	೧೨ ತಿಂಗಳುಗಳಲ್ಲಿ ನಾಲ್ಕು ಸಾರೆ	೬ ತಿಂಗಳುಗಳಲ್ಲಿ ೨ ಸಾರೆ	೩ ತಿಂಗಳುಗಳಲ್ಲಿ ಒಮ್ಮೆ
೧	೧೨ ರೂ.	೭ ರೂ.	೪ ರೂ.
½	೭ ರೂ.	೪ ರೂ.	೨½ ರೂ.
¼	೪ ರೂ.	೨½ ರೂ.	೧½ ರೂ.

ಕನ್ನಡ

ಪ್ರಾಥಮಿಕ ಶಿಕ್ಷಣ

ಸಂಪಾದಕರು:

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ಸಂಪುಟ ೮೨	ಅಕ್ಟೋಬರ-ನವಂಬರ-ಡಿಸೆಂಬರ ೧೯೪೬	ವರ್ಷ ೧೬ ಸಂ. ೭-೮-೯

ನಿವೇದನೆ

ಕಳೆದ ಅಕ್ಟೋಬರ ತಿಂಗಳಲ್ಲಿ ಶ್ರೀ. ತೊರಗಲ್ ಹನುಮಂತರಾಯರು ಸೇವಾನಿವೃತ್ತರಾದಂದಿನಿಂದ ಪ್ರಾಥಮಿಕ ಶಿಕ್ಷಣ ಪತ್ರಿಕೆಯ ಸಂಪಾದಕತ್ವದ ಹೊಣೆಯು ನಮ್ಮ ಮೇಲೆ ಬಂದಿರುವದು. ಸಂಪಾದಕರ ಸ್ಥಾನದಲ್ಲಿದ್ದ ವ್ಯಕ್ತಿಗಳು ಬದಲಾದರೂ ಪತ್ರಿಕೆಯ ಮೂಲ ಧೋರಣೆಯಲ್ಲಿ ಬದಲಾಗದಿರುವದು ಈ ಪತ್ರಿಕೆಯ ವೈಶಿಷ್ಟ್ಯವೆಂಬುದನ್ನು ನಮ್ಮ ವಾಚಕರು ಬಲ್ಲರು. ಪ್ರಾಥಮಿಕ ಶಿಕ್ಷಣ, ಶಿಕ್ಷಕರು, ವಿದ್ಯಾರ್ಥಿಗಳು, ಇವರ ಧೋರಣ, ಕಾರ್ಯಕ್ಷೇತ್ರ, ವಿಷಯಜ್ಞಾನ, ಇವುಗಳ ಹೊರಗೆ ಹೋಗದಿರುವ ಮುಖ್ಯ ಗುರಿಯನ್ನು ಮುಂದಿಟ್ಟುಕೊಂಡೇ ಇಂದಿನ ವರೆಗೆ ಈ ಪತ್ರಿಕೆಯು ನಡೆದು ಬಂದಿರುವದು. ಇನ್ನು ಮುಂದಾದರೂ ಈ ಮೂರು ಬಗೆಯ ಉದ್ದೇಶಗಳನ್ನು ಅನುಸರಿಸಿಯೇ ಇದು ನಡೆಯುವದು. ಕನ್ನಡ ನಾಡು ನುಡಿಗಳಿಗೂ ಇತಿಹಾಸ ಸಂಸ್ಕೃತಿ ಭಾವೀ ಉನ್ನತಿ ಇವುಗಳಿಗೂ ಸಂಬಂಧಿಸುವ ಲೇಖನಗಳಿಗೂ ಈ ಪತ್ರಿಕೆಯಲ್ಲಿ ಎಡೆಯಿದೆ. ನಮ್ಮ ಕಾರ್ಯ ಕ್ಷೇತ್ರಕ್ಕೆ ಒಳಗಾಗುವ ವಿಷಯಗಳ ಮೇಲೆ ಚಿಕ್ಕ ಕವನಗಳು ಬಂದರೂ ಅವನ್ನು ಆದರದಿಂದ ಸ್ವೀಕರಿಸುವೆವು.

ಪ್ರಕೃತದ ಮಹಾಯುದ್ಧದಿಂದುಂಟಾದ ಕಾಗದದ ಅಭಾವ ಮುದ್ರಣ ಕಾರ್ಯಗಳಿಗೆರುವ ವಿಧವಿಧದ ತೊಂದರೆ ಮುಂತಾದವುಗಳ ಮೂಲಕ ಮಾಸಪತ್ರಿಕೆಯು ತ್ರೈಮಾಸಿಕವಾಗಿ ಮಾರ್ಪಟ್ಟಿರುವ ಸಂದರ್ಭದಲ್ಲಿಯೇ ಅದರ ಸಂಪಾದಕತ್ವವು ನಮ್ಮ ಕೈಗೆ ಒದಗಿದುದು ತುಸು ವಿಷಾದದ ಮಾತು. ಆದುದರಿಂದ ಹೆಚ್ಚು ಮಹತ್ವದ ವಿಷಯಗಳನ್ನೇ ಆಯ್ದುಕೊಂಡು ಅದಷ್ಟು ಚಿಕ್ಕ ಲೇಖನಗಳನ್ನು ಬರೆದರೆ ಪ್ರಕಟನೆಗೆ ಹೆಚ್ಚು ಅನುಕೂಲವಾಗುವದು. ಲೇಖಕರಿಗೆ ಅಲ್ಪ ಸ್ವಲ್ಪ ಪುರಸ್ಕಾರವನ್ನು ಕೊಡುವ ಹಿಂದಿನ ಸಂಪಾದಕರ ವಿಚಾರವನ್ನು ನಾವೂ ಮರೆತಿಲ್ಲ. ಆದರೆ ಈ ಮಾತು ಪತ್ರಿಕೆಯ ಸಾಂಪತ್ತಿಕ ಸ್ಥಿತಿಯನ್ನೇ ಹೆಚ್ಚಾಗಿ ಅವಲಂಬಿಸಿದೆಯೆಂಬುದನ್ನು ಯಾರೂ ಮರೆಯುವಂತಿಲ್ಲ. ಲೇಖಕರೂ ವಾಚಕರೂ ಬೇರೆ ಬೇರೆ ಸ್ಕೂಲ್‌ಬೋರ್ಡುಗಳ ಅಧಿಕಾರಿಗಳೂ ಹಿಂದಿನಂತೆಯೇ ಸಹಕರಿಸಿ ನಾವು ಕೈಕೊಂಡ ಕಾರ್ಯದ ಹೊಣೆಗಾರಿಕೆಯ ಹೊರೆಯನ್ನು ಹಗುರುಮಾಡುವರೆಂದು ಆಶಿಸಿ ಜಗನ್ನಿಯಂತನಾದ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸಿ ಈ ಚಿಕ್ಕ ನಿವೇದನೆಯನ್ನು ಇಲ್ಲಿಗೆ ನಿಲ್ಲಿಸುವೆವು.

ಟ್ರೇನಿಂಗ್ ಕಾಲೇಜದ ಚಟುವಟಿಕೆಗಳು

೧. **ಪ್ರಬುದ್ಧರ ಶಿಕ್ಷಣವನ್ನು ಕೈಕೊಂಡ ಶಿಕ್ಷಕರ ವರ್ಗ.** ಪ್ರತಿ ವರ್ಷದಂತೆ ಈ ವರ್ಷವೂ ಟ್ರೇನಿಂಗ್ ಕಾಲೇಜದಲ್ಲಿ ಈ ವರ್ಗವು ನಡೆಯಿತು. ಜಳಿಗಾಲದ ಬಿಡುವಿನ ಕೊನೆಯ ಭಾಗದಲ್ಲಿ ಅಕ್ಟೋಬರ ತಿಂಗಳ ೧೩ನೆಯ ತಾರೀಖಿನಿಂದ ೧೩ನೆಯ ತಾರೀಖಿನ ವರೆಗೆ ೧೩ ದಿವಸ ಈ ವರ್ಗವು ಸಾಗಿತು. ಆರಂಭದಲ್ಲಿ ನಮ್ಮ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀಮಾನ್ ಅಝೂಜುದ್ದೀನಖಾನ ರವರು ಶಿಕ್ಷಕರಿಗೆ ಪ್ರೋತ್ಸಾಹಕರವಾದ ನಾಲ್ಕು ಉಪದೇಶವರ ಮಾತುಗಳನ್ನಾಡಿ ಕಾರ್ಯಾರಂಭ ಮಾಡಿದರು. ಈ ವರ್ಗಕ್ಕೆ ನಮ್ಮ ದ. ಭಾಗದೊಳಗಿನ ೫೮ ಶಿಕ್ಷಕರೂ ಇಬ್ಬರು ಶಿಕ್ಷಿಕೆಯರೂ ಬಂದಿದ್ದರು. ಪ್ರಬುದ್ಧರ ಶಿಕ್ಷಣಕ್ಕೆ ಸಂಬಂಧಿಸುವ ಬೇರೆ ಬೇರೆ ೨೨ ವಿಷಯಗಳ ಮೇಲೆ ತಜ್ಞರಾದ ಶಿಕ್ಷಕರೂ ಶಿಕ್ಷಣಾಧಿಕಾರಿಗಳೂ ಉಪನ್ಯಾಸಮಾಡಿದರು. ೧೦–೧೨ ಪ್ರತ್ಯಕ್ಷ ಪಾಠಗಳು ನಡೆದವು. ಪ್ರಬುದ್ಧರ ಶಿಕ್ಷಕರಿಗೆ ಬೇಕಾಗುವ ಶಿಕ್ಷಣೋಪಕರಣಗಳನ್ನು ತಯಾರಿಸಿಕೊಳ್ಳಲು ಅವಶ್ಯವಿರುವ ಎಲ್ಲ ಅನುಕೂಲತೆಗಳನ್ನೂ ಕಲ್ಪಿಸಿಕೊಡಲಾಗಿತ್ತು.

ಕೊನೆಯ ದಿನ ಧಾರವಾಡ ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀ ನಾಡಿಗೇರ ಸಾಹೇಬರು ತಮ್ಮ ವರದಿಯ ಕಾಲದಲ್ಲಿ ಈ ವರ್ಷದ ವರ್ಗದ ವೈಶಿಷ್ಟ್ಯವನ್ನು ಕುರಿತು ಒಂದೆರಡು ಹೆಚ್ಚಿನ ಮಾತುಗಳನ್ನು ಆಡಿದರು. ಅವು ಯಾವುವೆಂದರೆ— (೧) ಪ್ರಬುದ್ಧರ ಶಿಕ್ಷಣದಲ್ಲಿ ತೀವ್ರ ಗತಿಯನ್ನು ಕಲ್ಪಿಸಲು ಆವಶ್ಯಕವಿರುವ ಕೆಲವು ಹೊಸ ಮಾರ್ಗಗಳನ್ನು ಕಂಡು ಹಿಡಿಯಲು ಯತ್ನಿಸಲಾಯಿತು. (೨) ಹಳ್ಳಿಗಳಲ್ಲಿ ನಡೆಯುವ ಹಾಡುಗಳು ಆಟಪಾಟಗಳು ಹಳ್ಳಿಗಳಲ್ಲಿ ಹೇಳುತ್ತಿರುವ ಕಥೆ ಕೀರ್ತನೆ ಪುರಾಣಗಳು ಮುಂತಾದವುಗಳನ್ನು ಪ್ರಬುದ್ಧರ ಶಿಕ್ಷಣ ಕಾರ್ಯದಲ್ಲಿ ಹೇಗೆ ಉಪಯೋಗಿಸಿಕೊಳ್ಳಬಹುದೆಂಬ ವಿಚಾರ. (೩) ನಮ್ಮ ಇಲಾಖೆಯ ಉಳಿದ ಭಾಗಗಳಿಗಿಂತಲೂ ದ. ಭಾ. ದಲ್ಲಿ ಪ್ರಬುದ್ಧರ ಶಿಕ್ಷಣವನ್ನು ಕೈಕೊಂಡ ಕೆಲಸಗಾರರು ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಹೆಚ್ಚಾಗಿ ಹವಣಿಸಿ ಈ ಶಿಕ್ಷಣದ ವರ್ಗಕ್ಕೆ ಬರಲು ಹೆಚ್ಚು ಉತ್ಸಾಹವನ್ನು ತೋರಿಸಿರುವದು ಅನಂದ ಸಂಗತಿ ಇತ್ಯಾದಿ.

ಅಂದಿನ ಸಭೆಯ ಅಧ್ಯಕ್ಷರಾಗಿದ್ದ ನಮ್ಮ ಭಾಗದ ಅಸಿಸ್ಟಂಟ ಇನ್‌ಸ್ಪೆಕ್ಟರರಾದ ಶ್ರೀಮಾನ್ ಸಾನೆ ಸಾಹೇಬರು ಸಮಾರೋಪಣ ಕಾಲದಲ್ಲಿ ಕನ್ನಡದಲ್ಲಿ ಮಾತಾಡಿ ಶಿಕ್ಷಕರಿಗೆ ಹೆಚ್ಚು ಉತ್ಸಾಹಕರವಾದ ಹಲವು ಮಾತುಗಳನ್ನು ಪರ್ಯಾಲೋಚಿಸಿದರು. "ನಮ್ಮ ಭಾಗದಲ್ಲಿ ವಿಜಾಪುರ ಜಿಲ್ಲೆಯು ಬರಗಾಲದಿಂದ ಪೀಡಿತವಾಗಿದೆ. ಮಹಾಯುದ್ಧದ ಮೂಲಕ ಮಿಕ್ಕ ಜಿಲ್ಲೆಗಳ ಭವಣೆಯೂ ಚೆನ್ನಾಗಿಲ್ಲ. ಹಾಗಿದ್ದರೂ ನೀವೆಲ್ಲರೂ ಉತ್ಸಾಹದಿಂದ ಈ ವರ್ಗಕ್ಕೆ ಒಂದುದು ನಿಮ್ಮ ಕರ್ತವ್ಯ ತತ್ಪರತೆಯ ದ್ಯೋತಕವಾಗಿದೆ. ನಾವು ಕೊಟ್ಟ ಬುದ್ಧಿ ನಿಮ್ಮ ಕೈಗಂಟಾಗಿರಲಿ. ಸಮಯೋಚಿತವಾಗಿ ಅದನ್ನು ಉಪಯೋಗಿಸಿಕೊಳ್ಳಿರಿ. ನೀವು ಕತ್ತಲೆಯಲ್ಲಿ ದಾರಿ ನಡೆಯ ಬೇಕಾಗಿದೆ. ಮಹಾಯುದ್ಧದಿಂದುಂಟಾದ ಎಣ್ಣೆಯ ತುಟಾಗ್ರಹ ದಿಂದ ನಿಮ್ಮ ದಾರಿಯ ಕತ್ತಲೆ ಇನ್ನಷ್ಟು ಹೆಚ್ಚಿದೆ. ನಿಮ್ಮ ಅಂತಃಕರಣದ ಆಸ್ಥೆ ಆಸಕ್ತಿ ಇವುಗಳ ಬೆಳಕಿನಲ್ಲಿಯೇ ನಿಮ್ಮ ಕಾರ್ಯರಂಗವು ಬೆಳಗಬೇಕಾಗಿದೆ. ನಮ್ಮ ದೇಶದ ಕೋಟ್ಯವಧಿ ಸಂರಕ್ಷಿತಗಳನ್ನು ನೆನೆದರೆ ಮನಸ್ಸು ಮರುಗುವದು; ಕಣ್ಣಲ್ಲಿ ನೀರು ತುಂಬಿ

ವದು. ನೀವು ಕೈಕೊಂಡ ಕಾರ್ಯದಲ್ಲಿ ನಿಮಗೆ ತಕ್ಕಷ್ಟು ಪ್ರತಿಫಲವು ದೊರೆಯಲಿ; ನೀವು ಜಾತಿಕೋತಿಗಳನ್ನೆಲ್ಲ ಮೆಗೆತು ನೀತಿವಂತ ಶಿಕ್ಷಕ ಜಾತಿಯವರಾಗಿ ಹಳ್ಳಿಗಳಲ್ಲಿ ಕೆಲಸಮಾಡಿ ನಿಮಗೂ ನಿಮ್ಮ ದೇಶಕ್ಕೂ ಹಿತವಂತರಾಗಿರಿ. ನೀವು ಓದಿರಿ; ನಿಮ್ಮ ವಿದ್ಯಾರ್ಥಿಗಳ ಮುಂದೆ ಓದಿ ತೋರಿಸಿರಿ. ಅವರನ್ನೂ ಓದಲಿಕ್ಕೆ ಹಚ್ಚಿರಿ. ಇದನ್ನು ನೀವು ಕೈಕೊಂಡಿರುವ ಪ್ರಬುದ್ಧರ ಶಿಕ್ಷಣದ ಪ್ರಗತಿಗೂ ಶ್ರೇಯಸ್ಸಾಧನೆಗೂ ಕಾರಣವಾದ ಮೂಲ ಸೂತ್ರವೆಂದು ನಂಬಿರಿ. ಇತ್ಯಾದಿ."

ಈ ವರ್ಗಕ್ಕೆ ಬಂದ ಪ್ರಬುದ್ಧರ ಶಿಕ್ಷಣಕಾರ್ಯವನ್ನು ಕೈಕೊಂಡ ಕೆಲಸಗಾರ ಶಿಕ್ಷಕರು ಕೂಡ ತುಂಬ ಉತ್ಸಾಹದಿಂದ ಕೆಲಸ ಮಾಡಿ ತಮ್ಮ ಮುಂದಿನ ಕಾರ್ಯಕಲಾಪಗಳಿಗೆ ತಕ್ಕಷ್ಟು ಪೂರ್ವ ಸಂಗ್ರಹವನ್ನು ಮಾಡಿಕೊಂಡರೆಂದು ಹೇಳಲು ಅಡ್ಡಿಯಿಲ್ಲ. ಅವರೂ ಒಂದೆರಡು ಪಾಠಗಳನ್ನು ಕಲಿಸಿ ತೋರಿಸಿದರು. ಕೊನೆಯ ದಿನದ ಸಭೆಯಲ್ಲಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಅಂದಿನ ಸಭೆಯಲ್ಲಿ ರಾಮತಾಳ (ತಾ. ಕಲಘಟಗಿ) ಶಾಲೆಯ ಶಿಕ್ಷಕರಾಗಿದ್ದ ದಸ್ತಗೀರ ಸಾಹೇಬ ಎಂಬವರು ಹಾಡಿದ ಈ ಕೆಳಗಿನ ಚಿಕ್ಕ ಕವನವು ಪ್ರಬುದ್ಧರಿಗೆ ಪ್ರಚೋದಕವಾಗಿದೆ.

ಅವ್ಹೊ ಮೇರೆ ಭಾಯಿ ಬಹಿನೋ | ಸಾಲ ಸಿಖನೇಕು ಜಲದಿ-
ಕಬ್ ತಕ್ ತುಮ್ ಸಾಲ್ ಸಿಖತೆ ನಹಿಹ್ಯೆ | ಜನ್ಮ ಬೇಕಾರ ಹ್ಯೆ ಖುವಾಬಾ ||
ಸಾರೆ ವಖ್ತುಪರ್ | ಖಾಲಿ ಬೈಠಕರ್ | ದಿನ್ ಗವಾತೇ ಹ್ಯೆ | ಸಬ್ ಲೋಗ್
ಚಲಿ ಆಕರ್ ಸಾಲ ಸಿಖಕರ್ ಆದಮಿ ಬನ್ ಜಾವ್ಹೊ | ಪ್ಯಾರೋ.

೨. ಶಿಕ್ಷಣ ಸಪ್ತಾಹ

ಮುಂಬಯಿ ಕರ್ನಾಟಕದ ಮಾಧ್ಯಮಿಕ ಶಿಕ್ಷಕರು ಕೈಕೊಂಡ ಶಿಕ್ಷಣ ಸಪ್ತಾಹದ ೧೧ನೆಯ ಅಧಿವೇಶನವು ಈ ಸಾರೆ ಅಕ್ಟೋಬರ ತಿಂಗಳ ೧೮-೧೯-೨೦ ತಾರೀಖುಗಳಲ್ಲಿ ನಮ್ಮ ಟ್ರೇನಿಂಗ್ ಕಾಲೇಜದ ಆವರಣದಲ್ಲಿ ಯಶಸ್ವಿಯಾಗಿ ಜರುಗಿತು. ಸಾಂಗಲಿಯ ವಿಲಿಂಗ್ಡನ್ ಕಾಲೇಜದ ಪ್ರಿನ್ಸಿಪಾಲರಾದ ಶ್ರೀಮಾನ್ ಗೋಕಾಕ ವಿನಾಯಕರಾಯರು ಅಧ್ಯಕ್ಷರಾಗಿದ್ದರು. ಅವರ ಆರಂಭ ಭಾಷಣವು ಇಂಗ್ಲೀಷಿನಲ್ಲಿದ್ದು ವಿಸ್ತಾರವಾಗಿದೆ. ಅದರಲ್ಲಿ ಅವರು ಕರ್ನಾಟಕ ವಿಶ್ವವಿದ್ಯಾಲಯದ ಆವಶ್ಯಕತೆಯನ್ನೂ ಮಾಧ್ಯಮಿಕ ಶಿಕ್ಷಣದ ತೊಡಕು ತೊಂದರೆಗಳನ್ನೂ ಚೆನ್ನಾಗಿ ವಿವರಿಸಿದ್ದಾರೆ. ಸಪ್ತಾಹದಲ್ಲಿ ಮಾದರಿಯ ಪಾಠ, ಭಾಷಣ, ಪ್ರಬಂಧವಾಚನ, ಶೈಕ್ಷಣಿಕ ಉಪಕರಣ ಪುಸ್ತಕ ಮೊದಲಾದವುಗಳ ಪ್ರದರ್ಶನ ಇವೆಲ್ಲವೂ ಜನ್ನಾಗಿದ್ದುವು. ಕರ್ನಾಟಕ ವಿಶ್ವವಿದ್ಯಾಲಯ ಮುಂತಾದ ಹಲವು ಮಹತ್ವದ ವಿಷಯಗಳ ಮೇಲೆ ಗೊತ್ತುವಳಿಗಳನ್ನು ಮಾಡಿ ಯೋಗ್ಯ ಅಧಿಕಾರಿಗಳ ಕಡೆಗೆ ಕಳುಹಿಸಲಾಯಿತು.

ಕೊನೆಯ (೨೦ನೆಯ ತಾ.) ದಿನದ ನಾಲ್ಕಾರು ತಾಸು ಅವಧಿಯನ್ನು ಪ್ರಾಥಮಿಕ ಶಿಕ್ಷಣದ ಬಗ್ಗೆ ವೀಸಲಾಗಿಟ್ಟಿದ್ದರು. ಈ ಅವಧಿಯಲ್ಲಿ ಮೂರು ನಾಲ್ಕು ಮಾದರಿಯ ಪಾಠಗಳಾದುವಲ್ಲದೆ ನಾಲ್ಕು ಪ್ರಬಂಧಗಳ ವಾಚನವೂ ನಡೆಯಿತು. ಆ ಕಾಲದಲ್ಲಿ ಶ್ರೀಮಾನ್ ಗೋಕಾಕ ಅವರು ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷಣದ ಮುಖ್ಯಾಂಶಗಳನ್ನು ನಮ್ಮ ಶಿಕ್ಷಕರಿಗೆ ವಾಚನಾರ್ಹವಾಗಿರುವ ಮಟ್ಟಿಗೆ ಇಲ್ಲಿ ಕೊಡಲಾಗಿದೆ.

"ಮಹನೀಯರೇ, ಮಹಿಳೆಯರೇ, ಪ್ರಾಥಮಿಕ ಶಿಕ್ಷಣದ ಬಗೆಗೆ ವಿಚಾರ ಮಾಡಿದಾಗಲೆಲ್ಲ ನನಗೆ ನನ್ನ ಹಿಂದಿನ ದಿನಗಳು ನೆನಪಾಗುತ್ತವೆ. ಈಗ ೫೫-೬೦ ವರುಷಗಳ ಹಿಂದೆ ಶಾಲೆಗಳಲ್ಲಿ ಕಲಿಸುವದಕ್ಕಿಂತ ಹೊಡೆಯುವದೇ ಹೆಚ್ಚಾಗಿತ್ತು. ಶಾಲೆಯ ವಿಷಯದಲ್ಲಿ

ಮಕ್ಕಳಿಗೆ ಇರುವ ಪ್ರೀತಿ ವಿಶ್ವಾಸ ಅಭಿಮಾನಗಳಿಗಿಂತಲೂ ಹದರಿಕೆಯೇ ಹೆಚ್ಚಾಗಿತ್ತು. ಶಾಲೆಗೆ ಬರುವದಕ್ಕಿಂತ ತಪ್ಪಿಸುವದರ ಕಡೆಗೇ ಅವರ ಒಲವು ಹೆಚ್ಚು. ಆ ಕಾಲದ ಕೆಲವು ದೃಶ್ಯಗಳನ್ನು ನಾನು ಬರೆದ 'ಇಜ್ಜೋಡು' ಮೊದಲಾದ ಪುಸ್ತಕಗಳಲ್ಲಿ ಚಿತ್ರಿಸಿದ್ದೇನೆ. ಶಿಕ್ಷಕರು ವಿದ್ಯಾರ್ಥಿಗಳ ವಿಚಾರ ಶಕ್ತಿಯನ್ನು ಬೆಳಿಸುವದಕ್ಕಿಂತ ಪುಸ್ತಕ ಪಾಂಡಿತ್ಯಕ್ಕೆ ಮಹತ್ವಕೊಟ್ಟು ಗಿಳಿಪಾಠ ಮಾಡಿಸುವದರಲ್ಲಿಯೇ ತಮ್ಮ ಶಕ್ತಿಯನ್ನೆಲ್ಲ ಕಳೆಯುತ್ತಿದ್ದರು. ಅದುದರಿಂದ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಶ್ರಮವೂ ಕಾಲವೂ ವ್ಯರ್ಥವಾಗಿ ಹೋಗುತ್ತಿದ್ದುವು. ಆಗಿನ ಕಾಲದ ಪಠ್ಯಪುಸ್ತಕಗಳೂ ತಕ್ಕುವಾಗಿರಲಿಲ್ಲ. ಅವುಗಳಲ್ಲಿ ಸಾಹಿತ್ಯದ ವಾಸ್ತವಿಕತೆಗೆ ಅಷ್ಟೊಂದು ಮಹತ್ವವಿರಲಿಲ್ಲ. ಇಂತಹ ಅನನುರೂಪ ವಿಷಯಗಳನ್ನೊಳಗೊಂಡ ಗದ್ಯಪದ್ಯಭಾಗಗಳನ್ನು ಗಿಳಿಯಂತೆ ಓದಿ, ನಂತರ ಮನೋಹರವಾದ ಇಂಗ್ಲೀಷು ಸಾಹಿತ್ಯದ ಅಭ್ಯಾಸ ಮಾಡಿದವರಲ್ಲಿ, ಮಾತೃಭಾಷೆಯ ಅನಾದರವೂ ಇಂಗ್ಲೀಷಿನಲ್ಲಿ ಅಭಿರುಚಿಯೂ ಹುಟ್ಟಿದ್ದು ಆಶ್ಚರ್ಯವಲ್ಲ. ಈಗ ಕಾಲವು ಬದಲಾಗಿದೆ. ಹೊಸ ಸಾಹಿತ್ಯವು ಮುಂದೆ ಬಂದಿದೆ. ಇದು ಇಂಗ್ಲೀಷ ಸಾಹಿತ್ಯವನ್ನು ಅರಗಿಸಿಕೊಂಡಿದೆ. ಇಂತಹ ಹೊಸ ಗದ್ಯಪದ್ಯ ಭಾಗಗಳನ್ನು ಬಲ್ಲವರು ಇಂಥ ಸಭೆಸಮ್ಮೇಲನಗಳಲ್ಲಿ ಕಲಿಸಿ ತೋರಿಸಬೇಕು, ಉಳಿದ ಶಿಕ್ಷಕರು ಅದರ ಅನುಕರಣ ಮಾಡಬೇಕು. ಹೀಗೆ ಮಾಡಿದರೆ ನಮ್ಮ ಪ್ರಾಂತದಲ್ಲಿಯೂ ತೇಜಸ್ವಿಗಳಾದ ಮಕ್ಕಳು ಬೆಳೆದುಬರುವರು. ಅವರು ತಮ್ಮ ಪ್ರಾಥಮಿಕ ಶಿಕ್ಷಣದ ನಾಲ್ಕೈದು ವರ್ಷಗಳು ಹಾಳಾದುವೆಂದು ಎಂದೂ ತಿಳಿಯಲಿಕ್ಕಿಲ್ಲ. ಮಕ್ಕಳ ದೇಹ, ಮನಸ್ಸುಗಳು ಚೆನ್ನಾಗಿ ರೂಪಗೊಳ್ಳುವ ಮೊದಲೇ ಅವರನ್ನು ಪಾಲಕರು ಪ್ರಾ. ಶಿ. ರ ಬಳಿಗೆ ಕಳಿಸುವರು. ಅವರಲ್ಲಿ ಜೀವಕಳೆಯನ್ನು ತುಂಬುವ ಕೆಲಸವನ್ನು, ಬಲು ಸೂಕ್ಷ್ಮವಾದ ಕೆಲಸವನ್ನು, ತಾವು ಮಾಡಬೇಕಾಗುತ್ತದೆ. ಈ ಮಕ್ಕಳಿಂದ ಮುಂದಿನ ಕಾಲದಲ್ಲಿ ಮಹತ್ಕಾರ್ಯಗಳಾಗತಕ್ಕವಿವೆ. ಅವರ ತನುಮನಗಳ ಸೂತ್ರಧಾರಿಗಳು ನೀವು.

ಇಂದು ಮಾದರಿಯ ಪಾಠಗಳನ್ನು ಕಲಿಸಿ ತೋರಿಸಿದವರಿಗೂ ಪ್ರಬಂಧಗಳನ್ನು ಓದಿ ತೋರಿಸಿದವರಿಗೂ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಶ್ರೀ. ಕುಂಬಾರ ಅವರು ಕೈಕೆಲಸದ ಅಗತ್ಯವನ್ನು ಮಾರ್ಮಿಕವಾಗಿ ಹೇಳಿದ್ದಾರೆ. ಶ್ರೀ. ಸಂಸಿ ಅವರು ಕತೆಯ ಮಹತ್ವವನ್ನೂ ಶ್ರೀ. ಶೇಲಾರ ಅವರು ಭಾಷಾಶಿಕ್ಷಣವನ್ನೂ ಚೆನ್ನಾಗಿ ಹೇಳಿದ್ದಾರೆ. ಶ್ರೀ. ಕಟ್ಟಿಯವರು ಪ್ರೌಢಶಿಕ್ಷಣವನ್ನು ತುಂಬ ಪ್ರೌಢವಾಗಿಯೇ ತಿಳಿಸಿದ್ದಾರೆ. "ಶಾಲೆಗೆ ಬರುವ ೧೦೦ ಕ್ಕೆ ೧೦ ರಷ್ಟು ಬಾಲಕರಿಗೆ ಮೊದಲು ಕಲಿಸಬೇಕೊ, ನಿರಕ್ಷರಿಗಳಾದ ೧೦೦ಕ್ಕೆ ೯೦ರಷ್ಟು ಪಾಲಕರಿಗೆ ಮೊದಲು ಕಲಿಸಬೇಕೊ" ಎಂದು ಅವರು ಎತ್ತಿದ ಪ್ರಶ್ನೆಯು ನಿಜವಾಗಿಯೂ ನಮ್ಮೆಲ್ಲರಲ್ಲಿಯೂ ಕಳವಳವನ್ನುಂಟುಮಾಡಿದೆ. ಎಲ್ಲರಿಗೂ ಕಲಿಸಬೇಕೆಂದು ನಾನು ಅನ್ನುತ್ತೇನೆ. ಆದರೆ ಈಗ ನಮ್ಮ ದೇಶದಲ್ಲಿ ಬಡತನವು ತುಂಬಿತುಳುಕುತ್ತಲಿದೆ. ಹಾಲು, ಜೇನು ತುಪ್ಪಗಳ ನದಿಗಳು ಹರಿಯುತ್ತಿದ್ದ ಈ ನಾಡಿನಲ್ಲಿ ಈಗ ಕಣ್ಣೀರಿನ ನದಿಯು ಹರಿಯುತ್ತಿದೆ. ಹೊರಗೆ ಯುದ್ಧವು ಪ್ರಬಲವಾಗುತ್ತಿರುವದರಿಂದ ಇನ್ನು ರಕ್ತದ ನದಿಗಳೂ ಹರಿಯಬಹುದು. ಹೀಗೆ ಹೊಟ್ಟೆಗೆ ಇಲ್ಲದಿರುವ ಕಾಲದಲ್ಲಿ ಆಹಾರದ ಪ್ರಶ್ನೆಯನ್ನು ಬದಿಗಿಟ್ಟು ಶಿಕ್ಷಣದ ಪ್ರಶ್ನೆಯನ್ನು ಮುಂದೆಮಾಡಿ ಇಂತಹ ಸಭೆಸಮ್ಮೇಲನಗಳನ್ನು ನೆರವೇರಿಸುವದು ಯೋಗ್ಯವೇ? ಇದೂ ಒಂದು ಪ್ರಶ್ನೆಯಾಗಿದೆ. ಅನ್ನದೇವರ ಮುಂದೆ ಇನ್ನು ದೇವರು ಇಲ್ಲ. ಯಾವ ದೇವರು ಬಂದರೂ ಬಡವರಿಗೆ ರಾಗೀ ಬೀಸುವದು ತಪ್ಪುವದಿಲ್ಲ. ಈಗ ರಾಗಿಯೂ ಸಿಕ್ಕುವದಿಲ್ಲ. ಪರದೇಶಗಳಲ್ಲಿ ಕೂಲಿಕಾರರ ದಿನದ ಗಳಿಕೆಯು ಎರಡು ಮೂರು ರೂಪಾಯಿ ಇರುವಾಗ ನಮ್ಮಲ್ಲಿ ಎರಡು ಮೂರು ಪೈ ಸಹ ಇಲ್ಲದೆ, ಅನ್ನವಿಲ್ಲದೆ ಪ್ರಾಣಬಿಡುವ ಸಾವಿರಾರು

ಜನರನ್ನು ನೋಡಿದರೆ ನಾವು ಬಾಲಕರಿಗೆ ಕಲಿಸಬೇಕೋ, ನಿರಕ್ಷರಿಗಳಾಗಿ ದೇಶದ ತುಂಬ ತುಂಬಿದ ಈ ಪಾಲಕರಿಗೆ ಕಲಿಸಬೇಕೋ ತಿಳಿಯದಾಗಿದೆ. ರಾಜಕೀಯ ಸ್ಥಿತಿಯು ಉತ್ತಮವಾಗಿ, ಸಾಮಾಜಿಕ ಆರ್ಥಿಕ ಬೆಳವಣಿಗೆಗಳಾಗಿ ಸುದಿನಗಳು ಬಂದಾಗ ಎಲ್ಲವನ್ನೂ ಮಾಡೋಣ. ಮತ್ತೊಂದು ಬಗೆಯಾಗಿ ವಿಚಾರಮಾಡಿ ನೋಡಿದರೆ ಎಲ್ಲರೂ ಸಾಕ್ಷರರಾಗುವದು ಅವಶ್ಯವಿದೆಯೇನು? ಸಮಾಜದಲ್ಲಿ ತಮ್ಮ ಜೀವನವನ್ನು ಹೇಗೆ ನಡೆಯಿಸಬೇಕೆಂಬುದನ್ನು ತಿಳಿದುಕೊಂಡು ಶೀಲವಂತರಾಗಿದ್ದರೆ ಸಾಲದೆ? ಕಲಿತವರು ನಿರಕ್ಷರಿಗಳಿಗೆ ಓದಿ ತೋರಿಸಿ ತಿಳಿಸಿ ಹೇಳಲಿ. ಸಾಕ್ಷರತೆಯೇ ಸುಶಿಕ್ಷಿತತೆಯ ಲಕ್ಷಣವೇ? ಎಂಬ ವಿಚಾರಗಳೂ ಮುಂದೆ ಬರುತ್ತಲಿವೆ. ಪ್ರಾಥಮಿಕ ಶಿಕ್ಷಕರು ಬಹಳವಾಗಿ ಹಳ್ಳಿಗಳಲ್ಲಿಯೇ ಇದ್ದಾರೆ. ಹಳ್ಳಿಗಳು ನಮ್ಮ ದೇಶವೆಂಬ ಪುರುಷನ ರಕ್ತಾಣುಗಳು. ಹಳ್ಳಿಗಳ ಉದ್ಧಾರವು ತಮ್ಮನ್ನೆ ಅವಲಂಬಿದೆ. ಈ ಸಪ್ತಾಹದಲ್ಲಿ ತಾವೆಲ್ಲರೂ ಇಷ್ಟೊಂದು ಬಗೆಯಾಗಿ ಆಸ್ಥೆಯಿಂದ ಸಹಕರಿಸಿದ್ದು ಆನಂದಕರವು."

ಶಾಂತಮೂರ್ತಿ ತೊರಗಲ್ ಹನುಮಂತರಾಯರು

ಕಳೆದ ಎರಡು ಎರಡೂವರೆ ವರ್ಷಗಳಿಂದಲೂ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಾಗಿದ್ದ ಶ್ರೀ. ತೊರಗಲ್ ಹನುಮಂತರಾಯರು ಕಳೆದ ನೊವ್ಹೆಂಬರ ತಿಂಗಳಲ್ಲಿ ಸೇವಾನಿವೃತ್ತರಾದರಷ್ಟೇ? ಆ ಸಂದರ್ಭದಲ್ಲಿ ಟ್ರೇನಿಂಗ್ ಕಾಲೇಜ ಮತ್ತು ಪ್ರ್ಯಾಕ್ಟಿಸಿಂಗ್ ಸ್ಕೂಲುಗಳ ಶಿಕ್ಷಕರೂ ಕಾಲೇಜದ ವಿದ್ಯಾರ್ಥಿಗಳೂ ಅವರನ್ನು ಬಹು ಕೃತಜ್ಞತೆಯಿಂದ ಸನ್ಮಾನಿಸಿ ಬೀಳ್ಕೊಟ್ಟರು. ಸಭೆ ಆಟನೋಟಗಳು ವಿನೋದೋಲ್ಲಾಸಗಳು ಮೊದಲಾದ ವಿವಿಧ ಕಾರ್ಯಕಲಾಪಗಳು ನಡೆದುವು. ಅವರನ್ನು ಬೀಳ್ಕೊಡುವ ಸಮಾರಂಭದೊಡನೆಯೇ ಕಾಲೇಜದ ವಿದ್ಯಾರ್ಥಿಗಳು ನಡೆಯಿಸಿದ ವಾರ್ಷಿಕ ಸಮಾರಂಭವೂ ಸಮಾವೇಶನಾಗಿದ್ದುದರಿಂದ ಎಲ್ಲ ಕಾರ್ಯಕ್ರಮಗಳು ಇನ್ನಷ್ಟು ಆಕರ್ಷಕವಾಗಿ ನಡೆದುವು.

ಶ್ರೀ. ತೊರಗಲ್ ಹನುಮಂತರಾಯರು ಹುಟ್ಟಿದ ಊರು ಕೊಲ್ಹಾಪುರ ಸಂಸ್ಥಾನದೊಳಗಿನ ತೊರಗಲ್ ಎಂಬ ಹಳ್ಳಿ. ಅಲ್ಲಿ ಅವರು ೧೮೮೮ನೆಯ ಇಸ್ವಿಯ ನೊವ್ಹೆಂಬರ ತಿಂಗಳ ೧೫ನೆಯ ತಾರೀಖಿನ ದಿನ ಹುಟ್ಟಿದರು. ಬಾಲ್ಯದಲ್ಲಿಯೇ ತಾಯ್ತಂದೆಗಳ ವಿಯೋಗವಾಗಲು ಬೆಳಗಾವ ಜಿಲ್ಲೆಯೊಳಗಿನ ಹುದಲಿಯ ದೇಶಪಾಂಡೆಯವರ ಮನೆತನಕ್ಕೆ ಸೇರಿದ ತಮ್ಮ ಭಾವ ವೆಂಕಟರಾವ್ ದೇಶಪಾಂಡೆಯವರ ಆಶ್ರಯಕ್ಕೆ ಬಂದು ನಿಲ್ಲಬೇಕಾಯಿತು. ಕನ್ನಡ ಐದು ಇಯತ್ತೆಗಳು ಮಾಧ್ಯಮಿಕ ಶಿಕ್ಷಣ ಇವನ್ನು ಬೆಳಗಾಂವಿಯಲ್ಲಿ ಮುಗಿಸಿಕೊಂಡು ಮುಂದಿನ ಅಭ್ಯಾಸಕ್ಕಾಗಿ ಮುಂಬಯಿಯ ವಿಲ್ಸನ್ ಕಾಲೇಜಕ್ಕೆ ಹೋದರು. ಇತಿಹಾಸ ಮತ್ತು ಅರ್ಥಶಾಸ್ತ್ರಗಳನ್ನು ಮುಖ್ಯ ವಿಷಯಗಳನ್ನಾಗಿ ಆರಿಸಿಕೊಂಡು ೧೯೧೦ನೆಯ ಇಸ್ವಿಯ ಡಿಸೆಂಬರ ತಿಂಗಳಲ್ಲಿ ಬಿ. ಎ. ಪರೀಕ್ಷೆಯಲ್ಲಿ ಪಾಸಾದರು. ೧೯೧೧ನೆಯ ಇಸ್ವಿಯ ಜನವರಿ ತಿಂಗಳಲ್ಲಿ ಬೆಳಗಾಂವಿಯ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ನಿಯಮಿಸಲ್ಪಟ್ಟರು. ೧೯೧೩ನೆಯ ಇಸ್ವಿಯಲ್ಲಿ ಎಸ್. ಟಿ. ಸಿ. ಡಿ. ಆದ ಬಳಿಕ ಧಾರವಾಡ ಹೈಸ್ಕೂಲಿಗೆ ಬಂದರು. ಅಲ್ಲಿ ಕೆಲಸ ಮಾಡುತ್ತಿರುವಾಗಲೆ ಹೆಚ್ಚಿನ ಅಭ್ಯಾಸವನ್ನು ನಡೆಯಿಸಿ ಎಮ್. ಎ. ಪದವಿಯನ್ನು ಪಡೆದರು. ಧಾರವಾಡ ಹೈಸ್ಕೂಲಿನಲ್ಲಿ ೧೪ ವರ್ಷ ವಿಜಾಪುರ ಹೈಸ್ಕೂಲಿನಲ್ಲಿ ಹನ್ನೆರಡು

ವರ್ಷ ಕೆಲಸಮಾಡಿ ಒಳ್ಳೆಯ ಶಿಕ್ಷಕರೆಂದು ಹೆಸರಾದ ಬಳಿಕ ಧಾರವಾಡದ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿಯೂ ಸ್ಕೂಲ್‌ಬೋರ್ಡಿನ ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾಗಿಯೂ ಕೆಲಕಾಲ ಕೆಲಸಮಾಡಿದ ಮೇಲೆ ಕಾರವಾರದ ಸ್ಕೂ. ಬೊ. ಎಡ್ಮಿನಿಸ್ಟ್ರೇಟಿವ್ಹ ಆಫೀಸರರಾಗಿ ವರ್ಗಾಯಿಸಲ್ಪಟ್ಟರು. ೧೯೪೧ನೆಯ ಇಸ್ವಿಯ ಜೂನ್ ತಿಂಗಳಲ್ಲಿ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಾಗಿ ಬಂದಿದ್ದರು.

ತಾವು ಕಲಿಸಬೇಕಾದ ವಿಷಯವನ್ನು ಕೂಲಂಕಷವಾಗಿ ಅಭ್ಯಾಸಮಾಡಿಕೊಂಡು ಅಡೆತಡೆಗಳಿಲ್ಲದೆ ವಿದ್ಯಾರ್ಥಿಗಳ ಹೃದಯಕ್ಕೆ ನೇರವಾಗಿ ಸೇರುವಂತೆ ಪಾಠ ಹೇಳುವ ಕಲೆಯು ತೊರಗಲ್ ರಾಯರಿಗೆ ಸಂಪೂರ್ಣವಾಗಿ ಸಾಧಿಸಿತ್ತು. ಶಿಕ್ಷಕರಾಗಿರುವಾಗಲೂ ಅಧಿಕಾರದ ಸ್ಥಾನದಲ್ಲಿರುವಾಗಲೂ ಇವರು ಶಾಂತತೆಯೇ ಮೈವೆತ್ತು ಬಂದಿರುವದೋ ಎನ್ನುವಷ್ಟು ಶಾಂತರಾಗಿರುತ್ತಿದ್ದರು. 'ಕೆಡಕಾಗಲಿ' ಎಂದರೆ 'ನಮ್ಮ ವೈರಿಗಳಿಗೂ ಬೇಡ,' ಎನ್ನುವಷ್ಟು ದಯಾಶೀಲರಿವರು. 'ಹಿತವಾಗಲಿ' ಎಂದರೆ 'ನಿಮಗಾಗಲಿ, ನಮಗಾಗಲಿ ಸರ್ವರಿಗೂ ಆಗಲಿ' ಎನ್ನುವಂಥ ವಿಶಾಲಹೃದಯವಿವರದು. ಸದಾಶಾಂತ, ಸದಾತೃಪ್ತಿ, ಸದಾಸದ್ವಿಚಾರ ಇವುಗಳಿಂದ ಇವರು ಯಾವಾಗಲೂ ಸಂತೋಷಚಿತ್ತರಾಗಿರುತ್ತಿದ್ದರು. ಯಾರನ್ನೂ ನೋಯಿಸೆನು, ಯಾರದೂ ಒಂದು ಕವಡೆಯೂ ನನಗೆ ಬೇಡ ಆದರೆ ನನ್ನಿಂದ ನಾಲ್ಕು ಜನರಿಗೆ ಉಪಕಾರವಾಗಲಿ ಎನ್ನುವ ಸಾಭುವೃತ್ತಿಯಿಂದ ತೊರಗಲ್‌ರಾಯರು ಸಕಲರ ಪ್ರೀತಿಗೆ ಪಾತ್ರರಾಗಿದ್ದರು. ಸರಕಾರದ ಅಧಿಕಾರದಲ್ಲಿರುವಾಗ ಅಧಿಕಾರಪ್ರಿಯತೆಯ ಪೀಠದಲ್ಲೇರಿ ಕುಳಿತಿದ್ದವರಿಗೆ ನೇವಾನಿವೃತ್ತರಾದ ಬಳಿಕ ಎಡಬಿಡಜು ಅನಿಸಿ ಹೊತ್ತೇ ಹೋಗದಂತಾಗುವದುಂಟು. ಆದರೆ ತೊರಗಲ್‌ರಾಯರು ಈ ವರ್ಗಕ್ಕೆ ಸೇರಿದವರಲ್ಲ; ತೀರ ಸಾದಾ ಜೀವನದ ಶಾಂತಿಮೂರ್ತಿಗಳೆನಿಸಿದ ಇವರಿಗೆ ವಿಶ್ರಾಂತಿಯ ಕಾಲವು ನಿಜವಾದ ವಿಶ್ರಾಂತಿಗೆ ಕಾರಣವಾಗುವದೆಂಬುದರಲ್ಲಿ ಸಂದೇಹವಿಲ್ಲ. ದೇವರು ಅವರಿಗೆ ದೀರ್ಘಾಯುಷ್ಯವನ್ನೂ, ಆರೋಗ್ಯವನ್ನೂ ದಯಪಾಲಿಸಲೆಂದೂ, ವಿಶ್ರಾಂತಿಯ ಕಾಲದಲ್ಲಿ ಅವರ ವಿದ್ವತ್ತೆ ಕಾರ್ಯಾಸಕ್ತಿಗಳು ಕನ್ನಡನಾಡಿನ ಸಂಸ್ಕೃತಿಗೆ ಪೋಷಕವಾಗಲೆಂದೂ ಹಾರೈಸುವೆವು.

ರಾಷ್ಟ್ರೀಯ ಶಿಕ್ಷಣದ ಪುನರ್ಘಟನೆ

ಮಹಾಯುದ್ಧದ ತರುವಾಯ ಆಗಬೇಕಾದ ಹಿಂದುಸ್ತಾನದ ಪುನರ್ಘಟನೆಯ ವಿಷಯದ ಬೇರೆ ಬೇರೆ ವಿಚಾರಗಳು ಅಲ್ಲಲ್ಲಿ ಎತ್ತಿ ಆಡಲ್ಪಡುತ್ತಿವೆ. ಬ್ರಿಟಿಷ ಹಿಂದುಸ್ತಾನದ ಪ್ರಜೆಗಳೆಲ್ಲರೂ ಸಾಕ್ಷರಿಗಳಾಗಬೇಕು. ಹೈಸ್ಕೂಲು ವಿಶ್ವವಿದ್ಯಾನಿಲಯಗಳ ಪುನರ್ಘಟನೆಯಾಗಬೇಕು. ಇವೇ ಮೊದಲಾದ ವಿಚಾರಗಳನ್ನೊಳಗೊಂಡ ಮಿ. ಸಾರ್ಜಂಟರವರು ತಯಾರಿಸಿದ ಸೂಚನಾ ಪತ್ರಿಕೆಯ ವಿಚಾರವು ಅವುಗಳಲ್ಲೊಂದಾಗಿದೆ. ಮಿ. ಸಾರ್ಜಂಟ ಇವರು ಹಿಂದುಸ್ತಾನ ಸರಕಾರದ ವಿದ್ಯಾಖಾತೆಯ ಸಲಹೆಗಾರರು. ಶೈಕ್ಷಣಿಕ ವಿಚಾರಗಳಲ್ಲಿ ಹಿಂದುಸ್ತಾನವು ಇನ್ನುಳಿದ ಸುಶಿಕ್ಷಿತ ರಾಷ್ಟ್ರಗಳ ದರ್ಜೆಗೆ ಏರಬೇಕೆಂಬ ವಿಚಾರವು ಉತ್ಸಾಹಿಗಳಾದ ಭಾರತೀಯರು ಬಯಸುವ ಒಂದು ಮಹತ್ವದ ಮಾತಲ್ಲವೆ? ಮಿ. ಸಾರ್ಜಂಟ ಇವರ ಸೂಚನಾಪತ್ರಿಕೆಯಿಂತೆ ಕಾರ್ಯಾರಂಭವಾದರೆ ಆ ದಾರಿಯಲ್ಲಿ ನಾವು ಮೊದಲನೆಯ ಹೆಜ್ಜೆಯನ್ನಿಟ್ಟಂತಾಗುವದು,

ಮಿ. ಸಾರ್ಜಂಟರವರು ಈ ಎಲ್ಲ ವಿಚಾರಗಳನ್ನು ಈಗಾಗಲೆ ಹೊಸದಾಗಿ ಎತ್ತಿ ಆಡಿರುವರೆಂದಲ್ಲ. 'ಮಧ್ಯವರ್ತಿ ಸರಕಾರದ ಸಲಹೆಗಾರ ಮಂಡಲದವರು ಆಗಾಗ ವಿಮರ್ಶಿಸಿದ ವಿಚಾರಗಳನ್ನೆಲ್ಲ ಒತ್ತಟ್ಟಿಗೆ ಸಂಗ್ರಹಿಸಿ ಪುನರ್ವಿಚಾರಕ್ಕೆ ಮಂಡಿಸಿರುವದಿಷ್ಟೇ ತಾವು ಮಾಡಿದ ಕೆಲಸ' ಎಂದು ಅವರು ಒಪ್ಪಿಕೊಂಡಿದ್ದಾರೆ. ಈ ಸೂಚನಾ ಪತ್ರಿಕೆಯನ್ನು ಮೊನ್ನೆ ಮೊನ್ನೆ ಡೆಹರಾಡೂನದಲ್ಲಿ ಕೂಡಿದ ಮಧ್ಯವರ್ತಿ ಸರಕಾರದ ಸಲಹೆಗಾರ ಮಂಡಲದವರು ವಿಮರ್ಶಿಸಿ ನೋಡಿ ಅದರ ಸರ್ವ ಸಾಮಾನ್ಯ ರೂಪರೇಷೆಯನ್ನು ಒಪ್ಪಿಕೊಂಡಿದ್ದಾರೆ. ಈ ಸೂಚನಾ ಪತ್ರಿಕೆಯಲ್ಲಿ ಮುಂದೆ ಹೇಳುವ ಮಾತುಗಳು ವಿಶದವಾಗಿ ಪರ್ಣಿತವಾಗಿವೆ.

೧. ಪ್ರಾಥಮಿಕ ಶಿಕ್ಷಣ. ಬ್ರಿಟಿಷ ಹಿಂದುಸ್ತಾನದೊಳಗಿನ ೬ರಿಂದ ೧೪ ವರ್ಷದ ಒಳಗಿನ ವಯಸ್ಸಿನ ಬಾಲಕ ಬಾಲಿಕೆಯರೆಲ್ಲರೂ ಶಾಲೆಗೆ ಹೋಗಿ ಕಲಿಯಲೇಬೇಕು. ಅವರಿಗೆ ಮೂಲ ಶಿಕ್ಷಣವು ಕಡ್ಡಾಯವಾಗಿದ್ದು ಅದು ಅವರಿಗೆ ಪುಕ್ಕಟೆಯಾಗಿ ದೊರೆಯಬೇಕು. ಈ ಕಾರ್ಯವು ಯಶಸ್ವಿಯಾಗಿ ನಡೆಯಬೇಕಾದರೆ ೧೮೦ ಲಕ್ಷ ಶಿಕ್ಷಕ ಶಿಕ್ಷಕಿಯರು ಬೇಕು. ಕೆಳಗಿನ ವರ್ಗಗಳನ್ನು ಶಿಕ್ಷಕಿಯರೇ ಕಲಿಸುವದು ಒಳಿತು. ವಿದ್ಯಾರ್ಥಿಗಳ ಸಂಖ್ಯೆಯು ೫೨೦ ಲಕ್ಷ ವಾಗಬಹುದು. ಇದಕ್ಕಾಗಿ ೨೦೦ ಕೋಟಿ ರೂಪಾಯಿಗಳು ಖರ್ಚಾಗಬಹುದು. ಬಡತನದ ಮೂಲಕ ಮಕ್ಕಳಿಗೆ ಶಿಕ್ಷಣ ಹೊಂದಲು ತೊಂದರೆಯಾಗದಂತೆ ಹೆಚ್ಚು ವಿದ್ಯಾರ್ಥಿ ವೇತನಗಳನ್ನು ಕಲ್ಪಿಸಿ ಕೊಡಬೇಕು.

೨. **ಮಾಧ್ಯಮಿಕ ಶಿಕ್ಷಣ.** ಪ್ರಾಥಮಿಕ ಶಿಕ್ಷಣವನ್ನು ಹೊಂದಿದವರಲ್ಲಿ ನೂರರಲ್ಲಿ ಐದು ಜನರು ಹೈಸ್ಕೂಲಿನ ಅಭ್ಯಾಸಕ್ಕೆ ಮುಂದೆ ಬರಬಹುದು. ಹೈಸ್ಕೂಲುಗಳಲ್ಲಿ ಸಾಮಾನ್ಯ ಹೈಸ್ಕೂಲು ಮತ್ತು ವೃತ್ತಿ ಶಿಕ್ಷಣವನ್ನೊಳಗೊಂಡ ಹೈಸ್ಕೂಲು ಎಂದು ಎರಡು ವಿಧಗಳಿರಬೇಕು. ವಿದ್ಯಾರ್ಥಿಗಳನ್ನು ಮುಂದಿನ ಶಿಕ್ಷಣಕ್ಕೂ ಜನಜೀವನಕ್ಕೂ ಅನುಗೊಳಿಸುವದೇ ಇವುಗಳ ಧ್ಯೇಯವಾಗಿರಬೇಕು. ಪರೀಕ್ಷೆಗಳಿಗೆ ಹೆಚ್ಚು ಮಹತ್ವವಿರಕೂಡದು. ಹೈಸ್ಕೂಲಗಳಲ್ಲಿ ೧೮೦ ಸಾವಿರ ಪದವೀಧರರೂ ೨೦ ಲಕ್ಷ ಪದವೀಧರರಲ್ಲದವರೂ ಆದ ಶಿಕ್ಷಕರು ಬೇಕಾಗಬಹುದ. ಮತ್ತು ಇಷ್ಟು ಶಿಕ್ಷಕರನ್ನು ತಯಾರಿಸುವದಕ್ಕೆ ಸಾವಿರಾರು ಟ್ರೇನಿಂಗ್ ಸಂಸ್ಥೆಗಳೂ ಬೇಕಾಗಬಹುದು. ವಿದ್ಯಾರ್ಥಿಗಳಿಗಾಗಿ ವಸತಿಗೃಹಗಳನ್ನು ಕಟ್ಟಿಸಬೇಕು.

೩. **ಉಚ್ಚ ಶಿಕ್ಷಣ.** ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಗಳನ್ನು ಕ್ರಮಗೊಳಿಸುವ ದಾದ ಬಳಿಕ ಉಚ್ಚ ಶಿಕ್ಷಣದ ಸಂಸ್ಥೆಗಳನ್ನೂ ಅಭ್ಯಾಸಕ್ರಮವನ್ನೂ ಪುನರ್ಘಟನೆ ಮಾಡಬೇಕಾಗುವದು. ಒಂದೇ ಬಗೆಯ ಕಾಲೇಜಗಳು ಹೆಚ್ಚಾಗದಂತೆಯೂ ವಿಶ್ವವಿದ್ಯಾನಿಲಯಗಳ ಕಾರ್ಯಗಳನ್ನೆಲ್ಲ ಕೇಂದ್ರೀಕರಿಸುವದಕ್ಕಾಗಿಯೂ, ವಿಶ್ವವಿದ್ಯಾನಿಲಯಗಳ ಸ್ಥಾಪನೀ ಸಮಿತಿಯೊಂದನ್ನು ಏರ್ಪಡಿಸಬೇಕು. ಸದ್ಯಕ್ಕೆ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣಗಳನ್ನು ಹೊಂದುತ್ತಿರುವವರ ಸಂಖ್ಯೆಗೂ ಉಚ್ಚ ಶಿಕ್ಷಣದ ಕಾಲೇಜಗಳಲ್ಲಿ ಕಲಿಯುತ್ತಿರುವವರ ಸಂಖ್ಯೆಗೂ ಅನುರೂಪವಾದ ಪ್ರಮಾಣವಿಲ್ಲದಿರುವದು ವಿಷಾದದ ಮಾತು. ಉಚ್ಚ ಶಿಕ್ಷಣದ ಆವಾರಗಳೆನಿಸುವ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣಗಳು ವಿಸ್ತಾರದಲ್ಲಿಯೂ ಭದ್ರತೆಯಲ್ಲಿಯೂ ತೀರ ಕಡಿಮೆ ತರಗತಿಯಲ್ಲಿರುವವು. ಆದುದರಿಂದ ಹಿಂದುಸ್ತಾನದ ಶಿಕ್ಷಣ ಮಂದಿರವು ತಳಸೋಸದೆ ಕಟ್ಟಿದ ಉಸುಕಿನ ಗೋಡೆಯ ಕಟ್ಟಡಕ್ಕೆ ಬಂಗಾರದ ಕಳಸವನ್ನಿಡ ಹೋದಂತಾಗಿರುವದು. ವಿಶ್ವವಿದ್ಯಾಲಯಗಳೂ ಕಾಲೇಜಗಳೂ ಹೆಚ್ಚಬೇಕು. ಆದರೆ ಅವುಗಳಲ್ಲಿ ವೈವಿಧ್ಯವಿರಬೇಕು. ಮತ್ತು ಕಾಲೇಜಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ಕೆಲವೊಂದು ವಿಶಿಷ್ಟ ಅರ್ಹತೆಯನ್ನು ಗೊತ್ತುಪಡಿಸಿ ಪದವೀಧರರ ಸಂಖ್ಯೆಯನ್ನು ನಿಯಮನ ಗೊಳಿಸಬೇಕು.

ಹೈಸ್ಕೂಲುಗಳ ಪುನರ್ಘಟನೆಯಾಗುವಾಗ ಈಗ ಕಾಲೇಜಗಳಲ್ಲಿ ನಡೆಯುತ್ತಿರುವ ಮೊದಲಿನ ಎರಡು ವರ್ಷಗಳ ಅಭ್ಯಾಸವು ಹೈಸ್ಕೂಲುಗಳಲ್ಲಿಯೇ ನಡೆಯುವಂತಾಗಿ ಇಂಟರ ಮಿಡೀಯೇಟ್ ಪರೀಕ್ಷೆಯ ವರೆಗಿನ ಅಭ್ಯಾಸವು ಹೈಸ್ಕೂಲುಗಳಲ್ಲಿಯೇ ಆಗುವಂತೆ ಮಾಡಬೇಕು. ಮತ್ತು ಪದವಿಗಳ ಪರೀಕ್ಷೆಯ ಅಭ್ಯಾಸಕ್ಕಾಗಿ ವಿದ್ಯಾರ್ಥಿಗಳು ಕಾಲೇಜ ಗಳಲ್ಲಿ ಮೂರು ವರ್ಷ ಓದುವ ವ್ಯವಸ್ಥೆಯಾಗಬೇಕು.

೪. **ವೃತ್ತಿಶಿಕ್ಷಣ.** ಮಹಾಯುದ್ಧದ ತರುವಾಯ ಹಿಂದುಸ್ತಾನದಲ್ಲಿ ಬೇರೆ ಬೇರೆ ವ್ಯವಸಾಯಗಳ ಹಾಗು ಒಕ್ಕಲುತನದ ಶಿಕ್ಷಣದ ಕಡೆಗೆ ಹೆಚ್ಚು ಲಕ್ಷ್ಯ ಪೂರೈಸಲೇ ಬೇಕಾಗುವದು. ಆದುದರಿಂದ ವೃತ್ತಿಶಿಕ್ಷಣದ ರಾಷ್ಟ್ರೀಯ ಸಂಸ್ಥೆಯೊಂದನ್ನು ಏರ್ಪಡಿಸ-ಬೇಕು. ಈ ಶಿಕ್ಷಣದ ಎಲ್ಲ ವೆಚ್ಚವನ್ನು ಮಧ್ಯವರ್ತಿ ಸರಕಾರವೇ ವಹಿಸಬೇಕು.

೫. **ಆರೋಗ್ಯ ಶಿಕ್ಷಣ.** ಎಲ್ಲ ಬಗೆಯ ಸಾಲೆ ಕಾಲೇಜಗಳಲ್ಲಿ ವಿದ್ಯಾರ್ಥಿಗಳಿಗೆ ಶಾರೀರಿಕ ಶಿಕ್ಷಣವು ದೊರೆಯಬೇಕು. ಮತ್ತು ಶಾರೀರಿಕ ಶಿಕ್ಷಣವು ಸಾಮಾನ್ಯ ಶಿಕ್ಷಣದ ಒಂದು ಅಂಗವಾಗಿರಬೇಕು. ಎಲ್ಲ ವಿದ್ಯಾರ್ಥಿಗಳ ಆರೋಗ್ಯ ಪರೀಕ್ಷೆಯ ವ್ಯವಸ್ಥೆಯಾಗ ಬೇಕು; ಇಷ್ಟೇ ಅಲ್ಲ, ರೋಗಿಗಳಾದವರ ಶುಶ್ರೂಷೆಯ ವ್ಯವಸ್ಥೆಯೂ ಆಗಬೇಕು. ಬಡತನ ಮುಂತಾದವುಗಳೇ ಕಾರಣವಾಗಿ ವಿದ್ಯಾರ್ಥಿಗಳಿಗೆ ದೊರೆಯುತ್ತಿರುವ ಆಹಾರದಲ್ಲಿರುವ ಕೊರತೆಗಳ ಪರಿಹಾರವಾಗಬೇಕಾದರೆ ಮಧ್ಯಾಹ್ನದ ಊಟವನ್ನು ಸಾಲೆಗಳಲ್ಲಿಯೇ ಒದಗಿಸುವ ಯೋಜನೆಯಾಗಬೇಕು. ವಿದ್ಯಾರ್ಥಿಗಳಿಗೆ ಆರೋಗ್ಯ ಶಾಸ್ತ್ರವನ್ನು ಕಲಿಸಬೇಕು; ಈ ಆರೋಗ್ಯ ಶಾಖೆಯಲ್ಲಿ ಕೆಲಸಮಾಡುವದಕ್ಕೆ ೭೫೦೦ ವೈದ್ಯರೂ ೧೫೦೦೦ ದಾಯಿಗಳೂ ಬೇಕಾಗಬಹುದು.

ಮೇಲೆ ಹೇಳಿದ ಬೇರೆ ಬೇರೆ ಶಾಖೆಗಳ ಪುನರ್ಘಟನೆಯು ಸಾಂಗವಾಗಬೇಕಾದರೆ ೪೦–೫೦ ವರ್ಷಗಳು ಹಿಡಿಯಬಹುದು; ಮತ್ತು ವೆಚ್ಚವು ೨೭೩ ಕೋಟಿಯವರೆಗೆ ಹೋಗ ಬಹುದು. ಉತ್ಸಾಹಿಗಳಾದ ಹಲವರು "೪೦–೫೦ ವರ್ಷಗಳ ದೀರ್ಘಕಾಲದವರೆಗೆ ಕಾಯ್ದಿರುವದು ಹೇಗೆ?" ಎಂದು ಆಕ್ಷೇಪಿಸಬಹುದು. ಇನ್ನೊಂದು ಅತಿ ಮಹತ್ವದ ಅಡಚಣೆಯೆಂದರೆ ಹಣದ ಪೂರೈಕೆಯದು. ೨೭೩ ಕೋಟಿ ರೂಪಾಯಿಗಳು ಸರಕಾರದ ಉತ್ಪನ್ನದಿಂದಂತೂ ಪೂರೈಸಲ್ಪಡುವ ಸಂಭವವಿಲ್ಲ. ಅದಕ್ಕಾಗಿ ಸರಕಾರದ ಭದ್ರತೆ ಯನ್ನೊಳಗೊಂಡ ಸಾಲದ ವ್ಯವಸ್ಥೆ ಮಾಡಿದ ಹೊರತು ಗತ್ಯಂತರವಿಲ್ಲ. ಈ ಎಲ್ಲ ಕಾರ್ಯಗಳು ಕ್ರಮಶಃ ಪ್ರಾರಂಭವಾಗುವದರಿಂದ ಮೊದಮೊದಲಿನ ವರ್ಷಗಳಲ್ಲಿ ಸ್ವಲ್ಪ ಹಣವು ಸಾಕಾಗಬಹುದು. ಮತ್ತು ಬರಬರುತ್ತ ದೇಶದಲ್ಲಿ ಉದ್ಯೋಗ ವ್ಯವಸಾಯಗಳು ಬೆಳೆದು ಸಂಪದಭಿವೃದ್ಧಿಯಾಗುವದರಿಂದ ಶ್ರೀಮಂತರು ರಾಷ್ಟ್ರೀಯ ಶಿಕ್ಷಣದ ಸಲು ವಾಗಿ ದೊಡ್ಡ ದೊಡ್ಡ ರಕಮುಗಳನ್ನು ಸಾಲವಾಗಿ ಕೊಡಲು ಮುಂದೆ ಬರಬಹುದು. ಸರಕಾರದ ಉತ್ಪನ್ನವೂ ಬೆಳೆದು ಬಂದರೆ ಶಿಕ್ಷಣಕ್ಕಾಗಿ ಹೆಚ್ಚಿನ ರಕಮೂ ದೊರೆಯಬಹುದು. ಇನ್ನೊಂದು ಮಾತು, ಶಿಕ್ಷಣದ ಕಾರ್ಯವು ಯಶಸ್ವಿಯಾಗಿ ನಡೆದು ಅದು ತೀವ್ರ ಫಲಕಾರಿ ಯಾಗಬೇಕಾದರೆ ಶಿಕ್ಷಕ-ಶಿಕ್ಷಕಿಯರ ಸಾಂಪತ್ತಿಕ ಸ್ಥಿತಿಯನ್ನು ಸುಧಾರಿಸುವದರ ಹೊರತು ಅನ್ಯ ಸಾಧನಗಳೇ ಇಲ್ಲವೆಂದು ಮಧ್ಯವರ್ತಿ ಸರಕಾರದ ಸಲಹೆಗಾರ ಮಂಡಲದವರು ಆಗಾಗ ಹೇಳುತ್ತ ಬಂದಿದ್ದಾರೆ. ಶಿಕ್ಷಕವೃತ್ತಿಯಲ್ಲಿರುವವರಿಗೆ ತೀರ ಕಡಿಮೆಯೆಂದರೆ ಒಂದು ತಿಂಗಳಿಗೆ ೩೦ ರೂ.ಯಾದರೂ ಬೇಕು. ಹೈಸ್ಕೂಲುಗಳ ಹೆಡ್‌ಮಾಸ್ತರರ ದರ್ಜೆ ಯವರ ಹೆಚ್ಚಿನ ಪಗಾರವು ೫೦೦ ರೂ. ಆದರೆ ಸಾಕು. ಹಿಂದಿನ ಕಾಲದಲ್ಲಿ ವಿದ್ಯಾರ್ಥಿ

ಗಳಿಂದ ಸೇವೆ ಮಾಡಿಸಿಕೊಂಡು ದೊಡ್ಡ ದೊಡ್ಡ ಗುರುಕುಲಗಳನ್ನು ನಡೆಯಿಸುತ್ತಿದ್ದರೆಂದು ಹೇಳುವ ಅಥವಾ ವಿದ್ಯಾರ್ಥಿಗಳಿಂದ ಫೀಯು ರೂಪದಿಂದ ಹಣಪಡೆದು ಅವರಿಗೆ ಕಲಿಸುತ್ತಿದ್ದರೆಂದು ಹೇಳುವ ಮಾತು ಹಳೆಯ ಮಾತಾಗಿ ಹೋಗಿದೆ. ಇಂದಿನ ಕಾಲದಲ್ಲಿ ಶಿಕ್ಷಕರ ಹೊಟ್ಟೆ ನೆತ್ತಿಗಳನ್ನು ನೋಡಿಕೊಳ್ಳದಿದ್ದರೆ ಅವರಿಂದ ಸರಿಯಾದ ಕೆಲಸವಾಗುವ ಸಂಭವವಿಲ್ಲ.

ಮನುಷ್ಯನಿಗೆ ದೇವರು ಯಾಕೆ ಬೇಕು ?

(ಹಿಂದಿನ ಸಂಚಿಕೆಯಿಂದ ಮುಂದೆ ಸಾಗಿದ್ದು)

ದೇವರು ಸರ್ವಾಂತರ್ಯಾಮಿಯಾಗಿರುವನೆಂದೂ ಅನಾದಿ ಅನಂತನಾಗಿದ್ದು ಪ್ರಪಂಚದ ಸೃಷ್ಟಿ ಸ್ಥಿತಿ ಲಯಗಳ ಕರ್ತನೆಂದೂ ಭಾವಿಸುವ ಜನರಂತೆಯೇ ಅವನ ಅವತಾರಗಳನ್ನೂ ಮಾನವೀಯ ಲೀಲೆಗಳನ್ನೂ ನಂಬುವವರೂ ಇದ್ದಾರೆ. ಇದಕ್ಕಾಗಿ ಮಹಾಭಾರತದೊಳಗಿನ ಒಂದು ಸಂದರ್ಭವನ್ನು ನಾವು ನೋಡಬಹುದು.

ಕೌರವರೂ ಪಾಂಡವರೂ ಕುರುಕ್ಷೇತ್ರದಲ್ಲಿ ಹೋರಾಡಿಯೇ ತಮ್ಮ ನ್ಯಾಯವನ್ನು ಬಗೆಹರಿಸಿಕೊಳ್ಳಬೇಕೆಂದು ಗೊತ್ತಾಗಿದ್ದಿತು. ಕೌರವನೂ ಅರ್ಜುನನೂ ಕೃಷ್ಣನ ಸಹಾಯವನ್ನು ಕೋರಿ ಅವನ ಬಳಿಗೆ ಬಂದರು. ಆ ಕಾಲದಲ್ಲಿಯೂ ಕೂಡ ಕೃಷ್ಣನು ದೇವರ ಅವತಾರವೆಂದು ನಂಬುವವರೂ ಇದ್ದರು; ನಂಬದವರೂ ಇದ್ದರು. ಕೃಷ್ಣನು ಒಬ್ಬ ಮುತ್ಸದ್ದಿಯೆಂದೋ ಚಾಣಾಕ್ಷನಾದ ರಾಜತಂತ್ರಜ್ಞನೆಂದೋ ಹಲವರು ಭಾವಿಸಿದ್ದರೆ, ಹಲವರು ಆತನು ದೇವರ ಅವತಾರವೇ ಸರಿಯೆಂಬ ದೃಢಸಂಕಲ್ಪವುಳ್ಳವರಾಗಿದ್ದರು. ಕೌರವನೂ ಅರ್ಜುನನೂ ಇಂಥ ಎರಡು ಭಿನ್ನ ಭಿನ್ನ ಮನೋಭಾವನೆಗಳುಳ್ಳವರಾಗಿದ್ದರು.

ಕೌರವನೂ ಅರ್ಜುನನೂ ಕೃಷ್ಣನ ಅರಮನೆಗೆ ಬಂದಾಗ ಕೃಷ್ಣನು ಉಂಡು ಮಲಗಿದ್ದನು. ಕೌರವನು ರಾಜಠೀವಿಯಿಂದ ಕೃಷ್ಣನ ತಲೆದಿಂಬಿನ ಬಳಿಯಲ್ಲಿಯೂ ಅರ್ಜುನನು ಆತನ ಪಾದದೆಡೆಯಲ್ಲಿಯೂ ಕುಳಿತಿದ್ದರು. ಕೃಷ್ಣನು ಎಚ್ಚತ್ತು ಕುಳಿತೊಡನೆ ಮೊದಲು ಅರ್ಜುನನ್ನು ಕಂಡನು; ಬಳಿಕ ತಿರುಗಿ ನೋಡಿ ಕೌರವನನ್ನು ಮಾತಾಡಿಸಿದನು. ಬಳಿಕ ಇಬ್ಬರೂ ತಾವು ಬಂದಿರುವ ಉದ್ದೇಶವನ್ನು ಹೇಳಿದರು. ಅವರಿಬ್ಬರೂ ಮುಂಬರುವ ಮಹಾ ಯುದ್ಧದಲ್ಲಿ ಕೃಷ್ಣನ ಸಹಾಯವನ್ನು ಕೋರಿದರು.

ಕೃಷ್ಣನು ಇಬ್ಬರಿಗೂ ಬೇಕಾದವನು. ಯಾರನ್ನೂ ದೂರ ಮಾಡುವಂತಿರಲಿಲ್ಲ. ಆವ ನೊಂದು ಮಧ್ಯಸ್ಥಿಕೆಯ ಮಾತಾಡಿದನು. ನಾನೊಬ್ಬನೇ ಇಬ್ಬರ ಸಹಾಯಕ್ಕೂ ಬರುವದು ಸಾಧ್ಯವಾಪ ಮಾತಲ್ಲವಷ್ಟೇ? ಸಾವಿರ ಸಾವಿರ ಸೇನಾಬಲವನ್ನೊಳಕೊಂಡಿರುವ ಯಾದವ ಬಲವೆಲ್ಲ ಒಂದು ಕಡೆ; ನಾನೊಬ್ಬನೇ ಒಂದು ಕಡೆ; ನಾನು ರಣರಂಗದಲ್ಲಿ ಪ್ರತ್ಯಕ್ಷ ಯುದ್ಧ ಮಾಡಲಾರೆನು. ಈ ಪಾಲುಗಳನ್ನು ನೀವಿಬ್ಬರೂ ಆರಿಸಿಕೊಳ್ಳಬಹುದು. ಅರ್ಜುನನನ್ನು ನಾನು ಮೊದಲು ನೋಡಿದೆನು. ಅವನು ಆರಿಸಿಕೊಂಡು ಬಿಟ್ಟದ್ದನ್ನು ಕೌರವನು ಒಪ್ಪಿಕೊಳ್ಳಬೇಕು. ಎಂದು ನುಡಿದು ಸುಮ್ಮನಾದನು. ಅರ್ಜುನನು ರಣಭೂಮಿಯಲ್ಲಿ ಕೃಷ್ಣನ ಅಸ್ತಿತ್ವವೊಂದೇ ಸಾಕೆಂದು ಆತನನ್ನು ಆರಿಸಿಕೊಂಡನು. ಅಪರಿಮಿತ ಸೈನ್ಯವನ್ನೊಳಗೊಂಡ ಯಾದವ

ಸೇನೆಯನ್ನು ದುರ್ಯೋಧನನು ಆನಂದದಿಂದ ಒಪ್ಪಿಕೊಂಡನು. ಈ ಉದಾಹರಣೆಯಿಂದ ತಿಳಿಯುವದೇನೆಂದರೆ— ಅರ್ಜುನನು ದೇವರಲ್ಲಿ ಭಕ್ತಿ ವಿಶ್ವಾಸಗಳುಳ್ಳವನೂ ಆತನ ಅಗಾಧ ಸಾಮರ್ಥ್ಯವನ್ನು ನಂಬಿ ನಡೆಯುವನೂ ಆಗಿದ್ದರೆ ದುರ್ಯೋಧನನು ಮಾನವ ಬಲದಲ್ಲಿಯೂ ಯತ್ನದಲ್ಲಿಯೂ ವಿಶ್ವಾಸವುಳ್ಳವನಾಗಿದ್ದನು. ಒಬ್ಬನು ದೈವವಾದಿ; ಇನ್ನೊಬ್ಬನು ಯತ್ನವಾದಿ. 'ಬಂದದ್ದೆಲ್ಲ ಬರಲಿ, ಗೋವಿಂದನ ದಯೆಯೊಂದಿರಲಿ' ಎನ್ನುವ ದೃಢಸಂಕಲ್ಪ ಅರ್ಜುನನದು. 'ಬಲವಂತನು ಮಾಡಿದ್ದೇ ಸರಿಯಾದ ಕೆಲಸ' ಅಥವಾ 'ಆನೆ ನಡೆದುದೆ ಮಾರ್ಗ' ಎನ್ನುವ ಭಾವನೆ ದುರ್ಯೋಧನನದು.

ದೇವರು ಸರ್ವಶಕ್ತನಾದ ರಾಜನಂತಿದ್ದಾನೆಂದು ಕೆಲವರ ಭಾವನೆ. ಅವನ ಅಗಾಧ ಶಕ್ತಿಸಂಪನ್ನತೆಯು ಅವರಲ್ಲಿ ಭೀತಿಯನ್ನು ಹುಟ್ಟಿಸುವದಿಲ್ಲ; ಆದರೆ ಪ್ರೀತಿಯನ್ನೂ ಭಕ್ತಿಯನ್ನೂ ಹುಟ್ಟಿಸುವದು. ಕೆಲವರಿಗೆ ದೇವರು ಪ್ರೇಮಮಯ ಮೂರ್ತಿಯೆನಿಸುವನು. ಮೀರಾಬಾಯಿಗೆ ದೇವರು ಅವಳ ಪ್ರೇಮದ ಆಗರವಾಗಿದ್ದನು. ಕೆಲವರಿಗೆ ದೇವರು ತಂದೆಯ ಸ್ಥಾನದಲ್ಲಿಯೋ ತಾಯಿಯ ಸ್ಥಾನದಲ್ಲಿಯೋ ಇದ್ದಂತೆ ಭಾಸವಾಗುವದು. ಮತ್ತೆ ಕೆಲವರಿಗೆ ದೇವರು ಗುರುಸ್ಥಾನದಲ್ಲಿರುವನು. ಭಕ್ತರ ಅಭೀಷ್ಟಸಾಧನೆಗಾಗಿ ದೇವರು ಮಾನವ ರೂಪವನ್ನು ತಾಳಿ ಬರುವನೆಂದು ನಂಬುವವರೂ ಇದ್ದಾರೆ. ಮಾನವಕುಲಕ್ಕೆ ಸನ್ಮಾರ್ಗ ದರ್ಶನ ಮಾಡಿಸುವದಕ್ಕಾಗಿ ದೇವರು ಮಾನವಲೀಲೆಗೆ ಒಳಗಾಗಿ ಹುಟ್ಟಿಬಂದು ಅಪಾರ ಕಷ್ಟನಷ್ಟಗಳನ್ನು ಅನುಭವಿಸುವನೆಂದು ಭಾವಿಸುವ ಭಕ್ತರೂ ಇದ್ದಾರೆ. ರಾಮಾಯಣದ ನಾಯಕ ರಾಮಚಂದ್ರನು ದೇವರ ಅವತಾರವೆಂದೂ ಆತನು ಕೈಕೊಂಡ ಲೀಲೆಗಳೆಲ್ಲ ಜನರಿಗೆ ಸನ್ಮಾರ್ಗಸೂಚಕಗಳಾಗಿರುವವೆಂದೂ ನಂಬುವ ಜನರು ನಮ್ಮಲ್ಲಿಲ್ಲವೇ ?

ಹೀಗೆ ಹಲವು ಮನೋವೃತ್ತಿಗಳ ಮೂಲಕವಾಗಿ ಮಾನವನು ದೇವರನ್ನು ಸೃಷ್ಟಿಸಿ ಕೊಂಡು ಆ ತನ್ನ ಮನೋವೃತ್ತಿಗಳನ್ನು ತೃಪ್ತಿಪಡಿಸಿಕೊಳ್ಳುವನು. ಅರ್ಥಾತ್ ಮಾನವನ ಮನಸ್ಸಿನ ತೃಪ್ತಿಗಾಗಿಯೇ ಅವರಿಗೆ ದೇವರು ಬೇಕೆಂದು ಹೇಳಿದಂತಾಯಿತು. ಅಖಿಲ ಜಗದ್ವ್ಯಾಪಿಯಾದ ಈಶ್ವರೀ ಶಕ್ತಿಯಿಂದ ಮಾನವನು ಹುಟ್ಟಿ ಬೆಳೆದು ಶಕ್ತಿಸಂಪನ್ನನಾಗಿ ಕೊನೆಗೆ ಆ ಶಕ್ತಿಯಲ್ಲಿಯೇ ಬೆರೆತುಹೋಗುವನೆಂದು ನಂಬುವ ಜನರೇ ಜಗತ್ತಿನಲ್ಲಿ ಹೆಚ್ಚಾಗಿರುವರು. ದೊಡ್ಡದೊಂದು ದೀಪದಿಂದ ಅಸಂಖ್ಯ ಕಿರುದೀಪಗಳು ಹುಟ್ಟಿ ಕೊನೆಗೆ ಆ ದೊಡ್ಡ ದೀಪದ ಬೆಳಕಿನಲ್ಲಿಯೇ ಬೆರೆತುಹೋಗುವವೆಂದು ಅವರು ಭಾವಿಸುವರು.

ಆಹಾರ ಮೀಮಾಂಸೆ

ಈ ವರ್ಷದ ಮೊದಲನೆಯ ಸಂಚಿಕೆಯಲ್ಲಿ ನಮ್ಮ ಆಹಾರದ ಪದಾರ್ಥಗಳು ಅವನ್ನು ತಯಾರಿಸುವ ಕ್ರಮ ಮುಂತಾದವುಗಳನ್ನು ಕುರಿತು ಹಲವು ಮಾತುಗಳನ್ನು ವಿವೇಚಿಸಲಾಗಿದೆ. ಈ ಲೇಖನದಲ್ಲಿ ನಾವು ಉಪಯೋಗಿಸುವ ಪಲ್ಲೆಯ ಜೀನಸುಗಳಲ್ಲಿರುವ ಆಹಾರ ಸತ್ವಗಳನ್ನು ಹೇಗೆ ಕಾಪಾಡಿಕೊಂಡು ಅವುಗಳಿಂದ ಹೆಚ್ಚು ಪ್ರಯೋಜನವನ್ನು ಹೇಗೆ ಪಡೆಯಬಹುದೆಂಬ ಬಗ್ಗೆ ನಾಲ್ಕು ಮಾತುಗಳನ್ನು ಬರೆಯಲು ಬಯಸುವೆವು.

ಯುರೋಪದ ದೇಶಗಳಂತೆಯೇ ನಮ್ಮ ದೇಶದಲ್ಲಿಯೂ ನಾನಾಬಗೆಯ ಪಲ್ಲೆಯ ಜೀನಸುಗಳು ಬೆಳೆಯುವವು; ಮತ್ತು ಆಹಾರ ಸಾಮಗ್ರಿಯು ದೃಷ್ಟಿಯಿಂದ ನಮ್ಮ ದೇಶದ

ಪಲ್ಲೆಯ ಜೀನಸುಗಳು ಯುರೋಪದವುಗಳಿಗಿಂತಲೂ ಮೇಲ್ತರಗತಿಯವೆನಿಸುವವು. ನಮ್ಮ ದೇಶದಲ್ಲಿ ಇತ್ತೀಚೆಗೆ ಆಹಾರ ಸಾಮಗ್ರಿಗಳ ಕೊರತೆಯಾಗಹತ್ತಿದೆ. ಅರೆಹೊಟ್ಟೆ ಉಂಡು ಬದುಕುವ ಜನಸಂಖ್ಯೆಯೇ ಹೆಚ್ಚು. ಆದುದರಿಂದ ನಾವು ಉಪಯೋಗಿಸುವ ಆಹಾರದ ಜೀನಸುಗಳನ್ನು ಹೆಚ್ಚು ಕುಶಲತೆಯಿಂದಲೂ ಕಾಟಕಸರಿನಿಂದಲೂ ಉಪಯೋಗಿಸಿಕೊಳ್ಳದೆ ಗತ್ಯಂತರವಿಲ್ಲವಾಗಿದೆ.

ಪಲ್ಲೆಯ ಜೀನಸುಗಳಲ್ಲಿ ಗಡ್ಡೆ ಬೇರುಗಳು, ಹಸುರು ಎಲೆಯ (ತೊಪ್ಪಲ) ಪಲ್ಲೆಗಳು, ಇತರ ಪದಾರ್ಥಗಳು ಎಂದು ಮೂರು ವರ್ಗಗಳನ್ನು ಕಲ್ಪಿಸಬಹುದು. ಪಲ್ಲೆಯ ಜೀನಸುಗಳಾಗಿರುವ ವನಸ್ಪತಿಗಳ ಒಂದು ಭಾಗದಲ್ಲಿ ಒಂದು ಬಗೆಯ ಆಹಾರ ಸಾಮಗ್ರಿಯು ಹೆಚ್ಚಾಗಿದ್ದರೆ ಇನ್ನೊಂದು ಭಾಗದಲ್ಲಿ ಇನ್ನೊಂದು ಬಗೆಯ ಪದಾರ್ಥಗಳು ಹೆಚ್ಚಾಗಿರುವವು. ಬೇರು, ಬೊಡ್ಡೆ, ಎಲೆ, ಹೂವು, ಬೀಜ ಇವೆಲ್ಲವನ್ನು ಪಲ್ಲೆಗೆ ಉಪಯೋಗಿಸಬಹುದಾದ ವನಸ್ಪತಿಯು ಉತ್ತಮ ಪ್ರಕಾರದ್ದೆನಿಸುವದು. ಇಂಥವು ಎಲ್ಲ ಬಗೆಯ ಪೋಷಕ ದ್ರವ್ಯಗಳನ್ನು ನಮಗೆ ಒದಗಿಸಿಕೊಡುವವು. ಬರಿಯ ಗಡ್ಡೆಗಳು, ಕಾಯಿಗಳು, ಎಲೆಗಳು ಮುಂತಾದ ಒಂದೊಂದೇ ಭಾಗವನ್ನು ಉಪಯೋಗಿಸಬಹುದಾದ ಪಲ್ಲೆಯ ಜೀನಸುಗಳಿಗೆ ಪೂರಕವಾಗಿ ಬೇರೆ ಕೆಲವು ಸಾಮಗ್ರಿಗಳನ್ನು ಬೆರಿಸಿ ಉಪಯೋಗಿಸಬೇಕಾಗುವದು. ಆದರೆ ನಾವು ಉಪಯೋಗಿಸುವ ವನಸ್ಪತಿಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳದೆ ಮುಖ್ಯ ಭಾಗಗಳನ್ನು ಹೊರಗೆ ಚೆಲ್ಲಿಬಿಡುವದು ನಮಗೆ ಹಿಂದಿನ ರೂಢಿಯಿಂದ ಬಂದುಬಿಟ್ಟಿದೆ. ಮೂಲಂಗಿಯ ಹಸಿರು ಎಲೆಗಳನ್ನು ಹರಿದು ಚಲ್ಲಿ ಬಿಳಿಯ ಗಡ್ಡೆಯನ್ನಷ್ಟೇ ಉಪಯೋಗಿಸುವೆವು. ಅದರಂತೆ ಹಸಿಯ ಉಳ್ಳೇಗಡ್ಡಿಯ ಎಲೆಗಳಲ್ಲಿಯೂ ಆಹಾರ ಸಾಮಗ್ರಿಯು ಹೆಚ್ಚಾಗಿದ್ದು ಅದನ್ನು ಉಪಯೋಗಿಸದಿರುವದರಿಂದ ಹೆಚ್ಚು ಪೋಷಕ ದ್ರವ್ಯವನ್ನು ಹೊರಗೆ ಚಲ್ಲಿ ಕೊಟ್ಟಂತಾಗುವದು. ಟೊಮೇಟೊ ಹಣ್ಣಿನ ತೋಟೆಯಲ್ಲಿ ಒಳಗಿನ ತಿಳಲಿನ ೨೦ ಪಟ್ಟು, ಅದರ ರಸದ ಸಾವಿರಪಟ್ಟು, ಕೆರೋಲೀನ ಎಂಬ ಆಹಾರ ಸಾಮಗ್ರಿಯಿರುವದು. ಕ್ಯಾಬೀಜದ ಹೊರಗಿನ ಹಸಿರು ಎಲೆಗಳಲ್ಲಿ ಒಳಗಿನ ಬಿಳಿಯ ಎಳೆಯ ಎಲೆಗಳಲ್ಲಿರುವದರ ೧೫ ಪಟ್ಟು ಕ್ಯಾಲ್ಸಿಯಮ್ಮವಿರುವದು. ಹೀಗೆ ಆಹಾರ ಸಾಮಗ್ರಿಗಳು ಹೆಚ್ಚಾಗಿರುವ ಮುಖ್ಯ ಭಾಗಗಳನ್ನು ಚಲ್ಲಿಕೊಡುವರಿಂದಾಗುವ ಹಾನಿಯು ಕಡಿಮೆಯೇನು ?

ಗಡ್ಡೆಬೇರುಗಳಲ್ಲಿ ಕಾರ್ಬೋ ಹೈಡ್ರೇಟಗಳು ಹೆಚ್ಚಾಗಿರುವವು. ಆದುದರಿಂದ ಧಾನ್ಯ ಬೇಳೆಗಳಂತೆಯೇ ಇವನ್ನೂ ಕೂಡ ದಿನದಲ್ಲಿ ಒಂದು ಊಟದ ಮುಖ್ಯ ಆಹಾರದಂತೆ ಉಪಯೋಗಿಸಿಕೊಳ್ಳಲು ಅಡ್ಡಿಯಿಲ್ಲ. ಹಾಲಿನ ಕೊರತೆಯಿರುವಲ್ಲಿ ಹಸಿರು ತೊಪ್ಪಲಪಲ್ಲೆಗಳನ್ನು ಅದರ ಬದಲು ಉಪಯೋಗಿಸಬಹುದು. ಹೆಚ್ಚು ಬೆಲೆಯುಳ್ಳ ಹಣ್ಣುಗಳ ಬದಲು ತಾಜಾ ಕಾಯಿಪಲ್ಲೆಗಳನ್ನು (ಅಡುಗೆಮಾಡದೆ) ಉಪಯೋಗಿಸಲು ಏನೂ ಅಡ್ಡಿಯಿಲ್ಲ.

ಪಲ್ಲೆಯ ಜೀನಸುಗಳಲ್ಲಿ ಸಾಮಾನ್ಯವಾಗಿ ಪ್ರೊಟೀನುಗಳು ಕಡಿಮೆ ಇರುವವು. ಹಸಿರು ತೊಪ್ಪಲಪಲ್ಲೆಯಲ್ಲಿ ಮಾತ್ರ ಕೆಲವೊಂದು ಬಗೆಯ ಪ್ರೊಟೀನವು ಇರುವದುಂಟು. ಪಲ್ಲೆಯ ಜೀನಸುಗಳಲ್ಲಿ ನೆಣದ ಅಂಶವು ತೀರ ಕಡಿಮೆ. ಕೆಲವು ಕಾಳುಗಳಲ್ಲಿಯೂ ಮಸಾಲೆಯ ಜೀನಸುಗಳಲ್ಲಿಯೂ ಮಾತ್ರ ಎಣ್ಣೆಯ ಅಂಶವಿರುವದುಂಟು. ಇವು ಕರುಳಿನ ರಕ್ಷಣೆಗೂ ರೋಗಜಂತುಗಳ ನಾಶಕ್ಕೂ ಸಹಾಯಕವಾಗುವವು.

ಹಸಿರು ತೊಪ್ಪಲಪಲ್ಲೆಗಳಲ್ಲಿ ಕ್ಯಾಲ್ಸಿಯಮ್ಮವು ಹೆಚ್ಚಾಗಿರುವದು. ಅವುಗಳಲ್ಲಿ ಕಬ್ಬಿಣವೂ ಹೆಚ್ಚಾಗಿರುವದು. ಮತ್ತು ಈ ಪಲ್ಲೆಯ ಜೀನಸುಗಳಲ್ಲಿ ಕಬ್ಬಿಣವೂ ಫಾಸ್ಫರಸವೂ ತಕ್ಕ

ಪ್ರಮಾಣದಲ್ಲಿರುವದರಿಂದ ಅವನ್ನು ನಮ್ಮ ಶರೀರವು ಉಪಯೋಗಿಸಿಕೊಳ್ಳಲು ತಕ್ಕ ಸ್ಥಿತಿಯಲ್ಲಿರುವವೆಂದು ಹೇಳುವದುಂಟು. ತೊಪ್ಪಲುಪಲ್ಲೆಗಳಲ್ಲಿ ನಮ್ಮ ಶರೀರಕ್ಕೆ ಬೇಕಾಗುವ ಇತರ ಖನಿಜದ್ರವ್ಯಗಳೂ ಉಪಲಬ್ಧವಾಗಿವೆ. ಕೋತಂಬರಿ, ಹರಿವೆ, ನುಗ್ಗಿಕಾಯಿ ಇವುಗಳಲ್ಲಿ ಕೆರೋಲೀನವು ಹೆಚ್ಚು ಪ್ರಮಾಣದಲ್ಲಿರುವದು. ನೆಲ್ಲಿಕಾಯಿ, ನುಗ್ಗಿಕಾಯಿ, ಹಾಗಲಕಾಯಿ ಇವುಗಳಲ್ಲಿ 'ಸಿ' ವ್ಹಿಟಾಮಿನ್ನವು ವಿಪುಲವಾಗಿರುವದು.

ಪಲ್ಲೆಕಾಯಿಗಳನ್ನು ಹೇಗೆ ಉಪಯೋಗಿಸಬೇಕೆಂಬುದು ಇನ್ನೊಂದು ಪ್ರಶ್ನೆ. ವ್ಹಿಟಾಮಿನ್ನದಂಥ ಆಹಾರ ಸಾಮಗ್ರಿಗಳು ಮುಖ್ಯವಾಗಿ ಕಾಯಿಪಲ್ಲೆಗಳ ತೋಟೆಯಲ್ಲಿಯೂ ತೋಟೆಯು ಒಳಭಾಗದಲ್ಲಿಯೂ ಇರುವದರಿಂದ ತೋಟೆಯನ್ನು ಸುಲಿದು ಇಲ್ಲವೆ ಕೆತ್ತಿ ಚೆಲ್ಲುವದರಿಂದ ಮುಖ್ಯ ಆಹಾರ ಸಾಮಗ್ರಿಯನ್ನು ಹೊರಗೆ ಚೆಲ್ಲಿಕೊಟ್ಟಂತಾಗುವದು. ಇವನ್ನು ಕುದಿಸಲೇ ಬೇಕಾಗಿದ್ದರೆ ಇಡಿಯ ಕಾಯಿ ಗಡ್ಡೆಗಳನ್ನೇ ಬೇಯಿಸಿ ಆ ಮೇಲೆ ಹೆಚ್ಚಬೇಕು. ಪಲ್ಲೆಯ ಜೀನಸುಗಳನ್ನು ಹೆಚ್ಚುವದರಿಂದ ಅವುಗಳಲ್ಲಿರುವ 'ಸಿ' ವ್ಹಿಟಾಮಿನ್ನವು ನಾಶವಾಗುವದು. ಪಲ್ಲೆಯ ಜೀನಸುಗಳನ್ನು ತಾಜಾ ಇರುವಾಗ ಮೂಲ ಸ್ಥಿತಿಯಲ್ಲಿಯೇ ತಿನ್ನುವದು ಅತ್ಯುತ್ತಮವಾದ ಕ್ರಮವೆನಿಸುವದು.

ಪಲ್ಲೆಯ ಜೀನಸುಗಳನ್ನು ಕುದಿಸುವಾಗ ಹೆಚ್ಚು ನೀರು ಹಾಕಿ ಕುದಿಸಿ ಬಸಿಯುವದು ಅನಿಷ್ಟಕರವಾದ ಪದ್ಧತಿ. ಹಾಗೆ ಮಾಡುವದರಿಂದ ಎಲ್ಲ ಖನಿಜ ದ್ರವ್ಯಗಳನ್ನು ಹೊರಗೆ ಚೆಲ್ಲಿದಂತಾಗುವದು. ಉಷ್ಣತೆಯಿಂದ 'ಸಿ' ವ್ಹಿಟಾಮಿನ್ನವು ನಾಶವಾಗುವದು. ಹವೆ ಉಷ್ಣತೆಗಳ ಮೂಲಕ ಕೆರೊಲೀನವು ಕೆಡುವದು. ಸ್ವಲ್ಪವೇ ನೀರು ಹಾಕಿ ಮಂದಾಗ್ನಿಯಿಂದ ಪಲ್ಲೆಯನ್ನು ತಯಾರಿಸುವದು ಒಳಿತು. ಉಗಿಯಿಂದ ಬೇಯಿಸಿಕೊಳ್ಳುವದು ಇದಕ್ಕೂ ಉತ್ತಮವಾದ ಕ್ರಮ. ಪಲ್ಲೆಯನ್ನು ತಯಾರಿಸುವದಕ್ಕೆ ಮಣ್ಣಿನ ಇಲ್ಲವೆ ಕಲ್ಲಿನ ಗಡಿಗೆಗಳು ಉತ್ತಮವಾದುವು. ಇಂಥ ಪಾತ್ರೆಗಳಲ್ಲಿ ಉಷ್ಣತೆಯ ಸಮತೋಲವಾಗುವದು; ಕಡಿಮೆ ನೀರು ಸಾಲುವದು; ಮತ್ತು ಉರುವಲವೂ ಕಡಿಮೆ ಹತ್ತುವದು. ಹೀಗೆ ತಯಾರಿಸಿದ ಪಲ್ಲೆಯು ಬೇಗನೆ ಪಚನವಾಗುವದಲ್ಲದೆ ಆರೋಗ್ಯಕರವೂ ಆಗುವದು. ಕರಿಯುವಾಗ ಅಥವಾ ಸುಡುವಾಗ ಪಲ್ಲೆಯ ಜೀನಸುಗಳಲ್ಲಿರುವ ಪಿಷ್ಟವು ಅಂಶತಃ ಕಾರ್ಬನ್ ರೂಪಕ್ಕೆ ಬರುವದರಿಂದ ಅವು ಬೇಗನೆ ಪಚನವಾಗುವವು. ಅಶಕ್ತರಾದವರು ಉತ್ತತ್ತಿಯನ್ನು ಸುಟ್ಟು ತಿಂದರೆ ಬೇಗನೆ ಪಚನವಾಗುವದಂತೆ.

ಹೀಗೆ ನಮಗೆ ಉಪಲಬ್ಧವಾಗಿರುವ ಆಹಾರಸಾಮಗ್ರಿಗಳನ್ನಷ್ಟೇ ಆದರೂ ಸರಿಯಾದ ಕ್ರಮದಿಂದ ತಯಾರಿಸಿ ಉಪಯೋಗಿಸುತ್ತಿದ್ದರೆ ಆಹಾರದ ಕೊರತೆಯನ್ನು ತಕ್ಕಮಟ್ಟಿಗಾದರೂ ಪರಿಹರಿಸಿಕೊಂಡಂತಾಗುವದಲ್ಲವೆ?

ಪ್ರಕಟನೆ

"ಬರುವ (೧೯೪೪) ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯಲ್ಲಿ ಉಮೇದವಾರರು ಸೀಸಪೇನಸಿಲಿನ ಬದಲು ಮಸಿಯಿಂದ ಬರೆಯಬಹುದು. ಅಂಥವರು ಮಸಿಯನ್ನು ತಾವೇ ತಂದುಕೊಳ್ಳಬೇಕು." ಎಂದು ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ನರವರು ತಿಳಿಸಿದ್ದಾರೆ.

೧೬ನೆಯ ಡಿಸೆಂಬರ ೧೯೪೩. (ಸಹಿ) H. B. UMADI
ಪ್ರಿನ್ಸಿಪಾಲರು

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ ೧೯೪೪

ಈ ವರ್ಷದ ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣ ಪತ್ರ ಪರೀಕ್ಷೆಯು ತಾ. ೧-೩-೧೯೪೪ನೆಯ ಸೋಮವಾರ ಮತ್ತು ಮುಂದಿನ ದಿನಗಳಲ್ಲಿ ಮುಂದೆ ಹೇಳುವ ಕೇಂದ್ರಗಳಲ್ಲಿ ನಡೆಯುವದು. ಮತ್ತು ಈ ಕೆಳಗೆ ವಿವರಿಸಿದಂತೆ ಆಯಾ ಕೇಂದ್ರಗಳ ಬಗ್ಗೆ ಒಂದೊಂದು ಪರೀಕ್ಷಾ ಸಮಿತಿಗಳಿದ್ದು ಅವರು ಪರೀಕ್ಷೆಯನ್ನು ನಡೆಯಿಸುವರು. ಆಯಾ ಸಮಿತಿಗಳ ಜೇಅರಮನ್ನರು ಈ ಕೆಳಗೆ ಹೇಳುವ ಜನರಿರಬೇಕೆಂದು ಗೊತ್ತಾಗಿರುವದು.

ಧಾರವಾಡ— ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದ ಲೇಡೀ ಸುಪರಿಟೆಂಡೆಂಟರು; ಧಾರವಾಡ.

ಹುಬ್ಬಳ್ಳಿ— ಆಂಗ್ಲೋ ಉರ್ದು ಹಾಯಸ್ಕೂಲಿನ ಹೆಡ್‌ಮಾಸ್ತರರು; ಹುಬ್ಬಳ್ಳಿ.

ಗದಗ— ಧಾರವಾಡ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು; ಧಾರವಾಡ.

ಬೆಳಗಾಂವಿ— ಸರದಾರ್ಸ ಹಾಯಸ್ಕೂಲಿನ ಹೆಡ್‌ಮಾಸ್ತರರು; ಬೆಳಗಾಂವಿ

ವಿಜಾಪುರ— ಆಂಗ್ಲೊ ಕನ್ನಡ ಗರ್ಲ್ಸ ಹೈಸ್ಕೂಲಿನ ಹೆಡ್‌ಮಿಸ್ಟ್ರೆಸರು; ವಿಜಾಪುರ.

ಕಾರವಾರ— ಸರಕಾರಿ ಹೈಸ್ಕೂಲಿನ ಹೆಡ್‌ಮಾಸ್ತರರು; ಕಾರವಾರ.

ಸಿಸಿ ಉಪಕೇಂದ್ರ— (ಕಾರವಾರ ಮುಖ್ಯ ಸದರ ಕೇಂದ್ರದ ಕೆಳಗೆ.)

ಕೊಲ್ಲಾಪುರ— ಕೊಲ್ಲಾಪುರ ಸರಕಾರದ ಶಿಕ್ಷಣಾಧಿಕಾರಿಗಳು; ಕೊಲ್ಲಾಪುರ.

ಸಿಸಿ-ಸಿದ್ದಾಪುರ ಹಳಿಯಾಳ ಯಲ್ಲಾಪುರ ತಾಲೂಕುಗಳ ಉಮೇದುವಾರರು ಸಿಸಿ ಉಪಕೇಂದ್ರದಲ್ಲಿ ಪರೀಕ್ಷೆಗೆ ಕೂಡ್ರಬೇಕು. ಮತ್ತು ಅವರು ತಮ್ಮ ಅರ್ಜಿಯಲ್ಲಿ ಸಿಸಿ ಉಪಕೇಂದ್ರದ ಹೆಸರನ್ನು ಬರೆದಿರಬೇಕು. ಅವರು ತಮ್ಮ ಅರ್ಜಿಯನ್ನೂ ಫೀಯನ್ನೂ ಕಾರವಾರ ಹೈಸ್ಕೂಲಿನ ಹೆಡ್‌ಮಾಸ್ತರರಿಗೇ ಕಳುಹಿಸಬೇಕು.

೪. ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದುವಾರರು ತಮ್ಮ ಅರ್ಜಿಗಳನ್ನು ತಾವು ಕೂಡ್ರಲಿಚ್ಛಿಸುವ ಕೇಂದ್ರದ ಸಮಿತಿಯ ಜೇಅರಮನ್ನರಿಗೆ ಸರಕಾರದವರು ಗೊತ್ತುಪಡಿಸಿ ಮುದ್ರಿಸಿದ ಫಾರ್ಮಿನಲ್ಲಿ ತುಂಬಿ ಕಳುಹಿಸಬೇಕು. ಈ ಫಾರ್ಮುಗಳಿಗೆ ಬೆಲೆ ಬೀಳುವದಿಲ್ಲ. ಆಯಾ ಸಮಿತಿಗಳ ಜೇಅರಮನ್ನರಿಗೆ ಅರ್ಜಿಮಾಡಿಕೊಂಡರೆ ಕಳುಹಿಸಿಕೊಡುವರು.

೫. ಉರ್ದು ಉಮೇದುವಾರರ ಪರೀಕ್ಷೆಯು ಸಹ ಮೇಲೆ ಹೇಳಿದ ಕೇಂದ್ರಗಳಲ್ಲಿಯೇ ಅವೇ ದಿನಗಳಲ್ಲಿಯೇ ನಡೆಯುವದು.

೬. ಪರೀಕ್ಷೆಗೆ ಕೂಡ್ರಲಿಕ್ಕೆ ಅಪ್ಪಣೆಯನ್ನು ಬೇಡುವ **ಅರ್ಜಿಯೂ** ಪರೀಕ್ಷೆಯ **ಫೀ ಮೂರು ರುಪಾಯಿಗಳೂ** ಆಯಾ ಕೇಂದ್ರಗಳ ಜೇಅರಮನ್ನರಿಗೆ **೧-೨-೧೯೪೪**ನೆಯ ದಿವಸ ಅಥವಾ ಅದಕ್ಕೂ ಮೊದಲೇ ಮುಟ್ಟಿರಬೇಕು. ಅದಕ್ಕೂ ತಡವಾಗಿ ಬಂದ ಅರ್ಜಿಗಳು ಸ್ವೀಕರಿಸಲ್ಪಡಲಾರವು. ಗುಡ್ಡಗಾಡು ಜನರ ತಂಡಗಳನ್ನೊಳಗೊಂಡ ಹಿಂದುಳಿದ ವರ್ಗಗಳ ಉಮೇದುವಾರರಿಗೆ ಪರೀಕ್ಷೆಗೆ ಫೀಯು **ಒಂದು ರೂಪಾಯಿ** ಮಾತ್ರ ಇರುವದು.

೭. ಹೆಚ್ಚಿನ ವಿವರಣೆಗಳು ಹಿಂದೆ ೧೯೪೩ನೆಯ ಇಸ್ವಿಯ ಜನವರಿ ತಿಂಗಳ ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟವಾಗಿರುವವು.

(ಸಹಿ) **A. KHAN**
ಎಜ್ಯುಕೇಶನಲ್ ಇನ್‌ಸ್ಪೆಕ್ಟರ

ತಾ. ೨೧-೧೨-೧೯೪೩

ಮುಂಬಯಿ ಇಲಾಖೆಯಲ್ಲಿ ಶಿಕ್ಷಣಪ್ರಸಾರ

ಡೈರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್‌ರವರ
೨-ಚನಾರ್ಷಿಕ ವರದಿ ೧೯೩೭–೪೧

ಈ ಅವಧಿಯ ಬಹುಭಾಗವು ಮಹಾಯುದ್ಧದ ಕಷ್ಟಕಾಲದಲ್ಲಿ ಸಮಾವೇಶವಾಗಿದೆ. ಸದ್ಯದಲ್ಲಿಯೂ ಆ ದುರ್ದಿನಗಳು ದೂರಾಗಿಲ್ಲ. ಕಾಟಕಸಂನ ಮೂಲಕ ಶಿಕ್ಷಣ ಪ್ರಸಾರಕ್ಕೆ ತೊಂದರೆಯುಂಟಾಗಿರುವದಿಷ್ಟೇ ಅಲ್ಲ, ಈ ವರದಿಯನ್ನು ವಿವರಿಸುವ ಅವಕಾಶದಲ್ಲಿಯೂ ಕಾಟಕಸರು ಮಾಡದೆ ಗತ್ಯಂತರವುಳಿದಿಲ್ಲ.

ಸಾಮಾನ್ಯವಾಗಿ ವಿದ್ಯಾಪ್ರಸಾರಕ್ಕೆ ಆವಶ್ಯಕವಾದ ಹಣದ ಉತ್ಪತ್ತಿಯ ಮಾರ್ಗಗಳೆಲ್ಲವೂ ಮಹಾಯುದ್ಧದ ಮೂಲಕ ಕಟ್ಟು—ಕಡಿದುಹೋಗಿವೆ. ಹೀಗಿದ್ದರೂ ನಮ್ಮ ಪ್ರಾಂತದಲ್ಲಿ ವಿದ್ಯಾಪ್ರಸಾರವು ಸ್ಥಿಮಿತಗತಿಯಿಂದ ಮುಂದೆಸಾಗಿದೆಯೆಂಬದು ಆಯಾ ವಾರ್ಷಿಕ ಅಂಕೆ ಸಂಖ್ಯೆಗಳನ್ನು ಅವಲೋಕಿಸುವದರಿಂದ ಹೊತ್ತಾಗಬಹುದು. ಹಲವು ವಿಧದ ತೊಡಕು ತೊಂದರೆಗಳಿದ್ದರೂ ಈ ಅವಧಿಯಲ್ಲಿ ಕಳೆದ ಐದು ವರ್ಷಗಳ ಅವಧಿಗಿಂತಲೂ ೧ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ವೆಚ್ಚಮಾಡಲಾಗಿದೆಯೆಂಬದು ತುಂಬ ಸಮಾಧಾನದ ಮಾತಲ್ಲವೆ? ಮತ್ತು ಈ ಅವಧಿಯಲ್ಲಿ ೪ ಸಾವಿರ ಶಿಕ್ಷಣ ಸಂಸ್ಥೆಗಳೂ ಅರ್ಧ ಲಕ್ಷಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿವೆ. ಇದರಲ್ಲಿಯೂ ಇತ್ತೀಚೆಗೆ ಮಾಧ್ಯಮಿಕ ಹಾಗು ಉಚ್ಚ ಶಿಕ್ಷಣಗಳಿಗಿಂತಲೂ ಪ್ರಾಥಮಿಕ ಶಿಕ್ಷಣವೇ ಹೆಚ್ಚು ಪ್ರಮಾಣದಿಂದ ಬೆಳೆದಿದೆಯೆಂಬದು ಇನ್ನೊಂದು ಸಂತೋಷದ ಮಾತು.

ಸನ್ ೧೯೩೭ ರಲ್ಲಿ ಒಟ್ಟು ೧೪೬೦೪ ಶಿಕ್ಷಣ ಸಂಸ್ಥೆಗಳಿದ್ದದ್ದು ಈಗ ೨೨೭೫೧ ಕ್ಕೆ ಏರಿದೆ. ಇವುಗಳಲ್ಲಿ ಪ್ರಾಥಮಿಕ ಶಾಲೆಗಳೇ ಹೆಚ್ಚು. ಅದರಲ್ಲಿಯೂ ಸರಕಾರದಿಂದ ಸಹಾಯ ದ್ರವ್ಯವನ್ನು ಹೊಂದುವ ಪ್ರಾಥಮಿಕ ಶಾಲೆಗಳೂ ಪ್ರಬುದ್ಧರ ಶಿಕ್ಷಣದ ವರ್ಗಗಳೂ ಹೆಚ್ಚು ಪ್ರಮಾಣದಿಂದ ಸಮಾವೇಶವಾಗಿವೆ. ಐದು ವರ್ಷಗಳ ಹಿಂದೆ ನಮ್ಮ ಇಲಾಖೆಯಲ್ಲಿರುವ ಒಟ್ಟು ೨೧೫೭೭ ಹಳ್ಳಿಗಳಲ್ಲಿ ೮೯೭೫ ಹಳ್ಳಿಗಳಲ್ಲಷ್ಟೇ ಶಾಲೆಗಳಿದ್ದವು. ಆದರೆ ೧೯೪೨ ರ ಕೊನೆಗೆ ೧೩೯೭೬ ಹಳ್ಳಿಗಳಲ್ಲಿ ಶಾಲೆಗಳು ನಡೆಯುತ್ತಿವೆ. ಇದು ಸರ್ವಸಾಮಾನ್ಯವಾದ ಪ್ರಗತಿಯು ವಿಚಾರವಾಯಿತು. ಇನ್ನು ಬೇರೆ ಬೇರೆ ವಿಭಾಗಗಳ ಪ್ರಗತಿ ವಿಚಾರವನ್ನು ವಿಮರ್ಶಿಸೋಣ.

೧. **ವಿಶ್ವವಿದ್ಯಾನಿಲಯಗಳು**—ಈ ಅವಧಿಯಲ್ಲಿ ಮುಂಬಯಿಯ ವಿಶ್ವವಿದ್ಯಾನಿಲಯಕ್ಕೆ ೧೩ ಕಾಲೇಜುಗಳು ಹೆಚ್ಚಿಗೆ ಜೋಡಿಸಲ್ಪಟ್ಟವು. ಮತ್ತು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ೯೩೦೦ ಹೆಚ್ಚಾಗಿ ಒಟ್ಟು ಸಂಖ್ಯೆಯು ೨೭ ಸಾವಿರವಾಗಿದೆ ಈ ವಿದ್ಯಾರ್ಥಿಗಳಲ್ಲಿ ಮೆಡಿಕಲ್ ಇಂಜಿನೀ ಅರಿಂಗ ಮುಂತಾದ ಔದ್ಯೋಗಿಕ ವಿಷಯಗಳನ್ನು ಅಭ್ಯಾಸಮಾಡುವವರ ಸಂಖ್ಯೆಯು ಇನ್ನೂ ಸಾಕಾದಷ್ಟು ಬೆಳೆದಿಲ್ಲವೆಂಬದು ಅಸಮಾಧಾನದ ಸಂಗತಿ; ಮತ್ತು ಸಂಶೋಧನಶಾಖೆಗೂ ಸಂಶೋಧನಕಾರ್ಯಗಳಕಡೆಗೂ ವಿಶ್ವವಿದ್ಯಾನಿಲಯದವರ ಲಕ್ಷ್ಯವು ಹೋಗತೊಡಗಿರುವದು ಸಮಾಧಾನದ ಮಾತು.

ಕಾಲೇಜಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯಿತು; ಹಲವು ಹೊಸ ಕಾಲೇಜಗಳು ಹುಟ್ಟಿದವು, ಇಷ್ಟರಿಂದಲೇ ನಾವು ಸಮಾಧಾನ ಹೊಂದುವಂತಿಲ್ಲ. ಇವುಗಳಲ್ಲಿ ಎಷ್ಟೋ ಸಂಸ್ಥೆಗಳ ಆರ್ಥಿಕ ಸ್ಥಿತಿಯು ತೀರ ಅಸಮಾಧಾನಕರವಾಗಿದೆ. ಅಲ್ಲಿ ಕೆಲಸಮಾಡುವ ಶಿಕ್ಷಕರ ವೇತನ, ಕೆಲಸದ ಸ್ಥಿರತೆ. ಮುಂತಾದವು ತೃಪ್ತಿಕರವಾಗಿಲ್ಲ. ಒಂದೇವಿಧದ ಕಾಲೇಜಗಳು ಹೆಚ್ಚುವದಾಗಲಿ ಒಂದು ಕಾಲೇಜದಿಂದಾಗಬಹುದಾದ ಕೆಲಸಕ್ಕಾಗಿ ಹಲವು ಕಾಲೇಜಗಳು ಹುಟ್ಟಿಬರುವದಾಗಲಿ ಸಂತೋಷದ ವಿಷಯಗಳಾಗಲಾರವು.

೨. **ಮಾಧ್ಯಮಿಕ ಶಿಕ್ಷಣ**— ವಿದ್ಯಾರ್ಥಿಗಳ ಸಂಖ್ಯೆಯ ದೃಷ್ಟಿಯಿಂದ ಮತ್ತು ಶಿಕ್ಷಣ ಸಂಸ್ಥೆಗಳ ಬೆಳೆವಣಿಗೆಯ ದೃಷ್ಟಿಯಿಂದ ಈ ಐದು ವರ್ಷಗಳಲ್ಲಿ ಸ್ಥಿಮಿತ ಪ್ರಗತಿಯು ಕಂಡುಬರುವದು. ಶಾಲೆಗಳ ಸಂಖ್ಯೆಯು ಹೆಚ್ಚಾಗಿದ್ದರೂ ಅವುಗಳ ಉತ್ಪನ್ನದ ಯೋಜನೆಯು ತೃಪ್ತಿಕರವಾಗಿಲ್ಲವೆಂಬುದು ಕಾಲೇಜುಗಳ ಸ್ಥಿತಿಯಂತೆಯೇ ಇಲ್ಲಿಯೂ ಕಂಡುಬರುವದು. ಹಲವು ಸಂಸ್ಥೆಗಳಲ್ಲಿ ಕೆಲಸಮಾಡುವ ಮಾಧ್ಯಮಿಕ ಶಿಕ್ಷಕರ ವೇತನ, ನೌಕರಿಯ ಸ್ಥಿರತೆ, ಕಟ್ಟುನಿಟ್ಟುಗಳು ಇವು ತೃಪ್ತಿಕರವಾಗಿಲ್ಲ.

ಸರಕಾರದಿಂದ ಸಹಾಯದ್ರವ್ಯವನ್ನು ಹೊಂದುತ್ತಿರುವ ಶಿಕ್ಷಣ ಸಂಸ್ಥೆಗಳು, ತಮ್ಮಲ್ಲಿ ಕೆಲಸಮಾಡುತ್ತಿರುವ ಶಿಕ್ಷಕರಿಗೆ ಪ್ರಾವಿಡಂಟಫಂಡ ಕೊಡುವ ವ್ಯವಸ್ಥೆಯನ್ನು ಕೈಕೊಳ್ಳಲೇ ಬೇಕೆಂಬ ಕಡ್ಡಾಯದ ನಿರ್ಬಂಧವನ್ನು ಹಾಕಿರುವದು, ಈ ಅವಧಿಯಲ್ಲಿ ಸರಕಾರವು ಕೈಕೊಂಡ ಒಂದು ಹೆಚ್ಚಿನಮಾತು. ಸರಕಾರದ ಸಹಾಯದ್ರವ್ಯವನ್ನು ಹೊಂದುವ ಸಂಸ್ಥೆಗಳು ಶಿಕ್ಷಕರನ್ನು ಆರಿಸಿಕೊಳ್ಳುವಾಗಲೂ ಅವರ ನೌಕರಿಯ ಕರಾರುಗಳ ವಿಷಯದಲ್ಲಿಯೂ ತಕ್ಕಷ್ಟು ನಿರ್ಣಾಯಕವಾದ ಕಟ್ಟುನಿಟ್ಟುಗಳನ್ನು ಹಾಕಿಕೊಟ್ಟು ಮಾಧ್ಯಮಿಕ ಶಿಕ್ಷಕರ ನೌಕರಿಯ ಸುರಕ್ಷಿತತೆಯನ್ನು ಹೆಚ್ಚಿಸಿರುವದು ಇನ್ನೊಂದು ಮಹತ್ವದ ಮಾತು. ಎಷ್ಟೋ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳ ಫೀದರವನ್ನು ಕಡಿಮೆ ಇಟ್ಟಿರುವದರಿಂದ ಅವುಗಳ ಆರ್ಥಿಕ ಸ್ಥಿತಿಯು ಅಸಮಾಧಾನಕರವಾಗಿದೆ; ಮತ್ತು ಆ ಸಂಸ್ಥೆಗಳಲ್ಲಿ ಕೆಲಸಮಾಡುವ ಶಿಕ್ಷಕರಿಗೆ ಪ್ರತ್ಯಕ್ಷ ದೊರೆಯುವ ವೇತನದ ರಕಮಿಗೂ ಅವರಿಗೆ ಕೊಡಲ್ಪಟ್ಟಿತೆಂದು ಹೇಳುವ ರಕಮಿಗೂ ಹೆಚ್ಚು ಅಂತರವು ಕಂಡುಬರುವಂಥ ಅಸಮಾಧಾನಕಾರ ಪರಿಸ್ಥಿತಿಯುಂಟಾಗಿದೆ. ಯೋಗ್ಯ ಫೀದರವನ್ನು ಗೊತ್ತುಪಡಿಸಿಕೊಂಡು ಶಿಕ್ಷಕರಿಗೆ ತೃಪ್ತಿಕರವಾದ ವೇತನವನ್ನು ಕೊಟ್ಟಹೊರತು ಮಾಧ್ಯಮಿಕ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಲ್ಲಿ ತೃಪ್ತಿಕರವಾದ ಸುಧಾರಣೆಯಾಗುವ ಸಂಭವವು ತೋರುವುದಿಲ್ಲ.

ಮಾಧ್ಯಮಿಕ ಶಾಲೆಗಳಲ್ಲಿ ವೃತ್ತಿ ಶಿಕ್ಷಣಕ್ಕೆ ತಕ್ಕ ಅನುಕೂಲತೆಗಳನ್ನು ಕಲ್ಪಿಸುವದಕ್ಕಾಗಿ ಅವುಗಳ ಅಭ್ಯಾಸ ಕ್ರಮವನ್ನು ಬದಲಿಸಿರುವದು, ಈ ಐದು ವರ್ಷಗಳ ಅವಧಿಯಲ್ಲಿ ಸರಕಾರವು ಕೈಕೊಂಡ ಇನ್ನೊಂದು ಮಹತ್ವದ ಮಾತು, ಮತ್ತು ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲದೆ, 'ಸ್ಕೂಲ್ ಲೀವ್ವಿಂಗ್ ಸರ್ಟಿಫಿಕೇಟ ಪರೀಕ್ಷೆ'ಯನ್ನು ಗೊತ್ತುಪಡಿಸಲಾಗಿದೆ. ಐದು ವರ್ಷ ಪ್ರಾಥಮಿಕ ಶಿಕ್ಷಣ ೭ ವರ್ಷ ಮಾಧ್ಯಮಿಕ ಶಿಕ್ಷಣ ಹೀಗೆ ಹನ್ನೆರಡು ವರ್ಷಗಳನ್ನು ಶಾಲೆಯಲ್ಲಿ ಕಳೆದ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದವರು ತಮ್ಮ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಗೊತ್ತುಪಡಿಸಿದ ಅಭ್ಯಾಸಕ್ರಮದೊಳಗಿನ ಒಂದೆರಡು ವಿಷಯಗಳಲ್ಲಿ ಉತ್ತೀರ್ಣರಾಗದೆ ಇದ್ದ ಮಾತ್ರಕ್ಕೆ ನಿಷ್ಪ್ರಯೋಜಕರೆಂದು ನಿರ್ಣಯಿಸಲ್ಪಡುವದು ಯೋಗ್ಯವಾಗಲಾರದೆಂದು ತಿಳಿದು ಅಂಥವರಿಗೆ ವ್ಯಾಪಾರ, ಒಕ್ಕಲುತನ ಮುಂತಾದ ಔದ್ಯೋಗಿಕ ಶಿಕ್ಷಣದ ವಿಷಯಗಳನ್ನು ಆರಿಸಿಕೊಳ್ಳಲು ಅನುಕೂಲವನ್ನು ಕಲ್ಪಿಸಿಕೊಟ್ಟು ಅವರ ಕಾರ್ಯಕ್ಷೇತ್ರವನ್ನು ವಿಸ್ತರಿಸಲಾಯಿತು; ಮತ್ತು ಸರಕಾರದವರು ನಮ್ಮ ಇಲಾಖೆಯೊಳಗಿನ ಎಳು ಸರಕಾರೀ ಹೈಸ್ಕೂಲುಗಳಲ್ಲಿ ಇಂಥ ಔದ್ಯೋಗಿಕ ಶಿಕ್ಷಣದ ಅನುಕೂಲತೆಯನ್ನು ಕಲ್ಪಿಸಿಕೊಟ್ಟು ಅವುಗಳ ಅಭ್ಯಾಸಕ್ರಮವನ್ನು ಬದಲಿಸಿರು

ವರು. ನಮ್ಮ ಭಾಗದೊಳಗಿನ ವಿಜಾಪುರದ ಸರಕಾರೀ ಹೈಸ್ಕೂಲು ಈ ರೀತಿ ಮಾಘರ್ಾಡು ಹೊಂದಿದೆ.

೩. **ಪ್ರಾಥಮಿಕ ಶಿಕ್ಷಣ**— ಈ ಐದು ವರ್ಷಗಳ ಅವಧಿಯಲ್ಲಿ ೭೦೮೦ ಶಾಲೆಗಳೂ ೪೨೪೨೧೧ ವಿದ್ಯಾರ್ಥಿಗಳೂ ಹೆಚ್ಚಾಗಿದ್ದಾರೆ. ಆದರೆ ಇವುಗಳಲ್ಲಿ ನಿರಕ್ಷರತಾನಿವಾರಣೆಯ ಯೋಜನೆಗೆ ಅನುಸಾರವಾಗಿ ಪ್ರಾರಂಭಿಸಲ್ಪಟ್ಟ ಒಬ್ಬನೇ ಶಿಕ್ಷಕನಿರುವ ಶಾಲೆಗಳೇ ಹೆಚ್ಚು. ಇಂಥ ಶಾಲೆಗಳು ೬೨೪೧ ಇರುವವು.

೧೯೩೮-೩೯ ರಲ್ಲಿ ಮುಂಬಯಿ ಸರಕಾರದವರು ನಿರಕ್ಷರತಾನಿವಾರಣೆಯ ಯೋಜನೆಯನ್ನು ಪ್ರಾರಂಭಿಸಿ ೪ ವರ್ಷ ಳ್ತಿ ಲಕ್ಷ ರೂ. ಗಳನ್ನು ಹೆಚ್ಚಿಗೆ ವೆಚ್ಚಮಾಡಿದರು. ಈ ವೆಚ್ಚವು ಈಗ ೮ ಲಕ್ಷವಾಗಿದೆ. ೧೯೪೨ನೆಯ ವರ್ಷದ ಕೊನೆಗೆ ನಮ್ಮ ಇಲಾಖೆಯಲ್ಲಿ ಒಟ್ಟು ೧೯೯೧ ಶಾಲೆಗಳಲ್ಲಿ ೧೫೬೪೪೦ ವಿದ್ಯಾರ್ಥಿಗಳಿದ್ದು ಅವುಗಳಲ್ಲಿ ೮೦೪ ಸರಕಾರದಿಂದ ಸಹಾಯ ಹೊಂದುವ ಖಾಸಗೀ ಶಾಲೆಗಳು. ಅವುಗಳಲ್ಲಿ ೩೫೪೪೧೭ ವಿದ್ಯಾರ್ಥಿಗಳೂ ಇದ್ದರು. ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಶಾಲೆಗಳಲ್ಲಿ ೭೪೪ ಶಾಲೆಗಳು ಹೆಚ್ಚಾಗಿವೆ. ೭೦೦ ಕ್ಕಿಂತಲೂ ಹೆಚ್ಚು ಜನವಸತಿಯಿರುವ ಪ್ರತಿಹಳ್ಳಿಯಲ್ಲಿಯೂ ಶಾಲೆಯಿರಬೇಕೆಂದು ಸರಕಾರದ ಧೋರಣೆಯಿರುವದು.

ಶಾಲೆಗಳ ಸಂಖ್ಯೆಯೂ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿದ ಮಾತ್ರಕ್ಕೆ ಶಿಕ್ಷಣಪ್ರಸಾರದ ಮಾನವಾಗಲಿ ಅದರ ಯೋಗ್ಯತೆಯಾಗಲಿ ಹೆಚ್ಚಿತೆಂದು ಭಾವಿಸುವಂತಿಲ್ಲ. ಶಾಲೆಗೆ ಹೋಗುತ್ತಿರುವ ವಿದ್ಯಾರ್ಥಿಗಳಲ್ಲಿ ೧೦೦ ರಲ್ಲಿ ೮೪ ರಷ್ಟು ಗಂಡುಮಕ್ಕಳೂ ೯೩ ರಷ್ಟು ಹೆಣ್ಣುಮಕ್ಕಳೂ ಬಾಲಕರ ವರ್ಗದಲ್ಲಿಯೂ ೧ ನೆಯ ಇಯತ್ತೆಯಲ್ಲಿಯೂ ಕೂಡಿ ಇರುವರೆಂದು ಗೊತ್ತಾಗಿದೆ. ಇವರಲ್ಲಿ ೧೦೦ ಕ್ಕೆ ೪೦ ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ೪ ನೆಯ ಇಯತ್ತೆಯನ್ನು ದಾಟುವರು. ನಾಲ್ಕನೆಯ ಇಯತ್ತೆಯನ್ನು ದಾಟದಿದ್ದ ನೂರಕ್ಕೆ ೬೦ ರಷ್ಟು ವಿದ್ಯಾರ್ಥಿಗಳ ಸಲುವಾಗಿ ಆದ ಶ್ರಮವೂ ವೆಚ್ಚವೂ ವ್ಯರ್ಥವಾದಂತಾಯಿತಲ್ಲವೆ? ಆದುದರಿಂದ ಕೆಳಗಿನ ಇಯತ್ತೆಗಳಲ್ಲಿಯ ವಿದ್ಯಾರ್ಥಿಗಳು ಸಕಾಲದಲ್ಲಿ ಮೇಲಕ್ಕೆ ಹೋಗುವಂತೆ ನೋಡಿಕೊಳ್ಳುವದು ಶಿಕ್ಷಣ ಪ್ರಸಾರದಲ್ಲಿ ಅತಿ ಮಹತ್ವದ ಮಾತು.

ಈ ಅವಧಿಯಲ್ಲಿ ಪ್ರಾ. ಶಿ. ದ ಸಂಬಂಧದ ವೆಚ್ಚವು ೪೨ ಲಕ್ಷದಷ್ಟು ಹೆಚ್ಚಾಗಿ ಒಟ್ಟು ೩೧೯ ಲಕ್ಷಕ್ಕೆ ಏರಿದೆ. ಪಾಲಕರು ಫೀ ಕೊಡಲಾರದ ಮೂಲಕ ಮಕ್ಕಳನ್ನು ಶಾಲೆಗೆ ಕಳುಹಿಸದಿರುವ ಸಂದರ್ಭವು ತೀರ ಕಡಿಮೆಯಾಗಿದೆ. ಹಿಂದುಳಿದ ವರ್ಗಗಳ ಎಲ್ಲ ವಿದ್ಯಾರ್ಥಿಗಳಿಗೂ ಫೀ ಕೊಡುವ ಶಕ್ತಿಯಿಲ್ಲವೆಂದು ಸ್ಕೂಲ್‌ಬೋರ್ಡಿಗೆ ಸಮಾಧಾನಕರವಾಗುವ ಆಧಾರವನ್ನು ತೋರಿಸುವ ಮಿಕ್ಕುಳಿದ ವರ್ಗಗಳ ಎಲ್ಲ ವಿದ್ಯಾರ್ಥಿಗಳಿಗೂ ಪುಕ್ಕಟೆ ಶಿಕ್ಷಣ ಕೊಡುವ ಯೋಜನೆಯಿದೆ. ನಮ್ಮ ಇಲಾಖೆಯೊಳಗಿನ ಒಟ್ಟು ೩೮ ಲೋಕಲ್ ಅಥಾರಿಟಿಗಳಲ್ಲಿ ೧೧ ಮ್ಯುನಿಸಿಪಾಲಿಟಿಗಳೂ ೫ ಡಿಸ್ಟ್ರಿಕ್ಟ ಬೋರ್ಡುಗಳೂ ತಮ್ಮ ಶಾಲೆಗಳಲ್ಲಿ ಫೀ ತೆಗೆದುಕೊಳ್ಳುವ ಕ್ರಮವನ್ನು ಸಂಪೂರ್ಣವಾಗಿ ತೆಗೆದು ಹಾಕಿವೆ. ಐದು ಮ್ಯುನಿಸಿಪಾಲಿಟಿಗಳೂ ಒಂದು ಡಿಸ್ಟ್ರಿಕ್ಟ್ ಬೋರ್ಡೂ ಅರ್ಧಮರ್ಧ ಫೀಯನ್ನು ಕಡಿಮೆ ಮಾಡಿವೆ. ಹೆಡ್‌ಮಾಸ್ತರರಿಗೂ ಮೊದಲನೆಯ ಅಸಿ. ರಿಗೂ ದೊರೆಯುತ್ತಿದ್ದ ಅಲೋವನ್ಸನ್ನು ೧೯೩೯ ರಿಂದ ನಿಲ್ಲಿಸಲ್ಪಟ್ಟಿತು. ಆದರೆ ಅದರಿಂದುಂಟಾಗುವ ಹೆಲವು ಅನವಸ್ಥೆಯನ್ನು ದೂರಮಾಡುವ ಹಾಗೂ ಪ್ರಾ. ಶಿ. ರಿಗೆ ಸಮರ್ಕವಾದ ಒಂದು ಸ್ಕೇಲನ್ನು ಗೊತ್ತುಪಡಿಸುವ ಉದ್ದೇಶದಿಂದ ಸರಕಾರದವರು '**ಮೂಸ ಪರಾಂಜಪೆ**' ಕಮಿಟಿಯನ್ನು ನಿಯಮಿಸಿ ಅದರ ಸೂಚನೆಗೆ ಅನುಸಾರವಾದ ಒಂದು ಹೊಸ ಸ್ಕೇಲನ್ನು ಹೊಸ ಶಿಕ್ಷಕರ ಸಲುವಾಗಿ ಪ್ರಚಾರದಲ್ಲಿ ತಂದಿರುವರು. ೧೯೩೩ ಕ್ಕಿಂತಲೂ ಹಿಂದಿನ ಶಿಕ್ಷಕರಿಗೆ ಹಿಂದಿನ

ಸ್ಕೇಲಿನಂತೆಯೇ ಪಗಾರು ದೊರೆಯುತ್ತಿದ್ದು ೧೯೩೯ ಕ್ಕಿಂತ ಮೊದಲು ಹೆಡ್‌ಮಾಸ್ತರರ ಮತ್ತು ಮೊದಲನೆಯ ಅಸಿ।। ರ ಅಲಾವನ್ಸನ್ನು ಪಡೆಯುತ್ತಿದ್ದ ಶಿಕ್ಷಕರಿಗೆ ಆ ಅಲಾವನ್ಸಿನಷ್ಟು ಹೆಚ್ಚಿನ ರಕಮನ್ನು ವೈಯಕ್ತಿಕವಾಗಿ ಕೊಡಬೇಕೆಂದು ಗೊತ್ತಾಗಿದೆ.

ನಮ್ಮ ಇಲಾಖೆಯೊಳಗಿನ ೧೭ ಡಿಸ್ಟ್ರಿಕ್ಟ ಬೋರ್ಡುಗಳೂ ೧೧ ಮ್ಯುನಿಸಿಪಾಲಿಟಿಗಳೂ 'ಶಿಕ್ಷಣ ಸಿಸ್ಟಿಮ್' ವನ್ನು ಪ್ರಚಾರದಲ್ಲಿ ತರಲು ಹವಣಿಸಿವು. ಆದರೆ ಅವು ತೃಪ್ತಿಕರವಾಗಿ ನಡೆಯಬಹುದೆಂಬ ವಿಶ್ವಾಸವು ಇನ್ನೂ ಹಲವು ಬೋರ್ಡುಗಳಿಗೆ ಇರುವಂತಿಲ್ಲ.

ಪ್ರಾ. ಶಾ. ಗಳಲ್ಲಿ ಪ್ರಚಾರದಲ್ಲಿದ್ದ ಅಭ್ಯಾಸಕ್ರಮವು ಕೇವಲ ಓದುಬರಹಗಳ ಜ್ಞಾನಕ್ಕಷ್ಟೇ ಸಾಧನವಾಗಬಹುದೆಂದೂ ಅದರಿಂದ ಮಕ್ಕಳ ನಿರೀಕ್ಷಣ ಶಕ್ತಿ ಕಾರ್ಯಕಾರಣಭಾವಗಳ ವಿವೇಚನಾಶಕ್ತಿ ಇವುಗಳ ಬೆಳೆವಣಿಗೆಗೆ ಸಾಕಷ್ಟು ಅವಕಾಶವಿಲ್ಲವೆಂದೂ ಆಕ್ಷೇಪವುಂಟಾದ್ದರಿಂದ ೧೯೪೦ ನೆಯ ವರ್ಷದಿಂದ ಹೊಸ ಅಭ್ಯಾಸಕ್ರಮವೊಂದು ಪ್ರಚಾರದಲ್ಲಿ ತರಲ್ಪಟ್ಟಿತು. ಪ್ರತಿಯೊಂದು ವಿಷಯವನ್ನೂ ಸಾಧ್ಯವಾದಮಟ್ಟಿಗೂ ವ್ಯಾವಹಾರಿಕವಾಗಿಯೇ ಕಲಿಸಬೇಕೆಂಬುದೇ ಈ ಹೊಸ ಅಭ್ಯಾಸ ಪತ್ರಿಕೆಯ ಮುಖ್ಯ ಧೋರಣೆಯಾಗಿದೆ. ಅಭ್ಯಾಸಪತ್ರಿಕೆಯಲ್ಲಿ ಹೇಳಿದ ವಿಷಯಗಳಲ್ಲಿ ಅಯಾ ಸ್ಥಾನಿಕ ಅನುಕೂಲತೆಗೆ ತಕ್ಕಂತೆ ಮಾರ್ಪಾಡು ಮಾಡಿಕೊಳ್ಳುವದಕ್ಕೆ ಶಿಕ್ಷಕರಿಗೆ ತಕ್ಕ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಈ ವಿಸ್ತಾರವಾದ ಅಭ್ಯಾಸಕ್ರಮವನ್ನು ಸುಲಭರೂಪಕ್ಕೆ ತಂದ ಮತ್ತೊಂದು ಅಭ್ಯಾಸ ಪತ್ರಿಕೆಯನ್ನು ಮಾದರಿಗಾಗಿ ತಯಾರಿಸಿಕೊಟ್ಟಿದ್ದು ಅದು ಬಹುಶಃ ಒಬ್ಬನೇ ಶಿಕ್ಷಕನಿರುವ ಎಲ್ಲ ಖಾಸಗೀ ಶಾಲೆಗಳಲ್ಲಿ ಪ್ರಚಾರದಲ್ಲಿದೆ.

೧೯೩೯ ನೆಯ ವರ್ಷದಿಂದ ಹಳ್ಳಿಗಳ ಬೇಡಿಕೆಗೆ ಅನುಗುಣವಾದ ವರ್ಧಾ ಶಿಕ್ಷಣದ ಯೋಜನೆಯನ್ನು ಕೈಕೊಳ್ಳುವ ವಿಚಾರವು ಪ್ರಾರಂಭವಾಗಿದೆ. ಸರಕಾರದಿಂದ ನಿಯಮಿತವಾದ ಕಮೀಟಿಯವರು ಪ್ರತಿಯೊಂದು ಭಾಗದಲ್ಲಿಯೂ ಕೆಲವು ನಿರ್ದಿಷ್ಟ ಕ್ಷೇತ್ರಗಳನ್ನು ಗೊತ್ತುಪಡಿಸಿದರು. ಹಿಂಜುವದು ಮತ್ತು ನೇಯುವದು ಈ ಉದ್ಯೋಗವನ್ನು ಮುಖ್ಯವಾಗಿಟ್ಟುಕೊಂಡು ಪಾಠ ಸಾಗಿಸಿ ಮಾತೃಭಾಷೆ, ಗಣಿತ, ಸಮಾಜಶಾಸ್ತ್ರ, ಇತಿಹಾಸ, ಭೂಗೋಲ, ಸಾಮಾನ್ಯವಿಜ್ಞಾನ ಮತ್ತು ನಾಗರಿಕ ವಿಜ್ಞಾನ ಇವುಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವದು ಈ ವರ್ಧಾ ಶಿಕ್ಷಣದ ಯೋಜನೆಯ ಮುಖ್ಯ ಧೋರಣೆಯು. ಪ್ರಾರಂಭಕ್ಕೆ ಒಟ್ಟು ೬೫ ಇಂಥ ಶಾಲೆಗಳನ್ನು ಪ್ರಾರಂಭಿಸಿದ್ದು ತಕ್ಕಷ್ಟು ಪ್ರಗತಿಯಾಗದಂತೆ ಕಂಡುಬಂದುದರಿಂದ ಕೆಲವು ಶಾಲೆಗಳನ್ನು ನಿಲ್ಲಿಸಬೇಕಾಯಿತು. ೧೯೪೨ ರ ಕೊನೆಗೆ ಇಂಥ ೬೩ ಶಾಲೆಗಳು ಉಳಿದಿದ್ದು ಅವುಗಳಲ್ಲಿ ೪೧೦೦ ವಿದ್ಯಾರ್ಥಿಗಳಿದ್ದಾರೆ.

ನಮ್ಮ ಇಲಾಖೆಯಲ್ಲಿ ೧೯೪೨ ರ ಕೊನೆಗೆ ಒಟ್ಟು ೮೧ ಒಕ್ಕಲುತನದ ಒಲವಿನ ಶಾಲೆಗಳಿದ್ದು ಅವುಗಳಲ್ಲಿ ೪೫೦೦ ವಿದ್ಯಾರ್ಥಿಗಳಿದ್ದಾರೆ.

ಪ್ರಾಥಮಿಕ ಶಿಕ್ಷಣದ ಕಾಯದೆಯಲ್ಲಿ ತುಸ ಬದಲಾವಣೆಯಾದದ್ದು ಈ ಐದು ವರ್ಷಗಳ ಅವಧಿಯಲ್ಲಿ ನಡೆದ ಕಾರ್ಯಗಳಲ್ಲಿ ಹೇಳಬಹುದಾದ ಇನ್ನೊಂದು ಮಾತು. ಇದರಲ್ಲಿ ಪರೀಕ್ಷಾಧಿಕಾರಿಗಳು ಮತ್ತು ಆಡಳಿತೆಯ ಅಧಿಕಾರಿಗಳು ಇವರನ್ನು ವಿಂಗಡಿಸುವದು, ಶಿಕ್ಷಕರನ್ನು ನಿಯಮಿಸುವದು ಮತ್ತು ಅವರನ್ನು ಚಂದುಕಡಿಯಿಂದ ಇನ್ನೊಂದು ಕಡೆಗೆ ವರ್ಗಮಾಡುವದು ಮುಂತಾದ ಅಧಿಕಾರಗಳನ್ನು ಆಡಳಿತೆಯ ಅಧಿಕಾರಿಗೆ ಒಪ್ಪಿಸುವದು, ಇವೇ ಮುಖ್ಯವಾದ ಮಾತುಗಳಿದ್ದವು. ಈ ತರಹ ಬದಲಾವಣೆಯಿಂದ ಸ್ಕೂಲ್‌ಬೋರ್ಡುಗಳ ಅಧಿಕಾರವು ಕಡಿಮೆಯಾಯಿತೆಂಬ ಭಾವನೆಯಿಂದ ಪ್ರಾರಂಭದಲ್ಲಿ ಹಲಕೆಲವು ತೊಂದರೆಗಳು ಉದ್ಭವಿಸಿದವು. ಆದರೆ ಈಗ ಎಲ್ಲ ಸರಿಯಾಗಿ ಸಾಗಿದೆ.

೧೯೪೦ನೆಯ ಜನವರಿ ತಿಂಗಳಲ್ಲಿ ಇಲಾಖೆಯೊಳಗಿನ ಪ್ರಾಥಮಿಕ ಶಿಕ್ಷಣದ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಸರಕಾರಕ್ಕೆ ಕಾಲಕಾಲಕ್ಕೆ ಸಹಾಯಸೂಚನೆಗಳನ್ನು ಒದಗಿಸುವ ಉದ್ದೇಶದಿಂದ 'ಪ್ರಾಯ್ಮರಿ ಎಜ್ಯುಕೇಶನ್ ಬೋರ್ಡು' ಎಂಬ ಸಮಿತಿಯೊಂದು ಸ್ಥಾಪಿಸಲ್ಪಟ್ಟಿತು. ಅದು ತನ್ನ ಕಾರ್ಯವನ್ನು ತೃಪ್ತಿಕರವಾಗಿ ನಡೆಯಿಸಿರುವದು.

೪. **ಪ್ರಬುದ್ಧರ ಶಿಕ್ಷಣ**— ಪ್ರಬುದ್ಧರ ಶಿಕ್ಷಣಕ್ಕಾಗಿ ಇಡಿಯ ಇಲಾಖೆಯ ತುಂಬ ಅಲ್ಲಲ್ಲಿ ಪ್ರಬುದ್ಧರ ಶಿಕ್ಷಣದ ವರ್ಗಗಳನ್ನು ಪ್ರಾರಂಭಿಸಿದ್ದು ಈ ಅವಧಿಯಲ್ಲಿ ಹೇಳಬೇಕಾದ ಇನ್ನೊಂದು ವಿಷಯವಾಗಿದೆ. ಅಲ್ಲಿಯವರೆಗೆ ನಡೆದ ಪ್ರಬುದ್ಧರ ಶಿಕ್ಷಣದ ವರ್ಗಗಳು, ಗಿರಣಿಗಳಲ್ಲಿ ಕೆಲಸಮಾಡುವ ಕೆಲಸಗಾರರಿಗೆ ಶಿಕ್ಷಣಕೊಡುವ ಉದ್ದೇಶದಿಂದಲೇ ಸಾಗಿದ್ದುವು. ಆದರೆ ೧೯೩೮ ರಿಂದ ಈಚೆಗೆ ಸರಕಾರದವರು ಹೆಚ್ಚಿನ ವೆಚ್ಚವನ್ನು ಮಂಜೂರುಮಾಡಿ ಹಳ್ಳಿಹಳ್ಳಿಗಳಲ್ಲಿಯೂ ಪ್ರಬುದ್ಧರಿಗೆ ಓದುಬರೆಹಗಳನ್ನು ಕಲಿಸುವ ವರ್ಗಗಳನ್ನು ಪ್ರಾರಂಭಿಸಿ ನಡೆಯಿಸಲು ನಿಶ್ಚಯಿಸಿರುವರು. ಹಳ್ಳಿಗಳ ಸುಧಾರಣೆಗೂ ಆರೋಗ್ಯಕ್ಕೂ ಸಂಬಂಧಿಸುವ ಬೇರೆ ಬೇರೆ ವಿಷಯಗಳ ಮೇಲೆ ಉಪನ್ಯಾಸಕೊಡುವ ವ್ಯವಸ್ಥೆಮಾಡಿರುವದಲ್ಲದೆ ಹಳ್ಳಿಗಳ ವಾಚನಾಲಯಗಳ ಯೋಜನೆಯೂ ಕೈಕೊಳ್ಳಲ್ಪಟ್ಟಿದೆ. ಈ ಎಲ್ಲ ಪ್ರಯತ್ನಗಳಲ್ಲಿ ಅಲ್ಪಪ್ರಮಾಣದಿಂದಲೇ ಆದರೂ ಸಮಾಧಾನಕರವಾದ ಪರಿಣಾಮವು ಕಂಡುಬಂದಿದೆ.

೪. **ಶಾರೀರಿಕ ಶಿಕ್ಷಣ.** ಈ ವಿಷಯದಲ್ಲಿ ತಕ್ಕ ಸುಧಾರಣೆ ಮಾಡುವ ಉದ್ದೇಶದಿಂದ ಶಿಕ್ಷಕರನ್ನು ತರಬೇತು ಮಾಡುವ ಶಾರೀರಿಕ ಶಿಕ್ಷಣ ಸಂಸ್ಥೆ (Institute of Physical Education) ಯೊಂದು ಪ್ರಾರಂಭಿಸಲ್ಪಟ್ಟಿದೆ. ಎಲ್ಲ ತರಗತಿಗಳ ಶಿಕ್ಷಣ ಸಂಸ್ಥೆಗಳಲ್ಲಿಯೂ ಶಾರೀರಿಕ ಶಿಕ್ಷಣವು ಪ್ರಾರಂಭವಾಗಿದ್ದು ಶಾರೀರಿಕ ಶಿಕ್ಷಣವು ಸಾಮಾನ್ಯ ಶಿಕ್ಷಣದ ಒಂದು ಅಂಗವೇ ಸರಿ ಎಂದು ತಿಳಿಯಲ್ಪಡುತ್ತಿದೆ. ವಿದ್ಯಾರ್ಥಿಗಳ ಆರೋಗ್ಯ ಪರೀಕ್ಷೆಯ ಯೋಜನೆಯೂ ಕೂಡ ಕ್ರಮಶಃ ಪ್ರಾರಂಭವಾಗಿದೆ. ಮಾಧ್ಯಮಿಕ ಶಾಲೆಗಳಲ್ಲಿ ನೂರರಲ್ಲಿ ೭೦ ಶಷ್ಟು ಶಾಲೆಗಳು ವಿದ್ಯಾರ್ಥಿಗಳ ಆರೋಗ್ಯ ಪರೀಕ್ಷೆಯ ಕಾರ್ಯವನ್ನು ಪ್ರಾರಂಭಿಸಿವೆ. ಆದರೆ ಹಳ್ಳಿಗಳಲ್ಲಿ ಈ ಕಾರ್ಯವನ್ನು ಹಚ್ಚು ದೊಡ್ಡ ಪ್ರಮಾಣದಿಂದ ನಡೆಯಿಸಲು ತಕ್ಕ ಅನುಕೂಲತೆಗಳ ಅಭಾವದ ಮೂಲಕ ಸಾಧ್ಯವಾಗಲಿಲ್ಲ.

ಯುದ್ಧ ಪ್ರಯತ್ನ— ಪ್ರಕೃತದ ಮಹಾಯುದ್ಧದ ಸುದ್ದಿಗಳನ್ನು ಉಪನ್ಯಾಸಗಳು ಚಿಕ್ಕ ದೊಡ್ಡ ಲೇಖನಗಳು ಇವುಗಳ ಮೂಲಕ ಜನತೆಯನ್ನು ಹರಡಲು ಶಿಕ್ಷಣ ಸಂಸ್ಥೆಗಳ ಬಹುಮಟ್ಟಿಗೆ ಸಹಾಯಕಾರಿಯಾಗಿವೆ. 'ಮುಂಬಯಿ ಸಮಾಚಾರ' ಪತ್ರಿಕೆಯು ಹಳ್ಳಿ ಹಳ್ಳಿಗಳಿಗೆ ಹೋಗುತ್ತಿದ್ದು ಹಳ್ಳಿಯ ಶಾಲೆಗಳ ಶಿಕ್ಷಕರು ಯುದ್ಧದ ಪ್ರಗತಿಯ ವಿಷಯವಾಗಿ ಜನರಿಗೆ ತಕ್ಕ ವಾರ್ತೆಗಳನ್ನು ತಿಳಿಸಲು ಅನುಕೂಲವಾಗಿದೆ. ಯುದ್ಧ ಪ್ರಯತ್ನದ ಬೇರೆ ಬೇರೆ ಅಂಗಗಳಿಗೆ ವಿಶೇಷವಾಗಿ ರೆಡ್‌ಕ್ರಾಸ್ ಸಂಸ್ಥೆಗೆ ಹಣ ಕೂಡಿಸಿ ಕೊಡುವ ಉದ್ದೇಶದಿಂದ ಹಲವು ಮಾಧ್ಯಮಿಕ ಶಾಲೆಗಳು ನಾಟಕಗಳು ಆಟಪಾಟಗಳು, ಮುಂತಾದವುಗಳನ್ನು ನಡೆಯಿಸಿದವು. ಯುದ್ಧಕಾರ್ಯಕ್ಕಾಗಿ ನೆರವಾದ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಸರಕಾರವು ತುಂಬ ಋಣಿಯಾಗಿದೆ.

ಭಾರತೀಯ ಸಂಪಾದಕ ಧುರೀಣ
ರಾಮಾನಂದ ಚಟರ್ಜಿಯವರು

ಭಾರತವು ಬಡವರ ನಾಡು. ನಿರಕ್ಷರಿಗಳ ಬೀಡು ಇಂಥ ದೇಶದಲ್ಲಿ ಸಾಹಿತ್ಯ ಸೇವಕರಿಗೆ ತಕ್ಕ ಸಾಹಿತ್ಯಗಳೇ ದೊರೆಯವು. 'ಹೊಟ್ಟೆಯಲ್ಲಿ ತಂಪಿಲ್ಲ; ಮೈಗೆ ಕಾವಿಲ್ಲ' ಇಂಥ ಸ್ಥಿತಿಯಲ್ಲಿ ಸಾಹಿತ್ಯ ಸೇವೆಯ ಕಾರ್ಯವು ಹೇಗೆ ಸುಖಕರವಾಗಿ ಸಾಗಬೇಕು? ಎಂದು ಕೇಳುವ ಮಾತು ನಮ್ಮ ಮನೆಮಾತಾಗಿದೆ; ಪತ್ರಿಕಾ ಸಂಪಾದಕರಿಗೆ ಕಿವಿ ಮಾತೂ ಆಗಿದೆ. ಕಳೆದ ನೂಹ್ಹೆಂಬರ ತಿಂಗಳಲ್ಲಿ ನಮ್ಮನ್ನಗಲಿ ಗತಿಸಿದ ಶ್ರೀ. ರಾಮಾನಂದ ಚಟರ್ಜಿಯವರು ಈ ಮಾತಿಗೆ ಅಪವಾದವಾಗಿದ್ದಾರೆ. ಆದುದರಿಂದಲೇ ಬಹುಜನರು ಅವರನ್ನು 'ಭಾರತೀಯ ಸಂಪಾದಕ ಧುರೀಣ' ಎಂದು ಸಂಬೋಧಿಸಿದ್ದಾರೆ.

ಶ್ರೀ. ರಾಮಾನಂದರವರು ಗಲಲಜಾನೆಯ ಇಸ್ಕಿಯಲ್ಲಿ ಬಿ. ಎ. ಆದರು. ಆ ವರ್ಷ ಇಂಗ್ಲಿಷು ಭಾಷೆಯನ್ನು ಆರಿಸಿಕೊಂಡವರಲ್ಲಿ ಮೊದಲನೆಯ ತರಗತಿಯಲ್ಲಿ ಮೊದಲನೆಯ ನಂಬರು ಪಡೆದಿದ್ದರು. ಇಷ್ಟೇ ಅಲ್ಲ, ಕಲಕತ್ತಾ ವಿಶ್ವವಿದ್ಯಾನಿಲಯದ ಪದವೀಧರರ ಇಡಿಯ ಯಾದಿಯಲ್ಲಿಯೇ ಇವರ ಹೆಸರು ಮೊದಲನೆಯದಾಗಿತ್ತು. ಮುಂದೆ ಎಂ. ಎ. ತರಗತಿಯಲ್ಲಿಯೂ ಒಡೆದು ತೋರುವಷ್ಟು ಗುಣಗಳನ್ನು ಪಡೆದಿದ್ದರು. ಪದಾರ್ಥ ವಿಜ್ಞಾನಶಾಸ್ತ್ರ, ಇತಿಹಾಸ, ಅರ್ಥಶಾಸ್ತ್ರ, ರಾಜ್ಯತಂತ್ರ ಈ ವಿಷಯಗಳನ್ನು ಖಾಸಗೀ ರೀತಿಯಿಂದ ಕೂಲಂಕಷವಾಗಿ ಅಭ್ಯಾಸ ಮಾಡಿದ್ದರು. ಇಷ್ಟು ವಿದ್ಯಾ ಸಂಪನ್ನರಾದ ಬಳಿಕ ಅಲಹಾಬಾದದೊಳಗಿನ ಕಾಯಸ್ಥ ಪಾಠಶಾಲೆಯ ಸಂಚಾಲಕರಾಗಿ ಕೆಲಸ ಮಾಡಿದ ಬಳಿಕ ಆ ಕೆಲಸವನ್ನು ಬಿಟ್ಟುಕೊಟ್ಟು ಸ್ವತಂತ್ರ ಪತ್ರಿಕಾ ಸಂಪಾದಕರಾಗಿ ಕಾರ್ಯಾರಂಭ ಮಾಡಿದರು.

ಪತ್ರಿಕಾವ್ಯವಸಾಯವನ್ನು ಕೈಕೊಂಡಾಗ ಅವರು ಶ್ರೀಮಂತರಾಗಲಿಲ್ಲ. ಒಂದು ತತ್ತ್ವದ ಮಾತಿಗಾಗಿ ನೌಕರಿಯನ್ನು ಬಿಟ್ಟು ಹೊರಗೆ ಬಂದು ನಿಂತಿದ್ದರು. ಬೆಳೆಯುತ್ತಿರುವ ಕುಟುಂಬದ ಪೋಷಣೆಯ ಭಾರವು ಅವರನ್ನು ಬೇರೊಂದು ನೌಕರಿಯ ಕಡೆಗೆ ಸೆಳೆಯುತ್ತಿತ್ತು. ಹೀಗಿದ್ದರೂ ಅದೇನೊ ಒಂದು ವಿಧದ ಆಂತರಿಕ ಸ್ಫೂರ್ತಿ-ಸದ್ಭಾವಗಳಿಂದ ಪ್ರೇರಿತರಾಗಿ ಪತ್ರಿಕಾ ಸಂಪಾದಕರಾಗಿ ನಿಂತುಬಿಟ್ಟರು. ತಮ್ಮ ಪತ್ರಿಕೆಗಳು ಪ್ರಾರಂಭದಿಂದಲೂ ಅಂತರಂಗ ಬಹಿರಂಗಗಳಲ್ಲಿ ಮಾದರಿಯವಾಗಬೇಕೆಂಬ ಹೆಗ್ಗುರಿಯನ್ನು ಮುಂದಿಟ್ಟುಕೊಂಡೇ ಕಾರ್ಯಾರಂಭ ಮಾಡಿದರು. ಆದರೆ ೮ ಅಂಕಗಳು ಹೊರಡುವಷ್ಟರಲ್ಲಿ ೧೮೦೦ ರೂ. ಸಾಲವಾಯಿತು. ಇದು ೧೯೦೧ ನೆಯ ಇನವಿಯ ಮಾತು. ಬಂಗಾಲ ಪ್ರಾಂತವೊಂದೇ ಏಕೆ ಅಖಿಲ ಭರತಖಂಡವೇ ಚಲನವಿಚಲವಾಗುತ್ತಿದ್ದ ಕಾಲವದು.

ರಾಮಾನಂದ ಚಟರ್ಜಿಯವರಂಥ ಕುಶಾಗ್ರ ಬುದ್ಧಿಯ, ಸಮತೋಲ ಚಿತ್ತದ ಮತ್ತು ಸ್ಪಷ್ಟೋಕ್ತಿಯ ಪತ್ರಿಕಾ ಸಂಪಾದಕರಿಗೆ ಅದೊಂದು ಉತ್ಕರ್ಷದ ಕಾಲವಾಗಿ ಪರಿಣಮಿಸಿತು. ಪತ್ರಿಕೆಯ ಉತ್ಕರ್ಷಕ್ಕೆ ಮೊದಲಾಯಿತು. ದೇಶ ವಿದೇಶಗಳಲ್ಲಿ ಸರಿಯಾಗಿ ಅದು ಮನ್ನಣೆ ಪಡೆಯಿತು. "ಮಾಡರ್ನ ರಿವ್ಯೂ ಪತ್ರಿಕೆಗೆ ಮದ್ರಾಸ ಲಾಹೋರಗಳಲ್ಲಿರುವಷ್ಟಕ್ಕಿಂತಲೂ ಹೆಚ್ಚಿನ ಮನ್ನಣೆಯು ನ್ಯೂಯಾರ್ಕ, ವಿಯೆನ್ನಾಗಳಲ್ಲಿ ಇರುವದು" ಎಂದು ಹೇಳುವ ಪರಿಪಾಠವುಂಟಾಗಲು ಚಟರ್ಜಿಯವರ ಹಿಂದಿನ ಅಂಕೆ ಸಂಖ್ಯೆಗಳಿಂದಲೂ ಸಾಧಾರವಾದ ಸತ್ಯಸಂಗತಿಗಳಿಂದಲೂ ಮುಂದಿನ ಎಂದೂ ಗುರಿತಪ್ಪದ ನ್ಯಾಯಪ್ರೇರಿತವಾದ ನಿರ್ದಾಕ್ಷಿಣ್ಯದ ನಿರ್ಣಯಗಳಿಂದಲೂ ಕೂಡಿದ ಲೇಖನಗಳೇ ಕಾರಣವೆಂದು ಹೇಳುವದುಂಟು

(ಮುಂದೆ ಸಾಗುವದು)

ಮಾನವ ಯತ್ನ

ಮಾನವ ಯತ್ನಕೆ ಮೀರಿದುದಾವುದು
ಈ ಭವದಲ್ಲಿದೆಯೆನಬೇಡಿ ॥ ೧ ॥

ಸಾವಿನ ಸಂಕಲೆ ಗಡಿಯಲು ಬಯಸಿದ
ಬಡಿಗನಶಾವನು ಬಹುಕಿಹನು ? ॥ ೨ ॥

ಹುಟ್ಟಿನ ಗುಟ್ಟನು ರಟ್ಟಿಸಿದವರೀ
ಮಾನವ ಸೃಷ್ಟಿಯತಿಸ್ಪಿಹರು ? ॥ ೩ ॥

ಸಿರಿಯನು ಸೆರೆಯಲ್ಲಿಟ್ಟಿಹೆನೆನ್ನುವ
ಕೋಟ್ಯಾಧೀಶರ ಸಂಖ್ಯೆ ನಿಜವೆ ? ॥ ೪ ॥

ಹೊಟ್ಟೆಗೆ ಬಟ್ಟೆಗೆ ನಿಕ್ಕಿಕೆ ಸಾಕೆಂ
ಬೆಂಬರ ಬಡತನ ಸುಸ್ಥಿರವೆ ? ॥ ೫ ॥

ರವಿ ಮುಳುಗಿಹ ಸಾಮ್ರಾಜ್ಯವ ಸಾಳುವ
ನರಪತಿಗಳ ಬಾಳೇನಾಯ್ತು ? ॥ ೬ ॥

ರವಿ-ಶಶಿ-ವಂಶಜರಾಳಿದ ಧರಣಿಯು
ಮುಂದಾರಾರಿಗೆ ಶರಣಾಯ್ತು ? ॥ ೭ ॥

ಮಾನವ ಯತ್ನಕೆ ಸಾಕೆನ್ನೇತಕೆ
ಹೇಪನ ಹಯವೆಯೆಮಗೆನಬೇಡಿ ॥ ೮ ॥

ಮಾನವ ಯತ್ನಕೆ ದಾನವ ಬುದ್ಧಿಯು
ಸ್ಪೇರಕವಾದಕೆ ಕೇಡಹುದು ॥ ೯ ॥

ಮಾನವ ಯತ್ನವು ಧರ್ಮಾಧಾರದೆ
ನಿಂತರೆ ಸಕಲರ ಹಿತವಹುದು ॥ ೧೦ ॥

ಸತ್ಯಕೆ ನಿತ್ಯವು ಮಿಥ್ಯೆಯನಿತ್ಯವು
ಸತ್ಯ ಪ್ರಯತ್ನದೆ ಯಶವಿಹುದು ॥ ೧೧ ॥

ಮಾನವ ಕುಲಕೇ ಹಿತವಾಗಲಿ ಎಸೆ
ಮಾನವ ಜಗ ನಿನಗೊಲಿಯುವುದು ॥ ೧೨ ॥

ಸ್ವಾರ್ಥವ ಕಳೆದು ಪರಾರ್ಥಕೆ ಯತ್ನಿಸೆ
ಪಾರ್ಥಿವತೆಲ್ಲಕು ನಿನ್ನವರು ॥ ೧೩ ॥

ಪಾವನ ಜೀವನ ಧರ್ಮಾಧಾರನು
ಎನಿಸುತ ಜಾಳುವೆ ಚಿರಕಾಲ ॥ ೧೪ ॥

ಮಾನವ ಯತ್ನವು ಜೇಡವೆ ಬೇಡ
ಕಾವನು ಹೇವನು ಎನವೇಡಿ ॥ ೧೫ ॥

ಕಾವನೆ ಕೊಲ್ಲುವನೇತಕೆ ಖಮ್ಮನು
ಕಾವವ ಕೊಲ್ವವ ಜೇರಿಹರೆ ? ॥ ೧೬ ॥

ತಂದೆಯೆ ಮಗನನ್ನೇತಕೆ ಬಡತನ
ಮುಖಾಪತ್ತಿಗೆ ತೂಳುವನು ? ॥ ೧೭ ॥

ಕಾವುದು ಕೊಲ್ಲುದು ಅತನ ಮನವ
ಲ್ಲೆಲ್ಲಕೆ ನೀವೇ ಕಾರಣರು ॥ ೧೮ ॥

ಕರ್ಮವೆ ಸಾಕ್ಷಿಯು ಧರ್ಮವೆ ಸಾಕ್ಷಿಯು
ಮಾನವನೇಳಿಗೆ ಜೀಳಿಗೆಗೆ ॥ ೧೯ ॥

ಮನವನು ಮಾತನು ಕೃತಿಯನು ತೋಧಿಸಿ
ಘನ ಕಾರ್ಯಕೆ ಸಲಿಯುಷ್ಣಿಪುದು ॥ ೨೦ ॥

ಸತ್ಕಾರ್ಯಕೆ ಸರ್ ಫಲವುಂಟೆಂದಿಗು |
ಸತ್ಕಾರ್ಯದೆ ಮನವಿರಿಸುವುದು ॥ ೨೧ ॥

ಫಲದೊಳಗಾಶೆಯ ತೊರೆದಖಿಮಾನವ |
ಕಳೆದು ಪ್ರಯತ್ನಿಸೆ ಫಲವಹುದು ॥ ೨೨ ॥

ಮಾನವ ಯತ್ನಕೆ ದೇವನ ದಯೆ ಸಂ |
ಧಾನಿಸೆ ಸಕಲವು ಸರಿಯಹುದು ॥ ೨೩ ॥

ಮಾನವ ಯತ್ನಗಳಾರಾದರೆ ಸಾ-
ಕೇಳನೆ ಯತ್ನವು ದೇವನದು ॥ ೨೪ ॥

N. V. K.

ಪ್ರಕಟನೆ ೧

ಮಿಡಲ್ ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆ ೧೯೪೪

ದಕ್ಷಿಣಭಾಗ

೧. ಕೆಳಗೆ ಬರೆದಂತೆ ಸಾರ್ವತ್ರಿಕ ಮತ್ತು ವಿಶಿಷ್ಟಪ್ರಕಾರದ ವಿದ್ಯಾರ್ಥಿ ವೇತನಗಳನ್ನು ಕೊಡುವದರ ಸಲುವಾಗಿ ನಡೆಯುವ ಈ ವರ್ಷದ ಮಿಡಲ್ ಸ್ಕೂಲ್ ಸ್ಕಾಲರ್‌ಶಿಪ್ ಪರೀಕ್ಷೆಯು ೧೯೪೪ ನೆಯ ಇಸ್ವಿಯ ಫೆಬ್ರುವರಿ ತಿಂಗಳ ೧೦ ಮತ್ತು ೧೧ ನೆಯ ತಾರೀಖು ಗುರುವಾರ ಮತ್ತು ಶುಕ್ರವಾರಗಳ ದಿವಸ ದಕ್ಷಿಣಭಾಗದೊಳಗಿನ ಪ್ರತಿಯೊಂದು ಜಿಲ್ಲೆಯ ಕೇಂದ್ರದಲ್ಲಿ ನಡೆಯುವದು.

ಈ ಕೆಳಗೆ ಬರೆದಷ್ಟು ಸ್ಕಾಲರ್‌ಶಿಪ್ಪುಗಳು ಆಯಾ ಜಿಲ್ಲೆಗಳಲ್ಲಿ ಆಯಾ ವರ್ಗಗಳ ವಿದ್ಯಾರ್ಥಿಗಳಿಗೆ ದೊರೆಯುವವು.

ಜಿಲ್ಲೆಯ ಕೇಂದ್ರದ ಹೆಸರು	ಜಿಲ್ಲೆಯೊಳಗಿನ ಎಲ್ಲ ವರ್ಗಗಳ ಜನರ ಬಗ್ಗೆ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು	ಜಿಲ್ಲೆಯೊಳಗಿನ ವಿಶಿಷ್ಟ ವರ್ಗಗಳ ಜನರಿಗಾಗಿ ಕಾಯ್ದಿಟ್ಟ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವೇತನಗಳು			
		ಮಾಧ್ಯಮಿಕ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ	ಹಿಂದುಳಿದ ವರ್ಗಗಳ ವಿ. ಗಳ ಬಗ್ಗೆ	ಮುಸಲ್ಮಾನ ವಿ. ಗಳ ಬಗ್ಗೆ	ಒಟ್ಟು
ಧಾರವಾಡ	೨	೧೩	೫	೧೧	೩೧
ಬೆಳಗಾವಿ	೨	೧೩	೫	೬	೨೬
ವಿಜಾಪುರ	೨	೧೦	೫	೭	೨೪
ಕಾರವಾರ	೨	೫	೧*	೩	೧೧
ಒಟ್ಟು	೮	೪೧	೧೬	೨೭	೯೨

(೧) ಹಿಂದುಳಿದ ವರ್ಗಗಳಿಗಾಗಿ ಗೊತ್ತುಪಡಿಸಿದ ಒಟ್ಟು ವಿದ್ಯಾರ್ಥಿ ವೇತನಗಳಲ್ಲಿ ನೂರಕ್ಕೆ ೨೦ ರಷ್ಟು ವಿದ್ಯಾರ್ಥಿವೇತನಗಳನ್ನು ಹೆಣ್ಣುಮಕ್ಕಳಿಗಾಗಿ ಕಾಯ್ದಿಡಲಾಗಿದೆ.

ಕಾರವಾರ ಜಿಲ್ಲೆಯಲ್ಲಿ ಈ ಬಗ್ಗೆ ಕಾಯ್ದಿಟ್ಟ ವಿದ್ಯಾರ್ಥಿವೇತನವನ್ನು ಒಂದು ವರ್ಷ ಒಬ್ಬ ವಿದ್ಯಾರ್ಥಿಗೂ ಮರುವರ್ಷ ಒಬ್ಬ ವಿದ್ಯಾರ್ಥಿನಿಗೂ ಕೊಡಬೇಕೆಂದು ಗೊತ್ತಾಗಿದೆ. ಈ ವರ್ಷ ಅದು ಒಬ್ಬ ವಿದ್ಯಾರ್ಥಿನಿಗೆ ಹೋಗುವದು.

(೨) ಮುಸಲ್ಮಾನರಿಗಾಗಿ ಗೊತ್ತುಪಡಿಸಿದ ಒಟ್ಟು ವಿದ್ಯಾರ್ಥಿವೇತನಗಳಲ್ಲಿ ಒಂದನ್ನು ವಿದ್ಯಾರ್ಥಿನಿಯರಿಗಾಗಿ ಕಾಯ್ದಿಡಲಾಗಿದೆ.

೨. ಬೆಳಗಾವಿಯ ಕೇಂದ್ರದ ಪರೀಕ್ಷೆಯ ಭಾಷೆಯು ಮರಾಠಿ ಮತ್ತು ಕನ್ನಡ ಎಂದೂ, ಧಾರವಾಡ, ವಿಜಾಪುರ, ಕಾರವಾರ ಕೇಂದ್ರಗಳಲ್ಲಿ ಕನ್ನಡವೊಂದೇ ಪರೀಕ್ಷೆಯ ಭಾಷೆಯೆಂದೂ ಗೊತ್ತಾಗಿದೆ. ಆದರೆ ಮುಸಲ್ಮಾನ ಉಮೇದುವಾರರು ಉರ್ದುವಿನಲ್ಲಿ ಪರೀಕ್ಷೆಗೆ ಕೂಡ್ರಬಹುದು. ಮತ್ತು ಉರ್ದು ಭಾಷೆಯು ಅವರ ಪ್ರಾಂತಿಕ ಭಾಷೆಯೆಂದು ತಿಳಿಯಲಾಗಿದೆ.

---

* ೧೯೪೪ ನೆಯ ಇಸ್ವಿಯ ಈ ವಿದ್ಯಾರ್ಥಿವೇತನವು ಹೆಣ್ಣುಮಕ್ಕಳ ಸಲುವಾಗಿ ಕಾಯ್ದಿಡಲ್ಪಟ್ಟಿದೆ.

೩. ಸ್ಥಾನಿಕ ಸರಕಾರಿ ಹೈಸ್ಕೂಲಿನ ಹೆಡ್‌ಮಾಸ್ತರರು ಪ್ರೆಸಿಡೆಂಟರಾಗಿರುವ ಒಂದು ಕಮಿಟಿಯ ಮುಖಾಂತರವಾಗಿ ಈ ಪರೀಕ್ಷೆಯು ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ನಡೆಯುವದು. ಎ. ಕೆ. ಗರ್ಲ್ಸ್ ಹಾಯಸ್ಕೂಲಿನ ಹೆಡ್ ಮಿಸ್ಟ್ರೆಸರು ಧಾರವಾಡ ಜಿಲ್ಲಾ-ಕೇಂದ್ರ ಅಧ್ಯಕ್ಷರು.

೪. ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದುವಾರರು ತಮ್ಮ ಅರ್ಜಿಗಳನ್ನು ಮುದ್ರಿಸಿದ ನಮೂನೆಯಲ್ಲಿ (ಫಾರ್ಮಿನಲ್ಲಿ) ತಯಾರಿಸಿ ೧೯೪೪ ನೆಯ ಇಸ್ವಿಯ ಜನವರಿ ತಿಂಗಳ ೫ನೆಯ ತಾರೀಖಿನ ಒಳಗಾಗಿ ಆಯಾ ಕೇಂದ್ರಗಳ ಪ್ರೆಸಿಡೆಂಟರಿಗೆ ಮುಟ್ಟುವಂತೆ ಕಳುಹಿಸಬೇಕು. ಈ ಅರ್ಜಿಯ ನಮೂನೆಗಳನ್ನು ಆಯಾ ಕೇಂದ್ರಗಳ ಪರೀಕ್ಷಾ ಕಮಿಟಿಯ ಅಧ್ಯಕ್ಷರಿಗೆ ಅರ್ಜಿ ಮಾಡಿಕೊಂಡು ಅವರಿಂದ ತರಿಸಿಕೊಳ್ಳಬಹುದು. ಅರ್ಜಿಯ ಸಂಗಡಲೇ ೧ ರೂ. ಫಿಯನ್ನೂ ಕಳುಹಿಸಲೇಬೇಕು. ಅರ್ಥಾತ್ ಮೇಲೆ ಹೇಳಿದ ತಾರೀಖಿನ ದಿವಸ ಅಥವಾ ಅದಕ್ಕೂ ಮೊದಲೇ ಅರ್ಜಿಯೂ ಫೀ ಹಣವೂ ಅಧ್ಯಕ್ಷರಿಗೆ ಮುಟ್ಟಲೇ ಬೇಕು. ಆ ತಾರೀಖನ್ನು ಮೀರಿ ಬಂದ ಅರ್ಜಿಯನ್ನು ಅಥವಾ ಫೀಯ ಹಣವನ್ನು ಸ್ವೀಕರಿಸಲಿಕ್ಕಿಲ್ಲ. **ಹಿಂದುಳಿದ ವರ್ಗಗಳ ಉಮೇದವಾರರು ಫೀ ಕೊಡುವ ಕಾರಣವಿಲ್ಲ.**

೫. ದೇಶೀಯ ಸಂಸ್ಥಾನಗಳಿಂದ ಬರುವ ಉಮೇದುವಾರರು ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಲ್ಲ.

೬. ಅರ್ಜಿಯಲ್ಲಿ ಉಮೇದುವಾರನ ಜಾತಿ, ಉಪಜಾತಿ, ಜನ್ಮ ತಾರೀಖು ಇವನ್ನು ಸ್ಪಷ್ಟವಾಗಿ ಬರೆದಿರಬೇಕು. ವಿಶಿಷ್ಟ ವರ್ಗಗಳ ವಿದ್ಯಾರ್ಥಿ ವೇತನದ ಬಗ್ಗೆ ಕಳುಹಿಸುವ ಅರ್ಜಿಯ ಫಾರ್ಮಿನಲ್ಲಿ ಹೊಸದೊಂದು ಕಲಮನ್ನು ಸೇರಿಸಿ ಅದರಲ್ಲಿ ಅವನ ಪಾಲಕರು ಅಥವಾ ತಂದೆ ತಾಯಿಗಳು ಕೊಡುತ್ತಿರುವ ಉತ್ಪನ್ನದ ಮೇಲಿನ ಕರ ಮತ್ತು ಭೂಕಂದಾಯ ಇವುಗಳ ವಿವರವನ್ನು ತೋರಿಸಬೇಕು. ಒಂದು ವರ್ಷದಲ್ಲಿ ೨೦೦ ರೂ. ಅಥವಾ ಹೆಚ್ಚು ಉತ್ಪನ್ನದ ಕರವನ್ನು ಅಥವಾ ಭೂಕಂದಾಯವನ್ನು ಕೊಡುವ ಇಲ್ಲವೆ ಉತ್ಪನ್ನದ ಮೇಲಿನ ಕರ ಮತ್ತು ಭೂಕಂದಾಯ ಇವೆರಡೂ ಕೂಡಿ ೨೦೦ ರೂ. ಅಥವಾ ಹೆಚ್ಚು ರಕಮನ್ನು ಕೊಡುವ ಪಾಲಕರುಳ್ಳ ಅಥವಾ ತಂದೆ-ತಾಯಿಗಳ ಮಕ್ಕಳಾಗಿರುವ ಉಮೇದುವಾರರು ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಾಗಲಾರರು.

೭. ಉಮೇದುವಾರರ ವಯಸ್ಸು, ಪರೀಕ್ಷೆಯ ವಿಷಯಗಳು ವಿದ್ಯಾರ್ಥಿವೇತನದ ರಕಮು ಮತ್ತು ಅದು ದೊರೆಯುವ ಕಾಲಾವಧಿ ಮುಂತಾದ ವಿವರಣೆಗಳು ಈ ಪರೀಕ್ಷೆಯ ಬಗ್ಗೆ ತಿದ್ದಿ ಪ್ರಕಟಿಸಿದ ನಿಯಮಗಳನ್ನು ನೋಡಿದರೆ ಗೊತ್ತಾಗುವವು. ಆಯಾ ಕೇಂದ್ರಗಳ ಪ್ರೆಸಿಡೆಂಟರಿಗೆ ಅರ್ಜಿ ಮಾಡಿಕೊಂಡರೆ ಅವರು ಈ ನಿಯಮಗಳನ್ನು ಕಳುಹಿಸುವರು.

೮. (೧) ಒಂದೇಸವನೆ ಒಂದು ವರ್ಷ ಸಾಲೆಯಲ್ಲಿ ಹಾಜರಿಲ್ಲದಿರುವದು.

(೨) ಸಾಲೆಗಳನ್ನು ಬದಲಿಸುವದು ಮುಂತಾದ ಸಂದರ್ಭಗಳಲ್ಲಿ ವಿಶೇಷ ಅಪ್ಪಣೆಯನ್ನು ಪಡೆದುಕೊಳ್ಳುವದಕ್ಕಾಗಿ ಮಾಡತಕ್ಕ ಅರ್ಜಿಗಳನ್ನು ಆಯಾ ಕೇಂದ್ರಗಳ ಪ್ರೆಸಿಡೆಂಟರಿಗೆ ಪರಭಾರೆ ಕಳುಹಿಸಿ ಕೊಡಬೇಕು. ಮತ್ತು ಅವನ್ನು ಸಕಾಲದಲ್ಲಿ ಕಳುಹಿಸಿ ತಕ್ಕ ನಿರ್ಣಯಗಳನ್ನು ಆದಷ್ಟು ಬೇಗನೆ ಪಡೆದುಕೊಂಡಿರಬೇಕು.

ದಕ್ಷಿಣ ಭಾಗದ
ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಕಚೇರಿ,
ಧಾ ರ ವಾ ಡ
೬ ನೆಯ ನವೆಂಬರ ೧೯೪೩

(ಸಹಿ) J. R. BHANDIWAD,
ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ
ಪರವಾಗಿ,

ಈ ವರ್ಷದ ಮಿಡಲ್‌ಸ್ಕೂಲ್ ಸ್ಕಾಲರಶಿಪ್ ಪರೀಕ್ಷೆಯ ಕಾರ್ಯಕ್ರಮ ಪತ್ರಿಕೆ

ವಾರ ಮತ್ತು ತಾರೀಖು	ವೇಳೆ		ವಿಷಯ	ಗುಣಗಳು
	ಇಂದ	ವರೆಗೆ		
ಗುರುವಾರ ೧೦-೨-೧೯೪೪	೧೨-೦	೧೨-೧೫	ಉಮೇದುವಾರರ ಹೆಸರು ಹೆಚ್ಚಿಕೊಳ್ಳುವದು	
	೧೨-೩೦	೧-೩೦	ಅಂಕಗಣಿತ	೧೦೦
	೨-೩೦	೩-೧೫	ಸಾಮಾನ್ಯವಿಜ್ಞಾನ- ಮೊದಲನೆಯ ಕಾಗದ ಇತಿಹಾಸ ಮತ್ತು ಭೂಗೋಲ (ರಾಜಕೀಯ)	೫೦
	೪-೦	೪-೪೫	ಸಾಮಾನ್ಯವಿಜ್ಞಾನ-ಎರಡನೆಯ ಕಾಗದ (ಪ್ರಾಕೃತಿಕ) ಭೂಗೋಲ ಮತ್ತು ಶಾಸ್ತ್ರೀಯ ವಿಷಯ	೫೦
ಶುಕ್ರವಾರ ೧೧-೨-೧೯೪೪	೩-೦	೩-೪೫	ಪ್ರಾಂತಿಕ ಭಾಷೆ-ಮೊದಲನೆಯ ಕಾಗದ (ಮೌನವಾಚನ, ಪುನರ್ಲೇಖನ ಮತ್ತು ನಿಬಂಧ)	೫೦
	೫-೦	೫-೪೫	ಪ್ರಾಂತಿಕ ಭಾಷೆ ಎರಡನೆಯ ಕಾಗದ (ವಾಚನ, ಅರ್ಥ ತಿಳಿದುಕೊಳ್ಳುವದು, ಮುಂತಾದವು.)	೫೦

ಧಾರವಾಡ ಜಿಲ್ಲೆಯಲ್ಲಿ ವೆಂಕಾಸಾನಿ ಸ್ಕಾಲರ್‌ಶಿಪ್ಪಿನ ಮತ್ತು ಮಹಮ್ಮಡನ್ ಬರ್ಸರಿ ಫಂಡಿನ ಸ್ಕಾಲರ್‌ಶಿಪ್ಪಿನ ಸಲುವಾಗಿ ನಡೆಯುವ ಪರೀಕ್ಷೆಗಳೂ ಇದೇ ಕಾಲದಲ್ಲಿಯೇ ನಡೆಯುವವು.

(ಸಹಿ) J. R. BHANDIWAD

ದ. ಭಾ. ದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಪರವಾಗಿ

ಪ್ರಕಟನೆ ೨.

ಕಳೆದ ಅಗಷ್ಟ ತಿಂಗಳಲ್ಲಿ ಆದ ಕನ್ನಡ "ವರ್ಧಪ್ರಾಯೀಜ" ಪರೀಕ್ಷೆಯಲ್ಲಿ ಶ್ರೀಯುತ ರಾ. ಪ. ಚಿಮ್ಮಡ ಇವರಿಗೆ ಎರಡನೆಯ ಬಹುಮಾನವೆಂದು ಮೂವತ್ತು ರೂಪಾಯಿಗಳನ್ನು ಕೊಡಲಾಯಿತು.

ಟ್ರೇ. ಕಾ. ಧಾರವಾಡ
ತಾ. ೧-೧೨-೪೩

(ಸಹಿ) H. B. UMADI
ಪ್ರಿನ್ಸಿಪಾಲರು

ಪತ್ರಗಳ ಮುಖ್ಯಾಂಶಗಳು

ಗೋಕಾಕ— ಮೊದಲನೆಯ ನಂಬರ ಶಾಲೆಯಲ್ಲಿ ೨೫–೯–೧೯೪೩ ನೆಯ ದಿವಸ ಡಿ. ಎ. ಇ. ಆದ ಶ್ರೀಮಾನ್ ಹಾರನಹಳ್ಳಿ ಅನಂತರಾಯರ ಹಿರಿಯತನದಲ್ಲಿ ನಗರದ ಪ್ರಾಥಮಿಕ ಶಾಲೆಗಳ ಶಿಕ್ಷಕ ಶಿಕ್ಷಕಿಯರ ಸಮ್ಮೇಲನವು ಜರುಗಿತು. ನಗರ ಸಭೆಯ ಸಭಾಸದರೂ, ಊರಲ್ಲಿಯ ಹಿರಿಯರೂ, ಅಧಿಕಾರಿಗಳು ಆಗಮಿಸಿದ್ದರು. ಶಾರೀರಿಕ ಚಟುವಟಿಕೆಗಳು, ಮಾದರಿಯ ಪಾಠಗಳು, ಪ್ರಬಂಧ ವಾಚನಗಳು ಆದ ಮೇಲೆ ಮೆ. ಎಸ್. ಪಿ. ಪಾಟೀಲ ಸಾಹೇಬರು, ಯುದ್ಧ ಹಾಗೂ ಔದ್ಯೋಗಿಕ ಶಿಕ್ಷಣಗಳ ಬಗೆಗೆ ಮಾತನಾಡಿದರು. ಶಿಕ್ಷಣೋಪಯುಕ್ತ ಪ್ರಹಸನಗಳಾದ ಮೇಲೆ ಜಾಣ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಕೊಡಲಾಯಿತು. ಅಧ್ಯಕ್ಷರು ತಮ್ಮ ವಿದ್ವತ್ಪೂರ್ಣ ಭಾಷಣದಲ್ಲಿ "ಶಿಕ್ಷಕರು ಪೂರ್ವಸಿದ್ಧತೆಯಿಲ್ಲದೆ ಪಾಠವನ್ನು ಕೊಡಬಾರದು ಮತ್ತು ಆ ಪಾಠವು ಮಕ್ಕಳ ಮನವನ್ನು ಆಕರ್ಷಿಸುವಂತೆ ಇರಬೇಕು. ನೀರಸ ಪಾಠವು ಎಂದೂ ಫಲಕಾರಿಯಾಗಲಾರದು." ಎಂದು ಮುಂತಾಗಿ ತಿಳಿಸಿದರು.

—ಶ್ರೀ. ಬಿ. ವ್ಹಿ. ಕುರುಬೆಟ್ಟ, ಅ. ಮಾ. ಗೋಕಾಕ.

ಹಿರಿಯಕೆರೂರು— ತಾಲೂಕಿನ ಶಿ. ಶಿ. ಸಮ್ಮೇಲನವು ೧೮–೯–೧೯೪೩ ನೆಯ ದಿವಸ ಮಾಮಲೇದಾರ ಸಾಹೇಬರಾದ ಶ್ರೀಮಾನ್ ಎಸ್. ಕೆ. ಮುನವಳ್ಳಿ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಬೀಟ ಅಫೀಸರರಾದ ಶ್ರೀ. ಆಯ್. ಎಸ್. ಬಿದರಿ ಅವರೂ, ಊರ ಹಿರಿಯರೂ ಆಗಮಿಸಿದ್ದರು. ಶಾರೀರಿಕ ಚಟುವಟಿಕೆಗಳು, ವಿನೋದಗಳು, ಮಾದರಿಯ ಪಾಠ ಚರ್ಚೆಗಳು ಇವೆಲ್ಲ ಬೋಧಪ್ರದವಾಗಿದ್ದವು. ವಿದ್ಯಾರ್ಥಿಗಳು ಅಭಿನಯಿಸಿದ ಬೆಳಕು, ಸಾಲಗಾರ್ತಿ ಎಂಬ ಏಕಾಂಕ ನಾಟಕಗಳು ಚಿತ್ತಾಕರ್ಷಕವಾಗಿದ್ದವು.

—ಶ್ರೀ. ಬ. ಲಿಂ. ಹೊಂಬಳ ಅಸಿ. ಮಾಸ್ತರ, ಹಿರಿಯಕೆರೂರು.

ಹಲಗೇರಿ— (ಧಾರವಾಡ ಜಿಲ್ಲೆ) ಕಳೆದ ಸಪ್ಟಂಬರ ತಿಂಗಳಲ್ಲಿ ಶಿ. ಶಿ. ಸಮ್ಮೇಲನವು ಊರ ಹಿರಿಯರ ನೆರವಿನಿಂದ ಮೆ. ಎಡ್ಮಿನಿಸ್ಟ್ರೇಟಿವ್ವ ಆಫೀಸರ ಡಿ. ಸ್ಕೂ. ಬೋ. ಧಾರವಾಡ ಅವರ ಹಿರಿಯತನದಲ್ಲಿ ಸುವ್ಯವಸ್ಥಿತವಾಗಿ ಸಾಂಗವಾಯಿತು.

—ಶ್ರೀ. ಬಿ. ಕೆ. ಕುರಂದವಾಡ, ಹೆ. ಮಾ.

ಮುದ್ದೇಬಿಹಾಳ— (ವಿಜಾಪುರ ಜಿಲ್ಲೆ) ಶಾಲೆಯಲ್ಲಿ ೧೬–೧೦–೧೯೪೩ ನೆಯ ದಿವಸ ಬೀಟ ಆಫೀಸರರೂ ಲೋಕಪ್ರಿಯರೂ ಆದ ಶ್ರೀಮಾನ್ ಗುಡಿಸಾಗರ ಸಾಹೇಬರಿಗೆ ವರ್ಗವಾದುದರಿಂದ ಬೀಳ್ಕೊಡುವ ಹಾಗು ಅವರ ಸ್ಥಳದಲ್ಲಿ ಬಂದಿರುವ ಅ. ಡಿ. ಎ. ಇ. ಅವರಾದ ಶ್ರೀಮಾನ್ ಆರ್. ಎಲ್. ಪಾಟೀಲ ಅವರಿಗೆ ಸತ್ಕರಿಸುವ ಸಮಾರಂಭವು ಮೆ. ಮಾಮಲೇದಾರರಾದ ಶ್ರೀ. ವ್ಹಿ. ಎಲ್. ಕುಲಕರ್ಣಿ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು.

—ಶ್ರೀ. ನ. ಮು. ಇಟಗಿ, ಹೆ. ಮಾ. ಮುದ್ದೇಬಿಹಾಳ.

ಕುಡುಪಲಿ— (ಧಾರವಾಡ ಜಿಲ್ಲೆ) ಶಾಲೆಯಲ್ಲಿ ೧೨–೯–೧೯೪೩ ನೆಯ ದಿವಸ ಶಾಲೆಯ ೪೦ ನೆಯ ಜನ್ಮ ದಿನೋತ್ಸವವು ಇಲ್ಲಿಯ ಚರ್ಚಾ ಸಂಘದವರ ವತಿಯಿಂದ ಅ. ಡಿ. ಎ. ಇ. ಅವರಾದ ಶ್ರೀಮಾನ್ ಆಯ್. ಎಸ್. ಬಿದರಿ ಅವರ ಹಿರಿಯತನದಲ್ಲಿ ಜರುಗಿತು. ಶಾರೀರಿಕ ಚಟುವಟಿಕೆ, ವಿನೋದಗಳು, 'ಜೀವನೋದ್ಧಾರ' ಎಂಬ ಏಕಾಂಕನಾಟಕ, ಚರ್ಚೆ ಮೊದಲಾದವುಗಳು ಸಾಗಿದವು.

—ಶ್ರೀ. ಬಿ. ಎ. ಮಾಗನೂರ, ಹೆ. ಮಾ. ಕುಡಪಲಿ.

ಕೊಣ್ಣೂರು— (ಧಾರವಾಡ ಜಿಲ್ಲೆ) ಈ ಭಾಗದ ಶಿ. ಶಿ. ಸಮ್ಮೇಲನವು ೨೨–೧೦–೪೩ನೆಯ ದಿವಸ ಚೇಅರಮನ್ನರಾದ ಶ್ರೀಮಾನ್ ಎ. ಎಸ್. ಪಾಟೀಲರ ಅಧ್ಯಕ್ಷತೆಯ ಕೆಳಗೆ ನಡೆಯಿತು. ಶಾರೀರಿಕ ಚಟುವಟಿಕೆಗಳು, ಶಿಬಿರಾಗ್ನಿಯೊಂದಿಗೆ ನಡೆದ ವಿವಿಧ ವಿನೋದಗಳು ಏಕಾಂಕ ನಾಟಕಗಳು ಇವೆಲ್ಲವೂ ಚೆನ್ನಾಗಿದ್ದವು. ಜಾಣ ವಿದ್ಯಾರ್ಥಿಗಳಿಗೆ ಮೆಚ್ಚುಗೆ ದೊರೆಯಿತು. ಪ್ರಲ್ಹಾದನ ಪಾತ್ರವನ್ನು ವಹಿಸಿದ ಮನೋಹರ ಎಂಬ ವಿದ್ಯಾರ್ಥಿಗೆ ೧೫ ಪದಕಗಳು ೪ ರೂಪಾಯಿಗಳು ಮೆಚ್ಚುಗೆಯಾಗಿ ದೊರಕಿದವು. ಶ್ರೀ. ಪದಕಿ ಮಾಸ್ತರರ ಕಾರ್ಯತತ್ಪರತೆಯು ಚೆನ್ನಾಗಿತ್ತು. ಕೊಣ್ಣೂರ ಗ್ರಾಮದವರು ಅಲ್ಲಿ ಕೂಡಿದ ಯಾವತ್ತೂ ಶಿಕ್ಷಕ ಶಿಕ್ಷಕಿಯರಿಗೂ ವಿದ್ಯಾರ್ಥಿಗಳಿಗೂ ಕೂಡಿ ಸುಮಾರು ೩೦೦ ಜನರಿಗೆ ಊಟ ಮಾಡಿಸಿದರು. ಹೀಗೆ ಸಮ್ಮೇಲನವು ಒಳ್ಳೆಯ ಕಳೆಗೊಂಡಿತ್ತು.

—ಶ್ರೀ. ವ್ಹಿ. ಎನ್. ಜೋಶಿ, (ಓರ್ವ ಪ್ರೇಕ್ಷಕ.)

ಗುತ್ತಲ— (ಧಾರವಾಡ ಜಿಲ್ಲೆ) ಶಾಲೆಯಲ್ಲಿ ೧೭–೧೦–೧೯೪೩ನೆಯ ದಿವಸ ಸ್ಕೂ. ಬೋ. ವ್ಹಾ. ಚೇ. ಆದ ಶ್ರೀ. ಕರಿಯಪ್ಪ ಹುಚ್ಚಣ್ಣವರ ಅಧ್ಯಕ್ಷತೆಯಲ್ಲಿ ಸಮ್ಮೇಲನವಾಯಿತು. ಶಿಕ್ಷಣ ಹಾಗೂ ಒಕ್ಕಲತನದ ಒಲವು ಇವುಗಳ ಬಗೆಗೆ ತಜ್ಞರ ಭಾಷಣಗಳಾದವು. ಸಮ್ಮೇಲನವು ಯಶಸ್ವಿಯಾಗಲೆಂದು ಅಧಿಕಾರಿಗಳಿಂದ ಸಂದೇಶಗಳು ಬಂದಿದ್ದವು.

—ಶ್ರೀ. ಮು. ಬೆ. ಬಿನ್ನಾಳ, ಅ. ಮೂ. ಗುತ್ತಲ.

ನರಗುಂದ— ಶಾಲೆಯಲ್ಲಿ ೧೪–೧೦–೧೯೪೩ನೆಯ ದಿವಸ ಧಾರವಾಡ ಡಿ. ಎಸ್. ಬಿ.ಯ ಚೇಅರಮನ್ನರ ಅಧ್ಯಕ್ಷತೆಯಲ್ಲಿ ಈ ಭಾಗದ ಶಿ. ಶಿ. ಸಮ್ಮೇಲನವು ಜರುಗಿತು. ಆಗ ಈ ಭಾಗದ ಅ. ಡಿ. ಎ. ಅವರಾದ ಶ್ರೀ. ಡಿ. ಎನ್. ಶಿರಸಂಗಿ ಅವರೂ ಊರೊಳಗಿನ ಪ್ರತಿಷ್ಠಿತ ಜನರೂ ಆಗಮಿಸಿದ್ದರು. ಮಾದರಿಯ ಪಾಠ ಉಪನ್ಯಾಸ, ಸಂಭಾಷಣೆ, ಶಾರೀರಿಕ ಚಟುವಟಿಕೆಗಳು ಪ್ರೇಕ್ಷಣೀಯವಾಗಿದ್ದವು. ಬನಹಟ್ಟಿ ಶಾಲೆಯ ವಿದ್ಯಾರ್ಥಿಗಳು 'ಅನುಸೂಯಾ' ಎಂಬ ಸಂಗೀತ ನಾಟಕವನ್ನು ಅಭಿನಯಿಸಿದರು. ಅಧ್ಯಕ್ಷರು ಆನಂದವನ್ನು ವ್ಯಕ್ತಮಾಡಿ ಮೂವರು ವಿದ್ಯಾರ್ಥಿಗಳಿಗೆ ಪಾರಿತೋಷಕ ಕೊಟ್ಟರು.

—ಶ್ರೀ. ಸ. ಗು. ಇನಾಮದಾರ, ಹೆ. ಮೂ.

ನಾಗಾವಿ— (ಧಾರವಾಡ ಜಿಲ್ಲೆ) ಶಾಲೆಯ ವಿದ್ಯಾರ್ಥಿಗಳ ಶಾರೀರಿಕ ಚಟುವಟಿಕೆಗಳನ್ನು ಗದಗದಲ್ಲಿರುವ ಶ್ರೀ. ಅಯ್ಯಂಗಾರ ಅವರು ಮತ್ತು ಶ್ರೀ. ಹುಯಿಲಗೋಳಕರ ಅವರು ಕಂಡು ಸಂತೋಷಪಟ್ಟು ಬೆಳ್ಳಿಯ ಪಾತ್ರೆಗಳನ್ನು ಮೆಚ್ಚುಗೆಯಾಗಿ ಕೊಟ್ಟರು.

—ಶ್ರೀ. ಚ. ಭಿ. ಕಾಮರಡ್ಡಿ, ಹೆ. ಮೂ.

ಧಾರವಾಡ— ಮ್ಯು. ಶಾಲೆಗಳ ಶಿಕ್ಷಕರಿಗಾಗಿ ಮಾದರಿಯ ಪಾಠಗಳ ಯೋಜನೆಯನ್ನು ಕಳೆದ ಫಾಣ್ಯಾಸಿಕದಲ್ಲಿ ಮಾಡಲಾಗಿತ್ತು. ಶ್ರೀ. ಶಿಂತ್ರಿ, ಶ್ರೀ. ಜವಳಿಯವರ ಹಿರಿಯತನದಲ್ಲಿ ಪಾಠಗಳು ಚೆನ್ನಾಗಿ ಸಾಗಿದವು. ಇದರ ಶ್ರೇಯಸ್ಸು ಆ. ಆ. ರಾದ ಶ್ರೀ. ರಾಯಣ್ಣವರಿಗೆ ಸಲ್ಲುವದು.

—ಶ್ರೀ. ನಾ. ಲ. ಧಾರವಾಡ, ಹೆ. ಮೂ.

ಕಾರವಾರ— ಇಲ್ಲಿಯ ತಾಲೂಕ ಶಾಲೆಯಲ್ಲಿ ಮೆ|| ಯಾರಗಲ್ಲ ಸಾಹೇಬರು ಔದ್ಯೋಗಿಕ ಶಿಕ್ಷಣದ ಮಹತ್ವವನ್ನು ಕುರಿತು ಪರಿಣಾಮಕರವಾಗಿ ತಿಳಿಸಿದರು.

—ಶ್ರೀ. ವಿ. ಸ. ಪವಾರ, ಅ. ಮೂ. ಕಾರವಾರ.

ಬಾಗಲಕೋಟೆ— ಉರ್ದು ಸ್ಕೂ. ನಂ ೧ ರಲ್ಲಿ ಮೆ|| ಎ. ಇ. ಧಾರವಾಡ ಅವರ ಹಿರಿಯತನದಲ್ಲಿ ಬಡ ವಿದ್ಯಾರ್ಥಿಗಳಿಗಾಗಿ ಮೆ|| ಹಾಜಿ ಅಬ್ದುಲ್ ಗನಿಶೇಠ ಅವರು ಕೊಟ್ಟ ಪುಸ್ತಕ ಪಾಟಗಳನ್ನು ಇನಾಮಾಗಿ ಹಂಚಲಾಯಿತು. ಸುಮಾರು ೬೦೦ ಜನರು ಕೂಡಿದ್ದರು. ಶಿಕ್ಷಣದ ಮಹತ್ವವನ್ನು ಸ್ಫೂರ್ತಿದಾಯಕ ಭಾಷಣಮಾಡಿದರು.

—ಶ್ರೀ. ಮ. ಅ. ಮೋಮಿನ, ಬಾಗಿಲಕೋಟೆ

ನಿಡಸೋಸಿ— (ಬೆಳಗಾಂವ ಜಿಲ್ಲೆ) ಈ ಭಾಗದ ಶಿ. ಶಿ. ಸಮ್ಮೇಲನ ಶ್ರೀ. ಹಾರನಹಳ್ಳಿ ಅನಂತರಾಯರ ಹಿರಿಯತನದಲ್ಲಿ ಯಶಸ್ವಿಯಾಗಿ ಸಾಗಿತು. ಸುಮಾರು ಅರವತ್ತು ಎಪ್ಪತ್ತು ಶಿಕ್ಷಕರು ಬಂದಿದ್ದರು.

—ಶ್ರೀ. ಸ. ರಾ. ಕುಲಕರ್ಣಿ, ಹೆ. ಮೂ.

ಗದಗ— ೧ ನೆಯ ನಂಬರ ಉರ್ದು ಗರ್ಲಸ್ಕೂಲದಲ್ಲಿ "ಜನಾನಾ ಜಲಸಾ"ವು ಒಳ್ಳೆಯ ವೈಭವದಿಂದ ಸಾಗಿತು. ಶ್ರೀ. ಡಿ. ಜಿ. ಕಟ್ಟಿಮನಿ ಅವರು ೨೫ ರೂ. ಗಳ ಸೀರೆ ಪೋಲಕಾಗಳನ್ನು ಬಡ ವಿದ್ಯಾರ್ಥಿನಿಯರಿಗಾಗಿ ಕೊಟ್ಟರು.

—ಹೆ. ಮೂ. ಉರ್ದು ಗರ್ಲಸ್ಕೂಲು, ನಂ. ೧ ಗದಗ

ಹೊನ್ನಾವರ— ಶಾಲೆಯಲ್ಲಿ ಶ್ರೀ. ಶಾರದಾ ಪೂಜಾಸಮಾರಂಭವು ಶ್ರೀ. ಕರ್ಜಗಿ ಸಾಹೇಬರ ಹಿರಿಯತನದಲ್ಲಿ ಸಾಗಿತು. ೬೦೦ ಕ್ಕಿಂತ ಹೆಚ್ಚು ಜನರು ಕೂಡಿದ್ದರು. ಈ ಭಾಗದ ಶಿ. ಸಮ್ಮೇಲನದಲ್ಲಿ ಸುಮಾರು ೭೫ ಶಿಕ್ಷಕರು ಭಾಗವಹಿಸಿದ್ದರು.

—ಹೆ. ಮೂ. ಕ. ಗ. ಶಾಲೆ, ಹೊನ್ನಾವರ

ಇಂಡಿ— ೧೧-೯-೪೩ನೆಯ ದಿವಸ ಈ ಭಾಗದ ಶಿ. ಶಿ. ಸಮ್ಮೇಲನವು ಜರುಗಿತು. ಶ್ರೀ. ರಂಗರಾವ ದೇಶಪಾಂಡೆ ವಕೀಲರು ಅಧ್ಯಕ್ಷರಾಗಿದ್ದರು. ಅ. ಡೆ. ಅವರಾದ ಶ್ರೀ. ಹಿರಿಯಮಠ ಅವರು ಶಿಕ್ಷಕರಿಗೆ ತಕ್ಕ ಸಲಹೆಗಳನ್ನು ಕೊಟ್ಟರು.

—ಶ್ರೀ. ಬಿ. ಟಿ. ಹಿಪ್ಪರಗಿ, ಅ. ಮೂ. ಇಂಡಿ

ಸಾಭಾರ-ಸ್ವೀಕಾರ

ಕರುಗನ್ನಡಿ— ಇದೊಂದು ೧೮ ಪುಟಗಳ ವ್ಯಾಕರಣದ ಚಿಕ್ಕ ಪುಸ್ತಕವು. ಇಂಡಿಯಲ್ಲಿರುವ ಸಿಂಪಿ ಲಿಂಗಣ್ಣನವರು ಬರೆದಿರುವರು. ಬಳಕೆಯಲ್ಲಿರುವ ವ್ಯಾಕರಣದ ಹಲವು ಚಿಕ್ಕ ಪುಟ್ಟ ಪುಸ್ತಕಗಳಲ್ಲಿ ಇದು ವಿದ್ಯಾರ್ಥಿಗಳಿಗೆ ಹಗುರೂ ಒಲುಮೆಯದೂ ಆಗಬಹುದೆಂದು ಲೇಖಕರು ಆಶಿಸಿದ್ದಾರೆ. ಪ್ರಾಥಮಿಕ ಶಾಲೆಗಳಲ್ಲಿಯ ಮೇಲಿನ ವರ್ಗದವರು ಈ ಪುಸ್ತಕವನ್ನು ಟಪ್ಪಣಿಯಂತೆ ಉಪಯೋಗಿಸಲು ಅಡ್ಡಿಯಿಲ್ಲ. ಮೂರು ಆಣೆ. ಬೆಲೆಯು ಆಕಾರಮಾನದಿಂದ ಹೆಚ್ಚಾಗಿದೆಯೆನಬೇಕು.

ಹುಲಕೋಟಿ ಕೋ. ಅ. ಎಜ್ಯುಕೇಶನ್ ಸೊಸಾಯಿಟಿಯ ವರದಿಯಲ್ಲಿ ಈ ಕೆಳಗಿನ ಸಂಗತಿಗಳು ಸಮಾವೇಶವಾಗಿವೆ :—

ಶಿಕ್ಷಣಪ್ರಸಾರಕ್ಕಾಗಿ ಈ ಸಂಘವು ಜನ್ಮವೆತ್ತಿದೆ. ಇದರ ಮೆಂಬರರಲ್ಲಿ ಶ್ರೀಮಾನ್ ಸಿ. ಸಿ. ಹುಲಕೋಟಿ ರಿಟಾಯರ್ಡ ಜಜ್ಜರು, ಶ್ರೀ. ಹ. ಬ. ಭದ್ರಾಪುರ ಜಿಮಿನಾನದಾರರು, ಶ್ರೀ. ಸಿ. ಬಿ. ಹೂಲಿ, ರಿಟಾಯರ್ಡ ರಜಿಸ್ಟ್ರಾರರು ಮೊದಲಾದ ಮಹನೀಯರಿದ್ದಾರೆ. ಈ ಸೊಸಾಯಿಟಿಯವರು ಮುಕ್ಕಳಿಗಾಗಿ, ಪ್ರೌಢರಿಗಾಗಿ, ಹರಿಜನರಿಗಾಗಿ ಹಲವು ಶಾಲೆಗಳನ್ನೂ ಕೆಲವು ವಾಚನಾಲಯಗಳನ್ನೂ ಇಂಗ್ಲೀಷ ಕ್ಲಾಸವನ್ನೂ ತೆರೆದಿದ್ದಾರೆ. ಸಂಘದ ಕಳೆದ ವಾರ್ಷಿಕ ವರ್ಷದ ಉತ್ಪನ್ನವು ೨೪೫೯ ರೂ. ಇದ್ದು ೨೬೯೦ ರೂ. ವೆಚ್ಚವಾಗಿದೆ. ಸರಕಾರದವರು ಹೊಸದಾಗಿ ಗೊತ್ತು ಹಡಿಸಿದ ಲೋಕ ಶಾಲೆಯನ್ನು ಸ್ಥಾಪಿಸಬೇಕೆಂದು ಸಂಘದವರ ಬಯಕೆಯಿದೆ. ಅದಕ್ಕಾಗಿ ಸುಮಾರು ೩೫೦೦ ರೂ. ವೆಚ್ಚಬರಬಹುದು. ಶಿಕ್ಷಣ ಪ್ರೇಮಿಗಳಾದ ಉದಾರರೂ ಸಾರ್ವಜನಿಕ ಸಂಸ್ಥೆಯವರೂ ಸಹಾಯಮಾಡಬೇಕೆಂದು ಕೋರಿದ್ದಾರೆ. ಇಂತಹ ದಿನಗಳಲ್ಲಿ ನಿರಕ್ಷರತೆಯನ್ನು ಹೋಗಲಾಡಿಸುವ ಪ್ರಯತ್ನದಲ್ಲಿರುವ ಈಸಂಸ್ಥೆಗೆ ಸಹಾಯಮಾಡಿದರೆ ಅದು ಸತ್ಪಾತ್ರದಾನವಾಗುವದರಲ್ಲಿ ಸಂದೇಹವಿಲ್ಲ.

ದೇವರು ಹೆಡ್ಡನೆ?

(ಸಾಕ್ಷರಿಗಳಾದ ಪ್ರಬುದ್ಧರಿಗಾಗಿ)

ಮಲ್ಲೂರು ಮಲೆನಾಡಿನ ಒಂದು ಊರು. ಅಲ್ಲಿ ಮಲ್ಲಯ್ಯನೆಂಬ ಒಕ್ಕಲಿಗನಿದ್ದನು. ಮಲ್ಲಯ್ಯನ ಮನೆಯ ಹಿಂದೆ ದೊಡ್ಡ ಹಿತ್ತಲವಿತ್ತು; ಮಲ್ಲಯ್ಯನು ಮಳೆಗಾಲದಲ್ಲಿ ಅಲ್ಲಿ ಬಗೆಬಗೆಯ ಕಾಯಿಪಲ್ಯಗಳನ್ನು ಬೆಳೆಯುವನು; ಕುಂಬಳ, ಬೂದುಗುಂಬಳ, ಹಾಲಗುಂಬಳ, ಸೋರೆ ಗುಂಬಳ ಮುಂತಾದ ಬಳ್ಳಿಗಳನ್ನು ಹಾಕುವನು. ಈ ವರ್ಷ ಮಳೆ ಹೆಚ್ಚಾಗಿದ್ದುದರಿಂದ ಕುಂಬಳ ಬಳ್ಳಿಗಳು ಚೆನ್ನಾಗಿ ಬೆಳೆದು ಹೂಬಿಟ್ಟು ಕಾಯಾದವು. ಕಾಯಿಗಳು ಹೆಚ್ಚು ದೊಡ್ಡವೂ ಆದವು.

ಮಲ್ಲಯ್ಯನು ಬೇಸಗೆಯಲ್ಲೊಂದು ದಿನ ಮಗಳನ್ನು ಕರೆದುತರುವ ದಕ್ಕೆ ನಾಗೂರಿಗೆ ಹೊರಟನು. ನಾಗೂರು ಗಡಿನಾಡಿನ ಒಂದು ಚಿಕ್ಕ ಹಳ್ಳಿ. ಮಲ್ಲೂರಿನ ಮಲ್ಲಯ್ಯನ ಮಗಳು ನಾಗಮ್ಮನನ್ನು ನಾಗೂರಿನ ನಾಗಯ್ಯನ ಮಗನಿಗೆ ಕೊಟ್ಟಿತ್ತು.

ಮಲ್ಲಯ್ಯನು ಮಗಳನ್ನು ಕರೆಯುವದಕ್ಕೆ ಹೊರಡುವಾಗ ಹೆಂಡತಿ ಗಂಗಕ್ಕನು 'ಈ ಎರಡು ಕುಂಬಳಕಾಯಿಗಳನ್ನಾದರೂ ಒಯ್ಯಬಾರದೆ? ಮಗಳ ಮನೆಗೆ ಬರಿಗೈಯಿಂದ ಹೋಗುವದು ಹೇಗೆ' ಎಂದಳು.

ಮಲ್ಲಯ್ಯನ ವಯಸ್ಸು ೫೦ ಕ್ಕೆ ಮಿಂರಿದೆ. ತಲೆಯ ಮೇಲಿನ ಕುಂಬಳಕಾಯಿಗಳ ಭಾರದಿಂದ ಅವನ ಗೋಣು ಮಣಿದಿತ್ತು; ಬೆನ್ನು ಬಾಗಿತ್ತು. ಬೇಸಗೆಯ ಬಿಸಲೇರಿ ನೆಲ ಕಾಯ್ದಿತ್ತು. ಮಲ್ಲಯ್ಯನು ದಣಿದನು. ಅವನು ದಾರಿಯ ಮಗ್ಗುಲಿಗಿರುವ ಆಲದ ಮರದ ನೆರಳಿಗೆ ಹೋದನು. ಬಳಿಯಲ್ಲಿಯೇ ಕುಂಬಳಕಾಯಿಗಳನ್ನಿಟ್ಟುಕೊಂಡು ಕುಳಿತನು. ಹಕ್ಕಿಗಳು ಕಿಲಿಬಿಲಿ ಮಾಡುವದನ್ನು ಕೇಳಿ ಮೇಲೆ ನೋಡಿದಾಗ ಹಸರು ಎಲೆಗಳ ನಡುವೆ ಹವಳದಂತೆ ಹೊಳೆಯುವ ಹಣ್ಣುಗಳ ಸರವನ್ನು ನೋಡಿದನು. ನೂರಾರು ಜನರು ಮಲಗುವಷ್ಟು ವಿಸ್ತಾರವಾಗಿ ಬೆಳೆದಿರುವ ಮರವನ್ನೂ ಅದರ ಚಿಕ್ಕ ಚಿಕ್ಕ ಹಣ್ಣುಗಳನ್ನೂ ನೋಡಿದನು. ತನ್ನ ತಲೆಭಾರವಾದ ಕುಂಬಳಕಾಯಿಯನ್ನೂ ನೋಡಿದನು. ಅವನ ತಲೆಯಲ್ಲಿ

ಒಂದು ಹೊಸಮಾತು ಹೊಳೆಯಿತು. "ದೇವರು ಹೆಡ್ಡನೇ? ಇಷ್ಟು ವಿಶಾಲವಾದ ಮರಕ್ಕೆ ಅಡಕೆಯ ಹೋಳಿನಷ್ಟು ಸಣ್ಣವಾದ ಹಣ್ಣುಗಳು! ಎದ್ದು ನಿಲ್ಲಲಾರದೆ ನೆಲದ ಮೇಲೆ ಹಬ್ಬಿರುವ ಕುಂಬಳಬಳ್ಳಿಗೆ ಎತ್ತಲಾರದಂಥ ಕಾಯಿಗಳು. ಈ ವಿಷಮತೆಯೇಕೆ? ಕಸುವುಳ್ಳ ದೊಡ್ಡ ಮರಕ್ಕೆ ದೊಡ್ಡ ಕಾಯಿಗಳಾಗಬೇಕು. ಬಲವಿಲ್ಲದ ಬಳ್ಳಿಗೆ ಚಿಕ್ಕ ಕಾಯಿಯಾಗಬೇಕು. ಇದು ಸರಿಯಾದ ಕ್ರಮವಲ್ಲವೆ?" ಎಂದುಕೊಂಡನು. ತುಸು ಹೊತ್ತಿನಲ್ಲಿಯೇ ಅಲ್ಲಿಯೇ ಅಡ್ಡಾಗಿ ಮಲಗಿ ನಿದ್ದೆ ಹೋದನು.

ಮಲಗಿ ನಿದ್ದೆಹೋದ ಮಲ್ಲಯ್ಯನ ಹಣೆಯ ಮೇಲೆ ಪಟ್ಟನೆ ಏನೋ ಬಿದ್ದಿತು. ಎಚ್ಚತ್ತು ನೋಡಿದಾಗ ಅದೊಂದು ಚಿಕ್ಕ ಆಲದ ಹಣ್ಣಾಗಿತ್ತು. ಒಂದು ಹಕ್ಕಿಯು ಕಡಿದು ತಿನ್ನುವಾಗ ಆ ಹಣ್ಣು ಜಾರಿ ಕೆಳಗೆಬಿದ್ದಿತ್ತು. ಆಗ ಅವನ ಮನಸ್ಸಿಗೆ ಮತ್ತೊಂದು ಮಾತು ಹೊಳೆಯಿತು. "ದೇವರು ಹೆಡ್ಡನಲ್ಲ. ನನ್ನ ಹಣೆಯ ಮೇಲೆ ಬಿದ್ದ ಆಲದ ಹಣ್ಣು ಕುಂಬಳಕಾಯಿಯಷ್ಟು ದೊಡ್ಡದಾಗಿದ್ದರೆ ನನ್ನ ಗತಿಯೇನಾಗುತ್ತಿತ್ತು? ಹೆಂಡತಿ ಮಕ್ಕಳ ಪಾಡೆಂತಾಗುತ್ತಿತ್ತು? ನನ್ನಂತೆಯೇ ನೂರಾರು ಜನರೂ ದನಕರುಗಳೂ ದಿನಾಲು ಈ ಗಿಡದ ನೆರಳಿಗೆ ಬಂದು ಕೂಡುತ್ತವೆ. ಅವುಗಳ ಮೇಲೆ ಕುಂಬಳಕಾಯಿಯಂಥ ಭಾರವಾದ ಹಣ್ಣುಗಳು ಉದುರುತ್ತಿದ್ದರೆ ಹೇಗೆ? ಪರೋಪಕಾರಕ್ಕಾಗಿಯೇ ಹುಟ್ಟಿ ಬೆಳೆದ ಆಲದ ಮರದಿಂದ ಪರಪೀಡೆಯಾಗಬಾರದೆಂದು ದೇವರು ಅದಕ್ಕೆ ಇಷ್ಟು ಚಿಕ್ಕ ಹಣ್ಣುಗಳನ್ನು ಕೊಟ್ಟಿದ್ದಾನೆ. ನೆಲದ ಮೇಲೆ ಬಿದ್ದು ಉರುಳಾಡುತ್ತಿರುವ ಕುಂಬಳ ಬಳ್ಳಿಗೆ ಆಗುವ ಕಾಯಿ ದೊಡ್ಡದಾದರೇನು? ಚಿಕ್ಕದಾದರೇನು? ದೇವರ ಕೃತಿಗೆ ಹೆಸರಿಡುವ ಮೊದಲು ಸಂಪೂರ್ಣ ವಿಚಾರ ಮಾಡಲೇಬೇಕು."

ಮಲ್ಲಯ್ಯನು ನಾಗೂರಿಗೆ ಹೋಗಿ ಮಗಳು ನಾಗಮ್ಮನನ್ನು ಕರೆದುಕೊಂಡು ಬಂದನು. ಮರುದಿನ ದಾರಿಯಲ್ಲಿ ನಡೆದ ವಿಚಾರವನ್ನೆಲ್ಲ ಹೆಂಡತಿಗೆ ಹೇಳಿದನು. 'ದೇವರ ವಿಷಯದಲ್ಲಿ ಹಾಗೆಲ್ಲ ಆಲೋಚನೆ ಮಾಡುವದು ಸರಿಯಲ್ಲ' ಎಂದು ಎಲ್ಲರೂ ಮಾತಾಡಿಕೊಂಡರು.

ಗಣಿತ ಶಿಕ್ಷಕ

★

೪೧೨ ಪುಟಗಳು ಂ ಬೆಲೆ ೧ ರೂ. ಂ ೫-೬-೭ನೆಯ ಇ. ಗಳಿಗಾಗಿ

೫-೬ ಕ್ಲಾಸುಗಳು ಒಬ್ಬ ಮಾಸ್ತರನ ಕಡೆಗೆ ಇರುವಂಥ ಶಾಲೆಗಳಲ್ಲಿ ಗಣಿತ ಶಿಕ್ಷಕವು ನಿಜವಾಗಿಯೇ ಗಣಿತ. ಶಿಕ್ಷಕನಾಗಿ ಸಹಾಯಕನಾಗಿಲ್ಲವೇ? ೧೦ವರ್ಷ ಅನುಭವ ತಕ್ಕೊಂಡವರಿಗೆ ಇದರ ಬಗ್ಗೆ ಹೆಚ್ಚಿಗೆ ವರ್ಣಿಸುವದು ಬೇಡ. ಇಷ್ಟರಲ್ಲಿಯೇ ಎಲ್ಲರ ಪ್ರೀತಿಗೆ ಪಾತ್ರವಾಗಿ ಅನೇಕಸಾರಿ ಮುದ್ರಣ ಹೊಂದಿದೆ. ಈಗಿನ ತುಟಾಗ್ರತೆಯ ಕಾಲದಲ್ಲಿ ವೆಚ್ಚ ಮಾಡಿದ ಹಣದಿಂದ ಬಹಳ ಲಾಭವಾಗಬೇಡವೇ?

ಕೊರತೆ ಇಲ್ಲ ಂ ಬೆಲೆ ಕಡಿಮೆ ಂ ವೆಚ್ಚವಿಲ್ಲದೆ ಪೂರೈಕೆ

ಪುಸ್ತಕಗಳು ಕರ್ನಾಟಕದ ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ದೊರೆಯುತ್ತವೆ. ದೊರೆಯುವದಿಲ್ಲೆಂದು ಅನಿಸಿದರೆ, ನಿಮಗೆ ಬೇಕಾಗುವಷ್ಟು ಪ್ರತಿಗಳ ಮೂಲ ಬೆಲೆಯನ್ನು ಮನಿಯಾರ್ಡರದಿಂದ ಕಳಿಸಿ ಪಾವತಿಗಳನ್ನು ಕಾಯ್ದಿಡಿರಿ. ಅವನ್ನು ತೆಗೆದುಕೊಂಡು ಯಾವ ವೆಚ್ಚವೂ ಇಲ್ಲದೆ ಪುಸ್ತಕ ಕೊಡುವಂತೆ ನಿಮ್ಮ ಸಮೀಪದ ಪುಸ್ತಕವ್ಯಾಪಾರಿಗಳಲ್ಲಿ ಇಲ್ಲವೆ ದೊಡ್ಡ ಶಾಲೆಯಲ್ಲಿ ವ್ಯವಸ್ಥೆ ಮಾಡಲಾಗುವದು. ಶಕ್ಯವಾದರೆ ನಿಮ್ಮ ಊರಿಗೇ ತಂದುಕೊಡಬಹುದು. ಹೆಚ್ಚಿನ ವಿವರಕ್ಕೆ ಬರೆಯಿರಿ.

ವಿಳಾಸ :— ಬ. ದು. ಹಿರೇಮಠ, ಮಾಸ್ತರ ವಿಜಾಪುರ.

ಹೊಸ ಪುಸ್ತಕ! ಸರಕಾರದಿಂದ ಮುಂಜೂರ! ಲಾಭ ಪಡೆಯಿರಿ

ಹೊಸ ಪದ್ಧತಿಯ ಹಿಂದೀ ಜಮಾಖರ್ಚು ಭಾಗ ೧

(ಮನೆಯ ಜಮಾಖರ್ಚು)

ಸರಕಾರದವರು ಈ ಪುಸ್ತಕವನ್ನು ಮೇಲಿನ ಎಲ್ಲ ಇಯತ್ತ್ರಿಗಳಿಗೆ ಟೆಕ್ಸ್ಟ್ ಬುಕ್ ಎಂದು ಮುಂಜೂರ ಮಾಡಿರುವರು. ಇದರಲ್ಲಿ ಮನೆಯ ಜಮಾಖರ್ಚಿನ ವಿಷಯಗಳು ಸಂಪೂರ್ಣವಿರುವವಲ್ಲದೆ ಪ್ರಾ. ನೋಟು, ಹುಂಡಿ, ಚೆಕ್ಕು, ಮುನಿಯಾರ್ಡರು ಮುಂತಾದ ವ್ಯವಹಾರುಪಯುಕ್ತವಾದ ಮಾಹಿತಿಗಳೂ ಇವೆ ಹೆಣ್ಣು ಮಕ್ಕಳ ಮತ್ತು ಗಂಡುಮಕ್ಕಳ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ಉಮೇದವಾರರಿಗೆ ಬಹು ಉಪಯುಕ್ತವಿದೆ.

ಬೆಲೆ : ೪ ಆಣೆ.

ಹೊಸ ಪದ್ಧತಿಯ ಆರಂಭದ ಜಮಾಖರ್ಚು

(ಕನ್ನಡ ಳನೆಯ ಇಯತ್ತ್ರಿಯವರಿಗಾಗಿ)

ಸರಕಾರದವರು ಈ ಪುಸ್ತಕವನ್ನು ಮುಂಜೂರ ಮಾಡಿದ್ದಾರೆ. ಮುಂಜೂರಿ ನಂ. ೧೯೫-೨೪-೪೫ ಇರುತ್ತದೆ. ಈ ಪುಸ್ತಕದಲ್ಲಿ ದಿನದ ವ್ಯವಹಾರಗಳ ಲೆಖ್ಖವನ್ನಿಡುವದು, ಶಾಲೆಯ ಸ್ಟೇಶನರಿ ಸಾಮಾನುಗಳ, ಸಹಕಾರಿ ಸಂಘದ ಅಂಗಡಿಯ ಲೆಖ್ಖ ಇಡುವದು, ವ್ಯವಹಾರುಪಯುಕ್ತವಾದ ಮಾಹಿತಿಗಳೂ ಪ್ರಶ್ನೆಗಳೂ ಅವುಗಳ ಉತ್ತರಗಳೂ ಇರುವವು. ಇದು ಸ್ಕಾಲರಶಿಪ್ ಪರೀಕ್ಷೆಯ ಉಮೇದುವಾರರಿಗೆ ಬಹು ಉಪಯುಕ್ತವಿರುತ್ತದೆ.

ಬೆಲೆ : ೩ ಆಣೆ

ವಿಳಾಸ :— ರಾ. ಸಿ. ಸಜ್ಜನ, ಮಾಸ್ತರ ಜೋರಾಪುರ ಪೇಟೆ, ವಿಜಾಪುರ.

ವಾಚನ ಪಾಠಮಾಲೆ ಮತ್ತು ಕವಿತಾ ಪಾಠಮಾಲೆ

★

ಶ್ರೀ. ಪಂಡಿತ ಪೂಜಾರರೂ ಶ್ರೀ. ಕುರಡಿಯವರೂ ಕೂಡಿ ರಚಿಸಿದ ಈ ಪುಸ್ತಕವನ್ನು ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯು ವಿದ್ಯಾರ್ಥಿಗಳು ಅವಶ್ಯವಾಗಿ ಓದಲೇಬೇಕೆಂದು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಈ ಮೊದಲೇ ಮನಗಂಡಿದ್ದ ಇದನ್ನು ಸರಕಾರದವರು ಪಾಠಪುಸ್ತಕ (Text-book) ನೆಂದು ಮಂಜೂರು ಮಾಡಿರುವರು. ನಮ್ಮ ಪ್ರಾಂತದಲ್ಲಿ ಈ ವರ್ಗಕ್ಕೆ ಇದೊಂದೇ ಪುಸ್ತಕವು ಪಾಠಪುಸ್ತಕವೆಂದು ಮಂಜೂರಾಗಿರುವದು. ಮಿಕ್ಕ ಯಾವ ಪುಸ್ತಕವೂ ಮಂಜೂರಾಗಿಲ್ಲ. ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಯೋಗ್ಯ ಕಮಿಶನ್ ದೊರೆಯುವದು. ದಕ್ಷಿಣ ಭಾಗದೊಳಗಿನ ನಾಲ್ಕೂ ಜಿಲ್ಲೆಗಳ ಸ್ಕೂಲ್ ಬೋರ್ಡಿನವರು ಈ ವರ್ಷ ಇದನ್ನು ಪಾಠಪುಸ್ತಕದಂತೆ ಆರಿಸಿದ್ದಾರೆ.

ಹೆಣ್ಣುಮಕ್ಕಳ ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆಯ ವಿದ್ಯಾರ್ಥಿನಿಯರೂ ಇದನ್ನು ಅವಶ್ಯವಾಗಿ ಓದಲೇಬೇಕೆಂದು ಅನುಭವಿಕ ಶಿಕ್ಷಕರ ಅಭಿಪ್ರಾಯವಿದೆ.

ಶ್ರೀ. ಕುರಡಿಯವರು ರಚಿಸಿರುವ,

ಕವಿತಾ ಕುಸುಮ ಮಂಜರಿ ಭಾಗ ೧ .... ೦–೫–೦

ಕವಿತಾ ಕುಸುಮ ಮಂಜರಿ ಭಾಗ ೨ .... ೦–೫–೦

ಈ ಪುಸ್ತಕಗಳನ್ನು ನಮ್ಮ ಭಾಗದೊಳಗಿನ ಅನೇಕ ಸ್ಕೂಲ್‌ಬೋರ್ಡುಗಳು ೫–೬–೭ ನೆಯ ಇಯತ್ತೆಗಳಿಗೆ ಪಾಠ ಪುಸ್ತಕದಂತೆ ನಿಯಮಿಸಿರುವರು. ಪ್ರತಿ-ಪಾಠದ ಕೊನೆಗೆ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅನುಕೂಲವಾದ ಟಿಪ್ಪಣಿ, ಶಬ್ದ-ಕೋಶಗಳನ್ನೂ ಮಹತ್ವದ ಪ್ರಶ್ನೆಗಳನ್ನೂ ಸೇರಿಸಿ ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅನುಕೂಲತೆ ಮಾಡಿ ಕೊಡಲಾಗಿದೆ. ನಮ್ಮಿಂದಲೇ ಪುಸ್ತಕಗಳನ್ನು ಕೊಂಡು-ಕೊಳ್ಳುವ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪುಸ್ತಕ ವ್ಯಾಪಾರಿಗಳಿಗಿಂತಲೂ ಹೆಚ್ಚಿನ ಅನುಕೂಲತೆ ಮಾಡಿ ಕೊಡಲಾಗುವದು.

ಈ ಪುಸ್ತಕಗಳು ಪಾಠಪುಸ್ತಕ (Text-book) ಗಳಂತೆ ಮಂಜೂರಾಗಿದ್ದು ಅವನ್ನು ಸದ್ಯದ ಪಾಠಪುಸ್ತಕಗಳ ಬದಲು ಉಪಯೋಗಿಸಬಹುದೆಂದು ಸರಕಾರದವರು ಪ್ರಕಟಿಸಿರುವರು. ೧೯೪೦ ರ ಜೂನ್ ತಿಂಗಳ ಅಂಕದ ೨೪ ನೆಯ ಪುಟದಲ್ಲಿಯ ಸರಕಾರದ ಪ್ರಕಟನೆಯನ್ನು ನೋಡಿರಿ.

ಈ ಪುಸ್ತಕಗಳು ಎಲ್ಲ ಪುಸ್ತಕವ್ಯಾಪಾರಿಗಳಲ್ಲಿ ಮಾರಲಿಕ್ಕೆ ದೊರೆಯುವವು.

ಜನವರಿ-ಫೇಬ್ರುವರಿ-ಮಾರ್ಚ ೧೯೪೪

(ಇದರಲ್ಲಿ ಕನ್ನಡ ಶಾಲಾಪತ್ರಕವೂ ಶಿಕ್ಷಕಿಯೂ ಸಮಾವೇಶವಾಗಿವೆ.)

ಕನ್ನಡ
ಪ್ರಾಥಮಿಕ ಶಿಕ್ಷಣ

Kannada Prathamika Shikshana

ಸಂಪಾದಕರು :

ಹುಚ್ಚರಾವ ಭೀಮರಾವ ಉಮಡಿ, ಎಂ. ಎ.

ವಿಷಯಾನುಕ್ರಮಣಿಕೆ

ಅ. ನಂ.	ವಿಷಯ.	ಪುಟ
೧.	ಟ್ರೇನಿಂಗ್ ಕಾಲೇಜಗಳ ಚಟುವಟಿಕೆಗಳು	೧
೨.	ಇಪ್ಪತ್ತೇಳನೆಯ ಕನ್ನಡ ಸಾಹಿತ್ಯ ಸಮ್ಮೇಲನ	೫
೩.	ಭಾರತೀಯ ಸಂಪಾದಕ ಧುರೀಣ ರಾಮಾನಂದ ಚಟರ್ಜಿಯವರು ..	೬
೪.	ಆದರ್ಶ ರಮಣಿ ಭಾರತೀಯ ವನಿತೆಯರ ಮುಕುಟಮಣಿ .. ಸೌ. ಕಸ್ತೂರಿಬಾಯಿ ಗಾಂಧಿಯವರು	೮
೫.	ಕಾವ್ಯಧರ್ಮಗಳು	೯
೬.	ಇಟಾಲಿ	೨೨
೭.	ಲೇಖನಗಳ ಮುಖ್ಯಾಂಶಗಳು	೨೩
೮.	ಟ್ರೇ. ಕಾ. ಸರ್ಟಿಫಿಕೇಟ ಪರೀಕ್ಷೆಯ ಕಾರ್ಯಕ್ರಮಗಳು. ೧೯೪೪ ..	೨೫
೯.	ಪ್ರಾಥಮಿಕ ಶಾಲಾ ಪ್ರ. ಪ. ಪರೀಕ್ಷೆಯ ಕಾರ್ಯಕ್ರಮಗಳು. ೧೯೪೪ ..	೨೬
೧೦.	ನೆಲ್ಲಿ (ಆಮಲಕ)	೨೯
೧೧.	ಪತ್ರಗಳ ಮುಖ್ಯಾಂಶಗಳು	೪೧
೧೨.	ಎಡಗೈಯಿಂದ ನೀಡಿಕೊಂಡು ಬಲಗೈಯಿಂದ ಉಣ್ಣಬೇಕು .. (ಸಾಕ್ಷರಿಗಳಾದ ಪ್ರಬುದ್ಧರಿಗಾಗಿ) ..	೪೪

ನಾಡಿನ ಹೆಣ್ಣು ಮಕ್ಕಳು ಮದುವೆಯಾದಾಗ ಹೆಣ್ಣು ಒರಡು ರೂಪಾಯಿಗಳು ಮಾತ್ರ.

Printed by V. Y. Jathar at the Karnatak Printing Works, Dharwar and Published by H. B Umadi, Esq. M. A., Principal Training College For Men Dharwar, at his Office. 6.82-43-1365.

ಸುಂದರ ಮುದ್ರಣ! ಸುಲಭ ಬೆಲೆ!! ಸ್ವಲ್ಪೇ ಪ್ರತಿಗಳಿವೆ!!! ತ್ವರೆಮಾಡಿರಿ!!!!

ಹೊಸ ಅಭ್ಯಾಸಪತ್ರಿಕೆಯನ್ನನುಸರಿಸಿ ಕನ್ನಡ ಹೆಣ್ಣುಮಕ್ಕಳ ೫-೬-೭ನೇ ಇಯತ್ತೆಗಳಿಗಾಗಿ ಬರೆಯಲ್ಪಟ್ಟಿದೆ.

ಶ್ರೀಬಸವಕುಮಾರ ಕೃತ **ಗೃಹವಿಜ್ಞಾನಶಾಸ್ತ್ರ** ಅಥವಾ **ಗೃಹಶಿಕ್ಷಣದ ಕೈಗನ್ನಡಿ**

ಮುಂಬಯಿ ವಿದ್ಯಾಖಾತೆಯ ಪಠ್ಯಪುಸ್ತಕಮಂಡಲಿಯವರಿಂದ ಮಂಜೂರಾಗಿದೆ. ಗೃಹಿಣಿಯರಿಗೆ ಇದು ಕೈಗನ್ನಡಿಯಂತಿದೆ ಎಂದು ಅನೇಕ ಮಹಿಳೆಯರಿಂದಲೂ, ವಿದ್ವಾಂಸ ಮಹನೀಯರಿಂದಲೂ ಮನ್ನಣೆಹೊಂದಿದೆ. ಕೇವಲ ಹೆಣ್ಣುಮಕ್ಕಳ ಸಲುವಾಗಿ ಈ ಪುಸ್ತಕ ಬರೆಯಲ್ಪಟ್ಟಿದೆ. ವಿದ್ಯಾರ್ಥಿನಿಯರು ಇದರ ಸಹಾಯದಿಂದ ಪಾಕಶಾಸ್ತ್ರವಲ್ಲದೆ, ಆರೋಗ್ಯಶಾಸ್ತ್ರ ಮುಂತಾದವುಗಳ ವಿಜ್ಞಾನವನ್ನು ತಿಳಿಕೊಳ್ಳಲು ಸುಲಭವಾಗಿದೆ. ಭಾವೀ ಗೃಹಿಣಿಯರಾಗಲಿರುವ ವಿದ್ಯಾರ್ಥಿನಿಯರ ಜೀವನವು ಸುಖಮಯವಾಗಬೇಕಾದರೆ ಗೃಹಶಿಕ್ಷಣವು ಬೇಕಲ್ಲವೇ? ಹಾಗಾದರೆ ಅಂಥಹವೆಲ್ಲ ಈ ಗೃಹವಿಜ್ಞಾನ ಶಾಸ್ತ್ರದಲ್ಲಿದೆ. ಬೇಕಾದವರು ಇಂದೇ ಕೆಳಗಿನ ವಿಳಾಸದಿಂದ ತರಿಸಿಕೊಂಡು ಅದರಲ್ಲಿರುವ ವಿಷಯ ಶಾಸ್ತ್ರಗಳ ಮಹತ್ವವನ್ನು ತಿಳಿದುಕೊಳ್ಳಿರಿ.

ಒಂದು ಪ್ರತಿಗೆ ಬೆಲೆ ೮ ಆಣೆಗಳು (ವ್ಹಿ. ಪಿ. ವೆಚ್ಚ ಬೇರೆ)

ಪ್ರಕಾಶಕರು:—

ಪಶುಪತಯ್ಯ ಚಿನ್ನಯ್ಯ ಶಾಬಾದಿಮಠ, ಬುಕ್‌ಡಿಪೊ **ಗದಗ ಸಿಟಿ**

ವಿನಂತಿ

೧. ಪ್ರಾಥಮಿಕ ಶಿಕ್ಷಣದಲ್ಲಿ ಪ್ರಕಟಿಸುವದಕ್ಕಾಗಿ ಕಳುಹಿಸುವ ಲೇಖನಗಳನ್ನು ಕಾಗದದ ಒಂದೇ ಮಗ್ಗಲು ಸುವಾಚ್ಯವಾಗಿ ಬರೆಯಬೇಕು.

೨. ಈ **ತ್ರೈಮಾಸಪತ್ರಿಕೆ**ಯು ಪ್ರತಿ ಮೂರು ತಿಂಗಳ ಕೊನೆಯ ವಾರದಲ್ಲಿ ಪ್ರಸಿದ್ಧವಾಗುವದು. ಅಂಕವು ತಲುಪದಿದ್ದರೆ ಗ್ರಾಹಕರು ಒಂದು ತಿಂಗಳೊಳಗಾಗಿ ತಿಳಿಸಬೇಕು.

೩. ಲೇಖಕರು ಹಾಗು ಪ್ರಕಾಶಕರು, ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಪುಸ್ತಕ-ನಕಾಶ-ಚಿತ್ರ-ಉಪಕರಣಗಳನ್ನು ವಿಮರ್ಶೆಗಾಗಿ ಕಳುಹಿಸಬಹುದು.

೪. ತಾವು ಪ್ರಕಟನೆಗಾಗಿ ಕಳುಹಿಸಿರುವ ಲೇಖನಗಳನ್ನು ತಿರುಗಿ ಪಡೆಯಲು ಅಪೇಕ್ಷಿಸುವವರೂ ಅದರ ಪರಿಣಾಮವನ್ನು ಕೂಡಲೆ ತಿಳಿದುಕೊಳ್ಳಲಿಚ್ಛಿಸುವವರೂ ಅದಕ್ಕಾಗಿ ತಗಲುವ **ಅಂಚೆಯ ಚೀಟಿ**ಗಳನ್ನು ತಪ್ಪದೆ ಲೇಖನದ ಸಂಗಡ ಕಳುಹಿಸಿಕೊಡಬೇಕು.

ಚಾಹಿರಾತಿನ ದರಗಳು

ಪುಟ	೧೨ ತಿಂಗಳುಗಳಲ್ಲಿ ನಾಲ್ಕು ಸಾರೆ	೬ ತಿಂಗಳುಗಳಲ್ಲಿ ೨ ಸಾರೆ	೩ ತಿಂಗಳುಗಳಲ್ಲಿ ಒಮ್ಮೆ
೧	೧೨ ರೂ.	೭ ರೂ.	೪ ರೂ.
½	೭ ರೂ.	೪ ರೂ.	೨½ ರೂ.
¼	೪ ರೂ.	೨½ ರೂ.	೧½ ರೂ.